5	2020–21	ರಾಜ್ಯ ವಲಯ ಮುಂದುವರೆದ ಯೋಜನೆಯಡಿ 02 ವರ್ಷದ ವಿಶೇಷ ಪ್ಯಾಕೇಜ್ ಯೋಜನೆಯ ಪ್ರಾಥಮಿಕ ಶಾಲಾ ಕಾಮಗಾರಿಗಳು	7	72.96	ಕಾಮಗಾರಿಗಳು ಪೂರ್ಣಗೊಂಡಿದ್ದು ಅನುದಾನ ಖರ್ಚಾಗಿರುತ್ತದೆ
6	2020–21	ರಾಜ್ಯ ವಲಯ ಮುಂದುವರೆದ ಯೋಜನೆಯಡಿ 02 ವರ್ಷದ ವಿಶೇಷ ಪ್ಯಾಕೇಜ್ ಯೋಜನೆಯ ಪ್ರೌಢ ಶಾಲಾ ಕಾಮಗಾರಿಗಳು	4	61.28	ಕಾಮಗಾರಿಗಳು ಪೂರ್ಣಗೊಂಡಿದ್ದು ಅನುದಾನ ಖರ್ಚಾಗಿರುತ್ತದೆ
		ಜಿಲ್ಲಾ ಖನಿಜ ಪ್ರತಿಷ್ಠಾನ ಯೋಜನೆಯಡಿ ಮಂಜೂರಾದ ಅನುದಾನ	8	116.80	ಪ್ರಗತಿಯಲ್ಲಿವೆ

ಕ್ರ ಸಂ	ವರ್ಷ	ಯೋಜನೆ ವಿವರ	ನೆಲಮಂಗಲ		ಷರಾ
			ಮಂಜೂರಾದ ಕೊಠಡಿಗಳ ಸಂಖ್ಯೆ	ಬಿಡುಗಡೆಯಾದ ಅನುದಾನ	
8	2022-23	ವಿವೇಕ ಶಾಲಾ ಕೊಠಡಿಗಳ ನಿರ್ಮಾಣ ಯೋಜನೆಯಡಿ ಕೊಠಡಿಗಳ ನಿರ್ಮಾಣ	21	294.4	ಜಿಲ್ಲೆಗೆ ಅನುದಾನ ನಿಗಧಿಯಾಗಿದ್ದು ಮೊದಲ ಕಂತಿನಲ್ಲಿ ರೂ. 7.85 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ
9	2022-23	ಜಿಲ್ಲಾ ಖನಿಜ ಪ್ರತಿಷ್ಠಾನ ಯೋಜನೆಯಡಿ ಮಂಜೂರಾದ ಅನುದಾನ	4	58.40	ಅನುದಾನ ನಿಗಧಿಯಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.
ಒಟ್ಟು			63	818.03	

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ

ಅನುಬಂಧ-02

ಈ) ಕಳೆದ ಮೂರು ವರ್ಷಗಳಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಸರ್ಕಾರಿ ಶಾಲಾ ಕೊಠಡಿಗಳ ದುರಸ್ಥಿಗಾಗಿ ವಿವಿಧ ಯೋಜನೆಗಳಡಿ ಬಿಡುಗಡೆಯಾದ ಅನುದಾನದ ವಿವರ

ಕ್ರ ಸಂ	ವರ್ಷ	ಯೋಜನೆ ವಿವರ	ನೆಲಮಂಗಲ	
			ಮಂಜೂರಾದ ಕೊಠಡಿಗಳ ಸಂಖ್ಯೆ	ನಿಗಧಿಯಾದ ಅನುದಾನ
1	2019-20	ರಾಜ್ಯ ವಲಯ ಮುಂದುವರೆದ ಯೋಜನೆಯಡಿ ಸರ್ಕಾರಿ ಪ್ರಾಥಮಿಕ ಶಾಲಾ ಕೊಠಡಿಗಳ ದುರಸ್ಥಿ	14	7.476
2	2019-20	ರಾಜ್ಯ ವಲಯ ಮುಂದುವರೆದ ಯೋಜನೆಯಡಿ ಸರ್ಕಾರಿ ಪ್ರೌಢ ಶಾಲಾ ಕೊಠಡಿಗಳ ದುರಸ್ಥಿ	8	6.31
3	2021-22	ಪ್ರತಿ ವಿಧಾನ ಸಭಾ ಕ್ಷೇತ್ರವಾರು 6 ಲಕ್ಷಗಳಂತೆ ಬಿಡುಗಡೆಯಾದ ಅನುದಾನದ ವಿವರ	6	6.00
4	2022-23	2022-23 ನೇ ಸಾಲಿಗೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲೆಗಳ ತುರ್ತು ಕೊಠಡಿ ದುರಸ್ಥಿ ಕಾಮಗಾರಿಗೆ ಬಿಡುಗಡೆಯಾದ ಅನುದಾನದ ವಿವರ(ಲೆಕ್ಕ ಶೀರ್ಷಿಕೆ:2202-02-053-0-01-059)	28	30.00
5	2022-23	2515-00-101-0-31 (ಜಿಲ್ಲಾ ಪಂಚಾಯತ್ ಅನಿರ್ಬಂದಿತ ಅನುದಾನ)	6	11
6	2022-23	2059-00-101-0-28 (ಕಟ್ಟಡಗಳ ನಿರ್ವಹಣೆ ಮತ್ತು ದುರಸ್ಥಿ)	3	12.9
7	2022-23	ಜಿಲ್ಲಾ ಪಂಚಾಯತ್ 15 ನೇ ಹಣಕಾಸು ಅನಿರ್ಬಂಧಿತ ಅನುದಾನ	6	15.27
		ಒಟ್ಟು	71	88.956

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ

9353970876

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 435
ಸದಸ್ಯರ ಹೆಸರು : ಡಾ|| ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ)
ಉತ್ತರಿಸಬೇಕಾದ ದಿನಾಂಕ : 22-12-2022
ಉತ್ತರಿಸುವ ಸಚಿವರು : ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿರುವ ಯೋಜನೆಗಳಾವುವು; ಈ ಯೋಜನೆಗಳ ಅನುಷ್ಠಾನಕ್ಕಾಗಿ ಇರುವ ಮಾನದಂಡಗಳೇನು;	• ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 2022-23ನೇ ಸಾಲಿನ ಕ್ರಿಯಾಯೋಜನೆಯ ವಿವರವನ್ನು **ಅನುಬಂಧ**-1 ರಲ್ಲಿರಿಸಿದೆ. • ಕೆಲವೊಂದು ಯೋಜನೆಗಳಿಗೆ ಇರುವ ಮಾನದಂಡಗಳನ್ನು **ಅನುಬಂಧ**-2 ರಲ್ಲಿರಿಸಿದೆ.
ಆ)	ರಾಜ್ಯ ಸರ್ಕಾರವು ರಂಗ ಮಂದಿರಗಳ ನಿರ್ಮಾಣಕ್ಕೆ ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಿದ ಅನುದಾನಗಳೆಷ್ಟು; ಸದರಿ ಅನುದಾನದಲ್ಲಿ ಎಷ್ಟು ರಂಗ ಮಂದಿರಗಳನ್ನು ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ; (ವಿವರ ನೀಡುವುದು)	• ರಂಗಮಂದಿರಗಳ ನಿರ್ಮಾಣಕ್ಕೆ ಪ್ರಸಕ್ತ ಸಾಲಿನಲ್ಲಿ ರೂ.38,87,25,989/-ಗಳ ಅನುದಾನ ಮಂಜೂರು ಮಾಡಲಾಗಿರುತ್ತದೆ. • ಸದರಿ ಅನುದಾನದಲ್ಲಿ 11 ರಂಗಮಂದಿರಗಳನ್ನು ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ. ವಿವರ **ಅನುಬಂಧ**-3 ರಲ್ಲಿರಿಸಿದೆ..
ಇ)	ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ರಂಗ ಮಂದಿರ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಈ)	ಬಂದಿದ್ದಲ್ಲಿ, ಈ ಕ್ಷೇತ್ರಕ್ಕೆ ರಂಗ ಮಂದಿರ ಮಂಜೂರು ಮಾಡಿ ಅದರ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗುವುದೇ?	ಪ್ರಸ್ತಾವನೆ ಬಂದಲ್ಲಿ ನಿಯಮಾನುಸಾರ ಪರಿಶೀಲಿಸಿ, ಪ್ರಸಕ್ತ ಸಾಲಿನ ಅನುದಾನದ ಮಿತಿಯಲ್ಲಿ ಪರಿಶೀಲಿಸಿ ಕ್ರಮವಹಿಸಲಾಗುವುದು.

ಸಂಖ್ಯೆ: ಕಸಂವಾ 100 ಕವಿಸ 2022

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 2022-23ನೇ ಸಾಲಿನ ಕಾರ್ಯಕ್ರಮಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ಏಕ ಕಡತ ಸಂಖ್ಯೆ ಡಿಕಸ-31015/3/2022.

ಪ್ರಸ್ತಾವನೆ:-

ಮೇಲೆ ಓದಲಾದ ಏಕ ಕಡತದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು 2022-23ನೇ ಸಾಲಿನಲ್ಲಿ ಇಲಾಖೆಗೆ ಒದಗಿಸಲಾಗಿರುವ ರೂ.19936.91 ಲಕ್ಷಗಳ ಅನುದಾನಕ್ಕೆ ಕಾರ್ಯಕ್ರಮವಾರು ಕ್ರಿಯಾ ಯೋಜನ ರೂಪಿಸಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಆದೇಶಿಸುವಂತೆ ಕೋರಿರುತ್ತಾರೆ.

ಅದರಂತೆ, ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 142 ಕಸಧ 2022, ಬೆಂಗಳೂರು,
ದಿನಾಂಕ: 09-06-2022.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮಗಳ / ಯೋಜನೆಗಳ ಅನುಷ್ಠಾನಕ್ಕಾಗಿ 2022-23ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ **ರೂ.19936.91 ಲಕ್ಷ (ಒಂದು ನೂರ ತೊಂಭತ್ತೊಂಭತ್ತು ಕೋಟಿ ಮೂವತ್ತಾರು ಲಕ್ಷದ ತೊಂಭತ್ತೊಂದು ಸಾವಿರ ರೂಪಾಯಿಗಳು ಮಾತ್ರ)ಗಳ** ಅನುದಾನದ ಕ್ರಿಯಾ ಯೋಜನೆಗೆ ಅನುಬಂಧದಲ್ಲಿರುವಂತೆ ಈ ಕೆಳಕಂಡ ಷರತ್ತು / ನಿಬಂಧನೆಗೊಳಪಟ್ಟು ಮಂಜೂರಾತಿ ನೀಡಿ ಆದೇಶಿಸಿದೆ.

ಷರತ್ತು / ನಿಬಂಧನೆಗಳು:-

1. ಮುಂದುವರೆದ ಯೋಜನಾ ಕಾರ್ಯಕ್ರಮಗಳಲ್ಲಿ ಯಾವುದೇ ಹೊಸ ಘಟಕಗಳು ಅಥವಾ ಹೊಸ ಯೋಜನೆಗಳು ಒಳಗೊಂಡಿದ್ದಲ್ಲಿ ಅವುಗಳಿಗೆ ಪ್ರತ್ಯೇಕವಾದ ಪ್ರಸ್ತಾವನೆಗಳನ್ನು ಸಲ್ಲಿಸಿ ನಿಯಮಾನುಸಾರ ಸರ್ಕಾರದ ಮಂಜೂರಾತಿ ಪಡೆಯತಕ್ಕದ್ದು.
2. ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರರಾದ ಅಧಿಕಾರಿಗಳು ಅವರಿಗೆ ನೀಡಲಾದ ಆರ್ಥಿಕ ಅಧಿಕಾರಕ್ಕೊಳಪಟ್ಟು ಯೋಜನಾ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರತಕ್ಕದ್ದು.
3. ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಆರ್ಥಿಕ ಮಿತವ್ಯಯ ಆದೇಶಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಹುದ್ದೆಗಳ ಸೃಜನೆ, ವಾಹನ ಮತ್ತು ಪೀಠೋಪಕರಣಗಳ ಖರೀದಿ ಇತ್ಯಾದಿಗಳನ್ನು ಒಳಗೊಂಡಿದ್ದಲ್ಲಿ, ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸಿ ಪೂರ್ವಾನುಮತಿ ಪಡೆದು ಕ್ರಮಕ್ಕೆಗೊಳ್ಳುವುದು.
4. 2022-23ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಂತೆ ಅನುಷ್ಠಾನಗೊಳ್ಳುವ ಹಂತದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂಬುದರ ಬಗ್ಗೆ ಇಲಾಖೆಯ ಅಂತರ್ ಜಾಲದಲ್ಲಿ ಕಾಲಕಾಲಕ್ಕೆ ಇಂದೀಕರಿಸುವುದು.
5. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ, 1999 ಹಾಗೂ ನಿಯಮಗಳು, 2000 ಅನ್ನು ಕಡ್ಡಾಯವಾಗಿ ಪಾಲಿಸುವುದು.
6. ಪುಸ್ತಕ ಪ್ರಕಟಣೆ, ಖರೀದಿ ಮತ್ತು ಪ್ರೋತ್ಸಾಹಧನಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಕ್ರಮಕ್ಕೆಗೊಳ್ಳುವುದು.
7. ಪ್ರತಿಯೊಂದು ಯೋಜನಾ ಕಾರ್ಯಕ್ರಮಗಳಿಗೆ ಪ್ರತ್ಯೇಕವಾಗಿ ಮಾಸಿಕ ಕಾರ್ಯಕ್ರಮ, ಅನುಷ್ಠಾನ ವೇಳಾಪಟ್ಟಿ (ಎಂಪಿಕ್) ವರದಿಯನ್ನು ನಿಗದಿತ ನಮೂನೆಯಲ್ಲಿ ತಯಾರಿಸಿ ಪ್ರತಿ ತಿಂಗಳ 15ನೇ ತಾರೀಕಿನೊಳಗೆ ನಿರ್ದೇಶಕರು (ಪಿಎಂಯು), ಯೋಜನಾ ಇಲಾಖೆಗೆ ಕಳುಹಿಸಿಕೊಡುವುದು.

...2

8. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬೇರೆ ಯಾವುದೇ ಇಲಾಖೆಗಳಿಂದ ಅನುದಾನ ಪಡೆದಿಲ್ಲವೆಂಬ ದೃಢೀಕರಣ ಪತ್ರ, ಎನ್.ಓ.ಸಿ, ನಿವೇಶನ ದಾಖಲೆ ಮತ್ತು ಇತರೆ ಎಲ್ಲಾ ಅಗತ್ಯ ಮೂಲ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ ಜಿಲ್ಲಾಧಿಕಾರಿಗಳ ದೃಢೀಕರಣದೊಂದಿಗೆ ಪಡೆದು, ಸದರಿ ದಾಖಲೆಗಳನ್ನು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಪರಿಶೀಲನೆ ಮಾಡಿ ದೃಢೀಕರಣದೊಂದಿಗೆ [illegible] ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸುವುದು.
9. ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವನ್ನು, ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸಿ [illegible] ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ದೃಢೀಕರಣವನ್ನು ಪಡೆದು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು [illegible] ಸರ್ಕಾರಕ್ಕೆ ಸಲ್ಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: [illegible] 01 [illegible] 2022 ದಿನಾಂಕ:04.04.2022ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ.ಆರ್.ರಮೇಶ್ 29/04/2022
(ಕೆ.ಆರ್. ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸಂಸ್ಕೃತಿ)

ಇವರಿಗೆ

1. ಮಹಾಲೇಖಪಾಲರು (ಎ&ಇ) (ಜಿ&ಎಸ್ಎಸ್ಎ), [illegible] ಕರ್ನಾಟಕ, ಹೊಸ ಕಟ್ಟಡ "ಆಡಿಟ್ ಭವನ", ಬೆಂಗಳೂರು.
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
3. ನಿರ್ದೇಶಕರು, ಖಜಾನೆ ಇಲಾಖೆ, ಕೆ.ಎಸ್.ಎಫ್.ಸಿ. ಕಟ್ಟಡ, 6ನೇ ಮಹಡಿ, [illegible] ಕಛೇರಿ, ಅರಮನೆ ರಸ್ತೆ, ಬೆಂಗಳೂರು.
4. ನಿರ್ದೇಶಕರು, ಜನಶಕ್ತಿ ಮತ್ತು ಉದ್ಯೋಗ ವಿಭಾಗ, ಯೋಜನಾ ಇಲಾಖೆ, [illegible] ಕಟ್ಟಡ, ಬೆಂಗಳೂರು.
5. ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಶಿಕ್ಷಣ, ಕನ್ನಡ, ಸಂಸ್ಕೃತಿ ಮತ್ತು [illegible] ಹಾಗೂ [illegible] ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ನಿರ್ದೇಶಕರು, ಮೌಲ್ಯಮಾಪನ ವಿಭಾಗ, ಯೋಜನಾ ಇಲಾಖೆ, ಕೊಠಡಿ ಸಂಖ್ಯೆ: 622, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ನಿರ್ದೇಶಕರು, ಪಿ.ಎಂ.ಐ. ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7) / (ಗಣಕ ಕೋಶ), ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಶಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
13. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 142 ಕಸಧ 2022, ದಿನಾಂಕ: 09-06-2022ಕ್ಕೆ ಅನುಬಂಧ
2022-23ನೇ ಸಾಲಿನ ಕ್ರಿಯಾ ಯೋಜನೆ

ಕ್ರ. ಸಂ.	ಲೆಕ್ಕಶೀರ್ಷಿಕೆ	ಯೋಜನೆ/ಕಾರ್ಯಕ್ರಮಗಳ ವಿವರ	2022-23ನೇ ಸಾಲಿನ ಆಯವ್ಯಯ ಮಿತಿಯಲಿ ಹಂಚಿಕೆ ಮಾಡಿಕೊಳ್ಳಲಾದ ಅನುದಾನ ಮೊತ್ತ (ರೂ. ಲಕ್ಷಗಳಲ್ಲಿ)
1	ನಿರ್ದೇಶನ ಮತ್ತು ಆಡಳಿತ		
	2205-00-001-0-01-002	ವೇತನ - ಅಧಿಕಾರಿಗಳು.	258.00
	2205-00-001-0-01-003	ವೇತನ - ಸಿಬ್ಬಂದಿ.	272.00
	2205-00-001-0-01-011	ತುಟ್ಟಿ ಭತ್ಯೆ.	179.00
	2205-00-001-0-01-014	ಇತರ ಭತ್ಯೆ.	96.00
	2205-00-001-0-01-020	ವೈದ್ಯಕೀಯ ಭತ್ಯೆ.	2.00
	2205-00-001-0-01-021	ವೈದ್ಯಕೀಯ ವೆಚ್ಚ ಮರುಪಾವತಿ	15.00
	2205-00-001-0-01-034	ಗುತ್ತಿಗೆ/ಹೊರಗುತ್ತಿಗೆ: ಕೇಂದ್ರ ಮತ್ತು ಜಿಲ್ಲಾ ಕಚೇರಿಗಳಲ್ಲಿ ಖಾಲಿ ಹುದ್ದೆಗಳಿಗೆ ಎದುರಾಗಿ ಮಂಜೂರಾದ ಹುದ್ದೆಗಳ ಸೇವಾ ವೆಚ್ಚ.	174.62
	2205-00-001-0-01-041	ಪ್ರಯಾಣ ವೆಚ್ಚಗಳು.	2.00
	2205-00-001-0-01-051	ಸಾಮಾನ್ಯ ವೆಚ್ಚಗಳು: ಕನ್ನಡ ಭವನ ಹಾಗೂ ಜಿಲ್ಲಾ ಕಚೇರಿಗಳ ನಿರ್ವಹಣಾ ವೆಚ್ಚ, ಆಡಳಿತಾತ್ಮಕ ವೆಚ್ಚ, ಕೇಂದ್ರ ಕಚೇರಿ / ಜಿಲ್ಲಾ ಕಚೇರಿಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ, ಪ್ರಾಯೋಜನ / ಧನಸಹಾಯ ಪಡೆಯುವ ಸಂಘ-ಸಂಸ್ಥೆಗಳ ಚಟುವಟಿಕೆಗಳ ಪರಿಶೀಲನಾ ಭೇಟಿಗೆ ಖಾಸಗಿ ಬಾಡಿಗೆ ವಾಹನ ಪಡೆಯುವುದು.	300.00
	2205-00-001-0-01-052	ದೂರವಾಣಿ ವೆಚ್ಚಗಳು.	7.00
	2205-00-001-0-01-071	ಕಟ್ಟಡ ವೆಚ್ಚಗಳು.	75.00
	2205-00-001-0-01-195	ಸಾರಿಗೆ ವೆಚ್ಚಗಳು.	12.00
	2205-00-001-0-01-200	ನಿರ್ವಹಣಾ ವೆಚ್ಚಗಳು.	10.00
		ಒಟ್ಟು	1402.62
2	ಖಾಲಿ ಹುದ್ದೆಗಳಿಗಾಗಿ ಅನುದಾನ		
	2205-00-001-0-03-014	ಇತರೆ ಭತ್ಯೆ: ಖಾಲಿ ಹುದ್ದೆಗಳ ಭರ್ತಿಗಾಗಿ ಅನುದಾನ.	443.00
		ಒಟ್ಟು	443.00
		ಒಟ್ಟು (1+2)	1845.62
3	ಚಲನಚಿತ್ರ ಮತ್ತು ನಾಟಕ ತರಬೇತಿ ಸಂಸ್ಥೆಗಳಿಗೆ ಆರ್ಥಿಕ ಸಹಾಯ	ಸಹಾಯಾನುದಾನ ವೇತನ:	
	2205-00-101-0-07-101	ಮೈಸೂರು ರಂಗಾಯಣ ಕಲಾವಿದರು ಹಾಗೂ ಸಿಬ್ಬಂದಿಗಳಿಗೆ ವೇತನಾನುದಾನ.	185.00

4	2205-00-101-0-07-103	ಸಹಾಯಾನುದಾನ ಸಾಮಾನ್ಯ: ಚಟುವಟಿಕೆಗಳಿಗೆ	
		1. ಮೈಸೂರು ರಂಗಾಯಣ	20.00
		2. ಧಾರವಾಡ ರಂಗಾಯಣ	20.00
		3. ಶಿವಮೊಗ್ಗ ರಂಗಾಯಣ	20.00
		4. ಕಲಬುರಗಿ ರಂಗಾಯಣ	20.00
		5. ವೃತ್ತಿ ರಂಗಭೂಮಿ ರಂಗಾಯಣ ಕೇಂದ್ರ, ದಾವಣಗೆರೆ	10.00
		6. ಯಕ್ಷ ರಂಗಾಯಣ ಕಾರ್ಕಳ, ಉಡುಪಿ ಜಿಲ್ಲೆ	10.00
		ಒಟ್ಟು	100.00
	ಒಟ್ಟು (3+4)		285.00
5	ರವೀಂದ್ರ ಕಲಾಕ್ಷೇತ್ರ		
	2205-00-101-0-10-002	ವೇತನ - ಅಧಿಕಾರಿಗಳು	1.00
	2205-00-101-0-10-003	ವೇತನ - ಸಿಬ್ಬಂದಿ	16.00
	2205-00-101-0-10-011	ತುಟ್ಟಿ ಭತ್ಯೆ	6.00
	2205-00-101-0-10-014	ಇತರೆ ಭತ್ಯೆ	5.00
	2205-00-101-0-10-020	ವೈದ್ಯಕೀಯ ಭತ್ಯೆ	1.00
	2205-00-101-0-10-021	ವೈದ್ಯಕೀಯ ವೆಚ್ಚ ಮರುಪಾವತಿ.	3.[illegible]
	2205-00-101-0-10-034	ಗುತ್ತಿಗೆ/ಹೊರಗುತ್ತಿಗೆ.	21.89
	2205-00-101-0-10-051	ಸಾಮಾನ್ಯ ವೆಚ್ಚಗಳು.	65.00
	2205-00-101-0-10-200	ನಿರ್ವಹಣಾ ವೆಚ್ಚ.	20.00
		ಒಟ್ಟು	138.89
6	ಇತರೆ ಭಾಷೆಗಳಿಗೆ ಕನ್ನಡ ಸಾಹಿತ್ಯ ಅನುವಾದ 2205-00-101-0-13-059	ಇತರೆ ಖರ್ಚುಗಳು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಚಟುವಟಿಕೆಗಳಿಗೆ	10.00
		ಒಟ್ಟು	10.00
7	ಸಾಕ್ಷರತೆ ಮತ್ತು ಸಾಂಸ್ಕೃತಿಕ ಸಂಸ್ಥೆಗಳಿಗೆ ಅನುದಾನ(ಟ್ರಸ್ಟ್/ ಪ್ರತಿಷ್ಠಾನಗಳು) 2205-00-102-0-77-102	ಸಹಾಯಾನುದಾನ ಆಸ್ತಿಗಳ ಸೃಜನೆ: ಕನ್ನಡ ಭವನದಲ್ಲಿ ನಿರ್ಮಾಣಗೊಳ್ಳುತ್ತಿರುವ ಸ್ಟುಡಿಯೋ ಸುಸಜ್ಜೀಕರಣ	10.00
		ಒಟ್ಟು	10.00
		ಸಹಾಯಾನುದಾನ:	
8	2205-00-102-0-77-103	ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಟ್ರಸ್ಟ್/ಪ್ರತಿಷ್ಠಾನಗಳಿಗೆ ಅನುದಾನ:	190.00
		1. ಡಾ. ದ. ರಾ. ಬೇಂದ್ರೆ ಸ್ಮಾರಕ ಟ್ರಸ್ಟ್, ಧಾರವಾಡ.	
		2. ಡಾ. ಮಲ್ಲಿಕಾರ್ಜುನ ಮನ್ಸೂರ ಟ್ರಸ್ಟ್, ಧಾರವಾಡ.	
		3. ಆಲೂರು ವೆಂಕಟರಾವ್ ಟ್ರಸ್ಟ್, ಧಾರವಾಡ.	
		4. ಡಾ. ಬಸವರಾಜ ರಾಜಗುರು ಟ್ರಸ್ಟ್, ಧಾರವಾಡ.	
		5. ಡಿ. ವಿ. ಹಾಲಭಾವಿ ಟ್ರಸ್ಟ್, ಧಾರವಾಡ.	
		6. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ಕೋಲಾರ.	
		7. ಡಾ. ಡಿ. ವಿ. ಜಿ. ಪ್ರತಿಷ್ಠಾನ, ಕೋಲಾರ.	
		8. ಶಿವರಾಮ ಕಾರಂತ ಟ್ರಸ್ಟ್, ದಕ್ಷಿಣ ಕನ್ನಡ.	
		9. ಶಿವರಾಮ ಕಾರಂತ ಟ್ರಸ್ಟ್, ಉಡುಪಿ.	
		10. ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ.	

		11. ಬೆಟಗೇರಿ ಕೃಷ್ಣ ಶರ್ಮ ಟ್ರಸ್ಟ್, ಬೆಳಗಾವಿ. 12. ವಿ. ಕೃ. ಗೋಕಾಕ ಪ್ರತಿಷ್ಠಾನ, ಹಾವೇರಿ. 13. ಮೈಲಾರ ಮಹಾದೇವ ಟ್ರಸ್ಟ್, ಹಾವೇರಿ 14. ಗಳಗನಾಥ ಟ್ರಸ್ಟ್, ಹಾವೇರಿ 15. ಡಾ. ಪು.ತಿ.ನ. ಟ್ರಸ್ಟ್, ಬೆಂಗಳೂರು 16. ಡಾ. ಜಿ. ಎಸ್. ಶಿವರುದ್ರಪ್ಪ ಟ್ರಸ್ಟ್, ಬೆಂಗಳೂರು. 17. ನಿಜಲಿಂಗಪ್ಪ ಟ್ರಸ್ಟ್, ಚಿತ್ರದುರ್ಗ. 18. ಡಾ. ಗುಬ್ಬಿವೀರಣ್ಣ ಟ್ರಸ್ಟ್, ತುಮಕೂರು. 19. ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಶಿವಮೊಗ್ಗ. 20. ರನ್ನ ಪ್ರತಿಷ್ಠಾನ ಮುಧೋಳ, ಬಾಗಲಕೋಟೆ. 21. ಧುತ್ತರಗಿ ಪ್ರತಿಷ್ಠಾನ, ಬಾಗಲಕೋಟೆ 22. ಹಲಸಂಗಿ ಗೆಳೆಯರ ಬಳಗ ಟ್ರಸ್ಟ್, ವಿಜಯಪುರ. 23. ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್, [illegible] 24. ಕೆ. ಪಿ. ಪೂರ್ಣಚಂದ್ರ ತೇಜಸ್ವಿ [illegible], ಚಿಕ್ಕಮಗಳೂರು. (ಮೇಲ್ಕಂಡ ಟ್ರಸ್ಟ್/ಪ್ರತಿಷ್ಠಾನಗಳಿಗೆ [illegible] ಗುಣವಾಗಿ ಅನುದಾನ ಬಿಡುಗಡೆ [illegible])	
		ಒಟ್ಟು	190.00
		ಒಟ್ಟು (7+8)	200.00
9	ಜನಪ್ರಿಯ ಸಾಹಿತ್ಯ ಪ್ರಕಾಶನ ಹಾಗೂ ಬಯಲು ರಂಗಮಂದಿರ		
	2205-00-102-1-01-051	**ಸಾಮಾನ್ಯ ವೆಚ್ಚಗಳು:** ಇಲಾಖಾ ಪ್ರಕಟಣೆ, ಜಾಹೀರಾತು, ಕ್ರಿಯಾ ಯೋಜನೆ ವಾರ್ಷಿಕ ಪ್ರಗತಿ ಮತ್ತು ಸಾಧನೆಗಳ ಕಿರುಹೊತ್ತಿಗೆ ಮುದ್ರಣಕ್ಕಾಗಿ.	5.00
10	2205-00-102-1-01-059	**ಇತರೆ ಖರ್ಚುಗಳು:** ಟೆಂಡರ್ ಪ್ರಕಟಣೆ / ಜಾಹೀರಾತು, ಇಲಾಖಾ ಪ್ರಕಟಣೆಗಳ ಮುದ್ರಣ ಮತ್ತು ಇತರೆ ವೆಚ್ಚಗಳು.	5.00
11	2205-00-102-1-01-100	**ಧನಸಹಾಯ/ಪರಿಹಾರ:** ಜಿಲ್ಲಾ ರಂಗಮಂದಿರ, ಸಾಂಸ್ಕೃತಿಕ ಸಮುಚ್ಚಯಗಳ ಮತ್ತು ಜನರಲ್ ತಿಮ್ಮಯ್ಯ ಸ್ಮಾರಕ ನಿರ್ಮಾಣ (ಅಗತ್ಯಕ್ಕೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡುವುದು)	90.00
12	2205-00-102-1-01-101	**ಸಹಾಯಾನುದಾನ ವೇತನಗಳು:** ಅನುದಾನ ಸಂಹಿತೆಗೆ ಒಳಪಟ್ಟು, 1. ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ. 2. ನೀನಾಸಂ, ಶಿವಮೊಗ್ಗ. 3. ದಿ ಆರ್ಟ್ ಇಂಟೆಗ್ರೇಶನ್ ಸೊಸೈಟಿ, ಕಲಬುರಗಿ ಸಂಸ್ಥೆಗಳ ವೇತನಾನುದಾನ.	165.00
		ಒಟ್ಟು (9+10+11+12)	265.00
13	ಕಷ್ಟ ಪರಿಸ್ಥಿತಿಯಲ್ಲಿರುವ ಕಲಾವಿದರಿಗೆ ಮಾಸಾಶನ	**ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು:** ಸಾಹಿತ್ಯ, ಸಂಗೀತ, ನೃತ್ಯ, ಲಲಿತಕಲೆ, ನಾಟಕ, ಜನಪದ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಕಲಾವಿದರಿಗೆ ಮಾಸಾಶನ.	2900.00
	2205-00-102-1-18-251		
		ಒಟ್ಟು	2900.00

	ಪರಿಶಿಷ್ಟ ಪಂಗಡದ ಉಪ ಯೋಜನೆ (ವಿಶೇಷ ಘಟಕ ಯೋಜನೆ)	ರಾಜ್ಯ ಪರಿಷತ್ತಿನ ಅನುಮೋದನೆಯನ್ನು ನಿರೀಕ್ಷಿಸಿ ಯೋಜನೆ ರೂಪಿಸಲಾಗಿದೆ.	
14	2205-00-102-1-44-422	1. **ಧನಸಹಾಯ:** ಸಾಂಸ್ಕೃತಿಕ ಸಂಘ-ಸಂಸ್ಥೆಗಳ ಚಟುವಟಿಕೆಗಳಿಗೆ, ವಾದ್ಯಪರಿಕರ / ವೇಷಭೂಷಣ ಖರೀದಿ ಚಿತ್ರ/ಶಿಲ್ಪ ಕಲಾಕೃತಿಗಳ ಪ್ರದರ್ಶನಕ್ಕೆ ಸಹಾಯಧನ. 2. **ಪ್ರಾಯೋಜಿತ ಕಾರ್ಯಕ್ರಮ:** 31 ಜಿಲ್ಲೆಗಳಲ್ಲಿ ಸಂಘ-ಸಂಸ್ಥೆಗಳು ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಾಯೋಜಿಸುವ ಕಲಾತಂಡ ಕಲಾವಿದರಿಗೆ ಪಾವತಿಸುವ ಸಂಭಾವನೆ 3. **ಜನಪರ ಉತ್ಸವ:** 31 ಜಿಲ್ಲೆಗಳಲ್ಲಿ ಕಲಾವಿದರಿಗೆ ವೇದಿಕೆ ಯನ್ನು ಕಲ್ಪಿಸಿ ಅವರ ಕಲಾಪ್ರದರ್ಶನ ಮತ್ತು ... ಪ್ರೋತ್ಸಾಹಿಸುವುದು. 4. **ಅಂಬೇಡ್ಕರ್ ಓದು:** ಶಾಲೆಗಳು ... ಅಂಬೇಡ್ಕರ್‌ರವರ ಬದುಕು ಮತ್ತು ಸಾಧನೆ ಬಗ್ಗೆ ಪರಿಚಯ ಮಾಡಿಕೊಡುವ ಕಾರ್ಯಕ್ರಮ. 5. **ಡಾ. ಬಿ.ಆರ್. ಅಂಬೇಡ್ಕರ್‌ರವರ ಬರಹ ಮತ್ತು ಭಾಷಣಗಳು-22 ಸಂಪುಟಗಳ ಮರುಮುದ್ರಣ:** ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಿಂದ ಪ್ರಕಟಿಸಿ ಹೊರತರಲಾದ ಡಾ||ಬಿ.ಆರ್. ಅಂಬೇಡ್ಕರ್‌ರವರ ಬರಹ ಮತ್ತು ಭಾಷಣಗಳ 22 ಸಂಪುಟಗಳ ಮರುಮುದ್ರಣ. 6. **ಸಂವಿಧಾನ ರಚನಾ ಸಭೆ ನಡವಳಿ (ಚರ್ಚೆ) - 10 ಸಂಪುಟಗಳ ಮುದ್ರಣ:** ಡಾ||ಬಿ.ಆರ್. ಅಂಬೇಡ್ಕರ್‌ರವರ ನೇತೃತ್ವದಲ್ಲಿ ಭಾರತದ ಸಂವಿಧಾನ ರೂಪುಗೊಂಡಿದ್ದು, ಸಂವಿಧಾನ ರಚನಾ ಸಭೆಯ ಚರ್ಚೆಗಳ (ನಡವಳಿಗಳ) ಸುಮಾರು 10 ಸಂಪುಟಗಳನ್ನು ಈಗಾಗಲೇ ಕನ್ನಡಕ್ಕೆ ಅನುವಾದಿಸಲಾಗಿದ್ದು, ಅದರ ನೂತನ ಪ್ರತಿಗಳ ಮರುಮುದ್ರಣ.	1000.00
		ಒಟ್ಟು	1000.00
15	ಕನ್ನಡ ಪುಸ್ತಕ ಪ್ರಾಧಿಕಾರ		
	2205-00-102-1-46-002	ವೇತನ - ಅಧಿಕಾರಿಗಳು.	15.00
	2205-00-102-1-46-003	ವೇತನ - ಸಿಬ್ಬಂದಿ.	1.00
	2205-00-102-1-46-011	ತುಟ್ಟಿ ಭತ್ಯೆ.	5.00
	2205-00-102-1-46-014	ಇತರೆ ಭತ್ಯೆ.	4.00
	2205-00-102-1-46-020	ವೈದ್ಯಕೀಯ ಭತ್ಯೆ.	[illegible]
	2205-00-102-1-46-021	ವೈದ್ಯಕೀಯ ವೆಚ್ಚದ ಮರುಪಾವತಿ.	3.00
	2205-00-102-1-46-034	ಗುತ್ತಿಗೆ/ ಹೊರಗುತ್ತಿಗೆ: ಖಾಲಿ ಹುದ್ದೆಗಳಿಗೆ ಎದುರಾಗಿ ಮಂಜೂರಾದ ಹುದ್ದೆಗಳ ಸೇವಾ ವೆಚ್ಚ.	4.78
	2205-00-102-1-46-059	ಇತರೆ ಖರ್ಚುಗಳು.	1.00
		ಒಟ್ಟು	34.78
16	ಸಾಂಸ್ಕೃತಿಕ ಸಂಘ-ಸಂಸ್ಥೆಗಳಿಗೆ ಧನಸಹಾಯ 2205-00-102-1-64-059	ಇತರೆ ಖರ್ಚುಗಳು: ಪ್ರಸಕ್ತ ಸಾಲಿನ ರಾಜ್ಯ/ಹೊರರಾಜ್ಯದ ಸಾಂಸ್ಕೃತಿಕ ಸಂಘ-ಸಂಸ್ಥೆಗಳ ಚಟುವಟಿಕೆಗಳಿಗೆ, ವಾದ್ಯಪರಿಕರ / ವೇಷಭೂಷಣ ಖರೀದಿ, ಚಿತ್ರ / ಶಿಲ್ಪ, ಕಲಾಕೃತಿಗಳ ಪ್ರದರ್ಶನಕ್ಕೆ ಸಹಾಯಧನ. ಕಳೆದ ಸಾಲಿನಲ್ಲಿ ಸರ್ಕಾರಿ ಆದೇಶವಾಗಿ ಪಾವತಿಯಾಗದ ಸಂಘ-ಸಂಸ್ಥೆಗಳಿಗೆ ಅನುದಾನ.	1000.00
		ಒಟ್ಟು	1000.00

17	ವೃತ್ತಿ ನಾಟಕ ಕಂಪನಿಗಳಿಗೆ ಸಹಾಯ 2205-00-102-1-68-059	ಇತರೆ ಖರ್ಚುಗಳು: ಕಾಯಕಲ್ಪ ಯೋಜನೆಯಡಿ ವೃತ್ತಿ ನಾಟಕ ಕಂಪನಿಗಳಿಗೆ ಪ್ರೋತ್ಸಾಹಧನ.	150.00
		ಒಟ್ಟು	150.00
18	ಮಹಾಪುರುಷರ ಜಯಂತಿಗಳ ಆಚರಣೆ 2205-00-102-1-70-059	ಇತರೆ ಖರ್ಚುಗಳು: ಪ್ರಸಕ್ತ ಸಾಲಿನ ಮಹನೀಯರ ಜಯಂತಿಗಳನ್ನು ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಆಚರಿಸಲು ಹಾಗೂ ಬಾಕಿ ಪ್ರಕರಣಗಳ ವೆಚ್ಚವನ್ನು ಭರಿಸಲು ಅನುದಾನ. (ರೂ. 2100 ಲಕ್ಷಗಳಿಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. ಉಳಿಕೆ ರೂ. 500 ಲಕ್ಷಗಳನ್ನು ಯಾವ ಉದ್ದೇಶಕ್ಕೆ ಬಳಸಬೇಕು ಎಂಬುದನ್ನು ನಂತರ ತಿಳಿಸಲಾಗುವುದು ಎಂಬ ವಿಶೇಷ ಸೂಚನೆಯನ್ನು ಆರ್ಥಿಕ ಇಲಾಖೆಯು ನೀಡಿದೆ.	2600.00
		ಒಟ್ಟು	2600.00
19	ರಾಷ್ಟ್ರೀಯ ಮತ್ತು ರಾಜ್ಯದ ಉತ್ಸವಗಳು, ಅಕಾಡೆಮಿಗಳು, ಅಕ್ಕ ಮತ್ತು ಕನಕದಾಸ ಟ್ರಸ್ಟ್ 2205-00-102-4-01-059	ಇತರೆ ಖರ್ಚುಗಳು: 31 ಜಿಲ್ಲೆಗಳಲ್ಲಿ ವಿವಿಧ ಸಂಘ-ಸಂಸ್ಥೆಗಳು ಆಯೋಜಿಸುವ ಕಾರ್ಯಕ್ರಮಗಳಿಗೆ ಪ್ರಾಯೋಜನೆ, ಕಲಾತಂಡಗಳ ಕಲಾವಿದರಿಗೆ ಗೌರವ ಸಂಭಾವನೆ ಹಾಗೂ ಕಳೆದ ಸಾಲಿನ ಬಾಕಿ ಪ್ರಕರಣಗಳಿಗೆ ಅನುದಾನ	700.00
		ಒಟ್ಟು	700.00
20	2205-00-102-4-01-100	ಧನಸಹಾಯ/ಪರಿಹಾರ:	
		1. ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಕೇಂದ್ರದ ಚಟುವಟಿಕೆ.	30.00
		2. ಮಾಣಿಕ್ ವೇಲು ಮಹಾರಾಜನಾ ಗೃಹದ ಬಾಡಿಗೆ ವೆಚ್ಚ (ಕರ್ನಾಟಕ ಗೃಹ ಮಂಡಳಿ).	40.00
		3. ಕಲಾಗ್ರಾಮ ನಿರ್ವಹಣೆ.	125.00
		4. ಕನ್ನಡ ಭವನ / ನಯನ ಸಭಾಂಗಣ ನಿರ್ವಹಣೆ	100.00
		5. ರವೀಂದ್ರ ಕಲಾಕ್ಷೇತ್ರ ಸುಸಜ್ಜೀಕರಣ	150.00
		6. ಜನರಲ್ ತಿಮ್ಮಯ್ಯ ಸ್ಮಾರಕ ಭವನದ ಕಂಪೌಂಡ್ ಗೋಡೆ ನಿರ್ಮಾಣ	25.00
		7. ಪ್ರಗತಿಯಲ್ಲಿರುವ ಜಿಲ್ಲಾ ರಂಗಮಂದಿರಗಳಿಗೆ / ನವೀಕರಣ ಸರ್ಕಾರದ ಆದೇಶವಾಗಿರುವ ಸಾಂಸ್ಕೃತಿಕ ಭವನ/ ಬಯಲು ರಂಗಮಂದಿರಗಳ ನಿರ್ಮಾಣಕ್ಕಾಗಿ ಬಾಕಿ ಅನುದಾನ ಬಿಡುಗಡೆ.	430.00
		8. ಬಸವ ಪುತ್ಥಳಿ ಪ್ರತಿಷ್ಠಾಪಿಸಲು (ವಿಧಾನಸೌಧ ಆವರಣದಲ್ಲಿ)	50.00
		9. ನಾಲ್ಕು ವಲಯ ಕಚೇರಿಗಳ ಸುಸಜ್ಜೀಕರಣ	50.00
		ಒಟ್ಟು	1000.00
21	2205-00-102-4-01-103	ಸಹಾಯಾನುದಾನ ಸಾಮಾನ್ಯ:(ಉತ್ಸವ)	
		1. ಬಹುರೂಪಿ ನಾಟಕೋತ್ಸವ (ರಂಗಾಯಣ, ಮೈಸೂರು)	25.00
		2. ಛತ್ರಪತಿ ಶಿವಾಜಿ ಅವರ ಜಾಂತಾರಾಜ ಮಾದರಿಯಲ್ಲಿ ರಾಣಿ ಕಿತ್ತೂರು ಚೆನ್ನಮ್ಮ ಅವರ ಕುರಿತ ನಾಟಕ (ರಂಗಾಯಣ, ಧಾರವಾಡ).	25.00
		3. ರಾಜ್ಯ ಮತ್ತು ಜಿಲ್ಲಾ ಉತ್ಸವಗಳ ಆಚರಣೆಗೆ ಅನುದಾನ.	190.00

		4. ಪದ್ಮನಾಭನಗರ ಉತ್ಸವಕ್ಕೆ ಅನುದಾನ	60.00
		5. ನಶಿಸಿ ಹೋಗುತ್ತಿರುವ ತಳಸಮುದಾಯದಲ್ಲಿರುವ ವಿಶಿಷ್ಟ ಕಲೆಗಳನ್ನು ಉಳಿಸಿ ಮುನ್ನೆಲೆಗೆ ತರಲು ಪ್ರತಿ ವಿಭಾಗ ಮಟ್ಟದಲ್ಲಿ ಒಂದರಂತೆ ಒಟ್ಟು ನಾಲ್ಕು ಸಾಂಸ್ಕೃತಿಕ ಶಿಬಿರ ಕಾರ್ಯಕ್ರಮಗಳನ್ನು ಆಯೋಜಿಸುವುದು.	500.00
		6. ರಾಜ್ಯ ಮಟ್ಟದ ಯಕ್ಷಗಾನ ಸಮ್ಮೇಳನಕ್ಕೆ ಅನುದಾನ	200.00
		ಒಟ್ಟು	1000.00
		ಒಟ್ಟು (19+20+21)	2700.00
22	ಜಿಲ್ಲಾ ರಂಗಮಂದಿರಗಳಿಗೆ ಧನಸಹಾಯ 2205-00-102-4-03-200	ಧನಸಹಾಯ ಪರಿಹಾರ: ಜಿಲ್ಲಾ ರಂಗಮಂದಿರಗಳ [illegible] ನಿರ್ವಹಣೆ ಅಗತ್ಯಕ್ಕೆ ಅನುಗುಣವಾಗಿ [illegible] ಬಿಡುಗಡೆ ಮಾಡುವುದು.	200.00
		ಒಟ್ಟು	200.00
23	ರಾಜ್ಯ ಅಕಾಡೆಮಿಗಳಿಗೆ ಸಹಾಯ 2205-00-102-4-13-103	ಸಹಾಯಾನುದಾನ ಸಾಮಾನ್ಯ: 1. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 2. ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು 3. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು 4. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು 5. ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು 6. ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು 7. ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು 8. ಕರ್ನಾಟಕ ಬಯಲಾಟ ಅಕಾಡೆಮಿ, ಬಾಗಲಕೋಟೆ 9. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು 10. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ 11. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು 12. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಮಂಗಳೂರು 13. ಕರ್ನಾಟಕ ಅರೆಭಾಷೆ ಸಂಸ್ಕೃತಿ [illegible] ಅಕಾಡೆಮಿ, ಮಡಿಕೇರಿ. 14. ಕರ್ನಾಟಕ ಲಂಬಾಣಿ ಸಂಸ್ಕೃತಿ [illegible] ಅಕಾಡೆಮಿ, ಬೆಂಗಳೂರು 15. ಶಿಲ್ಪ ಗುರುಕುಲ ಕೇಂದ್ರ, ಬೆಂಗಳೂರು (ಅಕಾಡೆಮಿಗಳ ಚಟುವಟಿಕೆಗಳಿಗೆ ಅಗತ್ಯಕ್ಕೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡುವುದು).	700.00
		ಒಟ್ಟು	700.00
24	ಕನ್ನಡ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ	ಇತರೆ ಖರ್ಚುಗಳು: ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಪ್ರಯುಕ್ತ ಜಿಲ್ಲೆಗಳಲ್ಲಿ ಆಯೋಜಿಸುವ ಕಾರ್ಯಕ್ರಮಗಳು.	
		1. ಚಿಗುರು: 31 ಜಿಲ್ಲಾ ಹಂತದಲ್ಲಿ ಏರ್ಪಡಿಸುವ ಕಾರ್ಯಕ್ರಮ (ತಲಾ ರೂ.1.70 ಲಕ್ಷಗಳಂತೆ)	52.70
		2. ಯುವಸೌರಭ: 31 ಜಿಲ್ಲಾ ಹಂತದಲ್ಲಿ ಏರ್ಪಡಿಸುವ ಕಾರ್ಯಕ್ರಮ (ತಲಾ ರೂ.2.00 ಲಕ್ಷಗಳಂತೆ)	62.00

		3. ಸಾಂಸ್ಕೃತಿಕ ಸೌರಭ 31 ಜಿಲ್ಲಾ ಕೇಂದ್ರದಲ್ಲಿ ಏರ್ಪಡಿಸುವ ಕಾರ್ಯಕ್ರಮ (ತಲಾ ರೂ.2.50 ಲಕ್ಷಗಳಂತೆ)	77.50
		4. ಕಣಜ: ಕಣಜ ನಿರ್ವಹಣೆ	120.00
		5. ಸಾಹಿತಿ ಕಲಾವಿದರ ವೈದ್ಯಕೀಯ ವೆಚ್ಚ ಮರುಪಾವತಿ.	30.00
		6. ನಯನ ಸಭಾಂಗಣದಲ್ಲಿ ICCR ಸಹಯೋಗದಲ್ಲಿ ಪ್ರತಿ ಶುಕ್ರವಾರ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ.	10.00
		7. ಕಿದ್ವಾಯಿ: ಸಾಂಸ್ಕೃತಿಕ ಕಾರ್ಯಕ್ರಮ	10.00
		8. ಮನೆಯಂಗಳದಲ್ಲಿ ಮಾತುಕತೆ: ಪ್ರತಿ ತಿಂಗಳು 3ನೇ ಶನಿವಾರ ನಯನ ಸಭಾಂಗಣದಲ್ಲಿ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮ.	20.00
		9. ರಾಷ್ಟ್ರೀಯ ಹಬ್ಬಗಳ ಆಚರಣೆ	80.00
		10. ಕನ್ನಡ ಹಸ್ತ ಪ್ರತಿ ಮುದ್ರಣ: ಕನ್ನಡ ಪಿ.ಎಚ್.ಡಿ ಮತ್ತು ಎಂ.ಫಿಲ್. ಪದವಿ ಹಸ್ತ ಪ್ರತಿ ಮುದ್ರಣ, ಸ್ನಾತಕೋತ್ತರ ಪ್ರಕಟಿತ ಗ್ರಂಥಗಳಿಗೆ ಪ್ರೋತ್ಸಾಹಧನ ಮತ್ತು ಕಳೆದ ಸಾಲುಗಳಲ್ಲಿ ಬಾಕಿ ಪ್ರಕರಣಗಳಿಗೆ ಅನುದಾನ	12.80
		11. ರಾಜ್ಯ/ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಸಾಹಿತಿ / ಕಲಾವಿದರುಗಳಿಗೆ ಉಚಿತ ಬಸ್ಸು ಪ್ರಯಾಣ ವೆಚ್ಚವನ್ನು ಭರಿಸಲು ಅನುದಾನ.	20.00
		12. ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆ	5.00
		13. ಕಳೆದ ಎರಡು ವರ್ಷಗಳು ಹಾಗೂ ಪ್ರಸಕ್ತ ಸಾಲಿನ ವಿವಿಧ ಪ್ರಶಸ್ತಿಗಳನ್ನು ನೀಡಲು ಲೆಕ್ಕಶೀರ್ಷಿಕೆ ಮೊತ್ತದ ಮರು ಹೊಂದಾಣಿಕೆ ಮೂಲಕ ರೂ. 100.00 ಲಕ್ಷಗಳು ಹಾಗೂ ಉಳಿದಂತೆ ಹೆಚ್ಚುವರಿ ಅನುದಾನಕ್ಕೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವುದು.	0
		ಒಟ್ಟು	500.00
25	ಗಿರಿಜನ ಉಪಯೋಜನೆ 2205-00-796-0-01-423	ರಾಜ್ಯ ಪರಿಷತ್ತಿನ ಅನುಮೋದನೆಯನ್ನು ನಿರೀಕ್ಷಿಸಿ ಯೋಜನೆ ರೂಪಿಸಲಾಗಿದೆ. 1. ಧನಸಹಾಯ: ಸಾಂಸ್ಕೃತಿಕ ಸಂಘ-ಸಂಸ್ಥೆಗಳ ಚಟುವಟಿಕೆಗಳಿಗೆ, ವಾದ್ಯಪರಿಕರ / ವೇಷಭೂಷಣ ಖರೀದಿ, ಚಿತ್ರ/ಶಿಲ್ಪ ಕಲಾಕೃತಿಗಳ ಪ್ರದರ್ಶನಕ್ಕೆ ಸಹಾಯಧನ. 2. ಪ್ರಾಯೋಜಿತ ಕಾರ್ಯಕ್ರಮ: 31 ಜಿಲ್ಲೆಗಳಲ್ಲಿ ಸಂಘ-ಸಂಸ್ಥೆಗಳು ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರಾಯೋಜಿಸುವ ಕಲಾ ತಂಡದ ಕಲಾವಿದರಿಗೆ ಪಾವತಿಸುವ ಸಂಭಾವನೆ.	300.00
		3. ಗಿರಿಜನ ಉತ್ಸವ: 31 ಜಿಲ್ಲೆಗಳಲ್ಲಿ ಕಲಾವಿದರಿಗ ವೇದಿಕೆಯನ್ನು ಕಲ್ಪಿಸಿ ಅವರ ಕಲಾಪ್ರದರ್ಶನವನ್ನು ಏರ್ಪಡಿಸಿ ಪ್ರೋತ್ಸಾಹಿಸುವುದು.	
		ಒಟ್ಟು	300.00

	2205-00-800-0-14-060		
26	ಕರ್ನಾಟಕ ಸೇವಾ ಅಧಿನಿಯಮಗಳ ಖಾತರಿ ಅಡಿಯಲ್ಲಿ ಪಾವತಿಗಳು	ಪರಿಹಾರಾತ್ಮಕ ವೆಚ್ಚ:	50.00
		ಒಟ್ಟು	50.00
	2205-00-800-0-15-422	ಪರಿಶಿಷ್ಟ ಜಾತಿ ಉಪಯೋಜನೆ:	
27	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ.	31 ಜಿಲ್ಲೆಗಳಲ್ಲಿ [illegible]	24.24
	2205-00-800-0-15-423	ಗಿರಿಜನ ಉಪಯೋಜನೆ:	
		31 ಜಿಲ್ಲೆಗಳಲ್ಲಿ [illegible]	19.38
		ಒಟ್ಟು	43.62
28	ಕನ್ನಡ ಸಾಹಿತ್ಯ ಪರಿಷತ್ತಿಗೆ ಅನುದಾನ 2205-00-102-4-22-103	ಸಹಾಯಾನುದಾನ ಸಾಮಾನ್ಯ: ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆ ರೂ. 500.00 ಲಕ್ಷಗಳು ಹಾಗೂ ಆರ್ಥಿಕ ಇಲಾಖೆಯ ಸೂಚನೆಯಂತೆ ಹಾವೇರಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲು ರೂ. 500.00 ಲಕ್ಷಗಳನ್ನು ಮೀಸಲಿರಿಸಲಾಗಿದೆ.	1000.00
		ಒಟ್ಟು	1000.00
29	ಜಾನಪದ ಪರಿಷತ್‌ಗೆ ಸಹಾಯಾನುದಾನ 2205-00-102-4-21-101	ಸಹಾಯಾನುದಾನ ವೇತನಗಳು: [illegible] ವೇತನ	14.00
	2205-00-102-4-21-103	ಸಹಾಯಾನುದಾನ ಸಾಮಾನ್ಯ: [illegible]	100.00
		ಒಟ್ಟು	114.00
30	ರಾಜ್ಯೋತ್ಸವ ದಿನಾಚರಣೆ ನಿಮಿತ್ತ ವೆಚ್ಚ 2250-00-800-2-03-059	ಇತರೆ ಖರ್ಚುಗಳು: [illegible]	1200.00
		ಒಟ್ಟು	1200.00
31	ವಿವಿಧ ಅಭಿವೃದ್ಧಿ ಮತ್ತು ಮೂಲ ಸೌಕರ್ಯ ಕಾರ್ಯಗಳು	ಬಂಡವಾಳ ವೆಚ್ಚಗಳು:	
	4202-04-800-2-01-132	1. ಶ್ರೀಶ್ರೀಶ್ರೀ ಶಿವಕುಮಾರ ಸ್ವಾಮೀಜಿಗಳ ಹುಟ್ಟೂರಾದ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ವೀರಾಪುರ ಗ್ರಾಮದ ಅಭಿವೃದ್ಧಿಗಾಗಿ ಹಾಗೂ ಶ್ರೀಗಳ ಜೀವನ ಸಾಧನೆ ಮತ್ತು ವಿಚಾರಗಳನ್ನು ವಿಶ್ವದೆಲ್ಲೆಡೆ ಸಾರಲು ಸಾಂಸ್ಕೃತಿಕ ಹಾಗೂ ಪಾರಂಪರಿಕ ಕೇಂದ್ರ [illegible] ಸ್ಥಾಪನೆಗೆ ರೂ.25.00 ಕೋಟಿಗಳನ್ನು ಆಯವ್ಯಯದಲ್ಲಿ ಅವಕಾಶ ಮಾಡಿ ಕೊಳ್ಳಲಾಗಿದೆ.	500.00

		2021-22ನೇ ಸಾಲಿನಲ್ಲಿ ರೂ.5.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ. 20.00 ಕೋಟಿಗಳನ್ನು ಬಿಡುಗಡೆ ಮಾಡಲು ಬಾಕಿಯಿರುತ್ತದೆ. **(2019-20 ನೇ ಸಾಲಿನ ಆಯವ್ಯಯ ಘೋಷಣೆ)**	
		2. ಶ್ರೀಶ್ರೀಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳ ಜನ್ಮಸ್ಥಳವಾದ ರಾಮನಗರ ಜಿಲ್ಲೆಯ ಬಿಡದಿ ತಾಲ್ಲೂಕಿನ ಬಾನಂದೂರು ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಅಭಿವೃದ್ಧಿಪಡಿಸಲು ಹಾಗೂ ಪಶ್ಚಿಮ ಬಂಗಾಳದ ಬೇಲೂರು ಮಠದ ಮಾದರಿಯಲ್ಲಿ ಸಾಂಸ್ಕೃತಿಕ ಹಾಗೂ ಪಾರಂಪರಿಕ ಕೇಂದ್ರ ಸ್ಥಾಪನೆಗೆ ರೂ.24,99,94,500/-ಗಳನ್ನು ಆಯವ್ಯಯದಲ್ಲಿ ಅವಕಾಶ ಮಾಡಿಕೊಳ್ಳಲಾಗಿದೆ. 2020-21ನೇ ಸಾಲಿನಲ್ಲಿ ರೂ. 7,11,52,650/- 2021-22ನೇ ಸಾಲಿನಲ್ಲಿ ರೂ. 7.00 ಕೋಟಿ ಒಟ್ಟಾರೆ ಮೊತ್ತ ರೂ.14,11,52,650/-ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಮುಂದುವರೆದು, ರೂ.10,88,41,850/-ಗಳನ್ನು ಬಿಡುಗಡೆ ಮಾಡಲು ಬಾಕಿಯಿರುತ್ತದೆ. **(2019-20 ನೇ ಸಾಲಿನ ಆಯವ್ಯಯ ಘೋಷಣೆ)**	500.00
		3. ಮಂಡ್ಯ ಕರ್ನಾಟಕ ಸಂಘದ ಅಭಿವೃದ್ಧಿಗೆ ರೂ. 100.00 ಲಕ್ಷಗಳ ಅನುದಾನ. **(2019-20 ನೇ ಸಾಲಿನ ಆಯವ್ಯಯ ಘೋಷಣೆ)**	100.00
		4. ಖ್ಯಾತ ಸಾಹಿತಿಗಳಾದ ಶ್ರೀ ಎಸ್.ಎಲ್. ಭೈರಪ್ಪನವರ ಹುಟ್ಟೂರಾದ ಹಾಸನ ಜಿಲ್ಲೆಯ ಸಂತೆಶಿವರ ಗ್ರಾಮದ ಅಭಿವೃದ್ಧಿಗಾಗಿ ರೂ. 5.00 ಕೋಟಿ. **(2020-21ನೇ ಸಾಲಿನ ಆಯವ್ಯಯ ಘೋಷಣೆ)**	100.00
		5. 2021-22ನೇ ಸಾಲಿನ ಆಯವ್ಯಯ ಘೋಷಣೆಯಂತೆ (ಕಂಡಿಕೆ-269) ಜಗಜ್ಯೋತಿ ಬಸವಣ್ಣನವರ ಜನ್ಮಸ್ಥಳವಾದ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ ಗ್ರಾಮವನ್ನು ಅಭಿವೃದ್ಧಿಪಡಿಸಲು ಅನುದಾನ ಒದಗಿಸುವ ಬಗ್ಗೆ. 2021-22ನೇ ಸಾಲಿನಲ್ಲಿ ರೂ.1.00 ಕೋಟಿ ಅನುದಾನವನ್ನು ಜಿಲ್ಲಾಧಿಕಾರಿ, ವಿಜಯಪುರ ಜಿಲ್ಲೆ, ವಿಜಯಪುರ ಇವರಿಗೆ ಬಿಡುಗಡೆ ಮಾಡಲಾಗಿದ್ದು, ಬಾಕಿ ಅನುದಾನ ರೂ.4.00 ಕೋಟಿಗಳನ್ನು ಬಿಡುಗಡೆ ಮಾಡಬೇಕಿರುತ್ತದೆ. **(2021-22ನೇ ಸಾಲಿನ ಆಯವ್ಯಯ ಘೋಷಣೆ)**	100.00
		6. ಬಹರೈನ್ ಕನ್ನಡ ಸಂಘಕ್ಕೆ ಅನುದಾನ.	100.00
		7. ಮಹಾಲಿಂಗಪುರ ನಗರದ ಕೌಜಲಗಿ ನಿಂಗಮ್ಮ ಭವನದಲ್ಲಿ ಆಸನಗಳನ್ನು ಅಳವಡಿಸಲು.	25.00

		8. ಮೂಡಬಿದರೆ ಸ್ಕೌಟ್ ಭವನ ಕಟ್ಟಡವನ್ನು ಪೂರ್ಣಗೊಳಿಸಲು.	100.00
		9. ಹೊನ್ನಾಳಿ ಮತ್ತು ನ್ಯಾಮತಿ ಪಟ್ಟಣದಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ.	100.00
		10.ಯಕ್ಷ ರಂಗಾಯಣ ನಿರ್ಮಾಣ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಗೆ.	100.00
		11. ಜಿಲ್ಲಾ ರಂಗಮಂದಿರ ನಿರ್ಮಾಣ / ಅಪೂರ್ಣ / ಮುಂದುವರೆದ ಕಾಮಗಾರಿಗಳಿಗೆ.	275.00
		ಒಟ್ಟು	2000.00
32	4202-04-800-2-01-386	ನಿರ್ಮಾಣ: 1. 2020-21ನೇ ಸಾಲಿನ ಮುಂದುವರೆದ ಆಯವ್ಯಯ ಘೋಷಣೆಯ ಹೊಸ ಯೋಜನೆಗಳು. ಬೆಂಗಳೂರು ನಗರದ 4 ದಿಕ್ಕುಗಳಲ್ಲಿ ಸುಸಜ್ಜಿತ ರಂಗಮಂದಿರಗಳ ನಿರ್ಮಾಣ.	100.00
		2. 2022-23 ನೇ ಸಾಲಿನ ಆಯವ್ಯಯ ಘೋಷಣೆಯ ಡಾ|| ಮಹದೇವ ಬಣಕಾರ ರವರ ಸಾಂಸ್ಕೃತಿಕ ಭವನವನ್ನು ಹಾವೇರಿ ಜಿಲ್ಲೆಯಲ್ಲಿ ನಿರ್ಮಾಣ ಮಾಡಲು	100.00
		3. ಇಲಾಖಾ ವ್ಯಾಪ್ತಿಯಲ್ಲಿರುವ ರಂಗ ಮಂದಿರ / ಸಾಂಸ್ಕೃತಿಕ ಭವನಗಳ ಮುಂದುವರೆದ / ಅಪೂರ್ಣ / ನಿರ್ಮಾಣ ಹಂತದಲ್ಲಿರುವ ಕಾಮಗಾರಿಗಳಿಗೆ ಅನುದಾನ, **/ ಕಲಾಗ್ರಾಮ ದಲ್ಲಿರುವ ಗ್ರಾಫಿಕ್ ಸ್ಟುಡಿಯೋ ಪೂರ್ಣಗೊಳಿಸಲು ಅನುದಾನ ಅವಕಾಶ ಮಾಡಿಕೊಳ್ಳಲಾಗಿದೆ.**	500.00
		ಒಟ್ಟು	700.00
2022-23 ನೇ ಸಾಲಿನಲ್ಲಿ ಆಯವ್ಯಯದಡಿ ಇಲಾಖೆಗೆ ಒದಗಿಸಿದ ಒಟ್ಟಾರೆ ಅನುದಾನ			19936.91

(ಕೆ. ಆರ್. ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸಂಸ್ಕೃತಿ)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸಾಮಾನ್ಯ / ವಿಶೇಷ ಘಟಕ / ಗಿರಿಜನ ಉಪಯೋಜನೆಯಡಿ ನೋಂದಾಯಿತ ಸಂಘ-ಸಂಸ್ಥೆ / ವ್ಯಕ್ತಿಗಳಿಗೆ ಧನಸಹಾಯ ಯೋಜನೆಯ ಪರಿಷ್ಕೃತ ಮಾರ್ಗಸೂಚಿಗಳು.

ಓದಲಾಗಿದೆ : ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಏಕ ಕಡತ ಸಂಖ್ಯೆ: ಡಿಕೆಸಿ-33011/57/2022

ಪ್ರಸ್ತಾವನೆ:

ಮೇಲೆ ಓದಲಾದ ಏಕ ಕಡತದಲ್ಲಿ, ಸಾಂಸ್ಕೃತಿಕ ಸಂಘ-ಸಂಸ್ಥೆಗಳ ಚಟುವಟಿಕೆಗಳಿಗೆ ಧನಸಹಾಯ ನೀಡಲು ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 144 ಕಸಧ 2020, ದಿನಾಂಕ: 10.11.2020ರ ಅನುಬಂಧ-1ರಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದ್ದು, ರಾಜ್ಯಾದ್ಯಂತ ಸಾಹಿತ್ಯ, ಸಾಂಸ್ಕೃತಿಕ ವಾತಾವರಣ ಉಂಟುಮಾಡುವಲ್ಲಿ ಸಾಂಸ್ಕೃತಿಕ ಸಂಘ-ಸಂಸ್ಥೆಗಳು ನಿರಂತರ ಪ್ರಯೋಗಶೀಲ ಮತ್ತು ಬದ್ಧತೆಯ ಕ್ರಿಯಾತ್ಮಕ ಚಟುವಟಿಕೆಗಳ ಮೂಲಕ ಮಹತ್ವದ ಪಾತ್ರ ವಹಿಸುತ್ತಿವೆ. ಕನ್ನಡ ಭಾಷೆ, ಕಲೆ ಮತ್ತು ಸಂಸ್ಕೃತಿ ಸಂವರ್ಧನೆಯಲ್ಲಿ ತೊಡಗಿರುವ ಕಲಾಪೋಷಕ ಸಂಘ-ಸಂಸ್ಥೆಗಳ ಸಾಂಸ್ಕೃತಿಕ ಚಟುವಟಿಕೆಗಳನ್ನು ಇನ್ನಷ್ಟು ವ್ಯಾಪಕವಾಗಿ, ಗುಣಾತ್ಮಕವಾಗಿ ಅನುಷ್ಠಾನ ಮಾಡಲು ಪ್ರೋತ್ಸಾಹಿಸುವ ಉದ್ದೇಶದಿಂದ ಸಹಾಯಹಸ್ತದ ರೂಪದಲ್ಲಿ ಧನಸಹಾಯ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದ್ದು, ಹಲವು ವರ್ಷಗಳಿಂದ ಜಾರಿಯಲ್ಲಿರುವ ಈ ಯೋಜನೆಯನ್ನು ಪಾರದರ್ಶಕವಾಗಿ ಹಾಗೂ ವ್ಯಾಪಕವಾಗಿ ಸಂಘ-ಸಂಸ್ಥೆಗಳಿಗೆ ತಲುಪಿಸುವ ನಿಟ್ಟಿನಲ್ಲಿ ಮಾರ್ಗಸೂಚಿಗಳನ್ನು ಹಾಗೂ ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿದೆ.

ಮುಂದುವರೆದು, ಸಂಘ-ಸಂಸ್ಥೆಗಳ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಜಿಲ್ಲಾ ಹಂತದ ಅನುಷ್ಠಾನಾಧಿಕಾರಿಗಳಾದ ಸಹಾಯಕ ನಿರ್ದೇಶಕರ ಸಕ್ರಿಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು ಇಲಾಖೆಯ ವಿಕೇಂದ್ರೀಕರಣ ನಿಟ್ಟಿನಲ್ಲಿ ವಿಭಾಗ ಮಟ್ಟದ ಕಛೇರಿಗಳಿಗೆ ಅಧಿಕಾರಿಗಳ ನಿಯೋಜನೆ ಮಾಡುವುದು, ಈ ರೀತಿಯಿಂದಾಗಿ ಧನಸಹಾಯ ಪ್ರಕ್ರಿಯೆಯನ್ನು ಇನ್ನಷ್ಟು ಪಾರದರ್ಶಕ, ಸಮಯಬದ್ಧ, ವಿಲೇವಾರಿ ಹಾಗೂ ಜನಸ್ನೇಹಿಯಾಗಿ ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಸರ್ಕಾರದ ಆದೇಶ ಹೊರಡಿಸುವಂತೆ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಕೋರಿರುತ್ತಾರೆ.

ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 154 ಕಸಧ 2022,</u>
<u>ಬೆಂಗಳೂರು, ದಿನಾಂಕ: 23.06.2022</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಾಮಾನ್ಯ / ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕ / ಗಿರಿಜನ ಉಪಯೋಜನೆಯಡಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಧನಸಹಾಯದ ಮಾರ್ಗಸೂಚಿಗಳನ್ನು ಅನುಬಂಧದಲ್ಲಿರುವಂತೆ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಆದೇಶಿಸಿದೆ.

..2

ನಿಬಂಧನೆಗಳು:-

1. 2022-23ನೇ ಸಾಲಿನ ಸಾಮಾನ್ಯ / ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕ / ಗಿರಿಜನ ಉಪಯೋಜನೆಯಡಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಧನಸಹಾಯ (ಪ್ರೋತ್ಸಾಹ) ನೀಡಲು ಎಲ್ಲಾ ಆಯ್ಕೆ ಸಮಿತಿಗಳಲ್ಲಿ ಅಧಿಕಾರೇತರ ಮತ್ತು ಅಧಿಕಾರಿಗಳ ಅನುಪಾತ ಸಮಿತಿ 5.5ಕ್ಕಿಂತ ಕಡಿಮೆಯಾಗತಕ್ಕದ್ದಲ್ಲ.

2. ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರತಿ ಯೋಜನೆಯ ಅನುಷ್ಠಾನಕ್ಕೆ, ಅನುಷ್ಠಾನಾಧಿಕಾರಿಗಳು ಕಡ್ಡಾಯವಾಗಿ ಅನುಸರಿಸಬೇಕಾದ ವೇಳಾಪಟ್ಟಿಯನ್ನು ಸುತ್ತೋಲೆಯ ಮೂಲಕ ಹೊರಡಿಸತಕ್ಕದ್ದು. ಈ ವೇಳಾಪಟ್ಟಿಯಲ್ಲಿ ಅರ್ಜಿಗಳನ್ನು ಆಹ್ವಾನಿಸುವ ದಿನಾಂಕದಿಂದ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕದ ಮಾಹಿತಿ ಮತ್ತು ಅರ್ಜಿಗಳನ್ನು ಪರಿಶೀಲನೆ ಮಾಡಲು ತೆಗೆದುಕೊಳ್ಳಬಹುದಾದ ಗರಿಷ್ಠ ಕಾಲಾವಧಿ. ಆಯ್ಕೆ ಸಮಿತಿ ಸಭೆ ಮುಗಿದ 24 ಗಂಟೆಗಳಲ್ಲಿ ಆಯ್ಕೆ ಸಮಿತಿಯ ನಡವಳಿಯನ್ನು ಕಛೇರಿಯ ಫಲಕಗಳಲ್ಲಿ ಪ್ರಚಾರಪಡಿಸುವುದು ಹಾಗೂ ಕಡ್ಡಾಯವಾಗಿ ನಿರ್ದೇಶನಾಲಯದ ಜಾಲತಾಣದಲ್ಲಿ ಅಳವಡಿಸಲು ಇರುವ ಕಾಲಮಿತಿಯನ್ನೊಳಗೊಂಡ ಅಂಶಗಳನ್ನು ಒಳಗೊಂಡಿರುವ ಸುತ್ತೋಲೆ / ನಿರ್ದೇಶನವನ್ನು ನಿರ್ದೇಶಕರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಹೊರಡಿಸತಕ್ಕದ್ದು.

3. ಈ ಎಲ್ಲಾ ಯೋಜನೆಗಳಿಗೆ ಸೇವಾಸಿಂಧು ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸುವ ವ್ಯವಸ್ಥೆ ಈಗಾಗಲೇ ಲಭ್ಯವಿದ್ದಲ್ಲಿ ಕಡ್ಡಾಯವಾಗಿ ಸೇವಾಸಿಂಧು ತಂತ್ರಾಂಶದ ಮೂಲಕವೇ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು ಹಾಗೂ ಈ ಯೋಜನೆಗಳು ಸಕಾಲದಡಿ ಘೋಷಿಸಲಾಗಿದ್ದಲ್ಲಿ / ಇನ್ನು ಮುಂದೆ ಘೋಷಣೆಯಾದಲ್ಲಿ ಕಡ್ಡಾಯವಾಗಿ ಸಕಾಲದ ಕಾಲಮಿತಿಯನ್ನು ಪರಿಗಣಿಸಿ ಅರ್ಜಿಗಳನ್ನು ನಿಯಮಾನುಸಾರ ವಿಲೇವಾರಿ ಮಾಡತಕ್ಕದ್ದು.

4. ಪ್ರತಿ ಯೋಜನೆಗೆ ಬರುವ ಎಲ್ಲಾ ಅರ್ಜಿಗಳ ವಿವರ ಹಾಗೂ ಆಯ್ಕೆ ಸಮಿತಿಯ ನಡವಳಿಗಳನ್ನು ಕಡ್ಡಾಯವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಾಲತಾಣದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಇಂದೀಕರಿಸತಕ್ಕದ್ದು.

5. ಯೋಜನೆಯ ಅನುದಾನ ಪಡೆಯಲು ಇಚ್ಛಿಸುವ ಫಲಾನುಭವಿಗಳಿಗೆ ಅರ್ಜಿಗಳ ನಮೂನೆಯನ್ನು ಡೌನ್‌ಲೋಡ್ ಮಾಡಲು ಜಾಲತಾಣದಲ್ಲಿ ಅಳವಡಿಸತಕ್ಕದ್ದು / ಇಂದೀಕರಿಸತಕ್ಕದ್ದು.

6. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಧನಸಹಾಯ ಹಾಗೂ ಸಾಮಾನ್ಯ ಧನಸಹಾಯ ಯೋಜನೆಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನುಷ್ಠಾನಗೊಳಿಸತಕ್ಕದ್ದು.

7. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು, 2000 ಮತ್ತು ಕರ್ನಾಟಕ ಸರ್ಕಾರ ಆಗಿಂದಾಗ್ಗೆ ಹೊರಡಿಸಿರುವ ಸುತ್ತೋಲೆಗಳಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

8. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆಯಡಿ ಇಲಾಖೆಯಿಂದ ಹಮ್ಮಿಕೊಳ್ಳುವ ಯೋಜನೆಗಳ ಕುರಿತು ಸಮಾಜ ಕಲ್ಯಾಣ ಇಲಾಖೆಯ (ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕೋಶ) ವೆಬ್‌ಸೈಟ್‌ನಲ್ಲಿ ಕೋರಿರುವ ಮಾಹಿತಿಯನ್ನು ಸಲ್ಲಿಸತಕ್ಕದ್ದು.

....3

9. ವಿಶೇಷ ಸಂದರ್ಭಗಳಲ್ಲಿ ಸರ್ಕಾರವು ಕಲೆ ಮತ್ತು ಸಾಂಸ್ಕೃತಿಕ ವಾತಾವರಣವನ್ನುಂಟು ಮಾಡಬಹುದೆಂದು ಭಾವಿಸಲಾಗುವ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡುವ ಅಧಿಕಾರವನ್ನು ಹೊಂದಿರುತ್ತದೆ.

10. ಎಲ್ಲಾ ಯೋಜನೆಗಳನ್ನು ಪಾರದರ್ಶಕವಾಗಿ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2022 ದಿನಾಂಕ: 04.04.2022ರಲ್ಲಿ ಸರ್ಕಾರದ ಆಡಳಿತ ಇಲಾಖೆಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ.ಆರ್. ರಮೇಶ್ 23/06/2022
(ಕೆ.ಆರ್. ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸಂಸ್ಕೃತಿ)

ಇವರಿಗೆ,

1. ಮಹಾಲೇಖಪಾಲರು (ಎ&ಇ), (ಜಿ&ಎಸ್‌ಎಸ್‌ಎ), (ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.
3. ಖಜಾನೆ ಅಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಗಣಕ ಕೋಶ), ವಿಧಾನಸೌಧ, ಬೆಂಗಳೂರು.
5. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಎಲ್ಲಾ ಜಿಲ್ಲಾ ಸಹಾಯಕ ನಿರ್ದೇಶಕರುಗಳಿಗೆ (ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಮುಖಾಂತರ)
8. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ವಿಕಾಸಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರಿ ಆದೇಶ ಸಂಖ್ಯೆ: ಕಸಂಪಾ 154 ಕಸಧ 2022, ಬೆಂಗಳೂರು, ದಿನಾಂಕ: 23.06.2022ಕ್ಕೆ
ಅನುಬಂಧ

ಸಾಂಸ್ಕೃತಿಕ ಸಂಘ-ಸಂಸ್ಥೆಗಳಿಗೆ ಸಹಾಯಧನ ಮಂಜೂರಾತಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಾಮಾನ್ಯ / ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಸಾಂಸ್ಕೃತಿಕ ಸಂಘ ಸಂಸ್ಥೆ / ಟ್ರಸ್ಟ್‌ಗಳಿಗೆ ಧನಸಹಾಯ ನೀಡಲು ಅನುಸರಿಸಬೇಕಾದ ಮಾರ್ಗಸೂಚಿಗಳು.

ಯೋಜನೆಯ ಹೆಸರು:

ಸಾಮಾನ್ಯ / ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ನೋಂದಾಯಿತ ಸಂಘ-ಸಂಸ್ಥೆ / ಟ್ರಸ್ಟ್‌ಗಳಿಗೆ ಧನಸಹಾಯ ಯೋಜನೆ.

I. ಯೋಜನೆಯ ಉದ್ದೇಶ:

1. ರಾಜ್ಯಾದ್ಯಂತ ಹಾಗೂ ಹೊರರಾಜ್ಯಗಳಲ್ಲಿ ಕ್ರಿಯಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ, ಸಂಗೀತ, ಜಾನಪದ ಮತ್ತು ನೃತ್ಯ, ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಕಾರ್ಯ ನಿರ್ವಹಿಸುತ್ತಿರುವ ನೋಂದಾಯಿತ ಸಂಘ-ಸಂಸ್ಥೆಗಳಿಗೆ ಪ್ರೋತ್ಸಾಹ ರೂಪದಲ್ಲಿ ಸಹಾಯಧನ ನೀಡುವುದು ಈ ಮೂಲಕ ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ಸಾಂಸ್ಕೃತಿಕ ವಾತಾವರಣ ಉಂಟುಮಾಡುವಲ್ಲಿ ಶ್ರಮಿಸುತ್ತಿರುವ ಸಂಘ-ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು.

ಯೋಜನೆಯ ವ್ಯಾಪ್ತಿ : ರಾಜ್ಯ ಹಾಗೂ ಹೊರರಾಜ್ಯ

ಯೋಜನೆಯ ಅನುಷ್ಠಾನ : ನಿರ್ದೇಶಕರು, ವಿಭಾಗ ಜಂಟಿ ನಿರ್ದೇಶಕರು ಮತ್ತು
ಆಯಾ ಜಿಲ್ಲಾ ಸಹಾಯಕ ನಿರ್ದೇಶಕರು.
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

II. ಅರ್ಜಿಗಳನ್ನು ಆಹ್ವಾನಿಸುವುದು:

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಹೊರಡಿಸುವ ವೇಳಾಪಟ್ಟಿ, ಸುತ್ತೋಲೆಯಂತೆ ವಾರ್ತಾ ಇಲಾಖೆ ಮುಖಾಂತರ ರಾಜ್ಯಮಟ್ಟದ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ, ಅರ್ಜಿಗಳನ್ನು ಆಹ್ವಾನಿಸುವುದು, ಆಸಕ್ತ ಸಂಘ-ಸಂಸ್ಥೆಗಳು ನಿಗದಿಪಡಿಸಿದ ಅರ್ಜಿ ನಮೂನೆಯಲ್ಲಿ ವಿವರಗಳನ್ನು ಭರ್ತಿಮಾಡಿ, ಆನ್ ಲೈನ್ ಮುಖಾಂತರ ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಸಲ್ಲಿಸಲು ಕನಿಷ್ಠ 30 ದಿನಗಳ ಕಾಲಾವಕಾಶ ನೀಡುವುದು.

III. ನೋಂದಾಯಿತ ಸಂಘ ಸಂಸ್ಥೆಗಳಿಗೆ ಧನಸಹಾಯಕ್ಕೆ ಅರ್ಜಿ ಸಲ್ಲಿಸಲು ಅಗತ್ಯವಿರುವ ಅರ್ಹತೆಗಳು:

1. ನೋಂದಾಯಿತ ಸಂಘ-ಸಂಸ್ಥೆಗಳು ಅಥವಾ ಟ್ರಸ್ಟ್‌ಗಳು ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಪ್ರಧಾನ ಉದ್ದೇಶ ಹೊಂದಿ, ನೋಂದಣಿ ಕಾಯ್ದೆಯಡಿ ನೋಂದಣಿಯಾಗಿರಬೇಕು.

...2

2. ಸಂಘ-ಸಂಸ್ಥೆ / ಟ್ರಸ್ಟ್‌ಗಳ ಬೈಲಾದಲ್ಲಿ ಸಾಂಸ್ಕೃತಿಕ ಅಂಶಗಳು ಪ್ರಧಾನ ಉದ್ದೇಶಗಳಾಗಿದ್ದು, ಸದರಿ ಉದ್ದೇಶಗಳು ಸಂಸ್ಥೆಯ ಕಾರ್ಯಚಟುವಟಿಕೆಗಳ ಮೂಲಕ ಪ್ರತಿಬಿಂಬಿತವಾಗಬೇಕು.

3. ನೋಂದಾಯಿತ ಸಂಘ-ಸಂಸ್ಥೆಗಳು ಪ್ರತಿವರ್ಷ ನವೀಕರಣ ಮಾಡಿಸಿರಬೇಕು (ಟ್ರಸ್ಟ್‌ಗಳನ್ನು ಹೊರತುಪಡಿಸಿ).

4. ಬೇರೆ ಯಾವುದೇ ವಿವಿಧೋದ್ದೇಶ ಚಟುವಟಿಕೆಗಳಿಗೆ ರಚಿತವಾದ ಸಂಘ-ಸಂಸ್ಥೆಗಳು ಅಥವಾ ಟ್ರಸ್ಟ್‌ಗಳು (ಶಿಕ್ಷಣ, ಸಮಾಜಸೇವೆ ಮತ್ತು ಸ್ವಯಂಸೇವಾ ಸಂಸ್ಥೆಗಳು) ಮುಂತಾದವುಗಳನ್ನು ಧನಸಹಾಯಕ್ಕೆ ಪರಿಗಣಿಸಲಾಗುವುದಿಲ್ಲ.

5. ಧನಸಹಾಯಕ್ಕಾಗಿ ಅರ್ಜಿ ಸಲ್ಲಿಸುವ ಸಂಘ-ಸಂಸ್ಥೆಗಳು ನಿರಂತರವಾಗಿ ಮೂರು (3) ವರ್ಷಗಳಿಂದ ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆ ನಡೆಸುವ ಸಂಘ-ಸಂಸ್ಥೆ / ಟ್ರಸ್ಟ್‌ಗಳಾಗಿರಬೇಕು.

6. ಅರ್ಜಿ ಆಹ್ವಾನಿಸಿದ ದಿನಾಂಕಕ್ಕೆ ಸಾಮಾನ್ಯ / ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಸಂಘ-ಸಂಸ್ಥೆಗಳು ನೋಂದಣಿಯಾಗಿ ಕನಿಷ್ಠ ಮೂರು (3) ವರ್ಷ ಪೂರ್ಣಗೊಳಿಸಿರಬೇಕು.

7. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸಂಘ-ಸಂಸ್ಥೆಗಳ ಸದಸ್ಯರು ಕಡ್ಡಾಯವಾಗಿ ಅದೇ ಸಮುದಾಯದ ಸದಸ್ಯರನ್ನು ಒಳಗೊಂಡಿರಬೇಕು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ನೋಂದಾಯಿತ ಸಂಘ-ಸಂಸ್ಥೆಯ ಎಲ್ಲಾ ಪದಾಧಿಕಾರಿಗಳ / ಸದಸ್ಯರುಗಳ ಜಾತಿ ಪ್ರಮಾಣಪತ್ರ (RD ಸಂಖ್ಯೆ ಹೊಂದಿರುವ) ವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸುವುದು.

8. ಇಲಾಖೆಯಿಂದ ಧನಸಹಾಯ ಪಡೆದ ಸಂಸ್ಥೆಗಳು ಆಹ್ವಾನ ಪತ್ರಿಕೆ, ವೇದಿಕೆ ಕಾರ್ಯಕ್ರಮ ಹಾಗೂ ಪ್ರಚಾರ ಸಾಮಗ್ರಿಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸಿರಬೇಕು.

9. ಸಂಘ-ಸಂಸ್ಥೆಗಳು ಕನ್ನಡ ಭಾಷೆ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಜನಪದ, ಯಕ್ಷಗಾನ, ಚಿತ್ರಕಲೆ, ಶಿಲ್ಪಕಲೆ, ಮುಂತಾದ ಸೃಜನಶೀಲ ಕಲಾ ಪ್ರಕಾರಗಳಲ್ಲಿ ನಿರಂತರ ಚಟುವಟಿಕೆ ನಡೆಸಿರುವ ಬಗ್ಗೆ ಹಿಂದಿನ ವರ್ಷದ ಚಟುವಟಿಕೆಗಳ ವಿವರಗಳನ್ನು ಫೋಟೋ, ಪತ್ರಿಕಾ ವರದಿಗಳೊಂದಿಗೆ ಸಲ್ಲಿಸುವುದು ಮತ್ತು ಸಂಸ್ಥೆಯು ಸ್ಥಾಪನೆಯಾದಾಗಿನಿಂದ ಕೈಗೊಂಡ ಒಟ್ಟಾರೆ ಕಾರ್ಯಚಟುವಟಿಕೆಯ ಸಮಗ್ರ ಪರಿಚಯ ನೀಡುವ ಸಂಕ್ಷಿಪ್ತ ವರದಿ ಸಲ್ಲಿಸಬೇಕು.

10. ಧನಸಹಾಯಕ್ಕಾಗಿ ಅರ್ಜಿ ಸಲ್ಲಿಸುವ ಆರ್ಥಿಕ ವರ್ಷದಲ್ಲಿ ನಡೆಸಲು ಯೋಜಿಸಿರುವ ಕಾರ್ಯಕ್ರಮಗಳ ಕ್ರಿಯಾಯೋಜನೆಯನ್ನು ಅಂದಾಜು ಪಟ್ಟಿಯೊಂದಿಗೆ ಮುಂಗಡವಾಗಿ ಸಲ್ಲಿಸುವುದು.

11. ಧನಸಹಾಯ ಪಡೆಯುವ ಸಂಘ-ಸಂಸ್ಥೆಗಳ ಕಾರ್ಯಚಟುವಟಿಕೆಯ ಮೌಲ್ಯಮಾಪನದ ಸಂದರ್ಭದಲ್ಲಿ, ಅವುಗಳ ಕಾರ್ಯಕ್ರಮಗಳ ನಾವೀನ್ಯತೆ, ವೈಶಿಷ್ಟ್ಯತೆ, ಪ್ರಯೋಗಾತ್ಮಕ ಸಾಧ್ಯತೆ, ವಿಶೇಷ ವಿಷಯ ವಸ್ತುವಿನ ಮೇಲೆ ಆಧಾರಿತವಾದ ಶಿಬಿರಗಳು, ಕಮ್ಮಟಗಳು,

....3

ಕಾರ್ಯಾಗಾರಗಳು, ಹೊಸ ಆವಿಷ್ಕಾರಗಳು, ಯುವ ಪ್ರತಿಭೆಗಳಿಗೆ ಪ್ರೋತ್ಸಾಹ, ವಿಕಲಚೇತನರಿಗೆ, ಮಹಿಳೆ ಮತ್ತು ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ರೂಪಿಸುವ ಕಾರ್ಯಕ್ರಮಗಳು, ಪ್ರೋತ್ಸಾಹ ಮುಂತಾದ ಕ್ರಿಯಾತ್ಮಕ / ನಿರಂತರತೆ ಮತ್ತು ಗುಣಾತ್ಮಕವಾಗಿರುವುದರೊಂದಿಗೆ ರೂಪಿತವಾದ ಕಾರ್ಯಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವುದು. ನಶಿಸಿ ಹೋಗುತ್ತಿರುವ ಅಪರೂಪದ ಕಲೆಗಳನ್ನು ಪುನರುಜ್ಜೀವನಗೊಳಿಸಲು ಮೂಲ ಕಲಾಪ್ರಕಾರಗಳ ಮೇಲೆ ಬೆಳಕು ಚೆಲ್ಲುವಂತಹ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಸಂಘ-ಸಂಸ್ಥೆಗಳು ಆದ್ಯತೆ ನೀಡುವುದು.

12. ಧನಸಹಾಯ ಪಡೆಯಲಿಚ್ಛಿಸುವ ಸಂಘ ಸಂಸ್ಥೆಗಳು ಜಿಲ್ಲಾ ಸಹಕಾರ ಸಂಘಗಳ / ಜಿಲ್ಲಾ ಉಪ ನೋಂದಣಾಧಿಕಾರಿಗಳಿಗೆ ಸಲ್ಲಿಸುವ ಚಾರ್ಟರ್ಡ್ ಅಕೌಂಟೆಂಟ್ ಅವರಿಂದ ಪಡೆದ ಹಿಂದಿನ 1 (ಒಂದು) ವರ್ಷದ ಲೆಕ್ಕಪರಿಶೋಧಿತ ಮತ್ತು ದೃಢೀಕೃತ ಲೆಕ್ಕಪಟ್ಟಿಗಳನ್ನು ಮತ್ತು ಆದಾಯ ತೆರಿಗೆ ವಿವರಗಳನ್ನು ಸಂಘ-ಸಂಸ್ಥೆಯ ಹೆಸರಿನಲ್ಲಿರುವ ಬ್ಯಾಂಕ್ ಪಾಸ್‌ಬುಕ್. ಸ್ಟೇಟ್‌ಮೆಂಟ್‌ನೊಂದಿಗೆ ಸಲ್ಲಿಸಬೇಕು.

13. ಸಂಘ-ಸಂಸ್ಥೆ / ಟ್ರಸ್ಟ್‌ಗಳ ಬೈಲಾ ತಿದ್ದುಪಡಿಯಾದಲ್ಲಿ ಅಥವಾ ಪದಾಧಿಕಾರಿಗಳು ಬದಲಾವಣೆಯಾದ ವಿವರ ಹಾಗೂ ನೋಂದಣಿ ಮಾಡಿದ ತಿದ್ದುಪಡಿ ಬೈಲಾವನ್ನು ನೊಂದಣಾಧಿಕಾರಿಗಳ ದೃಢೀಕರಣದೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.

14. ಸರ್ಕಾರದಿಂದ ನೀಡುವ ಧನಸಹಾಯವನ್ನು ಸಂಘ-ಸಂಸ್ಥೆ / ಟ್ರಸ್ಟ್‌ಗಳು ಪ್ರಧಾನವಾಗಿ ಪ್ರಶಸ್ತಿ ಪ್ರದಾನ, ಸನ್ಮಾನ ಕಾರ್ಯಕ್ರಮಗಳಿಗೆ ವೆಚ್ಚ ಮಾಡತಕ್ಕದ್ದಲ್ಲ.

15. ಸರ್ಕಾರದ ತೀರ್ಮಾನವೇ ಅಂತಿಮವಾಗಿದ್ದು, ಅನುದಾನ ಲಭ್ಯತೆಗನುಗುಣವಾಗಿ ಧನಸಹಾಯ ಮಂಜೂರು ಮಾಡುವುದು.

16. ಸಂಘ-ಸಂಸ್ಥೆಯು ಇಲಾಖೆಯಿಂದ ಪಡೆದ ಧನಸಹಾಯದ ಅಡಿಯಲ್ಲಿ ರೂಪಿಸಿದ ಕಾರ್ಯಕ್ರಮಗಳು, ದಾಖಲೆಗಳು, ಪ್ರಕಟಣೆಗಳು, ಕಾರ್ಯಕ್ರಮಗಳ ಆಡಿಯೋ ಮತ್ತು ವಿಡಿಯೋ ಸ್ಥಿರ ಚಿತ್ರೀಕರಣ ದಾಖಲೆಗಳನ್ನು ಇಲಾಖೆಯು ಬಳಸಲು ಅಧಿಕಾರ ಹೊಂದಿರುತ್ತದೆ.

17. ಇಲಾಖೆಯಿಂದ ಧನಸಹಾಯವನ್ನು ಅಪೇಕ್ಷಿಸುವ ಸಂಘ-ಸಂಸ್ಥೆಗಳು ಚೆಕ್‌ಲಿಸ್ಟ್‌ನಲ್ಲಿ ಕೋರಿರುವಂತೆ ಕ್ರಮವಾಗಿ ದಾಖಲೆಗಳನ್ನು ಕ್ರಮ ಸಂಖ್ಯೆ ನಮೂದಿಸಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸೇವಾಸಿಂಧು ಮೂಲಕ ಸಲ್ಲಿಸಬೇಕು. ಪತ್ರಿಕಾ ಪ್ರಕಟಣೆಯಲ್ಲಿ ನಿಗದಿಪಡಿಸಿದ ದಿನಾಂಕದೊಳಗೆ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು ಹಾಗೂ ಸೇವಾಸಿಂಧುವಿನಲ್ಲಿ ಧನಸಹಾಯ ಕೋರಿ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕ ಮುಗಿದ ನಂತರ ಮತ್ತು ಸೇವಾಸಿಂಧು ಹೊರತುಪಡಿಸಿ ನೇರವಾಗಿ ಸ್ವೀಕೃತವಾಗುವ ಅರ್ಜಿಗಳನ್ನು ಧನಸಹಾಯ ನೀಡಲು ಪರಿಗಣಿಸಲಾಗುವುದಿಲ್ಲ.

18. ಜಿಲ್ಲಾ ಸಹಾಯಕ ನಿರ್ದೇಶಕರಿಂದ ಆನ್‌ಲೈನ್ ಮೂಲಕ ಸಂಘ-ಸಂಸ್ಥೆಗಳು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ತಾಂತ್ರಿಕ ಕಾರಣದಿಂದ ದಾಖಲೆಗಳು ಅಪ್‌ಲೋಡ್ ಆಗದಿದ್ದಲ್ಲಿ / ತಪ್ಪಾಗಿ ಸಲ್ಲಿಕೆಯಾಗಿದ್ದಲ್ಲಿ / ಬಿಟ್ಟುಹೋಗಿದ್ದಲ್ಲಿ ಮರು ಸಲ್ಲಿಸಲು 10 (ಹತ್ತು) ದಿನಗಳ ಕಾಲಾವಕಾಶ ನೀಡುವುದು.

19. ನೋಂದಾಯಿತ ಸಂಘ-ಸಂಸ್ಥೆಗಳು ಕೆಳಕಂಡ ಅಂಶಗಳಿಗೆ ಕನಿಷ್ಠ ರೂ. 20/- ಛಾಪಾ ಕಾಗದದ ಮೇಲೆ ಸ್ವಯಂ ದೃಢೀಕರಣದ ಕರಾರು ಪತ್ರ ಒದಗಿಸುವುದು.

i. ಸಂಘ-ಸಂಸ್ಥೆ / ಟ್ರಸ್ಟ್‌ಗಳ ಸದಸ್ಯರು ಇನ್ನೊಂದು ಸಂಘ-ಸಂಸ್ಥೆ/ಟ್ರಸ್ಟ್‌ಗಳಿಗೆ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳಾಗಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ii. ಇಲಾಖೆಯಿಂದ ಧನಸಹಾಯ ಪಡೆದು ಏರ್ಪಡಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಕಲಾವಿದರಿಗೆ ಇಲಾಖೆಯಿಂದ ಧನಸಹಾಯ ಪಡೆದ ಉದ್ದೇಶಕ್ಕೆ ಸಂಬಂಧಿಸಿದಂತೆ ಕಲಾವಿದರ ಗೌರವ ಸಂಭಾವನೆ, ಸಂಘಟನಾ ವೆಚ್ಚ ಮತ್ತಿತರ ಎಲ್ಲಾ ವೆಚ್ಚಗಳನ್ನು ಕಡ್ಡಾಯವಾಗಿ RTGS / NEFT / CHEQUE ಮೂಲಕವೇ ಪಾವತಿಸುತ್ತೇನೆ ಹಾಗೂ ಸದರಿ ವಿವರ (RTGS/NEFT/CHEQUE ವಿವರಗಳುಳ್ಳ ಬ್ಯಾಂಕ್ ಸ್ಟೇಟ್‌ಮೆಂಟ್) ನೀಡುತ್ತೇನೆ.

iii. ಇಲಾಖೆಯಿಂದ ಬಿಡುಗಡೆ ಮಾಡಿದ ಅನುದಾನವನ್ನು ಸಾಂಸ್ಕೃತಿಕ ಕಾರ್ಯಕ್ರಮ ಹೊರತುಪಡಿಸಿ ಬೇರೆ ಉದ್ದೇಶಕ್ಕೆ ಬಳಕೆ ಮಾಡಿಕೊಂಡಲ್ಲಿ / ನಿಯಮಾನುಸಾರ ಬಳಕೆ ಮಾಡದೆ ಲೋಪವಾಗಿದ್ದಲ್ಲಿ / ನೀಡಿರುವ ಮಾಹಿತಿ ತಪ್ಪೆಂದು ಕಂಡುಬಂದಲ್ಲಿ / ಯಾವುದೇ ವ್ಯತ್ಯಾಸವಾದಲ್ಲಿ ಸರ್ಕಾರಕ್ಕೆ ಮರುಪಾವತಿ ಮಾಡಲು ಬದ್ಧನಾಗಿರುತ್ತೇನೆ.

iv. ನಮ್ಮ ಸಂಸ್ಥೆಯ ಸದಸ್ಯರಲ್ಲಿ ಶೇ. **50** ರಷ್ಟು ಸದಸ್ಯರು ಸಾಹಿತಿ, ಕಲಾವಿದರಾಗಿರುತ್ತಾರೆ ಎಂದು ದೃಢೀಕರಿಸುತ್ತೇನೆ.

v. ಸದರಿ ಆರ್ಥಿಕ ವರ್ಷದಲ್ಲಿ ಬೇರೆ ಇಲಾಖೆಯಿಂದ ಧನಸಹಾಯ ಪಡೆದಿರುವುದಿಲ್ಲ ಹಾಗೂ ಅನುದಾನದ ಪುನರಾವರ್ತನೆ ಆಗಿರುವುದಿಲ್ಲ ಎಂಬು ದೃಢೀಕರಿಸುತ್ತೇನೆ.

vi. ಧನಸಹಾಯ ಪಡೆದ ವರ್ಷ ನಮ್ಮ ಸಂಘ-ಸಂಸ್ಥೆ/ಟ್ರಸ್ಟ್‌ಗಳು ಇಲಾಖೆಯಿಂದ ಕಲಾ ತಂಡಗಳ ಪ್ರಾಯೋಜನೆ ಪಡೆಯುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

vii. ಇಲಾಖೆಯಿಂದ ಧನಸಹಾಯ ಪಡೆಯಲು ಸಂಸ್ಥೆಗಳು ಸಲ್ಲಿಸಿರುವ ಉದ್ದೇಶಿತ ಚಟುವಟಿಕೆಗಳಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಸಂಬಂಧಿತ ಆರ್ಥಿಕ ವರ್ಷದಲ್ಲಿ ಧನಸಹಾಯ ಪಡೆದಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

viii. ನಮ್ಮ ಸಂಘ-ಸಂಸ್ಥೆ/ ಟ್ರಸ್ಟ್‌ಗಳ ಅಂಗ ಸಂಸ್ಥೆಗಳು, ಶಾಖಾ ಘಟಕಗಳು ಪ್ರತ್ಯೇಕವಾಗಿ ಅನುದಾನ ಪಡೆದಿಲ್ಲ ಅಥವಾ ಅನುದಾನಕ್ಕೆ ಅರ್ಜಿ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

20. ಇನ್ನು ಮುಂದೆ ಮೂರು ವರ್ಷ ನಿರಂತರವಾಗಿ ಅನುದಾನ ಪಡೆಯುವ ಸಂಘ-ಸಂಸ್ಥೆ / ಟ್ರಸ್ಟ್‌ಗಳು 4ನೇ ವರ್ಷ ಧನಸಹಾಯುಕ್ಕೆ ಅರ್ಜಿ ಸಲ್ಲಿಸುವಂತಿಲ್ಲ.

21. ಧನಸಹಾಯ ಕೋರಿ ಅರ್ಜಿ ಸಲ್ಲಿಸುವಾಗ ಸಲ್ಲಿಸಿದ ಕ್ರಿಯಾಯೋಜನೆಯಂತೆಯೇ ಕಾರ್ಯಕ್ರಮ ರೂಪುಗೊಳಿಸುವುದು. ಯಾವುದೇ ಬದಲಾವಣೆಗಳಿದ್ದರೆ ಜಿಲ್ಲಾ ಸಹಾಯಕ ನಿರ್ದೇಶಕರ ಅನುಮೋದನೆ ಪಡೆದು ಕಾರ್ಯಕ್ರಮ ಏರ್ಪಡಿಸುವುದು.

.....5

22. ಇಲಾಖೆಯಿಂದ ಧನಸಹಾಯ ಪಡೆದು ಆಯೋಜಿಸುವ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರ ಗಮನಕ್ಕೆ ತಂದು ಕಾರ್ಯಕ್ರಮ ಆಯೋಜಿಸುವುದು ಹಾಗೂ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರನ್ನು ಕಡ್ಡಾಯವಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸುವುದು.

23. ಒಂದು ಸಂಘ-ಸಂಸ್ಥೆ/ಟ್ರಸ್ಟ್‌ಗಳಿಗೆ ಒಂದು ಆರ್ಥಿಕ ಸಾಲಿಗೆ ಕೊಡುವ ಗರಿಷ್ಠ ಅನುದಾನದ ಮಿತಿ ರೂ.2.00 ಲಕ್ಷಗಳಾಗಿರುತ್ತದೆ.

24. ಧನಸಹಾಯ ಪಡೆದು ಏರ್ಪಡಿಸುವ ಕಾರ್ಯಕ್ರಮಗಳನ್ನು ಜೂನ್‌ನಿಂದ ಜನವರಿ ಅಂತ್ಯದ ಒಳಗೆ ಪೂರ್ಣಗೊಳಿಸುವುದು. ಅನುಮೋದನೆಯನ್ವಯ ಜನವರಿ ನಂತರದಲ್ಲಿ ಆಯೋಜಿಸುವ ಕಾರ್ಯಕ್ರಮಗಳಿಗೆ ಮುಂದಿನ ಆರ್ಥಿಕ ವರ್ಷದಲ್ಲಿ ಅರ್ಹತೆಯನುಸಾರ ಧನಸಹಾಯ ಬಿಡುಗಡೆಗೆ ಪರಿಗಣಿಸುವುದು.

25. ಕಾರ್ಯಕ್ರಮವನ್ನು ಅನುಷ್ಠಾನ ಮಾಡುವ ಕನಿಷ್ಠ 7 ದಿನಗಳು ಮುಂಚಿತವಾಗಿ ಕಾರ್ಯಕ್ರಮದ ಆಹ್ವಾನಪತ್ರಿಕೆಯನ್ನು ಜಿಲ್ಲಾ ಸಹಾಯಕ ನಿರ್ದೇಶಕರ ಗಮನಕ್ಕೆ ತಂದು ಕಲಾತಂಡ ತಂತ್ರಾಂಶದಲ್ಲಿ ನೋಂದಾಯಿಸಿಕೊಂಡು ಕಾರ್ಯಕ್ರಮ ಅನುಷ್ಠಾನಗೊಳಿಸುವುದು.

26. ಇಲಾಖೆಯಿಂದ ಧನಸಹಾಯ ಪಡೆದು ಏರ್ಪಡಿಸಲಾಗುವ ಕಾರ್ಯಕ್ರಮಗಳ ದಾಖಲೀಕರಣಕ್ಕೆ ಸಂಬಂಧಿಸಿದಂತೆ ಕಲಾತಂಡ ತಂತ್ರಾಂಶದಲ್ಲಿ ಕಡ್ಡಾಯವಾಗಿ ಕಾರ್ಯಕ್ರಮ ನಡೆಯುವ ಸ್ಥಳಗುರುತು ಅಪ್ಲೋಡ್ (Geotagged Photos) ಮಾಡುವುದು ಹಾಗೂ ಕಾರ್ಯಕ್ರಮದ ಛಾಯಾಚಿತ್ರಗಳನ್ನು (1. ವೇದಿಕೆ ಕಾರ್ಯಕ್ರಮ ಉದ್ಘಾಟನೆ ಹಾಗೂ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮ 2. ಕಾರ್ಯಕ್ರಮದ ಪ್ರೇಕ್ಷಕರು 3. ವೇದಿಕೆ ಹಾಗೂ ಪ್ರೇಕ್ಷಕರು ಎರಡನ್ನೂ ಒಳಗೊಂಡ) ಮೂರು ಅಂಶಗಳು ಕಾಣುವಂತೆ ತೆಗೆದಿರುವ ಕನಿಷ್ಠ 5 ಛಾಯಾಚಿತ್ರಗಳನ್ನು ಅಪ್‌ಲೋಡ್ ಮಾಡುವುದು.

27. ಸೇವಾಸಿಂಧು ಮೂಲಕ ಅರ್ಜಿ ಸಲ್ಲಿಸಿದ ಸಂಘ-ಸಂಸ್ಥೆ/ಟ್ರಸ್ಟ್‌ಗಳ ದಾಖಲೆಗಳನ್ನು ಪರಿಶೀಲಿಸಿ, ಮುಂದಿನ ಪ್ರಕ್ರಿಯೆಗಳಿಗೆ ಸಂಘ-ಸಂಸ್ಥೆ / ಟ್ರಸ್ಟ್‌ಗಳ ಅರ್ಜಿಗಳ ಅನುಮೋದಿತ / ತಿರಸ್ಕೃತ ಪಟ್ಟಿಯನ್ನು ಜಿಲ್ಲಾ ಸಹಾಯಕ ನಿರ್ದೇಶಕರು 5 (ಐದು) ದಿನಗಳ ಕಾಲಮಿತಿಯಲ್ಲಿ ಪ್ರಕಟಿಸುವುದು.

28. ಹೊರನಾಡಿನ ಸಂಘ-ಸಂಸ್ಥೆಗಳು ಕೇಂದ್ರ ಕಚೇರಿಗೆ ಆನ್‌ಲೈನ್ ಮೂಲಕ ಮುಂಗಡವಾಗಿ ಕಾರ್ಯಕ್ರಮದ ವಿವರ ಸಲ್ಲಿಸುವುದು ಹಾಗೂ ಸದರಿ ಸಂಘ-ಸಂಸ್ಥೆಗಳ ಧನಸಹಾಯದ ಬಗ್ಗೆ ಕೇಂದ್ರ ಕಚೇರಿಯ ಸಂಬಂಧಿತ ಶಾಖೆಯಿಂದ ಕ್ರಮವಹಿಸುವುದು.

IV. ಧನಸಹಾಯ ಶಿಫಾರಸ್ಸು ಸಮಿತಿ

1.	ಆಯಾ ಜಿಲ್ಲೆಗೆ ಸಂಬಂಧಿಸಿದ ವಿಭಾಗ ಮಟ್ಟದ ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.	-ಅಧ್ಯಕ್ಷರು
2.	ಆಯಾ ಜಿಲ್ಲೆಯ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ	-ಸದಸ್ಯ ಕಾರ್ಯದರ್ಶಿ

....6

3. ಜಿಲ್ಲಾ ವ್ಯಾಪ್ತಿಗೆ ಬರುವ ಅಕಾಡೆಮಿ ಸದಸ್ಯರು (ಜಿಲ್ಲಾ ವ್ಯಾಪ್ತಿಯಲ್ಲಿ ಅಕಾಡೆಮಿಯ ಸದಸ್ಯರು ಇರದಿದ್ದಲ್ಲಿ ವಿಭಾಗ ಜಂಟಿ ನಿರ್ದೇಶಕರ ಸಮಾಲೋಚನೆ ಮೇರೆಗೆ ಕಲಾವಿದರನ್ನು ನೇಮಕ ಮಾಡಿಕೊಳ್ಳುವುದು). - ಸದಸ್ಯರು

4. ಆಯಾ ಜಿಲ್ಲಾ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ - ಸದಸ್ಯರು

5. ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ - ಸದಸ್ಯರು

V. <u>ನೋಂದಾಯಿತ ಸಂಘ-ಸಂಸ್ಥೆ / ಟ್ರಸ್ಟ್‌ಗಳಿಗೆ ಧನಸಹಾಯಕ್ಕೆ ಶಿಫಾರಸ್ಸು ಮಾಡಲು ಅನುಸರಿಸಬೇಕಾದ ಮಾನದಂಡಗಳು:</u>

1. ಧನಸಹಾಯ ಪಡೆಯಲಿಚ್ಛಿಸುವ ಸಂಘ-ಸಂಸ್ಥೆಯು ಮುಂಗಡವಾಗಿ ಇಲಾಖೆಗೆ ಸಲ್ಲಿಸಿರುವ ಕ್ರಿಯಾಯೋಜನೆಯಂತೆ ಸಹಾಯಕ ನಿರ್ದೇಶಕರನ್ನು ಆಹ್ವಾನಿಸಿ, ಕಲಾತಂಡ ತಂತ್ರಾಂಶದಲ್ಲಿ ವಿವರಗಳನ್ನು ಅಪ್ಲೋಡ್ ಮಾಡಿರುವ ಕಾರ್ಯಕ್ರಮಗಳನ್ನು ಮಾತ್ರ ಪರಿಗಣಿಸುವುದು ಹಾಗೂ ಇತರ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಿದ ಕಾರ್ಯಕ್ರಮಗಳನ್ನು ಪರಿಗಣಿಸತಕ್ಕದ್ದಲ್ಲ.

2. ಕನಿಷ್ಠ ಮೂರು ಸಾಂಸ್ಕೃತಿಕ/ ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಡೆಸಿರಬೇಕು. ಇದಕ್ಕೆ ಸಂಬಂಧಿಸಿದ ಆಹ್ವಾನ ಪತ್ರಿಕೆ, ಕಾರ್ಯಕ್ರಮದ ಫೋಟೋ, ಪತ್ರಿಕಾ ವರದಿಯ ತುಣುಕು ಇತ್ಯಾದಿ ಅಗತ್ಯ ದಾಖಲೆಗಳನ್ನು ಲಗತ್ತಿಸಿರಬೇಕು. ಇಲಾಖೆಯಿಂದ ಪ್ರಾಯೋಜನೆ ಪಡೆದು ನಡೆಸಿರುವ ಕಾರ್ಯಕ್ರಮಗಳ ದಾಖಲೆಗಳನ್ನು ಪರಿಗಣಿಸತಕ್ಕದ್ದಲ್ಲ. ಈ ಎಲ್ಲಾ ಅಂಶಗಳನ್ನು ಸದರಿ ಸಮಿತಿಯು ಪರಿಶೀಲಿಸತಕ್ಕದ್ದು.

3. ಸಾಂಸ್ಕೃತಿಕ / ಸಾಹಿತ್ಯಿಕ ಉದ್ದೇಶಕ್ಕಾಗಿ ಮಾತ್ರ ಸ್ಥಾಪಿತವಾಗಿರುವ ಸಕ್ರಿಯವಾಗಿರುವ ಸಂಘ-ಸಂಸ್ಥೆಗಳನ್ನು ಮಾತ್ರ ಧನಸಹಾಯಕ್ಕಾಗಿ ಪರಿಗಣಿಸಿ ಶಿಫಾರಸ್ಸು ಮಾಡುವುದು.

4. ಯಾವುದೇ ನೋಂದಾಯಿತ ಸಂಘ-ಸಂಸ್ಥೆ/ಟ್ರಸ್ಟ್‌ಗಳಲ್ಲಿ ಅಧ್ಯಕ್ಷರು, ಸದಸ್ಯರು ಮತ್ತು ಕಾರ್ಯದರ್ಶಿಗಳು ಮತ್ತೊಂದು ಸಂಘ-ಸಂಸ್ಥೆ / ಟ್ರಸ್ಟ್‌ಗಳ ಪದಾಧಿಕಾರಿಯಾಗಿರುವುದಿಲ್ಲ ಎಂಬ ಬಗ್ಗೆ ಖಚಿತಪಡಿಸಿಕೊಳ್ಳುವುದು.

5. ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಧನಸಹಾಯ ಕೋರಿ ಅರ್ಜಿ ಸಲ್ಲಿಸುವ ಸಂಘ-ಸಂಸ್ಥೆಗಳ ಅಧ್ಯಕ್ಷರು ಹಾಗೂ ಎಲ್ಲಾ ಪದಾಧಿಕಾರಿಗಳ ಆರ್.ಡಿ. ಸಂಖ್ಯೆ ಇರುವ ಜಾತಿ ಪ್ರಮಾಣಪತ್ರ ಸಲ್ಲಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

6. ಕಳೆದ ಸಾಲಿನಲ್ಲಿ ಧನಸಹಾಯ ಪಡೆದಿರುವುದಕ್ಕೆ ಹಣಬಳಕೆ ಪ್ರಮಾಣಪತ್ರ ಮತ್ತು ಆಡಿಟ್ ವರದಿ ಸಲ್ಲಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

....7

7. ನೋಂದಾಯಿತ ಸಂಘ-ಸಂಸ್ಥೆ / ಟ್ರಸ್ಟ್‌ಗಳಿಗೆ ಧನಸಹಾಯಕ್ಕೆ ನಿಗದಿಪಡಿಸಿರುವ ಪ್ರತಿಯೊಂದು ಅರ್ಹತೆಗಳನ್ನು ಮಾನದಂಡವಾಗಿ ವಿಭಾಗ ಮಟ್ಟದ ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಸಮಿತಿ ಪರಿಗಣಿಸಿ ಶಿಫಾರಸ್ಸು ಮಾಡುವುದು.

8. ಧನಸಹಾಯ ಮಂಜೂರಾತಿ ಸಂದರ್ಭದಲ್ಲಿ ಸಮಿತಿಯು ಅಗತ್ಯ ದಾಖಲೆಗಳನ್ನು ಸಲ್ಲಿಸಿದ ಸಂಘ-ಸಂಸ್ಥೆಗಳ ಪ್ರಸ್ತಾವನೆಯನ್ನು ಮಾತ್ರ ಪರಿಗಣಿಸುವುದು. ಅಪೂರ್ಣ ದಾಖಲೆಗಳನ್ನು / ಸರಿಯಿಲ್ಲದ ಪ್ರಸ್ತಾವನೆಗಳನ್ನು ಯಾವ ಕಾರಣಕ್ಕೆ ತಿರಸ್ಕರಿಸಲಾಗಿದೆ ಎಂಬ ಬಗ್ಗೆ ಸ್ಪಷ್ಟವಾದ ಸಕಾರಣಗಳನ್ನು ನೀಡಿ ಸೇವಾಸಿಂಧು ಮೂಲಕ ಸಹಾಯಕ ನಿರ್ದೇಶಕರು ಹಿಂಬರಹ ನೀಡುವುದು.

9. ಧನಸಹಾಯ ಕೋರಿಕೆ ಅರ್ಜಿಗಳನ್ನು ಸಲ್ಲಿಸುವ ಮತ್ತು ಧನಸಹಾಯ ಮಂಜೂರಾತಿ ಪ್ರಕ್ರಿಯೆ ಹಾಗೂ ಮಂಜೂರಾದ ಅನುದಾನವನ್ನು ಬಿಡುಗಡೆ ಮಾಡುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೇಂದ್ರ ಕಚೇರಿಯಿಂದ ಹೊರಡಿಸುವ ವೇಳಾಪಟ್ಟಿಯಂತೆ ಪ್ರಕ್ರಿಯೆ ಜಾರಿಗೊಳಿಸುವುದು.

VI. ಹಣಕಾಸು ನಿರ್ವಹಣೆ

1. ಸಂಘ-ಸಂಸ್ಥೆ / ಟ್ರಸ್ಟ್‌ಗಳು ನಿಗದಿತ ಅವಧಿಯಲ್ಲಿ ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳ ಗುಣಮಟ್ಟ ಆಧರಿಸಿ ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಧನಸಹಾಯ ಶಿಫಾರಸ್ಸು ಸಮಿತಿಯು ಗರಿಷ್ಠ ರೂ.2.00 ಲಕ್ಷಗಳ ಮಿತಿಯೊಳಗೆ ಧನಸಹಾಯಕ್ಕೆ ಶಿಫಾರಸ್ಸು ಮಾಡುವುದು.

2. ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಧನಸಹಾಯ ಸಮಿತಿಯು ಶಿಫಾರಸ್ಸು ಮಾಡಿದ ಅನುದಾನವನ್ನು ಸರ್ಕಾರದ ಆದೇಶದಂತೆ ಸಂಘ-ಸಂಸ್ಥೆ / ಟ್ರಸ್ಟ್‌ಗಳಿಗೆ ಜಿಲ್ಲಾ ಸಹಾಯಕ ನಿರ್ದೇಶಕರು ಖಜಾನೆ 2ರ ಮೂಲಕ ಪಾವತಿಸುವುದು.

3. ಧನಸಹಾಯ ಪಡೆದ 6 ತಿಂಗಳ ಒಳಗೆ ಲೆಕ್ಕಪರಿಶೋಧಕರಿಂದ ದೃಢೀಕರಿಸಿದ ವೆಚ್ಚಪಟ್ಟಿ ಹಾಗೂ ಹಣಬಳಕೆ ಪ್ರಮಾಣ ಪತ್ರವನ್ನು ಆಯಾ ಜಿಲ್ಲಾ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಸಲ್ಲಿಸುವುದು ಹಾಗೂ ಸಹಾಯಕ ನಿರ್ದೇಶಕರು ಕ್ರೋಢೀಕರಿಸಿ ವಿಭಾಗ ಮಟ್ಟದ ಕಚೇರಿಗೆ ಕಳುಹಿಸುವುದು. ವಿಭಾಗ ಮಟ್ಟದ ಜಂಟಿ ನಿರ್ದೇಶಕರು ಕ್ರೋಢೀಕೃತ ಮಾಹಿತಿಯನ್ನು ಕೇಂದ್ರ ಕಚೇರಿಗೆ ಕಳುಹಿಸುವುದು.

4. ಒಂದು ವೇಳೆ ಮೇಲೆ ತಿಳಿಸಿದಂತೆ ವೆಚ್ಚಪಟ್ಟಿ ಹಾಗೂ ಹಣಬಳಕೆ ಪ್ರಮಾಣಪತ್ರವನ್ನು ನಿಗದಿತ ಸಮಯದಲ್ಲಿ ಸಲ್ಲಿಸದೇ ಇದ್ದಲ್ಲಿ, ಮುಂದೆ ಇಲಾಖೆಯಿಂದ ನೀಡುವ ಯಾವುದೇ ಸೌಲಭ್ಯಗಳಿಗೆ ಪರಿಗಣಿಸಲಾಗುವುದಿಲ್ಲ.

VII. 2022-23ನೇ ಸಾಲಿನ ಪ್ರಸ್ತಾಪಿತ ವೇಳಾಪಟ್ಟಿ

ಚಟುವಟಿಕೆ	ಪ್ರಸ್ತುತ ವರ್ಷ	ಆಯಾ ವರ್ಷದಲ್ಲಿ
ಜಿಲ್ಲಾ ಹಂತದಲ್ಲಿ ಸಂಘ-ಸಂಸ್ಥೆಗಳಿಂದ ಪ್ರಸ್ತಾಪಿತ ಚಟುವಟಿಕೆಗಳ ವಿವರ ಸ್ವೀಕರಿಸುವಿಕೆ	ಪ್ರಸ್ತುತ ವರ್ಷದ ಜೂನ್ 25ನೇ ತಾರೀಖಿನಿಂದ ಜುಲೈ 20ನೇ ತಾರೀಖಿನವರೆಗೆ	ಆಯಾ ವರ್ಷದ ಮೇ 1ನೇ ತಾರೀಖಿನಿಂದ ಜೂನ್ 15ನೇ ತಾರೀಖಿನವರೆಗೆ

ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸಂಸ್ಥೆಗಳಿಂದ ಕಾರ್ಯಕ್ರಮ ಆಯೋಜನೆ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆಗಳ ಪರಿಶೀಲನೆ.	ಪ್ರಸ್ತುತ ವರ್ಷದ ಜುಲೈ 20ನೇ ತಾರೀಖಿನಿಂದ ಜುಲೈ 30ನೇ ತಾರೀಖಿನವರೆಗೆ	ಆಯಾ ವರ್ಷದ ಜೂನ್ 16ನೇ ತಾರೀಖಿನಿಂದ ಜೂನ್ 26ನೇ ತಾರೀಖಿನವರೆಗೆ
ಜಿಲ್ಲಾ ಸಹಾಯಕ ನಿರ್ದೇಶಕರಿಂದ ಪರಿಶೀಲನೆ ಹಾಗೂ ದಾಖಲೆಗಳು ತಾಂತ್ರಿಕ ಕಾರಣದಿಂದ ಸಲ್ಲಿಕೆಯಾಗದಿದ್ದಲ್ಲಿ ಮರು ಸಲ್ಲಿಸಲು ಕಾಲಾವಕಾಶ (Seek clarification)	ಪ್ರಸ್ತುತ ವರ್ಷದ ಜುಲೈ 31ನೇ ತಾರೀಖಿನಿಂದ ಆಗಸ್ಟ್ 10ನೇ ತಾರೀಖಿನ ವರೆಗೆ	ಆಯಾ ವರ್ಷದ ಜೂನ್ 27ನೇ ತಾರೀಖಿನಿಂದ ಜುಲೈ 6ನೇ ತಾರೀಖಿನವರೆಗೆ
ಸಂಘ-ಸಂಸ್ಥೆಗಳಿಂದ ಸ್ವೀಕೃತವಾದ ಪ್ರಸ್ತಾಪಿತ ಚಟುವಟಿಕೆಗಳ ವಿವರಗಳನ್ನು ಪರಿಶೀಲಿಸಿ ಅರ್ಹ ಸಂಘ-ಸಂಸ್ಥೆಗಳ ಪಟ್ಟಿ ಪ್ರಕಟಿಸುವುದು.	ಪ್ರಸ್ತುತ ವರ್ಷದ ಆಗಸ್ಟ್ 16ನೇ ತಾರೀಖಿನಂದು	ಆಯಾ ವರ್ಷದ ಜುಲೈ 10ನೇ ತಾರೀಖಿನಂದು
ಸಂಘ-ಸಂಸ್ಥೆಗಳಿಂದ ಮುಂಗಡವಾಗಿ ಸಲ್ಲಿಸಿದ ಕ್ರಿಯಾಯೋಜನೆಯಂತೆ ಕಾರ್ಯಕ್ರಮಗಳ ಆಯೋಜನೆ ಹಾಗೂ ಕಾರ್ಯಕ್ರಮದ ದಾಖಲೆಗಳನ್ನು ಅಪ್ಲೋಡ್ ಮಾಡುವುದು. (ಸಂಘ-ಸಂಸ್ಥೆಗಳು ನಿರಂತರ ಕಾರ್ಯಕ್ರಮ ನಡೆಸಬಹುದಾಗಿದ್ದು, ಈ ಅವಧಿಯಲ್ಲಿ ಕನಿಷ್ಠ ಮೂರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು.)	ಪ್ರಸ್ತುತ ವರ್ಷದ ಆಗಸ್ಟ್ 17ನೇ ತಾರೀಖಿನಿಂದ ವರ್ಷದ ಅಂತ್ಯದವರೆಗೆ	ಆಯಾ ವರ್ಷದ ಜುಲೈ 11ನೇ ತಾರೀಖಿನಿಂದ ವರ್ಷದ ಅಂತ್ಯದವರೆಗೆ

- ಧನಸಹಾಯ ಕೋರಿ ಪ್ರಸ್ತಾವನೆ ಸಲ್ಲಿಸಿದ ಸಂಘ-ಸಂಸ್ಥೆಗಳು ನಿಯಮಾನುಸಾರ 3 (ಮೂರು) ಕಾರ್ಯಕ್ರಮಗಳನ್ನು ಆಯೋಜಿಸಿ ದಾಖಲೆಗಳನ್ನು ಸೇವಾಸಿಂಧುವಿನಲ್ಲಿ ಸಲ್ಲಿಸಿದ ಪ್ರಸ್ತಾವನೆಗಳನ್ನು ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಧನಸಹಾಯ ಶಿಫಾರಸ್ಸು ಸಮಿತಿಯು ತಿಂಗಳಲ್ಲಿ ಒಂದು ಬಾರಿ ಅಥವಾ ಅಗತ್ಯವಿದ್ದಲ್ಲಿ ಸಂದರ್ಭಾನುಸಾರ ಸಮಿತಿಯ ಸಭೆ ಕರೆದು ಪರಿಶೀಲಿಸಿ ಶಿಫಾರಸ್ಸು ಮಾಡುವುದು.

- ಜಂಟಿ ನಿರ್ದೇಶಕರ ಅಧ್ಯಕ್ಷತೆಯ ಧನಸಹಾಯ ಶಿಫಾರಸ್ಸು ಸಮಿತಿಯ ಮೂಲಕ ಬಂದ ಪ್ರಸ್ತಾವನೆಗಳನ್ನು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಸರ್ಕಾರದ ಅನುಮೋದನೆಗೆ ಸಲ್ಲಿಸುವುದು.

ಕೆ.ಆರ್. ರಮೇಶ್ 23/06/2022

(ಕೆ.ಆರ್. ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸಂಸ್ಕೃತಿ)

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 340 ಕಸಧ 2015, ಬೆಂಗಳೂರು, ದಿನಾಂಕ: 18-09-2015

ಅನುಬಂಧ - 5

ಜಯಂತಿಗಳ ಆಚರಣೆ ಮಾರ್ಗ ಸೂಚಿಗಳು

1. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾಡಳಿತ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಜಯಂತಿಗಳನ್ನು ಅರ್ಥ ಪೂರ್ಣವಾಗಿ ಆಚರಿಸುವುದು.
2. ಜಿಲ್ಲಾಧಿಕಾರಿಗಳು ಅಥವಾ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯಾ ಜಯಂತಿಗೆ ಸಂಬಂಧಿಸಿದಂತೆ ಎಲ್ಲಾ ಸಮಾಜಗಳ ಮುಖಂಡರು ಮತ್ತು ಸಂಘ ಸಂಸ್ಥೆಯ ಪದಾಧಿಕಾರಿಗಳನ್ನು ಸಭೆಗೆ ಆಹ್ವಾನಿಸಿ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು.
3. ಆಹ್ವಾನ ಪತ್ರಿಕೆ, ಕರಪತ್ರ, ಬ್ಯಾನರ್, ವೇದಿಕೆ ವಿನ್ಯಾಸ, ಭಾವಚಿತ್ರದ ವ್ಯವಸ್ಥೆ, ಹೂವಿನ ಹಾರ, ಪೂಜಾ ವ್ಯವಸ್ಥೆ, ಫೋಟೋ, ವೇದಿಕೆಗೆ ಸಂಬಂಧಿಸಿದ ಇತರೆ ವ್ಯವಸ್ಥೆಯನ್ನು ಜಯಂತಿಯ ಅನುದಾನದಿಂದ ಭರಿಸುವುದು. ಸ್ವಯಂ ಪ್ರೇರಿತರಾಗಿ ಪ್ರಾಯೋಜಕರು ಮುಂದೆ ಬಂದಲ್ಲಿ ಸದರಿಯವರ ಸೇವೆಯನ್ನು ಪಡೆಯಬಹುದಾಗಿದೆ.
4. ವೇದಿಕೆ ಕಾರ್ಯಕ್ರಮದಲ್ಲಿ ಆಯಾ ಜಯಂತಿಯ ಮಹನೀಯರ ಜೀವನ ಸಾಧನೆ ಕುರಿತು ವಿಶೇಷ ಉಪನ್ಯಾಸ ಹಾಗೂ ಸಂಗೀತ ಕಾರ್ಯಕ್ರಮ ಏರ್ಪಡಿಸುವುದು.
5. ವೇದಿಕೆಯ ಗಣ್ಯರಿಗೆ ಹೂಗುಚ್ಛದ ಬದಲಿಗೆ ಆಯಾ ಜಯಂತಿ ಮಹನೀಯರ ಕುರಿತ ಪುಸ್ತಕಗಳನ್ನು ನೀಡುವುದು ಸೂಕ್ತವಾಗಿರುತ್ತದೆ.
6. ಆಯಾ ಜಯಂತಿಯ ಆಹ್ವಾನ ಪತ್ರಿಕೆಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಯಂತಿ/ಉತ್ಸವ ಸಮಿತಿ ಅವರ ಸೂಚನೆ ಅನ್ವಯ ಶಿಷ್ಟಾಚಾರಕ್ಕೆ ಅನುಗುಣವಾಗಿ ಅತಿಥಿ ಗಣ್ಯರನ್ನು ಆಹ್ವಾನಿಸುವುದು.
7. ಜಯಂತಿಯ ಆಚರಣೆಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳಿಂದ (ಮಹಾನಗರಪಾಲಿಕೆಗಳು, ನಗರಸಭೆ, ಪಟ್ಟಣ, ಪಂಚಾಯತಿಗಳಲ್ಲಿ) ಎಲ್ಲಾ ಸಮಾಜಗಳ ಮುಖಂಡರು ಮತ್ತು ಸಂಘ ಸಂಸ್ಥೆಯ ಸಹಕಾರ ಪಡೆಯುವುದು.
8. ಪೂರ್ವಭಾವಿ ಸಭೆಗಳಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳ ಸಮನ್ವಯದೊಂದಿಗೆ ಕಾರ್ಯಕ್ರಮವನ್ನು ರೂಪಿಸುವುದು.
9. ಪೂರ್ವಭಾವಿ ಸಭೆಗಳಲ್ಲಿ ಜಯಂತಿ ಆಚರಣೆಗೆ ಸಂಬಂಧಿಸಿದಂತೆ ತೆಗೆದುಕೊಳ್ಳಲಾಗುವ ನಿರ್ಣಯದಂತೆ ಜಯಂತಿಯನ್ನು ಮಹನೀಯರ ಸಂದೇಶವನ್ನು ಸಮಾಜಕ್ಕೆ ತಲುಪಿಸುವಂತೆ ಆಚರಿಸುವುದು.
10. ಜಯಂತಿಗಳನ್ನು ಜಿಲ್ಲಾ ಮತ್ತು ತಾಲೂಕು ಹಂತಗಳಲ್ಲಿ ಅರ್ಥಪೂರ್ಣವಾಗಿ ಆಚರಿಸುವುದು ಜಿಲ್ಲಾಡಳಿತದ ಪೂರ್ಣ ಜವಾಬ್ದಾರಿಯಾಗಿರುತ್ತದೆ. -

11. ಜಿಲ್ಲಾ ಮಟ್ಟದಲ್ಲಿ ಜಯಂತಿ ಆಚರಣೆ ಸಂದರ್ಭದಲ್ಲಿ ಸಾರ್ವತ್ರಿಕವಾಗಿ ಕಾರ್ಯಕ್ರಮದ ಬಗ್ಗೆ ಸಾರ್ವಜನಿಕರಿಗೆ ಪ್ರಚುರ ಪಡಿಸಬೇಕು.

12. ಪ್ರತಿ ಜಯಂತಿಯ ಸಂದರ್ಭದಲ್ಲಿ ವಿಶೇಷವಾಗಿ ಆ ಮಹಾಪುರುಷರ ವಿಶೇಷತೆಗಳನ್ನು ತಿಳಿಪಡಿಸುವಂತೆ ಅನುರೂಪವಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕು.

13. ಪ್ರತಿ ಆಚರಣೆ ಮುಗಿದ ಒಂದು ತಿಂಗಳ ಒಳಗಾಗಿ ಕಾರ್ಯಕ್ರಮದ ವರದಿ ಮತ್ತು ದಾಖಲೆಗಳನ್ನು ಕೇಂದ್ರ ಕಚೇರಿಗೆ ಸಲ್ಲಿಸಬೇಕು.

14. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕಲಾವಿದರನ್ನು ಆಹ್ವಾನಿಸುವ ಸಂದರ್ಭದಲ್ಲಿ ಎಲ್ಲಾ ಕಲಾವಿದರಿಗೂ ಅವಕಾಶ ದೊರೆಯುವಂತೆ ಆವರ್ತನ ಪದ್ಧತಿಯಲ್ಲಿ ಕಲಾ ತಂಡಗಳನ್ನು ಗುರುತಿಸಿ ಅವಕಾಶ ನೀಡುವುದು.

15. ಕಾರ್ಯಕ್ರಮದ ಆಹ್ವಾನ ಪತ್ರಿಕೆ, ವೇದಿಕೆ ಮತ್ತು ಇತರ ಪ್ರಚಾರ ಸಾಮಾಗ್ರಿಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೆಸರನ್ನು ಕಡ್ಡಾಯವಾಗಿ ಪ್ರಕಟಿಸಲು ಕ್ರಮ ಕೈಗೊಳ್ಳುವುದು.

16. ಜಯಂತಿಗಳಿಗೆ ಮಂಜೂರಾಗಿ ಬಿಡುಗಡೆಯಾದ ಹಣವನ್ನು ಅದೇ ಉದ್ದೇಶಕ್ಕಾಗಿಯೇ ಬಳಸತಕ್ಕದ್ದು. ಹಾಗೆ ಆಯಾ ಆರ್ಥಿಕ ವರ್ಷದಲ್ಲಿ ಬಳಸದೆ ಉಳಿದ ಹಣವನ್ನು ಸರ್ಕಾರಕ್ಕೆ ಅಧ್ಯರ್ಪಣೆ ಮಾಡಿ ಸಹಾಯಕ ನಿರ್ದೇಶಕರು ಕೇಂದ್ರ ಕಚೇರಿಗೆ ವರದಿ ಸಲ್ಲಿಸುವುದು.

17. ಜಯಂತಿ ಆಚರಣೆಯ ಕಾರ್ಯಕ್ರಮಗಳನ್ನು ನಿಗದಿತ ದಿನಾಂಕದಂದೇ ಆಯೋಜಿಸಲು ಕ್ರಮ ಕೈಗೊಳ್ಳುವುದು.

(ಮಲ್ಲಿಕಾರ್ಜುನ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂಪಾ 167 ಕಸಧ 2022, ಬೆಂಗಳೂರು, ದಿನಾಂಕ: 22-06-2022ರ

ಅನುಬಂಧ

ತಾಲ್ಲೂಕು ಹಾಗೂ ಜಿಲ್ಲಾ ರಂಗಮಂದಿರ ನಿರ್ಮಾಣ ಮತ್ತು ನಿರ್ವಹಣೆಯ

ಮಾರ್ಗಸೂಚಿಗಳು

I. ನಾಡಿನ ಕಲೆ ಸಾಹಿತ್ಯ ಸಂಸ್ಕೃತಿಯನ್ನು ಬಿಂಬಿಸುವ ವಿವಿಧ ಕವಿಗೋಷ್ಠಿ, ವಿಚಾರ ಸಂಕಿರಣ ಮತ್ತು ಸಾಹಿತ್ಯ ಕೃಷಿಗೆ ಸಂಬಂಧಿಸಿದ ಎಲ್ಲಾ ಬಗೆಯ ಕಾರ್ಯಕ್ರಮಗಳು ಮತ್ತು ಕಲಾಪ್ರಕಾರಗಳಾದ ಜಾನಪದ, ಸಂಗೀತ, ನೃತ್ಯ, ನಾಟಕ, ಯಕ್ಷಗಾನ, ಚಿತ್ರಕಲೆ, ಶಿಲ್ಪಕಲೆ ಮುಂತಾದ ಕಲೆಗಳನ್ನು ಕಲಾವಿದರು ತಮ್ಮ ಕಲಾ ಪ್ರದರ್ಶನವನ್ನು ನೀಡಲು ಅನುಕೂಲವಾಗುವಂತೆ ಮತ್ತು ಸಾರ್ವಜನಿಕರಿಗೆ ಸಾಹಿತ್ಯ ಮತ್ತು ಕಲಾಕ್ಷೇತ್ರಗಳಲ್ಲಿ ಆಸಕ್ತಿ ಹಾಗೂ ಅವುಗಳಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗುವಂತೆ ಸಾಂಸ್ಕೃತಿಕ ಭವನ/ ರಂಗಮಂದಿರಗಳ ಅವಶ್ಯಕತೆ ಇರುತ್ತದೆ.

ಆದರೆ ರಂಗಮಂದಿರ ನಿರ್ಮಾಣಕ್ಕೆ ಸಂಬಂದಿಸಿದಂತೆ ಮಾರ್ಗಸೂಚಿಗಳು ಇಲ್ಲದೇ ಇರುವುದರಿಂದ, ರಂಗಮಂದಿರಗಳನ್ನು ನಿರ್ಮಿಸುವ ಸಂದರ್ಭಗಳಲ್ಲಿ ಮನಸ್ಸಿಗೆ ಬಂದಂತೆ ನಿರ್ಮಿಸುತ್ತಿರುವುದರಿಂದ, ರಾಜ್ಯದಲ್ಲಿ ಇನ್ನು ಮುಂದೆ ನಿರ್ಮಿಸುವ ರಂಗಮಂದಿರಗಳಲ್ಲಿ ಏಕರೂಪತೆ ಮತ್ತು ನಿಯಮಾವಳಿಗಳಡಿ ನಿರ್ಮಿಸುವುದು ಸೂಕ್ತವೆಂದು ಕಂಡುಬಂದಿರುವುದರಿಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ರಾಜ್ಯದಲ್ಲಿರುವ ಜಿಲ್ಲಾ ಹಾಗೂ ತಾಲ್ಲೂಕುಗಳಲ್ಲಿ ಸುಸಜ್ಜಿತವಾದ ರಂಗಮಂದಿರಗಳನ್ನು ನಿರ್ಮಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ನಿಗದಿಪಡಿಸಿ ಹೊರಡಿಸಲಾಗಿದೆ.

1. ಹೊಸದಾಗಿ ನಿರ್ಮಾಣ ಮಾಡಲು ಉದ್ದೇಶಿಸಿರುವ ರಂಗಮಂದಿರಗಳಿಗೆ ನಿವೇಶನ ದೊರೆತ ನಂತರ ಸೂಕ್ತ ಪ್ರಸ್ತಾವನೆಯನ್ನು ಆಯಾ ಜಿಲ್ಲಾಧಿಕಾರಿಗಳು/ಜಿಲ್ಲಾ ಸಹಾಯಕ ನಿರ್ದೇಶಕರು/ವಿಭಾಗದ ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಖಾಂತರ ಪ್ರಸ್ತಾವನೆ ಸಲ್ಲಿಸುವುದು.
2. ನಿವೇಶನ ಇಲ್ಲದ ಕಡೆ ಭವನ ಮಂಜೂರು ಮಾಡಬಾರದು.
3. ಸರ್ಕಾರದಿಂದ ಮಂಜೂರಾದ ಮೊತ್ತಕ್ಕಿಂತ ಹೆಚ್ಚಿನ ಮೊತ್ತ ನೀಡುವುದಿಲ್ಲ.
4. ತಾಲ್ಲೂಕು ಹಾಗೂ ಜಿಲ್ಲಾ ಹಂತದಲ್ಲಿ ನಿರ್ಮಿಸುವ ರಂಗಮಂದಿರಗಳಿಗೆ ಮಾದರಿ ನಕ್ಷೆ ಮತ್ತು ಅಂದಾಜು ಪಟ್ಟಿಗಳನ್ನು ನಿರ್ದೇಶನಾಲಯದಿಂದ ನೀಡಲಾಗುವುದು.
5. ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರಲು ಅನುಕೂಲವಾಗುವಂತೆ ರಂಗಮಂದಿರ ನಿರ್ಮಿಸುವುದು.
6. ಉದ್ದೇಶ: ಜಿಲ್ಲಾ ರಂಗಮಂದಿರಗಳನ್ನು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮಾತ್ರ ಬಳಸತಕ್ಕದ್ದು. ರಾಜಕೀಯ ಸಮಾರಂಭಗಳಿಗೆ ನೀಡತಕ್ಕದ್ದಲ್ಲ.
7. ತಾಲ್ಲೂಕು ಹಾಗೂ ಜಿಲ್ಲಾ ರಂಗಮಂದಿರದ ನಿರ್ಮಾಣಕ್ಕೆ ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸತಕ್ಕದ್ದು.

    i. ನಿವೇಶನದ ಆರ್‌ಟಿಸಿ/ಪಹಣಿ ಪತ್ರ/ಉತಾರ.
    ii. ರಂಗಮಂದಿರ ನಿರ್ಮಾಣಕ್ಕೆ ಸಂಬಂಧಿಸಿದ ಪ್ರಾಧಿಕಾರದಿಂದ ಒಪ್ಪಿಗೆ ಪ್ರಮಾಣ ಪತ್ರ.
    iii. ನಿವೇಶನದ ಎನ್ ಕಂಬರೆನ್ಸ್ ಸರ್ಟಿಫಿಕೇಟ್ (ಇ.ಸಿ).
    iv. ತಾಲ್ಲೂಕು ಜಿಲ್ಲಾ ರಂಗಮಂದಿರದ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖಾ/ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ / ನಿರ್ಮಿತಿ ಕೇಂದ್ರ ಇವರಿಂದ ದೃಢೀಕರಿಸಿದ ಅಂದಾಜು ವೆಚ್ಚ ಪಟ್ಟಿ, ನೀಲಿನಕಾಶೆಗಳು.

8. ಜಿಲ್ಲಾ ರಂಗಮಂದಿರಕ್ಕೆ ಸಂಬಂಧಿಸಿದಂತೆ ಮೇಲಿನ ಅಗತ್ಯ ದಾಖಲೆಗಳೊಂದಿಗೆ ಜಿಲ್ಲಾಧಿಕಾರಿಯವರು ರೂ.3.00 ಕೋಟಿ ಮಿತಿಯೊಳಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಕ್ಕೆ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸುವುದು.
9. ತಾಲ್ಲೂಕು ರಂಗಮಂದಿರಕ್ಕೆ ಸಂಬಂಧಿಸಿದಂತೆ ಮೇಲಿನ ಅಗತ್ಯ ದಾಖಲೆಗಳೊಂದಿಗೆ ಆಯಾ ತಾಲ್ಲೂಕಿನ ಜಿಲ್ಲಾ ಸಹಾಯಕ ನಿರ್ದೇಶಕರು ಇವರ ಮುಖಾಂತರ ರೂ.1.00 ಕೋಟಿಗಳ ಮಿತಿಯೊಳಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಕ್ಕೆ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸುವುದು.
10. ಅಪೂರ್ಣ ದಾಖಲೆ ಹೊಂದಿದ ಅರ್ಜಿಗಳನ್ನು ಮಾರ್ಗಸೂಚಿಯನುಸಾರ ಪರಿಶೀಲಿಸಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಿಂಬರಹ ನೀಡುವುದು.

....2

11. ತಾಲ್ಲೂಕು / ಜಿಲ್ಲಾ ರಂಗಮಂದಿರಗಳಿಗೆ ನಿರ್ಮಿಸಿಕೊಡಲಾಗುವ ರಂಗಮಂದಿರದ ಅನುದಾನದ ಗರಿಷ್ಠ ಮೊತ್ತ ತಾಲ್ಲೂಕು ರಂಗಮಂದಿರಕ್ಕೆ ರೂ.100.00 ಲಕ್ಷ ಹಾಗೂ ಜಿಲ್ಲಾ ರಂಗಮಂದಿರಕ್ಕೆ ರೂ.300.00 ಲಕ್ಷಗಳಾಗಿರುತ್ತವೆ. ಈ ಅನುದಾನವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗುವುದು.
12. ಕಾಮಗಾರಿಗೆ ಇಲಾಖೆಯಿಂದ ತಾಲ್ಲೂಕು ರಂಗಮಂದಿರಕ್ಕೆ ರೂ.100.00 ಲಕ್ಷ ಹಾಗೂ ಜಿಲ್ಲಾ ರಂಗಮಂದಿರಕ್ಕೆ ರೂ.300.00 ಲಕ್ಷಗಳನ್ನು ಮಾತ್ರ ಮಂಜೂರು ಮಾಡಲಾಗುವುದು. ಒಂದು ವೇಳೆ ಸ್ಥಳೀಯವಾಗಿ ಕಾಮಗಾರಿಯ ಅಂದಾಜು ವೆಚ್ಚವನ್ನು ವಿಸ್ತರಿಸಿಕೊಂಡಿದ್ದಲ್ಲಿ, ವಿಸ್ತರಿಸಿಕೊಂಡ ಮೊತ್ತವನ್ನು ಮಾನ್ಯ ಶಾಸಕರು/ಲೋಕಸಭಾ ಹಾಗೂ ರಾಜ್ಯ ಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಅಥವಾ ದಾನಿಗಳಿಂದ ಭರಿಸಿಕೊಳ್ಳುವುದು.
13. ಪೂರ್ಣ ಮಾಹಿತಿಗಳನ್ನೊಳಗೊಂಡ ಅರ್ಜಿಯನ್ನು ಪರಿಶೀಲಿಸಿ ರಂಗಮಂದಿರದ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗುವುದು. ಮೊದಲ ಕಂತಿನ ಹಣ ಬಳಕೆ ಪ್ರಮಾಣಪತ್ರ ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳು, ಕಾಮಗಾರಿ ಗುಣಮಟ್ಟ, ಕಟ್ಟಡದ ವಿವಿಧ ಕೋನಗಳ ವಿಡಿಯೋ ಹಾಗೂ ಛಾಯಾಚಿತ್ರಗಳನ್ನು ಮೂರನೇ ಪಕ್ಷದಾರನಿಂದ ಮಾಡಿಸಿದ ತಪಾಸಣಾ ವರದಿಯನ್ನು ಒದಗಿಸಿದ ನಂತರ 2ನೇ ಕಂತನ್ನು ವಿಭಾಗದ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಮುಖಾಂತರ ಅನುದಾನವನ್ನು ಬಿಡುಗಡೆ ಮಾಡಲಾಗುವುದು.
14. ತಾಲ್ಲೂಕು ಮಟ್ಟದ ರಂಗಮಂದಿರಗಳಿಗೆ ಕನಿಷ್ಠ 200 ರಿಂದ 250 ಸಾಮರ್ಥ್ಯದ ಜಿಲ್ಲಾ ರಂಗಮಂದಿರಗಳಿಗೆ ಕನಿಷ್ಠ 400 ರಿಂದ 500 ಜನ ಕೂಡಲು ಸ್ಥಳಾವಕಾಶ, 2 ಪ್ರಸಾಧನ ಕೊಠಡಿ, 6 ಶೌಚಾಲಯ, ಧ್ವನಿ ಬೆಳಕಿನ ನಿರ್ವಹಣೆ ಕೊಠಡಿ, ವೇದಿಕೆ ಇತ್ಯಾದಿ ಒಳಗೊಂಡಿರಬೇಕು.
15. ತಾಲ್ಲೂಕು / ಜಿಲ್ಲಾ ರಂಗಮಂದಿರ ಬಯಲು ಪ್ರದೇಶಗಳಲ್ಲಿಯೇ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ನಿವೇಶನ ಹೊಂದಿರಬೇಕು ಮತ್ತು ಅಲ್ಲಿಯೇ ನಿರ್ಮಿಸತಕ್ಕದ್ದು.
16. ಸರ್ಕಾರಿ ಸಹಭಾಗಿತ್ವದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಉಚಿತವಾಗಿ ಸಾಂಸ್ಕೃತಿಕ ಭವನ/ರಂಗಮಂದಿರ ನೀಡಬೇಕು. ಸಾಂಸ್ಕೃತಿಕ ರಂಗಮಂದಿರದಲ್ಲಿ ನಡೆದ ಒಟ್ಟಾರೆ ಕಾರ್ಯಕ್ರಮಗಳ ವರದಿಯನ್ನು ಆಯಾ ಜಿಲ್ಲಾ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರು ಜಂಟಿ ನಿರ್ದೇಶಕರು ಹಾಗೂ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಪ್ರತಿ ವರ್ಷ ಮಾರ್ಚ್ 31ರ ಒಳಗೆ ಸಲ್ಲಿಸಬೇಕು.
17. ಕಾಮಗಾರಿ ಮುಗಿದ ಒಂದು ತಿಂಗಳ ಒಳಗೆ ಮಂಜೂರಾದ ಹಣಕ್ಕೆ ಹಣಬಳಕೆ ಪ್ರಮಾಣ ಪತ್ರ, ಕಾಮಗಾರಿ ಗುಣಮಟ್ಟದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣಪತ್ರ ಸಲ್ಲಿಸಬೇಕು.
18. ಅನುದಾನ ಬಿಡುಗಡೆಯಾದ 90 ದಿನಗಳ ಒಳಗಾಗಿ ಕಾಮಗಾರಿ ಪ್ರಾರಂಭವಾಗದಿದ್ದಲ್ಲಿ ಹಾಗೂ ಅನುದಾನ ಬಿಡುಗಡೆಯಾದ ಒಂದು ವರ್ಷದ ಒಳಗೆ ಕಾಮಗಾರಿ ಪೂರ್ಣವಾಗದಿದ್ದಲ್ಲಿ ಮಂಜೂರಾದ ಅನುದಾನವನ್ನು ಹಿಂಪಡೆಯಲಾಗುವುದು.
19. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನುಮೋದಿತವಾದ ತಾಲ್ಲೂಕು, ಜಿಲ್ಲಾ ರಂಗಮಂದಿರಗಳ ಮಾದರಿ ನಕ್ಷೆಯಂತೆ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಸಂಸ್ಥೆಯು ಬದ್ಧವಾಗಿರಬೇಕು.
20. ನಿಗದಿಪಡಿಸಲಾದ ಅನುದಾನಕ್ಕಿಂತ ಒಂದು ವೇಳೆ ಸ್ಥಳೀಯವಾಗಿ ಬೇರೆ ಮೂಲಗಳಿಂದ ಅನುದಾನ ಪಡೆದರೂ ಸಹಿತ, ಅದನ್ನು ಇಲಾಖೆಯಿಂದ ನೀಡುವಂತಹ ಮಾದರಿ ನಕ್ಷೆಯಂತೆಯೇ ತಾಲ್ಲೂಕು, ಜಿಲ್ಲಾ ರಂಗಮಂದಿರ ನಿರ್ಮಿಸುವುದು.
21. ಜಿಲ್ಲಾ ಮಟ್ಟದ ರಂಗಮಂದಿರ ಕಾಮಗಾರಿಗಳಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಅನುಷ್ಠಾನ/ನಿರ್ವಹಣಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಅನುಷ್ಠಾನ / ನಿರ್ವಹಣಾ ಸಮಿತಿಯನ್ನು ಕೆಳಕಂಡಂತೆ ರಚಿಸಲಾಗಿದೆ.

1	ಆಯಾ ಜಿಲ್ಲೆಯ ಜಿಲ್ಲಾಧಿಕಾರಿ	ಅಧ್ಯಕ್ಷರು
2	ಆಯಾ ಜಿಲ್ಲೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್	ಸದಸ್ಯರು
3	ಆಯಾ ಜಿಲ್ಲೆಯ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ	ಸದಸ್ಯರು
4	ಆಯಾ ಜಿಲ್ಲೆಯ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ ವಿಭಾಗ	ಸದಸ್ಯರು
5	ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯವರಿಂದ ನಾಮನಿರ್ದೇಶಿತ ಎರಡು ವ್ಯಕ್ತಿಗಳು (ಸಾಹಿತ್ಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳವರು)	ನಾಮನಿರ್ದೇಶಿತ ಸದಸ್ಯರು

6	ಆಯಾ ಜಿಲ್ಲೆಯ ಮುಖ್ಯಸ್ಥರು ಅಥವಾ ಅವರ ಪ್ರತಿನಿಧಿ, ಮಹಾನಗರಪಾಲಿಕೆ/ನಗರ ಪಾಲಿಕೆ/ಪಟ್ಟಣ ಪಂಚಾಯ್ತಿ	ಸದಸ್ಯರು
7	ಆಯಾ ಜಿಲ್ಲೆಯ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ	ಸದಸ್ಯ ಕಾರ್ಯದರ್ಶಿ

22. ತಾಲ್ಲೂಕು ಮಟ್ಟದ ರಂಗಮಂದಿರ ಕಾಮಗಾರಿಗಳಿಗೆ ಆಯಾ ಜಿಲ್ಲೆಯ ಸಹಾಯಕ ಆಯುಕ್ತರು ಅನುಷ್ಠಾನ / ನಿರ್ವಹಣಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಅನುಷ್ಠಾನ / ನಿರ್ವಹಣಾ ಸಮಿತಿಯನ್ನು ಕೆಳಕಂಡಂತೆ ರಚಿಸಲಾಗಿದೆ.

1	ಆಯಾ ವಿಭಾಗದ ವಲಯದ ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ	ಅಧ್ಯಕ್ಷರು
2	ಆಯಾ ಜಿಲ್ಲೆಯ ಸಹಾಯಕ ಆಯುಕ್ತರು, ಕಂದಾಯ ಇಲಾಖೆ	ಸಹ ಅಧ್ಯಕ್ಷರು
3	ಆಯಾ ಜಿಲ್ಲೆಯ ತಹಸೀಲ್ದಾರ್	ಸದಸ್ಯರು
3	ಆಯಾ ತಾಲ್ಲೂಕು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್	ಸದಸ್ಯರು
4	ಆಯಾ ತಾಲ್ಲೂಕು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ	ಸದಸ್ಯರು
5	ಆಯಾ ತಾಲ್ಲೂಕು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ ವಿಭಾಗ	ಸದಸ್ಯರು
6	ಆಯಾ ಜಿಲ್ಲೆಯ ಸಹಾಯಕ ಆಯುಕ್ತರಿಂದ ನಾಮನಿರ್ದೇಶಿತ ಇಬ್ಬರು ವ್ಯಕ್ತಿಗಳು (ಸಾಹಿತ್ಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳವರು)	ನಾಮನಿರ್ದೇಶಿತ ಸದಸ್ಯರು
7	ಆಯಾ ತಾಲ್ಲೂಕಿನ ಮಹಾನಗರ ಪಾಲಿಕೆ/ನಗರ ಸಭೆ/ಪಟ್ಟಣ ಪಂಚಾಯ್ತಿ ಆಯುಕ್ತರು	ಸದಸ್ಯರು
8	ಆಯಾ ಜಿಲ್ಲಾ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ	ಸದಸ್ಯ ಕಾರ್ಯದರ್ಶಿ

23. ಜಿಲ್ಲಾ ಮಟ್ಟದ ಕಾಮಗಾರಿಯ ಅನುಷ್ಠಾನ / ನಿರ್ವಹಣಾ ಸಮಿತಿಯ ಕರ್ತವ್ಯಗಳು:

- ವೆಚ್ಚ ಮತ್ತು ನಕ್ಷೆಯ ಅನುಮೋದನೆ.
- ಸದಸ್ಯ ಕಾರ್ಯದರ್ಶಿಯವರಿಂದ ಟೆಂಡರ್ ಆಹ್ವಾನಿಸುವುದು.
- ಟೆಂಡರ್ ಅನುಮೋದನೆ.
- ಕಾಮಗಾರಿಯನ್ನು ಕಾರ್ಯಕಾರಿ ಸಂಸ್ಥೆಗೆ/ಗುತ್ತಿಗೆದಾರರಿಗೆ ವಹಿಸುವುದು.
- ಕಾಮಗಾರಿಯ ಪರಿಶೀಲನೆ ಮತ್ತು ಮುಕ್ತಾಯಗೊಳಿಸುವುದು.
- ಜಿಲ್ಲಾ ಹಂತದ ಕಾಮಗಾರಿಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ.
- ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವುದು.
- ರಂಗಮಂದಿರದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬಾಡಿಗೆಯನ್ನು ನಿಗದಿಪಡಿಸುವುದು ಮತ್ತು ಸದರಿ ಮೊತ್ತವನ್ನು ನಿರ್ವಹಣೆಗಾಗಿ ಉಪಯೋಗಿಸತಕ್ಕದ್ದು.
- ಸಮಿತಿಯು ಕನಿಷ್ಠ 3 ತಿಂಗಳಿಗೊಮ್ಮೆ ಸಭೆ ಸೇರಿ ಕಾಮಗಾರಿಯ ಬಗ್ಗೆ ಪರಿಶೀಲಿಸುವುದು.

24. ತಾಲ್ಲೂಕು ಮಟ್ಟದ ಕಾಮಗಾರಿ ಅನುಷ್ಠಾನ / ನಿರ್ವಹಣಾ ಸಮಿತಿಯ ಕರ್ತವ್ಯಗಳು:

- ವೆಚ್ಚ ಮತ್ತು ನಕ್ಷೆಯ ಅನುಮೋದನೆ.
- ಸದಸ್ಯ ಕಾರ್ಯದರ್ಶಿಯವರಿಂದ ಟೆಂಡರ್ ಆಹ್ವಾನಿಸುವುದು.
- ಟೆಂಡರ್ ಅನುಮೋದನೆ.
- ಕಾಮಗಾರಿಯನ್ನು ಕಾರ್ಯಕಾರಿ ಸಂಸ್ಥೆಗೆ/ಗುತ್ತಿಗೆದಾರರಿಗೆ ವಹಿಸುವುದು.

- ಕಾಮಗಾರಿಯ ಪರಿಶೀಲನೆ ಮತ್ತು ಮುಕ್ತಾಯಗೊಳಿಸುವುದು.
- ತಾಲ್ಲೂಕು ಹಂತದ ಕಾಮಗಾರಿಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ.
- ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವುದು.
- ರಂಗಮಂದಿರದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬಾಡಿಗೆಯನ್ನು ನಿಗದಿಪಡಿಸುವುದು ಮತ್ತು ಸದರಿ ಮೊತ್ತವನ್ನು ನಿರ್ವಹಣೆಗಾಗಿ ಉಪಯೋಗಿಸತಕ್ಕದ್ದು.
- ಸಮಿತಿಯು ಕನಿಷ್ಠ 3 ತಿಂಗಳಿಗೊಮ್ಮೆ ಸಭೆ ಸೇರಿ ಕಾಮಗಾರಿಯ ಬಗ್ಗೆ ಪರಿಶೀಲಿಸುವುದು.

25.ಜಿಲ್ಲಾ ರಂಗಮಂದಿರದ ಉಸ್ತುವಾರಿ ಮತ್ತು ಮೇಲ್ವಿಚಾರಣೆಯನ್ನು ಜಿಲ್ಲಾ ಅನುಷ್ಠಾನ ಸಮಿತಿಯು ಹಾಗೂ ತಾಲ್ಲೂಕು ರಂಗಮಂದಿರದ ಉಸ್ತುವಾರಿ ಮತ್ತು ಮೇಲ್ವಿಚಾರಣೆಯನ್ನು ತಾಲ್ಲೂಕು ಅನುಷ್ಠಾನ ಸಮಿತಿಯು ಕೈಗೊಳ್ಳುವುದು.

(ಕೆ.ಆರ್. ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸಂಸ್ಕೃತಿ)

ಸರ್ಕಾರದ ಆದೇಶ ಸಂಖ್ಯೆ: ಕಸಂಪ್ರಾ 340 ಕಸಧ 2015, ಬೆಂಗಳೂರು, ದಿನಾಂಕ: 18-09-2015

ಅನುಬಂಧ - 3

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಾಂಸ್ಕೃತಿಕ ಭವನ/ರಂಗಮಂದಿರಗಳ ನಿರ್ಮಾಣಕ್ಕೆ ಅನುದಾನ/ಧನಸಹಾಯ ನೀಡುವ ಕುರಿತು ಅನುಸರಿಸಬೇಕಾದ ಮಾರ್ಗಸೂಚಿಗಳು

1. ಸಾಂಸ್ಕೃತಿಕವಾಗಿ ಸಾಹಿತ್ಯಕವಾಗಿ ನಿರಂತರವಾಗಿ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವ ನೋಂದಾಯಿತ ಸಂಘ-ಸಂಸ್ಥೆಗಳಿಗೆ ಆದ್ಯತೆ ಮೇಲೆ ಸಾಂಸ್ಕೃತಿಕಭವನ/ ರಂಗ ಮಂದಿರ ನಿರ್ಮಾಣ ಮಾಡಿಕೊಡಲಾಗುವುದು. (ಯೋಗ, ಧ್ಯಾನ, ಶಿಕ್ಷಣ ಸಂಸ್ಥೆ ಹಾಗೂ ಧಾರ್ಮಿಕ ಸಂಘ-ಸಂಸ್ಥೆಗಳಿಗೆ ನಿಯಮಾನುಸಾರ ಅನುದಾನಕ್ಕೆ ಅವಕಾಶ ಇರುವುದಿಲ್ಲ)

2. ಸಾಮಾನ್ಯ ವರ್ಗಕ್ಕೆ ಸೇರಿದ ಸಂಘ-ಸಂಸ್ಥೆಗಳು/ ಟ್ರಸ್ಟುಗಳು ನೋಂದಣಿಯಾಗಿ ಕನಿಷ್ಠ 3 ವರ್ಷ ಆಗಿರಬೇಕು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಸಂಘ-ಸಂಸ್ಥೆಗಳು/ ಟ್ರಸ್ಟುಗಳು ನೋಂದಣಿಯಾಗಿ ಕನಿಷ್ಠ [illegible] ವರ್ಷ ಆಗಿರಬೇಕು.

3. ಸಾಂಸ್ಕೃತಿಕ ಭವನ ನಿರ್ಮಾಣಕ್ಕಾಗಿ ಸಲ್ಲಿಸುವ ಮನವಿಯೊಂದಿಗೆ ಸಂಸ್ಥೆಯ ನೋಂದಣಿ ಪ್ರಮಾಣಪತ್ರ, ನೋಂದಣಿ ನವೀಕರಣ ಪ್ರಮಾಣಪತ್ರ, ಪದಾಧಿಕಾರಿಗಳ ಪಟ್ಟಿ, ಸಂಸ್ಥೆಯ ಬೈಲಾ ಪ್ರತಿ, ಹಿಂದಿನ ವರ್ಷದ ಆಡಿಟ್ ವರದಿಗಳು, ಸಂಸ್ಥೆಯಿಂದ ಕೈಗೊಂಡ ಸಾಂಸ್ಕೃತಿಕ ಕಾರ್ಯಚಟುವಟಿಕೆಗಳ ವಿವರಗಳನ್ನು ಸಲ್ಲಿಸತಕ್ಕದ್ದು.

4. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸಂಸ್ಥೆಗಳಾಗಿದ್ದಲ್ಲಿ ಪದಾಧಿಕಾರಿಗಳು ಅದೇ ಸಮುದಾಯದವರಾಗಿರಬೇಕು ಮತ್ತು ಇತ್ತೀಚಿನ ಜಾತಿ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಲಗತ್ತಿಸಬೇಕು.

5. ಸಾಂಸ್ಕೃತಿಕ ಭವನ/ ರಂಗಮಂದಿರ/ ಬಯಲು ರಂಗ ಮಂದಿರದ ನಿರ್ಮಾಣಕ್ಕೆ ಸಂಖ್ಯೆ 3ರಲ್ಲಿ ತಿಳಿಸಿದ ದಾಖಲೆಗಳೊಂದಿಗೆ ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸತಕ್ಕದ್ದು.

   - ಆರ್.ಟಿ.ಸಿ/ ಪಹಣಿ ಪತ್ರ/ ಉತಾರ
   - [illegible] ಎನ್‌ಕಂಬರೆನ್ಸ್ ಸರ್ಟಿಫಿಕೇಟ್ (ಇ.ಸಿ)
   - ಲೋಕೋಪಯೋಗಿ ಇಲಾಖಾ/ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ/ ನಿರ್ಮಿತಿ ಕೇಂದ್ರ ಇವರಿಂದ ದೃಢೀಕರಿಸಿದ ಅಂದಾಜು ವೆಚ್ಚಪಟ್ಟಿ, ನೀಲ ನಕಾಶೆಗಳು, ಸಲ್ಲಿಸಬೇಕು.

6. ಸಾಂಸ್ಕೃತಿಕ ಭವನ/ ರಂಗಮಂದಿರನಿರ್ಮಾಣದ ಸ್ಥಳವು ಸಂಘ-ಸಂಸ್ಥೆಯ ಹೆಸರಿನಲ್ಲಿ ಇರಬೇಕು. ಅಥವ ಗ್ರಾಮ ಪಂಚಾಯ್ತಿ/ನಗರ ಸಭೆಯಿಂದ ಒಪ್ಪಿಗೆ ಪತ್ರ ಮತ್ತು ನಿರಪೇಕ್ಷಣಾ ಪತ್ರ (ನೋ ಅಬ್ಜೆಕ್ಷನ್ ಪತ್ರ) ಸಲ್ಲಿಸಬೇಕು.

7. ಅರ್ಜಿಗಳನ್ನು ಆಯಾ ಜಿಲ್ಲಾ ಸಹಾಯಕ ನಿರ್ದೇಶಕರ ಮೂಲಕ ಅವರ ಸ್ಥಳ ಪರಿಶೀಲನಾ ವರದಿಯೊಂದಿಗೆ ಕಳುಹಿಸಿಕೊಡುವುದು. ಅಪೂರ್ಣ ದಾಖಲೆ ಹೊಂದಿದ ಅರ್ಜಿಗಳನ್ನು ಸಹಾಯಕ ನಿರ್ದೇಶಕರ ಹಂತದಲ್ಲಿಯೇ ತಿರಸ್ಕರಿಸಿ ಹಿಂಬರಹ ನೀಡುವುದು.

8. ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆಯಡಿಯಲ್ಲಿನಿರ್ಮಾಣವಾಗುವ ಸಾಂಸ್ಕೃತಿಕ ಭವನ ಹಾಗೂ ಬಯಲು ರಂಗಮಂದಿರಗಳನ್ನು ಆಯಾ ಸಮುದಾಯದವರು ವಾಸಿಸುವ ಸ್ಥಳಗಳಲ್ಲಿಯೇ ಕಡ್ಡಾಯವಾಗಿ ನಿರ್ಮಿಸಬೇಕು.

9. ಸಂಘ-ಸಂಸ್ಥೆಗಳಿಗೆ ನಿರ್ಮಿಸಿಕೊಡಲಾಗುವ ಸಾಂಸ್ಕೃತಿಕ ಭವನ/ ರಂಗಮಂದಿರ ಅನುದಾನದ ಗರಿಷ್ಠ ಮೊತ್ತ ರೂ.20.00 ಲಕ್ಷಗಳಾಗಿರುತ್ತವೆ. ಈ ಅನುದಾನವನ್ನು ಜಿಲ್ಲಾಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಬಿಡುಗಡೆ ಮಾಡಲಾಗುವುದು. ಸಂಘ-ಸಂಸ್ಥೆಗಳಿಗೆ ನೇರವಾಗಿ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.

10. ಪೂರ್ಣ ಮಾಹಿತಿಗಳನ್ನೊಳಗೊಂಡ ಅರ್ಜಿಯನ್ನು ಪರಿಶೀಲಿಸಿ ಸಾಂಸ್ಕೃತಿಕ ಭವನ/ ರಂಗಮಂದಿರ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗುವುದು. ಮೊದಲ ಕಂತಿನ ಹಣ ಬಳಕೆ ಪ್ರಮಾಣ ಪತ್ರ ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳು, ಕಾಮಗಾರಿ ಗುಣಮಟ್ಟ, ಕಟ್ಟಡದ ವಿವಿಧ ಕೋನಗಳ ವಿಡಿಯೋ ಹಾಗೂ ಛಾಯಾಚಿತ್ರಗಳನ್ನು ಒದಗಿಸಿದ ನಂತರ 2ನೆ ಕಂತನ್ನು ಜಿಲ್ಲಾಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಜಂಟಿ ಖಾತೆಯ ಮೂಲಕ ಅನುದಾನ ಬಿಡುಗಡೆ ಮಾಡಲಾಗುವುದು.

11. ಸಾಂಸ್ಕೃತಿಕ ಭವನ/ ರಂಗಮಂದಿರವನ್ನು ನೆಲಮಟ್ಟದಲ್ಲಿಯೇ ನಿರ್ಮಿಸಬೇಕು. ಮಹಡಿ ಮೇಲೆ ನಿರ್ಮಿಸಬಾರದು ಹಾಗೂ ಕನಿಷ್ಠ 75ರಿಂದ 100 ಜನ ಕೂಡಲು ಸ್ಥಳಾವಕಾಶ ಹಾಗೂ 2 ಪ್ರಸಾಧನ ಕೊಠಡಿ, ವೇದಿಕೆ ಇರಬೇಕು.

12. ಸಾಂಸ್ಕೃತಿಕ ಭವನ/ ಬಯಲು ರಂಗಮಂದಿರ ಬಯಲು ಪ್ರದೇಶಗಳಲ್ಲಿಯೇ ಮತ್ತು ಸಾರ್ವಜನಿಕರಿಗೆ ಅನುಕೂಲವಾಗಿರುವಲ್ಲಿ ನಿವೇಶನ ಹೊಂದಿರಬೇಕು. ಮತ್ತು ಅಲ್ಲಿಯೇ ನಿರ್ಮಿಸತಕ್ಕದ್ದು.

13. ಸಾಂಸ್ಕೃತಿಕ ಭವನ/ ರಂಗಮಂದಿರ ನಿರ್ವಹಣೆಯು ಆಯಾ ಸಂಘ-ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ. ಅಥವಾ ಗ್ರಾಮ ಪಂಚಾಯಿತಿ ನಗರ ಸಭೆಯಿಂದ ನಿರ್ವಹಿಸತಕ್ಕದ್ದು.

14. ಸರ್ಕಾರಿ ಸಹಭಾಗಿತ್ವದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಉಚಿತವಾಗಿ ಸಾಂಸ್ಕೃತಿಕ ಭವನ/ ರಂಗಮಂದಿರ ನೀಡಬೇಕು. ಸಾಂಸ್ಕೃತಿಕ ರಂಗಮಂದಿರದಲ್ಲಿ ನಡೆದ ಒಟ್ಟಾರೆ ಕಾರ್ಯಕ್ರಮಗಳ ವರದಿಯನ್ನು ಆಯಾ ಜಿಲ್ಲಾ ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಪ್ರತಿವರ್ಷ ಮಾರ್ಚ್ 31ರ ಒಳಗೆ ಸಲ್ಲಿಸಬೇಕು.

15. ಕಾಮಗಾರಿ ಮುಗಿದ ಒಂದು ತಿಂಗಳ ಒಳಗೆ ಮಂಜೂರಾದ ಹಣಕ್ಕೆ ಹಣಬಳಕೆ ಪ್ರಮಾಣಪತ್ರ, ಕಾಮಗಾರಿ ಗುಣಮಟ್ಟದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣಪತ್ರ ಸಲ್ಲಿಸಬೇಕು.

16. ಈ ಸಾಂಸ್ಕೃತಿಕ ಭವನ/ ಬಯಲು ರಂಗಮಂದಿರ/ ರಂಗಮಂದಿರಗಳ ಬಗ್ಗೆ ನೀಡಲಾದ ನಿವೇಶನ ಇತ್ಯಾದಿ ದಾಖಲೆಗಳಲ್ಲಿ ಸುಳ್ಳು ಮಾಹಿತಿ ಇದ್ದಲ್ಲಿ, ನಿರ್ಮಾಣದಲ್ಲಿ ಮೋಸ ಕಂಡು ಬಂದಲ್ಲಿ, ಸಂಸ್ಥೆಯು ಕಪ್ಪು ಪಟ್ಟಿಗೆ ಒಳಗಾಗುವುದಲ್ಲದೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡುವುದರ ಜೊತೆಗೆ ನಿಯಮಾನುಸಾರ ನೀಡಲಾದ ಅನುದಾನವನ್ನು ಬಡ್ಡಿ ಸಹಿತವಾಗಿ ವಸೂಲಿಗೆ ಕ್ರಮ ಕೈಗೊಳ್ಳುವುದು.

17. ಅನುದಾನ ಬಿಡುಗಡೆಯಾದ 90 ದಿನಗಳ ಒಳಗಾಗಿ ಕಾಮಗಾರಿ ಪ್ರಾರಂಭವಾಗದಿದ್ದಲ್ಲಿ ಹಾಗೂ ಅನುದಾನ ಬಿಡುಗಡೆಯಾದ ಒಂದು ವರ್ಷದ ಒಳಗೆ ಕಾಮಗಾರಿ ಪೂರ್ಣವಾಗದಿದ್ದಲ್ಲಿ ಮಂಜೂರಾದ ಅನುದಾನವನ್ನು ಹಿಂಪಡೆಯಲಾಗುವುದು.

18. ಸಾಂಸ್ಕೃತಿಕ ಭವನದ ಮಾದರಿ ನಕ್ಷೆಯಂತೆ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಸಂಸ್ಥೆಯು ಬದ್ಧವಾಗಿರಬೇಕು.

(ಮಲ್ಲಿಕಾರ್ಜುನ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

ಸಂಖ್ಯೆ: [illegible] 2012 | ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:11.6.2012.

:: ಸುತ್ತೋಲೆ ::

ವಿಷಯ: ಗಣ್ಯ ವ್ಯಕ್ತಿಗಳ ಪ್ರತಿಮೆಗಳನ್ನು ಪ್ರತಿಷ್ಠಾಪಿಸುವ ಕುರಿತು ಮಾರ್ಗಸೂಚಿಗಳು

ಸಂತರು, ಶರಣರು, ಸ್ವಾತಂತ್ರ್ಯ ಹೋರಾಟಗಾರರು, ಗಣ್ಯ ವ್ಯಕ್ತಿಗಳು ಮುಂತಾದವರು ದೇಶಕ್ಕಾಗಿ ಸಲ್ಲಿಸಿದ ಸೇವೆ, ತ್ಯಾಗ ಮನೋಭಾವಗಳನ್ನು ಸ್ಮರಿಸುವ ಉದ್ದೇಶದಿಂದ ಅಂತಹವರ ಪ್ರತಿಮೆಗಳನ್ನು ಸರ್ಕಾರಿ ಕಛೇರಿಗಳು, ಸಾರ್ವಜನಿಕ ಪ್ರದೇಶಗಳಲ್ಲಿ ಸ್ಥಾಪನೆ ಮಾಡಲಾಗುತ್ತದೆ, ಆದರೆ ಇಂತಹ ಪ್ರತಿಮೆಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದು, ವಿರೂಪಗೊಂಡಿರುವುದು ಇನ್ನಿತರ ಅಹಿತಕರ ಘಟನೆಗಳು ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಪ್ರತಿಮೆಗಳ ಸ್ಥಾಪನೆಗೆ ಸ್ಪಷ್ಟವಾದ ಮಾರ್ಗಸೂಚಿ ಗಳಿಲ್ಲದಿರುವುದನ್ನು ಮನಗಂಡು ಯಾವುದೇ ಸರ್ಕಾರಿ ಜಾಗದಲ್ಲಿ ಗಣ್ಯ ವ್ಯಕ್ತಿಗಳ ಪ್ರತಿಮೆಗಳನ್ನು ಸ್ಥಾಪನೆ ಮಾಡುವುದು ಸೂಕ್ತವಲ್ಲವೆಂದು ಪರಿಗಣಿಸಿ ಗಣ್ಯವ್ಯಕ್ತಿಗಳ ಪ್ರತಿಮೆಗಳ ಸ್ಥಾಪನೆಗೆ ಸಂಬಂಧಿಸಿದಂತೆ ಕೆಳಗಿನ ಮಾರ್ಗಸೂಚಿಗಳನ್ನು ಹೊರಡಿಸಿದೆ.

(1) ಸರ್ಕಾರದ/ಸಾರ್ವಜನಿಕ ಜಾಗದಲ್ಲಿ ಯಾವುದೇ ಸಂತರ/ಶರಣರ, ಜನ ನಾಯಕರ, ಸ್ವಾತಂತ್ರ್ಯ ಹೋರಾಟಗಾರರ ಅಥವಾ ಗಣ್ಯ ವ್ಯಕ್ತಿಗಳ ಪ್ರತಿಮೆಗಳನ್ನು ಸ್ಥಾಪಿಸುವುದನ್ನು ನಿರ್ಬಂಧಿಸಿದೆ.

(2) ಪ್ರತಿಮೆ ಸ್ಥಾಪಿಸುವುದಕ್ಕೆ ಸಂಘ ಸಂಸ್ಥೆಗಳು ಮುಂದೆ ಬಂದಲ್ಲಿ ಪ್ರಾಥಮಿಕವಾಗಿ ಅಂತಹ ಸಂಘ ಸಂಸ್ಥೆಗಳು ತಮಗೆ ಸೇರಿದ್ದ ನಿವೇಶನದಲ್ಲಿ ಪ್ರತಿಮೆಯನ್ನು ನಿರ್ಮಿಸುವ ಹಾಗೂ ಅವುಗಳ ಭದ್ರತೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದ್ದಂತೆ ಮುಚ್ಚಳಿಕೆ ನೀಡತಕ್ಕದ್ದು.

(3) ಮಂಜೂರಾತಿ ಪಡೆದು ಸ್ಥಾಪಿಸಲಾದ ಪ್ರತಿಮೆಗಳ ನಿರ್ವಹಣೆಯನ್ನು ಆಯಾ ಸಂಘ ಸಂಸ್ಥೆಗಳೇ ನಿರ್ವಹಿಸತಕ್ಕದ್ದು.

(4) [illegible] ರೂ 10.00 [illegible]

(ಜೆ.ಪಿ. ರಾಮಚಂದ್ರಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಕಂಗೇರಿ ಹೊರವಲಯ ಮುದ್ರಣಾಲಯ, ಬೆಂಗಳೂರು ಮುಂದಿನ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲು

ಪ್ರತಿ:

1) ಮಹಾಲೇಖಪಾಲರು (ಎ&ಇ) ಕರ್ನಾಟಕ, ಬೆಂಗಳೂರು
2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4) ಪೋಲೀಸ್ ಮಹಾನಿರ್ದೇಶಕರು, ನೃಪತುಂಗ ರಸ್ತೆ, ಬೆಂಗಳೂರು
5) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
6) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
7) ಪೋಲೀಸ್ ಆಯುಕ್ತರು, ಬೆಂಗಳೂರು ನಗರ, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು
8) ಎಲ್ಲಾ ಜಿಲ್ಲಾಧಿಕಾರಿಗಳು
9) ಎಲ್ಲಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು
10) ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
11) ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು
12) ನಿರ್ದೇಶಕರು, ವಾರ್ತಾ ಇಲಾಖೆ, ಬೆಂಗಳೂರು [ಪತ್ರಿಕಾ ಪ್ರಕಟಣೆಗಾಗಿ]
13) ಎಲ್ಲಾ ಮಾನ್ಯ ಸಚಿವರ ಆಪ್ತಕಾರ್ಯದರ್ಶಿಗಳು
14) ಸರ್ಕಾರದ ಕಾರ್ಯದರ್ಶಿಗಳು/ಉಪಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ, ವಿಕಾಸಸೌಧ, ಬೆಂಗಳೂರು
15) ಪತ್ರಿಕಾ ಮೇಜು
16) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:
1. ದಿನಾಂಕ: 28-07-2014 ಕಸಂವಾ 611 ಕಸಧ 2014ರ ಸರ್ಕಾರಿ ಆದೇಶ.
2. ದಿನಾಂಕ: 02-12-2014 ಕಸಂವಾ 938 ಕಸಧ 2014ರ ಸರ್ಕಾರಿ ಆದೇಶ.
3. ದಿನಾಂಕ: 08-12-2014 ಕಸಂವಾ 14 ಕಗೌಧ 2014ರ ಸರ್ಕಾರಿ ಆದೇಶ.
4. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆರವರ ಪತ್ರ ದಿನಾಂಕ:21.05.2015.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1, 2 ಮತ್ತು 3)ರ ಆದೇಶಗಳಲ್ಲಿ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ, ಮಾರ್ಗಸೂಚಿಗಳನ್ನು ಹೊರಡಿಸಿ ಆದೇಶ ರೂಪಿಸಲಾಗಿರುತ್ತದೆ.

2. ಮೇಲೆ ಓದಲಾದ ಕ್ರಮಸಂಖ್ಯೆ (4)ರ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರು ಈಗಾಗಲೇ ಹೊರಡಿಸಿರುವ ಮಾರ್ಗಸೂಚಿಗಳನ್ನು ಪರಿಷ್ಕರಿಸಿ, ಈ ಕೆಳಕಂಡ ವಿವಿಧ ಯೋಜನೆಗಳಿಗೆ ಪರಿಷ್ಕೃತ/ ಹೊಸ ಮಾರ್ಗಸೂಚಿಗಳ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

1. ಸಂಘ-ಸಂಸ್ಥೆಗಳಿಗೆ ಧನಸಹಾಯ.
2. ಸಂಘ-ಸಂಸ್ಥೆಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಾಯೋಜನೆ.
3. ಸಾಂಸ್ಕೃತಿಕ ಭವನ/ ರಂಗಮಂದಿರಗಳ ನಿರ್ಮಾಣಕ್ಕೆ ಅನುದಾನ/ಧನಸಹಾಯ.
4. ವಾರ್ಷಿಕ ಪ್ರಶಸ್ತಿಗಳು (ಸಾಹಿತ್ಯ ಸಂಸ್ಕೃತಿ ವಿಭಾಗ, ಸಂಗೀತ ನೃತ್ಯ ವಿಭಾಗ, ರಂಗಭೂಮಿ ವಿಭಾಗ, ಲಲಿತಕಲಾ ವಿಭಾಗ).
5. ಜಯಂತಿಗಳು.
6. ಜಿಲ್ಲಾ ಉತ್ಸವಗಳು.
7. ಪ್ರಕಟಿತ ಗ್ರಂಥಗಳಿಗೆ ಧನಸಹಾಯ.
8. ಪಿಹೆಚ್‌ಡಿ ಸಂಶೋಧನಾ ಪ್ರಬಂಧಗಳ ಹಸ್ತಪ್ರತಿ ಮುದ್ರಣಕ್ಕೆ ಧನಸಹಾಯ.
9. ಎಂಫಿಲ್ ಪ್ರೌಢ ಪ್ರಬಂಧಗಳ ಹಸ್ತಪ್ರತಿ ಮುದ್ರಣಕ್ಕೆ ಧನಸಹಾಯ.
10. ಕಷ್ಟಪರಿಸ್ಥಿತಿಯಲ್ಲಿರುವ ಸಾಹಿತಿ/ಕಲಾವಿದರಿಗೆ ಮಾಸಾಶನ ಮಂಜೂರಾತಿ.
11. ಕನ್ನಡ ಬಾರದವರಿಗೆ ಕನ್ನಡ ಕಲಿಸುವ ಯೋಜನೆ.
12. ಜನಪದ ಪ್ರದರ್ಶನ ಕಲೆಗಳಲ್ಲಿ ಮಹಿಳೆಯರಿಗೆ ತರಬೇತಿ ಕಾರ್ಯಗಾರ ಹಾಗೂ ತಂಡಗಳ ಸಿದ್ಧತೆ.

2) ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 340 ಕಸಧ 2015, ಬೆಂಗಳೂರು, ದಿನಾಂಕ: 18-09-2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ, ಇಲಾಖೆಯು ಅನುಸರಿಸಬೇಕಾದ ಅನುಬಂಧ 1 ರಿಂದ 12 ರವರೆಗಿನ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮಸಂಖ್ಯೆ 1 ರಿಂದ 3 ರವರೆಗಿನ ಆದೇಶಗಳಲ್ಲಿ ಹೊರಡಿಸಲಾದ ಮಾರ್ಗಸೂಚಿಗಳನ್ನು ನಿರಸನಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಲ್ಲಿಕಾರ್ಜುನ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.

ಗೆ:
1. ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
2. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲಾ ಸಹಾಯಕ ನಿರ್ದೇಶಕರುಗಳಿಗೆ (ನಿರ್ದೇಶಕರ ಮುಖಾಂತರ).
4. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಸಹಾಯಕರು/ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು/ ಅಧೀನ ಕಾರ್ಯದರ್ಶಿಗಳು, ಸಮನ್ವಯ ಶಾಖೆ, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 340 ಕಸಧ 2015, ಬೆಂಗಳೂರು, ದಿನಾಂಕ: 18-09-2015

ಅನುಬಂಧ - 6

ಜಿಲ್ಲಾ ಉತ್ಸವಗಳ ಆಚರಣೆ ಮಾರ್ಗಸೂಚಿ

- ಜಿಲ್ಲಾ ಉತ್ಸವಗಳ ಆಯೋಜನೆ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೆಸರನ್ನು ಆಹ್ವಾನ ಪತ್ರಿಕೆ, ವೇದಿಕೆ ಮತ್ತು ಎಲ್ಲಾ ಪ್ರಚಾರ ಸಾಮಗ್ರಿಗಳಲ್ಲಿ ಪ್ರಧಾನವಾಗಿ ಮತ್ತು ಕಡ್ಡಾಯವಾಗಿ ಬಳಸತಕ್ಕದ್ದು.

- ಉತ್ಸವಗಳಲ್ಲಿ ಆಯಾ ಜಿಲ್ಲೆಯ ಸಾಂಸ್ಕೃತಿಕ ವೈಶಿಷ್ಟ್ಯ ಮತ್ತು ಶ್ರೀಮಂತಿಕೆಯನ್ನು ಪ್ರಧಾನವಾಗಿ ಬಿಂಬಿಸುವಂತೆ ಮತ್ತು ಪ್ರೋತ್ಸಾಹಿಸುವಂತ ಕಾರ್ಯಕ್ರಮಗಳನ್ನು ರೂಪಿಸಬೇಕು.

- ಪ್ರತಿದಿನದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕರ್ನಾಟಕದ ಕಲಾವಿದರಿಗೆ ಪ್ರಾಧಾನ್ಯತ ನೀಡುವುದು ಕಡ್ಡಾಯವಾಗಿರುತ್ತದೆ.

- ಜಿಲ್ಲಾ ಉತ್ಸವಗಳ ಸಾಂಸ್ಕೃತಿಕ ಕಾರ್ಯಕ್ರಮಗಳ ಭಾಗದಲ್ಲಿ ಜಿಲ್ಲೆಯ/ಸ್ಥಳೀಯ ಕಲಾವಿದರನ್ನು ಹೊರತುಪಡಿಸಿ, ಇತರ ಭಾಗಗಳ ಕಲಾವಿದರ ಪುನರಾವರ್ತನೆ ಆಗದಂತೆ ಎಚ್ಚರ ವಹಿಸಲು, ಕಾರ್ಯಕ್ರಮ ಪಟ್ಟಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೆ ಸಲ್ಲಿಸಿ ಅನುಮೋದನೆ ಪಡೆದು ಅಂತಿಮಗೊಳಿಸುವುದು.

- ಜಿಲ್ಲಾ ಉತ್ಸವಗಳ ಕಾರ್ಯಕ್ರಮದಲ್ಲಿ ಜಿಲ್ಲೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯ ಮತ್ತು ವಿಭಿನ್ನತೆಗಳನ್ನು ಪ್ರಧಾನವಾಗಿ ಬಿಂಬಿಸುವ ರೀತಿ ಉತ್ಸವವನ್ನು ಆಯೋಜಿಸುವುದು.

- ಜಿಲ್ಲಾ ಉತ್ಸವಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನೀಡುವ ಎಲ್ಲಾ ಕಲಾವಿದರ ವಿವರಗಳನ್ನು ಆಹ್ವಾನಪತ್ರಿಕೆಯಲ್ಲಿ ಮುದ್ರಿಸಿ ಪ್ರಚಾರ ಕೈಗೊಳ್ಳುವುದು.

- ಜಿಲ್ಲಾ ಉತ್ಸವಗಳಿಗಾಗಿ ಮಂಜೂರಾದ ಹಣವನ್ನು ಅದೇ ಉದ್ದೇಶಕ್ಕೆ ಬಳಸಿಕೊಳ್ಳುವುದು. ಉತ್ಸವ ಆಚರಣೆ ಮಾಡದಿದ್ದ ಸಂದರ್ಭದಲ್ಲಿ ಮಂಜೂರಾದ ಹಣವನ್ನು, ಅಥವಾ ಉಳಿಕೆ ಹಣವನ್ನು ಅದೇ ಆರ್ಥಿಕ ವರ್ಷದಲ್ಲಿ ಸರ್ಕಾರಕ್ಕೆ ಅಧ್ಯರ್ಪಣೆ ಮಾಡಿ ಕೇಂದ್ರ ಕಚೇರಿಗೆ ವರದಿ ನೀಡುವುದು.

- ಉತ್ಸವ ಆಚರಣೆ ಸಂದರ್ಭದಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಲೋಕಸಭಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕ್ರಮಗಳನ್ನು ಆಯೋಜಿಸುವುದು ಶಿಷ್ಟಾಚಾರ ನಿಯಮಗಳನ್ನು ಗಮನದಲ್ಲಿರಿಸಿಕೊಂಡು ಕ್ರಮ ಕೈಗೊಳ್ಳುವುದು.

- ಜಿಲ್ಲಾ ಉತ್ಸವಗಳ ಆಚರಣೆ ಮುಗಿದ ಒಂದು ತಿಂಗಳ ಒಳಗಾಗಿ ನಡೆಸಿದ ಉತ್ಸವದ ವೆಚ್ಚಗಳ ವಿವರ, ಕಾರ್ಯಕ್ರಮದ ವರದಿ, ದಾಖಲೆಗಳನ್ನು ಕೇಂದ್ರ ಕಚೇರಿಗೆ ಸಲ್ಲಿಸುವುದು.

(ಮಲ್ಲಿಕಾರ್ಜುನ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 222 ಕಸಧ 2016, ದಿನಾಂಕ:02-02-2017ಕ್ಕೆ

ಅನುಬಂಧ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಪ್ರದಾನ ಮಾಡುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಕುರಿತಂತೆ ಅನುಸರಿಸಬೇಕಾದ ಮಾರ್ಗಸೂಚಿಗಳು

1. ಕರ್ನಾಟಕ ರಾಜ್ಯ ಅಧಿಕೃತವಾಗಿ ಏಕೀಕರಣಗೊಂಡ ವರ್ಷಗಳ ಸಂಖ್ಯೆಗೆ ಆಧಾರಿತವಾಗಿ ಪ್ರತಿ ವರ್ಷವೂ ಪ್ರಶಸ್ತಿಗಳನ್ನು ನಿಗದಿಗೊಳಿಸುವುದು ಮತ್ತು ಆಯಾ ವರ್ಷ ಏಕೀಕರಣಗೊಂಡ ವರ್ಷಕ್ಕೆ ಸಮನಾಗಿ ಪ್ರತಿ ವರ್ಷಕ್ಕೆ ಒಂದರಂತೆ ಪ್ರಶಸ್ತಿ ಸಂಖ್ಯಾಮಿತಿ ನಿಗದಿಸುವುದು.
2. ಈ ಪ್ರಶಸ್ತಿಯನ್ನು ಹಲವು ಸಂದರ್ಭಗಳಲ್ಲಿ ರಾಜ್ಯ ಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿ ಎಂಬ ಹೆಸರುಗಳಿಂದ ಗುರುತಿಸಲಾಗಿದ್ದು, ಈ ಪ್ರಶಸ್ತಿಯನ್ನು ಇನ್ನು ಮುಂದೆ ರಾಜ್ಯೋತ್ಸವ ಪ್ರಶಸ್ತಿ ಎಂದೇ ಗುರುತಿಸುವುದು ಮತ್ತು ಅದರಂತೆ ಕ್ರಮವಹಿಸುವುದು
3. ಬೇರೆ ಇಲಾಖೆಗಳು ಮತ್ತು ಜಿಲ್ಲಾಡಳಿತಗಳು ನವೆಂಬರ್ ಒಂದರಂದು ನೀಡುತ್ತಿರುವ ಪ್ರಶಸ್ತಿಗಳನ್ನು ಸಹ ರಾಜ್ಯೋತ್ಸವ ಪ್ರಶಸ್ತಿ ಎಂದು ಗುರುತಿಸುತ್ತಿರುವ ಗೊಂದಲವನ್ನುಂಟು ಮಾಡಿದೆ. ಆದ್ದರಿಂದ ಆ ರೀತಿಯ ಪ್ರಶಸ್ತಿಗಳನ್ನು ವಿತರಿಸುವಾಗ ರಾಜ್ಯೋತ್ಸವ ಪ್ರಶಸ್ತಿ ಎಂಬ ಹೆಸರಿನಿಂದ ಗುರುತಿಸತಕ್ಕದ್ದಲ್ಲ.
4. ಈಗಿರುವಂತ ವಿಷಯ ಕ್ಷೇತ್ರಗಳನ್ನು ಗುರುತಿಸುವುದು ಮತ್ತು ಹೊಸದಾಗಿ ವಿಶೇಷ ಉಳ್ಳ ವಿಷಯ ಕ್ಷೇತ್ರಗಳ ಸಾಧಕರನ್ನು ಆರಂಭದಲ್ಲಿ ಸಂಕೀರ್ಣ ಕ್ಷೇತ್ರದಲ್ಲಿ ಗುರುತಿಸುವುದು. ನಂತರದ ದಿನಗಳಲ್ಲಿ ಪ್ರತ್ಯೇಕ ವಿಷಯವಾಗಿ ಗುರುತಿಸಲು ಕ್ರಮ ವಹಿಸುವುದು.
5. ರಾಜ್ಯೋತ್ಸವ ಪ್ರಶಸ್ತಿ ಫಲಕದ ಜೊತೆ ನೀಡುತ್ತಿರುವ ಹಾರ, ಶಾಲು, ಮೈಸೂರು ಪೇಟ, ಹಣ್ಣಿನ ಬುಟ್ಟಿಗಳ ಜೊತೆಗೆ ಚಿನ್ನದ ಪದಕವನ್ನು 25 ಗ್ರಾಂಗಳಿಗೆ ಹೆಚ್ಚಿಸಿ ಪ್ರದಾನ ಮಾಡುವುದು. ಮತ್ತು ಪ್ರಶಸ್ತಿ ಮೊತ್ತವಾಗಿ ಒಂದು ಲಕ್ಷ ರೂಪಾಯಿಗಳನ್ನು ನೀಡುವುದು.
6. ರಾಜ್ಯೋತ್ಸವ ಪ್ರಶಸ್ತಿಯ ಪುರಸ್ಕೃತರನ್ನು ಮರಣೋತ್ತರವಾಗಿ ಆಯ್ಕೆ ಮಾಡುವಂತಿಲ್ಲ.
7. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವಾಗ ನೈತಿಕ ಅಧಃಪತನಕ್ಕೊಳಪಡುವ ಅಪರಾಧ ಹಿನ್ನಲೆ ಇಲ್ಲದಿರುವುದನ್ನು ಖಾತರಿ ಪಡಿಸಿಕೊಳ್ಳುವುದು. ಯಾವುದೇ ಕ್ಷೇತ್ರದ ಸಾಧಕರನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡುವ ಮುನ್ನ ಆ ವ್ಯಕ್ತಿಯ ಹಿನ್ನಲೆ ಗಮನಿಸುವುದು ಮತ್ತು ಸಮಾಜದಲ್ಲಿ ಗಣನೀಯ ಸಾಧನೆ ಸಲ್ಲಿಸಿದವರೆಂದು ಗುರುತಿಸಲ್ಪಟ್ಟ ವ್ಯಕ್ತಿಗಳನ್ನು ಮಾತ್ರ ಶಿಫಾರಸ್ಸು ಮಾಡುವುದು
8. ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯ ಸಂದರ್ಭದಲ್ಲಿ ಯಾವುದೇ ತಪ್ಪು ಮಾಹಿತಿಗಳ ಆಧಾರದಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ್ದಲ್ಲಿ ಅದನ್ನು ಸರ್ಕಾರವು ಹಿಂಪಡೆಯಲು ಅವಕಾಶ ಇರುತ್ತದೆ.
9. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವಾಗ ಸಾಮಾನ್ಯ ಕನಿಷ್ಠ ವಯೋಮಿತಿ 60 ವರ್ಷಗಳನ್ನು ಪೂರೈಸಿರಬೇಕು. ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮನ್ನಣೆ ಗಳಿಸಿದ ಅತಿ ವಿಶೇಷ ಸಾಧಕರ ಪ್ರಕರಣಗಳಲ್ಲಿ ಮಾತ್ರ ವಿನಾಯಿತಿ ನೀಡಲು ಅವಕಾಶವಿರುತ್ತದೆ.
10. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವಾಗ ಸಾಮಾಜಿಕ ನ್ಯಾಯ, ಪ್ರಾದೇಶಿಕ ನ್ಯಾಯ ಮತ್ತು ಲಿಂಗಾಧಾರಿತ ನ್ಯಾಯಗಳನ್ನು ಗಮನದಲ್ಲಿರಿಸಿಕೊಂಡು, ವಿಶೇಷ ಚೇತನ ಸಾಧಕರನ್ನು ಸಹ ಆಯ್ಕೆ ಮಾಡುವುದು. ಹೀಗೆ ಮಾಡುವಾಗ ಜಿಲ್ಲೆಗೆ ಕನಿಷ್ಠ ಒಂದರಂತೆ ಪ್ರಾತಿನಿಧ್ಯ ಒದಗಿಸಲು ಕ್ರಮ ವಹಿಸುವುದು.
11. ಪ್ರತಿ ವಿಷಯ ಕ್ಷೇತ್ರವನ್ನು ಗುರುತಿಸುವಾಗ ಅದರಲ್ಲಿನ ವಿವಿಧ ಶಾಖೆಗಳನ್ನು ಸಹ ಗಮನಿಸುವುದು ಉದಾಹರಣೆಗೆ ವೈದ್ಯಕೀಯ ವಿಭಾಗವನ್ನು ಗುರುತಿಸುವಾಗ, ಆಯುರ್ವೇದ, ಯೋಗ, ಯುನಾನಿ, ಹೋಮಿಯೋಪತಿ, ನಾಟಿವೈದ್ಯ, ಫಿಸಿಯೋಥೆರಪಿ, ಆಪ್ತ ಸಮಾಲೋಚನೆ, ಸಂಶೋಧನೆ ಹೀಗೆ ಸಾಧ್ಯವಾದ ಎಲ್ಲ ಕ್ಷೇತ್ರಗಳನ್ನು ಆದ್ಯತೆಯ ಮೇಲೆ ಪ್ರತಿವರ್ಷವೂ ಗುರುತಿಸಲು ಕ್ರಮ ವಹಿಸುವುದು.

12. ಶಿಕ್ಷಣ, ಆರೋಗ್ಯ ಇನ್ನಿತರ ಕ್ಷೇತ್ರಗಳನ್ನು ಗುರುತಿಸುವಾಗ ಆಯಾ ಕ್ಷೇತ್ರದ ತಜ್ಞರನ್ನು ಮತ್ತು ಸಾಧಕರನ್ನು ಮಾತ್ರ ಪರಿಗಣಿಸಬೇಕು. ಇದು ಎಲ್ಲ ಕ್ಷೇತ್ರಗಳಲ್ಲಿಯೂ ಅನ್ವಯವಾಗುತ್ತದೆ.

13. ಚಾಲ್ತಿಯಲ್ಲಿರುವ ರಾಜ್ಯ ಪ್ರಶಸ್ತಿ ಸಲಹಾ ಸಮಿತಿ ಸದಸ್ಯರು, ಅಕಾಡೆಮಿಯ ಪದಾಧಿಕಾರಿಗಳು ಮತ್ತು ಪ್ರಶಸ್ತಿ ಸಲಹಾ ಸಮಿತಿಯಲ್ಲಿರುವ ತಜ್ಞ ಸದಸ್ಯರು ತಮಗೆ ತಾವೇ ಪ್ರಶಸ್ತಿ ಕೊಟ್ಟುಕೊಳ್ಳುವಂತಿಲ್ಲ ಮತ್ತು ಸ್ವತಃ ಶಿಫಾರಸ್ಸು ಮಾಡಿಕೊಳ್ಳುವಂತಿಲ್ಲ ಅಥವ ಪರಸ್ಪರ ಶಿಫಾರಸ್ಸು ಮಾಡಿಕೊಳ್ಳುವಂತಿಲ್ಲ.

14. ಇತರ ಯಾವುದೇ ಪ್ರಶಸ್ತಿಗಳನ್ನು ಪಡೆದಿರುವುದು ರಾಜ್ಯೋತ್ಸವ ಪ್ರಶಸ್ತಿ ನೀಡಿಕೆಗೆ ತಡೆಯಾಗಬಾರದು.

15. ಪ್ರತಿ ವ್ಯಕ್ತಿಯ ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ ಅವರ ಸಾಧನೆಯನ್ನು ಪರಿಗಣಿಸಿ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಬಹುದು.

16. ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಲಹಾಸಮಿತಿಗೆ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಇತರ ತಜ್ಞ ಸದಸ್ಯರನ್ನು ಸತತವಾಗಿ ಎರಡು ವರ್ಷಗಳ ಅವಧಿಗೆ ಮುಂದುವರೆಸುವಂತಿಲ್ಲ.

17. ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಲಹಾ ಸಮಿತಿಯನ್ನು ರಚಿಸುವುದು. ಹೀಗೆ ರಚಿಸುವಾಗ ಸಾಮಾಜಿಕ ನ್ಯಾಯ, ಪ್ರಾದೇಶಿಕ ನ್ಯಾಯ ಮತ್ತು ಲಿಂಗಾಧಾರಿತ ನ್ಯಾಯವನ್ನು ಸಾಧ್ಯವಾದಷ್ಟು ಅನುಸರಿಸಬೇಕು.

18. ಯಾವುದೇ ಕ್ಷೇತ್ರದ ವ್ಯಕ್ತಿಯನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡುವ ಮುನ್ನ ವ್ಯಕ್ತಿಯ ಹಿನ್ನಲೆ, ಮತ್ತು ವಿಷಯ ಕ್ಷೇತ್ರದಲ್ಲಿ ಗಣನೀಯ ಸಾಧನೆಯನ್ನು ಪರಿಗಣಿಸಿ ಶಿಫಾರಸ್ಸು ಮಾಡುವುದು.

19. ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವ ವಿಧಾನ:-

- ಸಾರ್ವಜನಿಕ ಪ್ರಸ್ತಾವನೆಗಳು, ಸಂಘ-ಸಂಸ್ಥೆಗಳ ಸೂಚನೆಗಳು, ಜಿಲ್ಲಾ ಸಹಾಯಕ ನಿರ್ದೇಶಕರ ಕಚೇರಿ ಮೂಲಕ, ಸರ್ಕಾರದ ವಿವಿಧ ಇಲಾಖೆಗಳ ಮೂಲಕ, ಅಕಾಡೆಮಿ-ಪ್ರಾಧಿಕಾರಗಳ ಮೂಲಕ, ಜನಪ್ರತಿನಿಧಿಗಳ ಮೂಲಕ ಸಲ್ಲಿಸುವ ನಾಮನಿರ್ದೇಶನಗಳು ಮತ್ತು ಸಾಧಕರ ಸ್ವಯಂ ಪ್ರಸ್ತಾವನೆ ಸಲ್ಲಿಕೆಯ ಮೂಲಕ ವೈಯಕ್ತಿಕ ವಿವರಗಳ ಸಲ್ಲಿಕೆಗೆ ಅವಕಾಶವನ್ನು ಒದಗಿಸುವುದು.
- ಹೀಗೆ ಸಲ್ಲಿಕೆಯಾದ ವಿವರಗಳನ್ನು ಸಲಹಾ ಸಮಿತಿಯು ಪರಿಶೀಲಿಸಿ, ತನ್ನ ಗಮನಕ್ಕೆ ಬರುವ ಇತರ ಹೆಸರುಗಳನ್ನು ಅವಶ್ಯವಿದ್ದಲ್ಲಿ ಸೇರ್ಪಡೆಗೊಳಿಸಬಹುದು.
- ಸಂಬಂಧಿತ ವಿಷಯಕ್ಷೇತ್ರ ತಜ್ಞರ ಅಭಿಪ್ರಾಯ ಪಡೆದು ಅಂತಿಮವಾಗಿ 1:2 ಅನುಪಾತದಲ್ಲಿ ಆಯ್ಕೆ ಸಮಿತಿಯ ಪರಾಮರ್ಶೆ ಮತ್ತು ಅಂತಿಮ ಆಯ್ಕೆಗಾಗಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳ ಮೂಲಕ ಪ್ರಶಸ್ತಿ ಆಯ್ಕೆ ಸಮಿತಿಯ ಮುಂದೆ ಮಂಡಿಸುವುದು.
- ಆಯ್ಕೆ ಸಲಹಾ ಸಮಿತಿಯು ಸಲ್ಲಿಸಿದ 1:2 ಅನುಪಾತದ ಪಟ್ಟಿಯಿಂದಲೇ ಅಂತಿಮವಾಗಿ ಪುರಸ್ಕೃತರನ್ನು ಆಯ್ಕೆ ಸಮಿತಿಯು ಅಂತಿಮಗೊಳಿಸಬೇಕು.
- ಆಯ್ಕೆ ಸಮಿತಿಯು ಆಯ್ಕೆ ಪ್ರಕ್ರಿಯೆಗಾಗಿ ನಡೆಸುವ ಸಭೆಯಲ್ಲಿ ಆಯ್ಕೆ ಸಲಹಾ ಸಮಿತಿಯ ಸದಸ್ಯರನ್ನು ಸಹ ಸಭೆಗೆ ಕಡ್ಡಾಯವಾಗಿ ಆಹ್ವಾನಿಸುವುದು.
- ಆಯ್ಕೆ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ರೂಪಿಸಿದೆ.

ಪ್ರಸ್ತಾವನೆಗಳ ಸಲ್ಲಿಕೆಗೆ ಕಾಲಾವಧಿ	: ಸೆಪ್ಟೆಂಬರ್ 01 ರಿಂದ 30ರವರೆಗೆ
ಆಯ್ಕೆ ಸಲಹಾ ಸಮಿತಿ ಪರಿಶೀಲನೆ ಶಿಫಾರಸ್ಸು ಪ್ರಕ್ರಿಯೆಗೆ	: ಅಕ್ಟೋಬರ್ 01 ರಿಂದ 15ರವರೆಗೆ
ಆಯ್ಕೆ ಸಮಿತಿಯ ಆಯ್ಕೆ ಪ್ರಕ್ರಿಯೆಗಳು	: ಅಕ್ಟೋಬರ್ 15 ರಿಂದ 25ರವರೆಗೆ

2|2|17

(ಡಿ.ಎಸ್.ಮಾಲತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.
(ಸಂಸ್ಕೃತಿ ಶಾಖೆ)

ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 340 ಕಸಧ 2015, ಬೆಂಗಳೂರು, ದಿನಾಂಕ: 18-09-2015

ಅನುಬಂಧ - 10

ಕಷ್ಟ ಪರಿಸ್ಥಿತಿಯಲ್ಲಿರುವ ಸಾಹಿತಿ/ಕಲಾವಿದರಿಗೆ ಮಾಸಾಶನ ಮಂಜೂರಾತಿ ನಿಯಮಗಳ ಮಾರ್ಗಸೂಚಿ

1. ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಜನಪದ, ಯಕ್ಷಗಾನ, ಬಯಲಾಟ, ಲಲಿತಕಲೆ, ಶಿಲ್ಪಕಲೆ ಕ್ಷೇತ್ರಗಳಲ್ಲಿ 25 ವರ್ಷಗಳ ಕಾಲ ಗಣನೀಯ ಸೇವೆ ಸಲ್ಲಿಸಿ ಕಷ್ಟ ಪರಿಸ್ಥಿತಿಯಲ್ಲಿರುವ ಕಲಾವಿದರು ಮಾಸಾಶನ ಪಡೆಯಲು ಅರ್ಜಿ ಸಲ್ಲಿಸಬಹುದು. ಸಂಬಂಧಿತ ವಿಷಯ ಕ್ಷೇತ್ರದಲ್ಲಿ 25 ವರ್ಷಗಳ ಗಣನೀಯ ಸೇವೆ ಸಲ್ಲಿಸಿರುವ ಬಗ್ಗೆ ಆಯಾ ಜಿಲ್ಲಾ ಸಹಾಯಕ ನಿರ್ದೇಶಕರ ಮೂಲಕ ಮೂಲ ದಾಖಲೆಗಳನ್ನು ಪರಿಶೀಲನೆಗೊಳಪಡಿಸಿ ಧೃಡೀಕರಣ ಪಡೆಯಬೇಕು.

2. ಕಲಾವಿದರು ಕನಿಷ್ಠ 58 ವಯೋಮಾನದವರಾಗಿರಬೇಕು. ವಯಸ್ಸಿನ ಬಗ್ಗೆ ಶಿಕ್ಷಣ ಸಂಸ್ಥೆ ನೀಡಿದ ಅಥವಾ ನ್ಯಾಯಾಲಯದಿಂದ ಅಫಿಡವಿಟ್ ಪಡೆದು ಸಲ್ಲಿಸಬೇಕು.

3. ಕಲಾವಿದರು ತಹಶೀಲ್ದಾರ್ ಅವರಿಂದ ಪಡೆದ ವಾರ್ಷಿಕ ಆದಾಯ ಪ್ರಮಾಣಪತ್ರವನ್ನು ಸಲ್ಲಿಸಬೇಕು. (ಗ್ರಾಮಾಂತರ ಪ್ರದೇಶಗಳಿಗೆ ರೂ. 40,000/- ಹಾಗೂ ಪಟ್ಟಣ ಪ್ರದೇಶಗಳಿಗೆ ರೂ. 50,000/- ಗರಿಷ್ಠ ಆದಾಯ ಮಿತಿಗೆ ಒಳಪಟ್ಟಂತೆ ಆದಾಯ ಹೊಂದಿರಬೇಕು.

4. ಅಂಗವಿಕಲ ಕಲಾವಿದರಿಗೆ ವಯಸ್ಸು 40 ವರ್ಷಗಳಾಗಿದ್ದರೆ ಅಥವಾ 20 ವರ್ಷಗಳಿಂದ ಸೇವೆ ಸಲ್ಲಿಸಿದ್ದರೆ, ಮಾಸಾಶನ ಮಂಜೂರಾತಿಗೆ ಅರ್ಜಿಯನ್ನು ಪರಿಗಣಿಸಲಾಗುವುದು. ತಮ್ಮ ದೈಹಿಕ ಅಂಗವಿಕಲತೆಯ ಬಗ್ಗೆ ಅಧಿಕೃತ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಬೇಕು. 20 ವರ್ಷಗಳಿಂದ ಸೇವೆ ಸಲ್ಲಿಸಿರುವ ಬಗ್ಗೆ ಸಂಬಂಧಿತ ಕಲಾವಿದರು ಮೂಲ ದಾಖಲೆಗಳನ್ನು ಪರಿಶೀಲಿಸಿ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಧೃಡೀಕರಣ ಪಡೆಯಬೇಕು.

5. ಸಾಹಿತಿ ಕಲಾವಿದರಿಗೆ ಮಾಹೇಯಾನ ಮಾಸಾಶನ ರೂ.1,500/-ಗಳಾಗಿರುತ್ತದೆ.

6. <u>ಈಗಾಗಲೇ ರಾಜ್ಯ ಅಥವಾ ಕೇಂದ್ರ ಸರ್ಕಾರದ ಬೇರೆ ಬೇರೆ ಯೋಜನೆಗಳಡಿಯಲ್ಲಿ ಮಾಸಾಶನ ಪಡೆಯುತ್ತಿದ್ದಲ್ಲಿ ಈ ಯೋಜನೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸುವಂತಿಲ್ಲ.</u>

7. ಮಾಸಾಶನಕ್ಕೆ ಅರ್ಜಿ ಸಲ್ಲಿಸಬಯಸುವ ಸಾಹಿತಿ ಕಲಾವಿದರು ಆಯಾ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಿಂದ ನಿಗದಿತ ಅರ್ಜಿ ನಮೂನೆಯನ್ನು ಪಡೆದು ಭರ್ತಿ ಮಾಡಿ ಆಯಾ ಜಿಲ್ಲಾ ಸಹಾಯಕ ನಿರ್ದೇಶಕರಿಗೇ ಸಲ್ಲಿಸಬೇಕು. ಜಿಲ್ಲಾ ಸಹಾಯಕ ನಿರ್ದೇಶಕರು ಮಾರ್ಗಸೂಚಿಯನುಸಾರ, ಸೇವೆಯ ಬಗ್ಗೆ ಮೂಲ ದಾಖಲೆಗಳನ್ನು ಪರಿಶೀಲಿಸಿ, ಧೃಡೀಕರಿಸಿ, ಕಲಾವಿದರ ವಯಸ್ಸು, ವರಮಾನ, ಕ್ಷೇತ್ರ, ಕಲಾಸೇವೆ ವಿವರಗಳನ್ನು ಪ್ರತ್ಯೇಕವಾಗಿ (ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಲಲಿತಕಲೆ, ಶಿಲ್ಪಕಲೆ, ಜನಪದ, ಯಕ್ಷಗಾನ,) ಪಟ್ಟಿ ಮಾಡಿ ಮೂಲ ಅರ್ಜಿಗಳ ಸಮೇತ ಸಂಬಂಧಿತ ಅಕಾಡೆಮಿಗಳಿಗೆ ಕಳುಹಿಸಬೇಕು.

...2/-

8. ಅರ್ಜಿದಾರರು ಎರಡು ಬಣ್ಣಗಳುಳ್ಳ ದ್ವಿಪ್ರತಿಯ ಮಾಸಾಶನ ಅರ್ಜಿಯನ್ನು ಅವರ ಇತ್ತೀಚಿನ ಭಾವಚಿತ್ರ, ಸರಿಯಾದ ಅಂಚೆ ವಿಳಾಸ ಮತ್ತು ಅಗತ್ಯ ದಾಖಲೆಗಳೊಂದಿಗೆ ಕಲಾಸೇವೆ ಮೂಲ ದಾಖಲೆ ಅಥವಾ (ಗೆಜೆಟೆಡ್)ಪತ್ರಾಂಕಿತ ಅಧಿಕಾರಿಯಿಂದ ಧೃಡೀಕೃತವಾದ ದಾಖಲೆಗಳೊಂದಿಗೆ ಸಹಿ ಮಾಡಿ ಲಗತ್ತಿಸಿರಬೇಕು. ಭಾವಚಿತ್ರಗಳನ್ನು ಅರ್ಜಿಯ ಮೇಲೆ ಲಗತ್ತಿಸಿ ಭಾವಚಿತ್ರಗಳಿಗೆ ಪತ್ರಾಂಕಿತ ಅಧಿಕಾರಿಯಿಂದ ಧೃಡೀಕರಣ ಪಡೆಯಬೇಕು.

9. ಜಿಲ್ಲಾ ಸಹಾಯಕ ನಿರ್ದೇಶಕರು ಸಾಹಿತಿ ಕಲಾವಿದರಿಂದ ಸ್ವೀಕರಿಸಿದ ಮಾಸಾಶನದ ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಭಾಗ-3 (ಶಿಫಾರಸ್ಸು) ಎಂಬ ವಿಭಾಗದಲ್ಲಿ ಕಲಾವಿದರ ಬಗ್ಗೆ ತಮ್ಮ ಖಚಿತ ಅಭಿಪ್ರಾಯ ತಿಳುಳಿಸಿ ಸಹಿ ಮತ್ತು ಮೊದಹರನ್ನು ಕಡ್ಡಾಯವಾಗಿ ನಮೂದಿಸಬೇಕು. ಸಹಿ ಮತ್ತು ಮೊಹರು ಇಲ್ಲದ ದಾಖಲೆಗಳಿಲ್ಲದ ಅಪೂರ್ಣ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಹಾಗೂ ಅಂತಹ ಅರ್ಜಿಗಳನ್ನು ಸಲ್ಲಿಸಿದಲ್ಲಿ ಅದನ್ನು ಕರ್ತವ್ಯ ಲೋಪವೆಂದು ಪರಿಗಣಿಸಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

10. ಕಲಾವಿದರು ಅನಕ್ಷರಸ್ಥರಾಗಿದ್ದು, ಸಹಿಯ ಬದಲು ಹೆಬ್ಬೆಟ್ಟು ಗುರುತು ನಮೂದಿಸಿದಲ್ಲಿ , ಅವರ ಹೆಬ್ಬೆಟ್ಟಿನ ಗುರುತನ್ನು "ಈ ಹೆಬ್ಬೆಟ್ಟಿನ ಗುರುತು ______ ಇವರದ್ದು" ಎಂದು ಪ್ರಮಾಣಿಸಿ ಧೃಡೀಕರಿಸಬೇಕು.

11. ಜಿಲ್ಲಾ ಸಹಾಯಕ ನಿರ್ದೇಶಕರುಗಳಿಗೆ ಸಲ್ಲಿಕೆಯಾದ ದ್ವಿಪ್ರತಿಯ ಮಾಸಾಶನದ ನಿಗದಿತ ಅರ್ಜಿ ನಮೂನೆಯನ್ನು ಸಂಬಂಧಿಸಿದ ಕಲಾವಿದರ ಮೂಲ ದಾಖಲೆಗಳೊಂದಿಗೆ ಕಲಾಸೇವೆಯ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಸಲ್ಲಿಕೆಯಾಗಿರುವ ಅರ್ಜಿಗಳ ನಕಲು ಪ್ರತಿಯನ್ನು ಕಚೇರಿಯಲ್ಲಿ ಸಂರಕ್ಷಿಸಿಟ್ಟು, ಮೂಲ ಅರ್ಜಿಯನ್ನು ದಾಖಲೆಗಳ ಸಮೇತ ತನ್ನ ಶಿಫಾರಸ್ಸಿನೊಂದಿಗೆ ಸಂಬಂಧಿಸಿದ ಅಕಾಡೆಮಿಗೆ ಪ್ರತಿ ತಿಂಗಳ ಮೊದಲ ವಾರದಲ್ಲಿ ಕಳುಹಿಸಿಕೊಡಬೇಕು. ಮತ್ತು ಕಲಾವಿದರಿಗೆ ಈ ಬಗ್ಗೆ ಸೂಕ್ತ ಹಿಂಬರಹ ನೀಡುವುದು.

12. ಅಕಾಡೆಮಿಗಳು ಸ್ವೀಕೃತವಾದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಅವಶ್ಯವಿದ್ದಲ್ಲಿ ಅಕಾಡೆಮಿ ಹಂತದಲ್ಲಿ ಕಲಾವಿದರ ಸಂದರ್ಶನ ನಡೆಸಿ, ಕಲಾಸೇವೆಯ ಬಗ್ಗೆ ಖಚಿತ ಪಡಿಸಿಕೊಂಡು, ಅರ್ಜಿಗಳನ್ನು ಸ್ಥಾಯಿ ಸಮಿತಿಯಲ್ಲಿ ಮಂಡಿಸಿ ತೀರ್ಮಾನ ಪಡೆದು ಸೂಕ್ತ ಶಿಫಾರಸ್ಸಿನೊಂದಿಗೆ ಇಲಾಖೆಗೆ ಕಳುಹಿಸಿಕೊಡಬೇಕು.

13 ಅರ್ಜಿದಾರರು ತನ್ನ ಅರ್ಜಿಯೊಂದಿಗೆ ವಾರ್ಷಿಕ ವರಮಾನ ಪ್ರಮಾಣಪತ್ರ, ವಯಸ್ಸಿನ ದಾಖಲೆ, ಸೇವಾ ಪ್ರಮಾಣ ಪತ್ರಗಳನ್ನು ಪಡೆದ ನಂತರವೂ ಯಾವುದೇ ಸಂದರ್ಭದಲ್ಲಿ ಕಲಾವಿದರ ದಾಖಲೆಗಳ ಬಗ್ಗೆ ಅನುಮಾನ ಬಂದಲ್ಲಿ ಅಂತಹ ಪ್ರಕರಣಗಳ ಬಗ್ಗೆ ತನಿಖೆ ನಡೆಸಿ ಸಮಂಜಸವೆನಿಸಿದಲ್ಲಿ ಮಾಸಾಶನವನ್ನು ರದ್ದು ಪಡಿಸಲಾಗುವುದು. ಹಾಗೂ ಸುಳ್ಳು ಮಾಹಿತಿ ನೀಡಿದ ಆರೋಪದ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.

(ಮಲ್ಲಿಕಾರ್ಜುನ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 340 ಕಸಧ 2015, ಬೆಂಗಳೂರು, ದಿನಾಂಕ: 18-09-2015

ಅನುಬಂಧ - 2

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಂಘ-ಸಂಸ್ಥೆಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಾಯೋಜಿಸಲು ಅನುಸರಿಸಬೇಕಾದ ಮಾರ್ಗಸೂಚಿ

1. ಸಂಘ-ಸಂಸ್ಥೆಗಳು ಪ್ರಾಯೋಜಿತ ಕಾರ್ಯಕ್ರಮಗಳ ಕೋರಿಕೆಗೆ 'ಸಕಾಲ'ದಲ್ಲಿ ನಿಗದಿತ ನಮೂನೆ ಅರ್ಜಿಯನ್ನು ಕನಿಷ್ಠ ಹದಿನೈದು ದಿನಗಳ ಮುಂಚಿತವಾಗಿ ಪೂರ್ಣ ವಿವರ ಹಾಗೂ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಬೇಕು. ಅಪೂರ್ಣ ಮಾಹಿತಿಯ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಈ ರೀತಿ ಸ್ವೀಕರಿಸಿದ ಅರ್ಜಿಗಳ ಅರ್ಹತೆ ಗುರುತಿಸಿ ಕಲಾತಂಡಗಳ ಪ್ರಾಯೋಜನೆಗೆ ಉಪಕ್ರಮಿಸಲಾಗುವುದು.

2. ಪ್ರಾಯೋಜನೆ ಕೋರಿಕೆ ಅರ್ಜಿಯನ್ನು ಸಂಬಂಧಿಸಿದ ಜಿಲ್ಲೆಯ ಸಹಾಯಕ ನಿರ್ದೇಶಕರ ಕಛೇರಿಗೆ ಸಲ್ಲಿಸಬೇಕು.

3. ಪ್ರಾಯೋಜಕತ್ವವನ್ನು ಕೋರುವ ಸಂಸ್ಥೆಗಳು ಕಲಾಪ್ರಕಾರವನ್ನು ಮಾತ್ರ ಕೋರಬಹುದೇ ಹೊರತು ನಿರ್ದಿಷ್ಟ ಕಲಾತಂಡಗಳನ್ನು ಕೋರುವಂತಿಲ್ಲ. ಜಿಲ್ಲೆಯಲ್ಲಿ ಅಥವಾ ಅಕ್ಕಪಕ್ಕದ ಜಿಲ್ಲೆಯಲ್ಲಿ ಇರುವ ಕಲಾತಂಡಗಳನ್ನು ರೋಟೇಷನ್ ಮೇಲೆ ಹಂಚಿಕೆ ಮಾಡಲಾಗುವುದು.

4. ಅರ್ಜಿ ಸಲ್ಲಿಕೆಯಾದ ಮಾತ್ರಕ್ಕೆ ಪ್ರಾಯೋಜಕತ್ವ ಕಡ್ಡಾಯವಲ್ಲ. ಇಲಾಖೆಯಿಂದ ಪ್ರಾಯೋಜಕತ್ವ ನೀಡಿದೆ ಎಂಬ ಲಿಖಿತ ಆದೇಶವಾಗಬೇಕು. ಕಲಾವಿದ/ಕಲಾತಂಡಗಳನ್ನು ಇಲಾಖೆಯೇ ನಿರ್ಧರಿಸಿ ನಿಗದಿ ಮಾಡುತ್ತದೆ. ಈ ರೀತಿ ನಿಗದಿ ಮಾಡಿದ ಕಲಾತಂಡಗಳಿಗೆ ಮಾತ್ರ ಇಲಾಖೆಯಿಂದ ಪ್ರಾಯೋಜನೆಯ ಮೊತ್ತ ನೀಡಲಾಗುವುದು.

5. ಧನಸಹಾಯ ಪಡೆದ/ಪಡೆಯುವ ಸಂಘ-ಸಂಸ್ಥೆಗಳು ಸಂಘಟಿಸುವ ಕಾರ್ಯಕ್ರಮಗಳಿಗೆ ಪ್ರಾಯೋಜನೆ ಮಾಡಲಾಗುವುದಿಲ್ಲ.

6. ರಾಜ್ಯದ ದೂರದ ಜಿಲ್ಲೆಯಲ್ಲಿರುವ ತಂಡ ಬೇಕಾದಲ್ಲಿ ಸಂಸ್ಥೆಯವರ ವೆಚ್ಚದಿಂದಲೇ ಪಡೆದುಕೊಳ್ಳಬಹುದು. ಇಂತಹ ಕಾರ್ಯಕ್ರಮಗಳನ್ನು ಇಲಾಖೆಯಿಂದ ಪ್ರಾಯೋಜನೆ ಮಾಡಲಾಗುವುದಿಲ್ಲ.

7. ಪ್ರಾಯೋಜನೆ ಪಡೆಯುವ ಯಾವುದೇ ಸಂಸ್ಥೆಗೆ ಸಕಾಲ ವ್ಯಾಪ್ತಿಯಲ್ಲಿ ಒಂದು ವರುಷದಲ್ಲಿ ಗರಿಷ್ಠ ಎರಡು ಸಲ ಕಲಾತಂಡ/ಕಾರ್ಯಕ್ರಮಗಳನ್ನು ಪ್ರಾಯೋಜಿಸಲಾಗುವುದು.

8. ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯ ದಿನಾಚರಣೆ, ಕನ್ನಡ ರಾಜ್ಯೋತ್ಸವ ಆಚರಣೆಯಂತಹ ಕಾರ್ಯಕ್ರಮಗಳಿಗೆ ಪ್ರಾಯೋಜಿತ ಕಾರ್ಯಕ್ರಮಗಳನ್ನು ನೀಡಲಾಗುವುದಿಲ್ಲ.

9. ಇಲಾಖೆಯಿಂದ ಲಿಖಿತ ಆದೇಶ ಇಲ್ಲದೆ ನಡೆಸಿರುವ ಯಾವುದೇ ಕಾರ್ಯಕ್ರಮ ಪ್ರಾಯೋಜನೆಗೆ ಅರ್ಹವಾಗುವುದಿಲ್ಲ. ಮುಂಚಿತವಾಗಿ ಇಲಾಖೆಯ ಆದೇಶ ಪಡೆಯದೆ ಕಾರ್ಯಕ್ರಮ ನಡೆಸಿದ ಯಾವುದೇ ಕಾರ್ಯಕ್ರಮಗಳಿಗೆ ಘಟನೋತ್ತರ ಮಂಜೂರಾತಿ ನೀಡಲಾಗುವುದಿಲ್ಲ.

10. ಪ್ರಾಯೋಜನೆ ಕೋರುವವರು ಕಲಾತಂಡಗಳಾಗಿದ್ದು ತಾವೇ ಕಾರ್ಯಕ್ರಮ ನೀಡಲು ಕೋರಿದಲ್ಲಿ ಪ್ರಾಯೋಜನೆಗೆ ಅವಕಾಶವಿರುವುದಿಲ್ಲ. ಕಲಾವಿದ/ಕಲಾತಂಡ ಸಂಘ-ಸಂಸ್ಥೆಗಳು ತಾವೇ ಸ್ವತಃ ನೇರವಾಗಿ ಪ್ರಾಯೋಜನೆ ಕೋರುವಂತಿಲ್ಲ. ಆದರೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಮತ್ತು ಜಾನಪದ ನಾಟಕಗಳ ಅಸಂಘಟಿತ ತಂಡಗಳು ತಾವೇ ಕಾರ್ಯಕ್ರಮಗಳನ್ನು ಏರ್ಪಡಿಸಿ ಪ್ರದರ್ಶನ ಮಾಡಲು ಬಯಸಿದಲ್ಲಿ ಅಂತಹ ತಂಡಗಳ ಮನವಿಗಳನ್ನು ಪ್ರಾಯೋಜನೆಗೆ ಪರಿಗಣಿಸಲಾಗುವುದು.

...2/-

11. ರವೀಂದ್ರ ಕಲಾಕ್ಷೇತ್ರ ಮತ್ತು ನಯನ ಸಭಾಂಗಣ ಹಾಗೂ ಜಿಲ್ಲಾ ರಂಗಮಂದಿರಗಳಲ್ಲಿ ಆಯೋಜಿಸುವ ಯಾವುದೇ ಕಾರ್ಯಕ್ರಮಗಳಿಗೆ ವೇದಿಕೆಯ ಕಾರ್ಯಕ್ರಮಗಳನ್ನು ಮಾತ್ರ ಪ್ರಾಯೋಜನೆಗೆ ಪರಿಗಣಿಸಲಾಗುವುದು.

12. ಮಂಜೂರಾತಿ ಪಡೆದ ಸಂಸ್ಥೆಯು ಅರ್ಜಿಯಲ್ಲಿ ತಿಳಿಸಿರುವ ಕಾರ್ಯಕ್ರಮಗಳನ್ನೆ ನಡೆಸಬೇಕು. ಕಾರ್ಯಕ್ರಮದ ಆಹ್ವಾನಪತ್ರಿಕೆ, ಬ್ಯಾನರ್‌ನಲ್ಲಿ ಇಲಾಖೆಯ ಸಹಕಾರವನ್ನು ಸ್ಮರಿಸಬೇಕು. ಕಾರ್ಯಕ್ರಮ ಮುಗಿದ ಹತ್ತು ದಿನಗಳೊಳಗಾಗಿ ಕಾರ್ಯಕ್ರಮ ನಡೆದ ಬಗ್ಗೆ ವರದಿಯನ್ನು ಸಹಾಯಕ ನಿರ್ದೇಶಕರ ದೃಢೀಕರಣ ಪತ್ರದೊಂದಿಗೆ ಕಾರ್ಯಕ್ರಮದ ವರದಿ, ಛಾಯಾಚಿತ್ರಗಳು, ಆಮಂತ್ರಣ ಪತ್ರಿಕೆ, ಪತ್ರಿಕಾ ತುಣುಕುಗಳು ಮುಂತಾದ ದೃಢೀಕೃತ ದಾಖಲೆಗಳನ್ನು ಒದಗಿಸಬೇಕು.

13. ಪ್ರಾಯೋಜನೆ ಪಡೆದ ಸಂಘ-ಸಂಸ್ಥೆಗಳು ತಮ್ಮ ಸಂಸ್ಥೆಯ ವತಿಯಿಂದ ಕಲಾವಿದರಿಗೆ ಸ್ಥಳೀಯ ಆತಿಥ್ಯದ ವ್ಯವಸ್ಥೆಯನ್ನು ಹಾಗೂ ಗೌರವದಿಂದ ನಡೆಸಿಕೊಳ್ಳುವ ಷರತ್ತಿಗೆ ಒಳಪಟ್ಟಿರಬೇಕು.

14. ಪ್ರಾಯೋಜನೆ ಪಡೆದ ಸಂಸ್ಥೆಯು ಪ್ರಾಯೋಜಿತ ಕಾರ್ಯಕ್ರಮ ನಡೆದ ಗರಿಷ್ಠ ಹದಿನೈದು ದಿನಗಳ ಒಳಗಾಗಿ ನಿಗದಿತ ನಮೂನೆಯಲ್ಲಿ ವರದಿಯನ್ನು ಸಲ್ಲಿಸಲು ಬಾಧ್ಯರಾಗಿರಬೇಕು

15. ಪ್ರಾಯೋಜಿತ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ಉಲ್ಲಂಘಿಸುವ ಸಂಘ-ಸಂಸ್ಥೆಗಳಿಗೆ ಕನಿಷ್ಠ ಎರಡು ವರ್ಷಗಳ ಕಾಲ ಯಾವುದೇ ಪ್ರಾಯೋಜನೆ ನೀಡಲಾಗುವುದಿಲ್ಲ.

16. ಕಲಾತಂಡಗಳು ತಂಡದಲ್ಲಿರುವ (ಆ ದಿನದ ಕಾರ್ಯಕ್ರಮದಲ್ಲಿ ಪ್ರದರ್ಶನ ನೀಡಿದ)ಎಲ್ಲಾ ಕಲಾವಿದರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಮೊಬೈಲ್ ಸಂಖ್ಯೆ, ಹಣಸಂದಾಯ ರಸೀತಿ, ಬ್ಯಾಂಕ್ ಖಾತೆ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸಹಾಯಕ ನಿರ್ದೇಶಕರ ಮೂಲಕ ಸಲ್ಲಿಸಬೇಕು.

17. ಜಾನಪದ ಕಲಾತಂಡಗಳಲ್ಲಿರುವ ಎಲ್ಲಾ ಕಲಾವಿದರಿಗೆ ಆರ್.ಟಿ.ಜಿ.ಎಸ್. ಮೂಲಕ ಬ್ಯಾಂಕ್ ಖಾತೆಗೆ ಕಾರ್ಯಕ್ರಮದ ಸಂಭಾವನೆ ಪಾವತಿಸಲಾಗುವುದು. ತಂಡಗಳಿಗೆ ನಿಗದಿ ಪಡಿಸಿರುವ ಸಂಭಾವನೆಯಲ್ಲಿ ಶೇ.20 ರಷ್ಟು ಸಂಭಾವನೆಯನ್ನು ತಂಡದ ಮುಖ್ಯಸ್ಥರಿಗೆ ಸಂಘಟನಾ ವೆಚ್ಚವೆಂದು ನೀಡಲಾಗುವುದು. ಉಳಿಕೆ ಹಣವನ್ನು ಕಾರ್ಯಕ್ರಮ ನೀಡಿದ ಎಲ್ಲಾ ಕಲಾವಿದರಿಗೆ ಸಮಾನವಾಗಿ ಹಂಚಿಕೆ ಮಾಡಲಾಗುವುದು. ಉಳಿದ ಕಲಾಪ್ರಕಾರಗಳ ತಂಡಗಳ ನಿಗದಿತ ಸಂಭಾವನೆಯನ್ನು ಆಯಾ ತಂಡಗಳ ಮುಖ್ಯಸ್ಥರಿಗೆ ಆರ್.ಟಿ.ಜಿ.ಎಸ್ ಮೂಲಕ ಪಾವತಿಸಲಾಗುವುದು.

18. ಪ್ರಾಯೋಜನೆ ಪಡೆದ ಸಂಸ್ಥೆಯು ಒಂದು ವಾರದಲ್ಲಿ ವರದಿಯನ್ನು ಸಹಾಯಕ ನಿರ್ದೇಶಕರಿಗೆ ಸಲ್ಲಿಸಬೇಕು. ಸಮರ್ಪಕ ಮಾಹಿತಿಯನ್ನು ಪಡೆದು, ಸಹಾಯಕ ನಿರ್ದೇಶಕರು ವರದಿಯನ್ನು ಪರಿಶೀಲಿಸಿ ಹದಿನೈದು ದಿನಗಳ ಒಳಗಾಗಿ ಕಲಾವಿದರಿಗೆ ಸಂಭಾವನೆ ಪಾವತಿಗೆ ಕ್ರಮ ವಹಿಸಬೇಕು.

19. ಸಹಾಯಕ ನಿರ್ದೇಶಕರು ಕಾರ್ಯಕ್ರಮದ ಉದ್ದೇಶಕ್ಕನುಗುಣವಾಗಿ ಎಲ್ಲಾ ಕಲಾಪ್ರಕಾರಗಳ ತಂಡಗಳಿಗೂ ಅವಕಾಶ ದೊರೆಯುವಂತೆ ಪ್ರಾಯೋಜಿಸುವುದು. ಜಿಲ್ಲಾ ಹಂತದಲ್ಲಿ ಪ್ರತಿ ತಿಂಗಳೂ ನಿಗದಿ ಪಡಿಸಿದ ಗರಿಷ್ಠ ಮಿತಿಯನ್ನು ಮೀರದಂತೆ ಸಂಘ-ಸಂಸ್ಥೆಗಳ ಮನವಿಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಿ ಪ್ರಾಯೋಜನೆ ನೀಡಬೇಕು

20. ವಿವಿಧ ಕಲಾಪ್ರಕಾರಗಳ ಸಂಭಾವನೆ ಈ ಕೆಳಕಂಡಂತೆ ನಿಗದಿ ಪಡಿಸಿದೆ.

ಅ) ಏಕವ್ಯಕ್ತಿ ನೃತ್ಯ(ರೆಕಾರ್ಡೆಡ್ ಮ್ಯೂಸಿಕ್)	– 7,000/-
ಆ) ಏಕವ್ಯಕ್ತಿ ನೃತ್ಯ-ಪಕ್ಕ ವಾದ್ಯಗಳೊಂದಿಗೆ	– 10,000/-
ಇ) ಗಮಕ, ಕಥಾ ಕೀರ್ತನ ಇತ್ಯಾದಿ ಕಾರ್ಯಕ್ರಮಗಳಿಗೆ	– 10,000/-
ಈ) ಯುಗಳ ನೃತ್ಯ/ಸಮೂಹ ಮಕ್ಕಳ ನೃತ್ಯ ಕಾರ್ಯಕ್ರಮ (ರೆಕಾರ್ಡೆಡ್)	– 12,000/-
ಉ) ಯುಗಳ ನೃತ್ಯ/ಸಮೂಹ ಮಕ್ಕಳ ನೃತ್ಯ ಕಾರ್ಯಕ್ರಮ (ಪಕ್ಕವಾದ್ಯಗಳೊಂದಿಗೆ)	– 15,000/-
ಊ) ಶಾಸ್ತ್ರೀಯ ಸಂಗೀತ-ಹಿಂದೂಸ್ಥಾನಿ, ಕರ್ನಾಟಕ (ಗಾಯನ/ವಾದ್ಯ ಸಂಗೀತ)	– 15,000/-
ಋ) ಜನಪದ ಗಾಯನ	– 15,000/-
ಎ) ಸುಗಮ ಸಂಗೀತ	– 20,000/-
ಏ) ಜನಪದ ಕಲಾತಂಡ ಪ್ರಕಾರಗಳು(ಕನಿಷ್ಠ 8 ಜನರ ತಂಡ)	– 20,000/-
ಐ) ಬಯಲಾಟ/ಬೊಂಬೆಯಾಟ/ಸಾಮಾಜಿಕ ನಾಟಕ	– 25,000/-
ಒ) ಸಮೂಹ ನೃತ್ಯ /ನೃತ್ಯರೂಪಕ/ಯಕ್ಷಗಾನ/ ಐತಿಹಾಸಿಕ/ಪೌರಾಣಿಕ ನಾಟಕ	– 30,000/-

ಹೊರ ರಾಜ್ಯಗಳಲ್ಲಿ ಪ್ರಾಯೋಜಿಸಿದ ಕಾರ್ಯಕ್ರಮಗಳ ಸಂಭಾವನೆ ಪಾವತಿಸುವಾಗ ಕ್ರಸಂ.20ರಲ್ಲಿ ನಮೂದಿಸಿದ ಒಂದೂವರೆ ಪಟ್ಟು ಸಂಭಾವನೆ ಪಾವತಿಸಲಾಗುವುದು.

21.ಕಲಾವಿದರ ವಾಸಸ್ಥಳದಿಂದ ಕನಿಷ್ಠ 500 ಕಿಲೋಮೀಟರ್ ಮತ್ತು ಹೆಚ್ಚು ದೂರದ ಹೊರ ರಾಜ್ಯಗಳ ಪ್ರದೇಶದಲ್ಲಿ ಪ್ರಾಯೋಜಿಸುವ ತಂಡಗಳಿಗೆ ಮಾತ್ರ 2ನೆ ದರ್ಜೆ ರೈಲು ಪ್ರಯಾಣದರ/ ಸಾಮಾನ್ಯ ಬಸ್ ಪ್ರಯಾಣದರ ನೀಡಲಾಗುವುದು.

22. ಗ್ರಾಮೀಣ ಮಟ್ಟದ ಕಾರ್ಯಕ್ರಮಗಳಿಗೆ ಒಂದು ಕಲಾತಂಡ, ತಾಲ್ಲೂಕು ಮಟ್ಟದ ಕಾರ್ಯಕ್ರಮಗಳಿಗೆ ಗರಿಷ್ಠ ಎರಡು ಕಲಾತಂಡ, ಜಿಲ್ಲಾಮಟ್ಟದ ಕಾರ್ಯಕ್ರಮಗಳಿಗೆ ಗರಿಷ್ಠ ಮೂರು ಕಲಾತಂಡ ಹಾಗೂ ರಾಜ್ಯಮಟ್ಟದ ಕಾರ್ಯಕ್ರಮಗಳಿಗೆ ಗರಿಷ್ಠ ಐದು ಕಲಾತಂಡಗಳನ್ನು ಕಾರ್ಯಕ್ರಮದ ಸ್ವರೂಪ ಮತ್ತು ಮಹತ್ವವನ್ನು ಗಮನಿಸಿ ಸಹಾಯಕ ನಿರ್ದೇಶಕರು ಪ್ರಾಯೋಜಿಸುವುದು.

23. ಸರ್ಕಾರದ ನಿರ್ದೇಶನದಂತೆ ಅಥವಾ ಸರ್ಕಾರದ ವಿವಿಧ ಇಲಾಖೆಗಳು ಏರ್ಪಡಿಸುವ ಕಾರ್ಯಕ್ರಮಗಳಿಗೆ ವಿಶೇಷ ಸಂದರ್ಭದಲ್ಲಿ ಕಲಾವಿದರನ್ನು/ಕಲಾತಂಡಗಳನ್ನು ಪ್ರಾಯೋಜಿಸುವುದು ಹಾಗೂ ಗೌರವ ಸಂಭಾವನೆ ನಿರ್ಧರಿಸುವುದು ನಿರ್ದೇಶಕರ ವಿವೇಚನೆಗೆ ಒಳಪಟ್ಟಿರುತ್ತದೆ.

ಗ್ರಾಮೀಣ ನಾಟಕ ಪ್ರದರ್ಶನಗಳಿಗೆ ಪ್ರೋತ್ಸಾಹ

25. ಗ್ರಾಮೀಣ ಪ್ರದೇಶದ ಅಸಂಘಟಿತ ಕಲಾಸಕ್ತರು ವರ್ಷದಲ್ಲಿ ಒಂದೆರಡು ಬಾರಿ ಒಟ್ಟುಗೂಡಿ ಏರ್ಪಡಿಸುವ ಪೌರಾಣಿಕ/ಐತಿಹಾಸಿಕ/ಸಾಮಾಜಿಕ ನಾಟಕಗಳಿಗೆ ಮಾತ್ರ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಗರಿಷ್ಠ 05 ನಾಟಕಗಳಂತೆ, ಪ್ರತಿ ನಾಟಕಗಳಿಗೆ ರೂ.10,000/-ದಂತೆ ಪ್ರಾಯೋಜಿಸುವುದು.

26. ಈ ಮಾರ್ಗಸೂಚಿಗಳು ಪರಿಶಿಷ್ಟ ವರ್ಗ/ಪರಿಶಿಷ್ಟ ಪಂಗಡಗಳ ಸಂಘ-ಸಂಸ್ಥೆಗಳೂ ಸೇರಿದಂತೆ ಗಡಿನಾಡು ಹಾಗೂ ಹೊರನಾಡು ಸಂಘ-ಸಂಸ್ಥೆಗಳಿಗೂ ಸಹ ಅನ್ವಯವಾಗುತ್ತದೆ.

(ಮಲ್ಲಿಕಾರ್ಜುನ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 251 ಕಸಧ 2021, ದಿನಾಂಕ:24-12-2021

ಅನುಬಂಧ

ವೃತ್ತಿ ರಂಗಭೂಮಿ ನಾಟಕ ಕಂಪನಿಗಳ ಧನಸಹಾಯ ಯೋಜನೆಗೆ ಅನುಸರಿಸಬೇಕಾದ ಮಾರ್ಗಸೂಚಿ

1. ವೃತ್ತಿ ರಂಗಭೂಮಿ ನಾಟಕ ಕಂಪನಿಗಳು ನೋಂದಣಿ ಕಾಯ್ದೆಯಡಿ ನೋಂದಣಿಯಾಗಿರಬೇಕು.
2. ಪ್ರತಿ ವರ್ಷ ನವೀಕರಣ ಮಾಡಲಾದ ಪ್ರಮಾಣ ಪತ್ರವನ್ನು ಸಕಾಲದಲ್ಲಿ ಮಾಡಿರುವ ಬಗ್ಗೆ ಪರಿಶೀಲಿಸುವುದು ಮತ್ತು ಅರ್ಹ ಸಂಸ್ಥೆಗಳನ್ನಷ್ಟೇ ನೆರವು ನೀಡುವ ಕಾಯಕಲ್ಪ ಯೋಜನೆಗೆ ಪರಿಗಣಿಸುವುದು.
3. ವೃತ್ತಿ ರಂಗಭೂಮಿ ಕಂಪನಿಗಳು ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಪರಿಶೀಲಿಸಿ ವರದಿ ಪಡೆಯುವುದು. ಸದರಿ ವರದಿಯನ್ನು ಶಿಫಾರಸ್ಸು ಆಯ್ಕೆ ಸಮಿತಿಯ ಮುಂದೆ ಮಂಡಿಸುವುದು.
4. ಸದರಿ ಆಯ್ಕೆ ಸಮಿತಿಯು ಬಂದಂತಹ ಎಲ್ಲಾ ವರದಿಗಳನ್ನು ಪರಿಶೀಲಿಸಿ ಅರ್ಹ ನಾಟಕ ಕಂಪನಿಗಳಿಗೆ ಸಮಿತಿ ಮುಖಾಂತರ ಅನುದಾನ ನಿಗಧಿಗೊಳಿಸಿ ಸರ್ಕಾರಕ್ಕೆ ಧನಸಹಾಯಕ್ಕೆ ಶಿಫಾರಸ್ಸು ಮಾಡುವುದು.
5. ವೃತ್ತಿ ರಂಗಭೂಮಿ ಕಂಪನಿಗಳು ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ, ಕಂಪನಿಗಳು ಕ್ಯಾಂಪ್ ಮಾಡಿರುವ ಸಂದರ್ಭದಲ್ಲಿ ಪಡೆಯಲಾದ (ಜಿಲ್ಲಾಧಿಕಾರಿಗಳು/ಸಹಾಯಕ ಆಯುಕ್ತರು/ತಹಸೀಲ್ದಾರ್) ಪರವಾನಗಿ ಪತ್ರ ಸಕ್ಷಮ ಪ್ರಾಧಿಕಾರದಿಂದ ಪಡೆಯಲಾದ ವಿದ್ಯುತ್ ಸಂಪರ್ಕದ ಪರವಾನಿಗೆ ಪತ್ರ, ಪಾವತಿಸಿದ ವಿದ್ಯುತ್ ಬಿಲ್ಲು ಹಾಗೂ ಪೊಲೀಸ್ ಲೈಸೆನ್ಸ್(ದ್ವನಿ ವರ್ಧಕ) ಇವರ ಅಗತ್ಯ ದಾಖಲೆಗಳನ್ನು ಲಗತ್ತಿಸಬೇಕು.
6. ನಾಟಕಗಳ ಪ್ರದರ್ಶನ ಮಾಡಿದ ಬಗ್ಗೆ ಆಮಂತ್ರಣ ಪತ್ರಿಕೆ/ಕರಪತ್ರಗಳನ್ನು ಹಾಗೂ ಛಾಯಾ ಚಿತ್ರಗಳ ಮತ್ತು ಪತ್ರಿಕಾ ವರದಿಯನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸಬೇಕು.
7. ಯಾವುದೇ ವೃತ್ತಿ ರಂಗಭೂಮಿ ಕಂಪನಿಗಳು ಕಾಯಕಲ್ಪ ಯೋಜನೆಯ ಅಡಿಯಲ್ಲಿ ಅನುದಾನ ಪಡೆದ ಹಣಕ್ಕೆ ಲೆಕ್ಕ ಪರಿಶೋಧಿತ ಲೆಕ್ಕ ಪಟ್ಟಿಗಳನ್ನು ಮತ್ತು ಅನುದಾನ ಬಳಕೆ ಪ್ರಮಾಣ ಪತ್ರವನ್ನು ಆಯವ್ಯಯ ವರ್ಷ ಮುಗಿದ ಮೂರು ತಿಂಗಳ ಒಳಗಾಗಿ ಸಲ್ಲಿಸಲು ಬದ್ಧವಾಗಿರತಕ್ಕದ್ದು.
8. ವೃತ್ತಿ ರಂಗಭೂಮಿ ಕಾಯಕಲ್ಪ ಯೋಜನೆಯಡಿ ಫಲಾನುಭವಿ ಸಂಸ್ಥೆಗಳು ನಿರಂತರವಾಗಿ ವರ್ಷದಲ್ಲಿ ಕನಿಷ್ಠ 150 ದಿನಗಳಿಗಿಂತ ಹೆಚ್ಚು ನಾಟಕ ಪ್ರದರ್ಶನ ಏರ್ಪಡಿಸಿರಬೇಕು. ಕಾರ್ಯ ನಿರ್ವಹಿಸಿರುವ ಬಗ್ಗೆ ದೃಢಪಡಿಸಿಕೊಳ್ಳುವುದು ಯಾವುದೇ ಸಂಸ್ಥೆ ನಿರಂತರವಾಗಿ ಕಾರ್ಯ ನಿರ್ವಹಿಸದಿದ್ದಲ್ಲಿ ಯೋಜನೆಯಿಂದ ಅಂತಹ ಸಂಸ್ಥೆಗಳನ್ನು ಕೈಬಿಡುವುದು.
9. ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳಿಗೆ ಹೆಚ್ಚು ಆದ್ಯತೆ ನೀಡಿ ಪ್ರದರ್ಶನ ಏರ್ಪಡಿಸಿರಬೇಕು.
10. ಯಾವುದೇ ವೃತ್ತಿ ರಂಗಭೂಮಿ ಕಂಪನಿಯು ಕಾಲಾಂತರದಲ್ಲಿ ನಿಷ್ಕ್ರಿಯವಾಗಿದ್ದು, ಪುನಃ ಕನಿಷ್ಠ ಮೂರು ವರ್ಷದ ಅವಧಿಯಲ್ಲಿ ಸಕ್ರಿಯವಾಗಿದ್ದಲ್ಲಿ ಅದನ್ನು ವೃತ್ತಿ ರಂಗಭೂಮಿ ಕಾಯಕಲ್ಪ ಯೋಜನೆಯಡಿಯಲ್ಲಿ ಪರಿಗಣಿಸಲು ಮೇಲ್ಕಂಡ ಮಾರ್ಗಸೂಚಿಗಳಿಗನುಸಾರವಾಗಿ ಪರಿಗಣಿಸುವುದು.
11. ಯಾವುದೇ ವೃತ್ತಿ ರಂಗಭೂಮಿ ಕಂಪನಿಗಳು ತಮ್ಮ ನಾಟಕ ಪ್ರದರ್ಶನಗಳಲ್ಲಿ ಅಶ್ಲೀಲವಾದ ನೃತ್ಯ, ಸಂಭಾಷಣೆಗಳನ್ನು ನಡೆಸುತ್ತಿರುವುದು ಮತ್ತು ರಂಗಭೂಮಿಯ ಆಶಯಗಳಿಗೆ ವ್ಯತಿರಿಕ್ತವಾಗಿ ವರ್ತಿಸುತ್ತಿರುವುದು ಕಂಡುಬಂದಲ್ಲಿ ಅಂತಹ ಕಂಪನಿಗಳಿಗೆ ಪಾವತಿಸಿದ ಅನುದಾನವನ್ನು ಹಿಂಪಡೆಯಲು ಕ್ರಮವಹಿಸುವುದಕ್ಕೆ ಅನುದಾನವು ಒಳಪಟ್ಟಿರುತ್ತದೆ.
12. ಹೊಸ ನಾಟಕ ಕಂಪನಿಗಳು ಸದರಿ ಯೋಜನೆಗೆ ಅರ್ಜಿ ಸಲ್ಲಿಸಲು ನೋಂದಣಿಯಾಗಿ ಕನಿಷ್ಠ 3 ವರ್ಷಗಳು ಪೂರೈಸಿರಬೇಕು. ಪ್ರತಿ ವರ್ಷ ನವೀಕರಣ ಮಾಡಿಸಿರಬೇಕು. 3 ವರ್ಷ ಸಕ್ರಿಯವಾಗಿ ನಾಟಕ ಪ್ರದರ್ಶನ ನೀಡಿರಬೇಕು. ನಿಯಮಾನುಸಾರ ಪಡೆದ ಪರವಾನಿಗೆ ಪತ್ರವನ್ನು ಲಗತ್ತಿಸಬೇಕು. 3 ವರ್ಷಗಳ ಆಡಿಟ್ ವರದಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು ಹಾಗು ಹೊಸ ಕಂಪನಿಗಳಿಗೆ ಮೇಲ್ಕಂಡ ಎಲ್ಲಾ ಷರತ್ತುಗಳು ಅನ್ವಯವಾಗುತ್ತದೆ.
13. ಕಾಯಕಲ್ಪ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನದಲ್ಲಿ ಕಡ್ಡಾಯವಾಗಿ ಕಲಾವಿದರ ಸಂಭಾವನೆ ಮತ್ತು ಕಂಪನಿಯ ಪುನಶ್ಚೇತನಕ್ಕೆ (ವೇಷಭೂಷಣ, ಸಲಕರಣೆಗಳು, ವಾದ್ಯಪರಿಕರ ಮುಂತಾದವು) ಉಪಯೋಗಿಸತಕ್ಕದ್ದು.

(ಕೆ. [illegible])
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
(ಸಂಸ್ಕೃತಿ ಶಾಖೆ)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕಲಾವಿದರ ದತ್ತಾಂಶ ಸಂಗ್ರಹ ಮಾಡುವ ಕುರಿತು.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ಪತ್ರ ಸಂಖ್ಯೆ: ಡಿಕೆಸಿ/22017/22/2021, ದಿನಾಂಕ:27.09.2021.

****

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕಲಾವಿದರ ದತ್ತಾಂಶ ಸಂಗ್ರಹ ಮಾಡುವ ಕುರಿತು ಸಭೆ ನಡೆಸಲಾಗಿದ್ದು, ಇಲಾಖೆಯಲ್ಲಿ ಈವರೆಗೂ, ಕಲಾವಿದರ ದತ್ತಾಂಶ ಸಂಗ್ರಹವಾಗಿರುವುದಿಲ್ಲ. ಪ್ರತಿಬಾರಿಯೂ ಕಲಾವಿದರ ಮಾಹಿತಿಯನ್ನು ಪಡೆದುಕೊಳ್ಳಲು ಪರಾವಲಂಬನೆ ಮಾಡಬೇಕಾಗಿರುತ್ತದೆ. ದತ್ತಾಂಶ ಸಂಗ್ರಹದ ಈ ಪ್ರಕ್ರಿಯೆಯಿಂದ ನಮ್ಮ ಕಲಾವಿದರ ಸಂಪೂರ್ಣ ಮಾಹಿತಿಯನ್ನು ದತ್ತಾಂಶ ರೂಪದಲ್ಲಿ ಸಂಗ್ರಹ ಮಾಡುವ ಈ ಅಭಿಯಾನ ಒಂದು ಮಹತ್ತರ ಮತ್ತು ಅತ್ಯಂತ ಪ್ರಮುಖವಾದ ಚಟುವಟಿಕೆಯಾಗಿರುತ್ತದೆ.

ಕಲಾವಿದರ ದತ್ತಾಂಶ ಸಂಗ್ರಹಕ್ಕಾಗಿ ಸದ್ಯದ ಪರಿಸ್ಥಿತಿಯಲ್ಲಿ ಒಬ್ಬರು ವ್ಯವಸ್ಥಾಪಕರು ರೂ.30,000/-ಗಳು ಹಾಗೂ ತಲಾ ತಾಂತ್ರಿಕ ಸಿಬ್ಬಂದಿಗಳಿಗೆ ರೂ.25,000/-ರಂತೆ ಒಟ್ಟು 3ಜನ ತಾಂತ್ರಿಕ ಸಿಬ್ಬಂದಿಗಳಿಗೆ ರೂ.75,000/ರಂತೆ 4ಜನರ ತಂಡ ಇದನ್ನು ಸದ್ಯಕ್ಕೆ ಆರು ತಿಂಗಳುಗಳ ಮಟ್ಟಿಗೆ ಈ ಯೋಜನೆಯಲ್ಲಿ ತೊಡಗಿಸಿಕೊಳ್ಳುವ ಉದ್ದೇಶವಿರುತ್ತದೆ. ಇದಕ್ಕಾಗಿ ಅಂದಾಜು ಅಂದರೆ, ತಂಡದ ಸಂಬಳ, ಸಾರಿಗೆ, ಕಛೇರಿ ಖರ್ಚು ಮತ್ತು ತಂತ್ರಾಂಶ ಅಭಿವೃದ್ಧಿಯ ಖರ್ಚುಗಳು ಸೇರಿದಂತೆ ಸುಮಾರು ರೂ.10.00ಲಕ್ಷಗಳು ಖರ್ಚು ತಗಲಬಹುದು. ಈ ವೆಚ್ಚವನ್ನು ಇಲಾಖೆಯ ಕ್ರಿಯಾ ಯೋಜನೆಯ ಲೆಕ್ಕ ಶೀರ್ಷಿಕೆ:2205-00-102-4-31-059ರಲ್ಲಿ ಅವಕಾಶ ಮಾಡಿಕೊಳ್ಳಲಾದ ಕಣಜದ ನಿರ್ವಹಣೆ ವೆಚ್ಚದಲ್ಲಿ ಭರಿಸಬಹುದು ಎಂದು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರು ತಿಳಿಸಿರುತ್ತಾರೆ.

ದತ್ತಾಂಶ ಸಂಗ್ರಹವು ರಾಜ್ಯದಾದ್ಯಂತ ಮತ್ತು ಹೊರರಾಜ್ಯಗಳು ಹಾಗೂ ಹೊರದೇಶಗಳಿಂದಲೂ ಕಲಾವಿದರು ನಮ್ಮನ್ನು ಸಂಪರ್ಕಿಸಿ ಅವರ ಮಾಹಿತಿಯನ್ನು ನೋಂದಣಿ ಮಾಡಿಕೊಳ್ಳುವ ಸಮಗ್ರವಾದ ಯೋಜನೆ ಇದಾಗಿರುವುದರಿಂದ ಇದು ಒಂದು ನಿರಂತರವಾದ ಪ್ರಕ್ರಿಯೆಯಾಗಿದ್ದು, ಈ ಪರಿಷ್ಕಾರದ ಪ್ರಕ್ರಿಯೆ ಮುಗಿದು, ಪಟ್ಟಿ ಅಂತಿಮಗೊಂಡ ನಂತರವಷ್ಟೇ ಕಲಾವಿದರಿಗೆ ಗುರುತಿನ ಚೀಟಿಗಳನ್ನು ಕೊಡಲಾಗುವುದು. ಕಲಾವಿದರ ದತ್ತಾಂಶ ಸಂಗ್ರಹದ ಅರ್ಜಿ ನಮೂನೆ ಮತ್ತು ಮಾರ್ಗಸೂಚಿಯನ್ನು ಸಿದ್ಧಪಡಿಸಲಾಗಿದ್ದು, ಸದರಿ ಮಾರ್ಗಸೂಚಿಯನ್ವಯ ಕಲಾವಿದರ ದತ್ತಾಂಶ ಸಂಗ್ರಹಿಸುವಂತೆ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರದ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

....2/-

209
13/4/22

ಅದರಂತೆ, ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ:

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 04 ಕಗೌಧ 2022 ದಿನಾಂಕ: 30.03.2022

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕಲಾವಿದರ ದತ್ತಾಂಶ ಸಂಗ್ರಹ ಕಾರ್ಯವನ್ನು ಒಬ್ಬರು ವ್ಯವಸ್ಥಾಪಕರು, ಮಾಸಿಕ ಸಂಭಾವನೆ ರೂ.30,000/-ಗಳು ಹಾಗೂ 3 ಜನ ತಾಂತ್ರಿಕ ಸಿಬ್ಬಂದಿಗಳಿಗೆ ಮಾಸಿಕ ಸಂಭಾವನೆ ರೂ.25,000/-ರಂತೆ ಒಟ್ಟು ರೂ.75,000/ರಂತೆ 4ಜನರ ತಂಡವನ್ನು ನೇಮಿಸಿಕೊಂಡು ಸದರಿ ಸಿಬ್ಬಂದಿಗಳ ನೇಮಕಾತಿಯನ್ನು ಮೂರು ತಿಂಗಳ ಅವಧಿಗೆ ರೂ. 3,15,0000/- ರ (ರೂ. ಮೂರು ಲಕ್ಷದ ಹದಿನೈದು ಸಾವಿರಗಳು ಮಾತ್ರ) ಮೊತ್ತಕ್ಕೆ ಮಿತಿಗೊಳಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕ್ರಿಯಾ ಯೋಜನೆಯ ಲೆಕ್ಕ ಶೀರ್ಷಿಕೆ:2205-00-102-4-31-059ರಲ್ಲಿ ಅವಕಾಶ ಮಾಡಿಕೊಳ್ಳಲಾದ ಕಣಜದ ನಿರ್ವಹಣೆ ವೆಚ್ಚದಲ್ಲಿ ಭರಿಸಲು ಈ ಕೆಳಕಂಡ ಷರತ್ತು ಹಾಗೂ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಕೈಗೊಳ್ಳಲು, ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರಿಗೆ ಸರ್ಕಾರದ ಅನುಮತಿ ನೀಡಲಾಗಿದೆ.

ಷರತ್ತುಗಳು:

1. ಕಲಾವಿದರ ದತ್ತಾಂಶ ಸಂಗ್ರಹಕ್ಕೆ ಆಧಾರ ಸಂಖ್ಯೆ ಅವಶ್ಯಕತೆ ಬಗ್ಗೆ ಸೂಕ್ತ ಸಮರ್ಥನೆಯನ್ನು ಸಿ.ಇ.ಜಿ ಸೇವಾ ಸಿಂಧು ಅವರಿಗೆ ನೀಡುವುದು.
2. ಕಲಾವಿದರ ಮಾಹಿತಿ ಪಡೆಯುವ ಅರ್ಜಿ ನಮೂನೆಯನ್ನು ಪರಿಶೀಲಿಸಲಾಯಿತು. ಇದಕ್ಕೆ ಆಪ್ ಮೂಲಕ ಅಭಿವೃದ್ಧಿ ಪಡಿಸುವುದು.
3. ಕಲಾವಿದರ ದತ್ತಾಂಶ ಬಗ್ಗೆ ಸೂಕ್ತ ಪ್ರಚಾರ ನೀಡುವುದು.
4. ಆಧಾರ ಸಂಖ್ಯೆಯನ್ನು ದತ್ತಾಂಶ ಪಡೆದ ನಂತರ ಲಿಂಕ್ ಪಡೆಯಬೇಕು.
5. ರೂ.10.00 ಲಕ್ಷಗಳ ಅನುದಾನಕ್ಕೆ ವಿವರವಾದ ಪಟ್ಟಿ ನೀಡುವುದು. ಕಣಜ ಶಾಖೆಯ ತಂತ್ರಜ್ಞರಿಂದ ಸದರಿ ಕಾರ್ಯ ನಿರ್ವಹಿಸುವುದು.
6. ಸಾಹಿತಿಗಳು/ಕಲಾವಿದರ ದತ್ತಾಂಶ ಸಂಗ್ರಹಕ್ಕಾಗಿ ಪಾಲಿಸಬೇಕಾಗಿರುವ ಮಾರ್ಗಸೂಚಿಗಳು ಕಲಾವಿದರ ನೋಂದಣಿಗಾಗಿ ಸೇವಾ ಸಿಂಧು ಮೂಲಕ ನಿಗದಿತ ಅರ್ಜಿಯನ್ನು ಆನ್‌ಲೈನಿನಲ್ಲೇ ಭರ್ತಿ ಮಾಡುವುದು.
7. ಕಲಾವಿದರು/ಸಾಹಿತಿಗಳು ಅರ್ಜಿ ಸಲ್ಲಿಸಲು ಕನಿಷ್ಠ ವಯೋಮಿತಿ 8 ವರ್ಷಗಳು.
8. ಕಲಾಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾಲ ಸೇವೆ ಸಲ್ಲಿಸಿರಬೇಕು. ಸಾಹಿತಿಗಳು ಕನಿಷ್ಠ ಒಂದು ಪುಸ್ತಕ ಪ್ರಕಟಿಸಿರಬೇಕು. ಚಿತ್ರ/ಶಿಲ್ಪ-ಕಲಾವಿದರು ಕನಿಷ್ಠ 5 ಕಲಾಕೃತಿ ರಚಿಸಿರಬೇಕು.

9. ಅರ್ಜಿದಾರರು ತಾವು ಇರುವ ಸ್ಥಳದಲ್ಲೇ ಮೊಬೈಲ್, ಟ್ಯಾಬ್ ಅಥವಾ ಲ್ಯಾಪ್-ಟಾಪ್ ಮುಖಾಂತರ ನೋಂದಣಿ ಮಾಡಿಕೊಳ್ಳತಕ್ಕದ್ದು. ಗ್ರಾಮೀಣ ಪ್ರದೇಶದವರು ನಾಗರೀಕ ಸೇವಾಕೇಂದ್ರದ ಮೂಲಕ ನೋಂದಣಿ ಮಾಡಿಸಿಕೊಳ್ಳತಕ್ಕದ್ದು.
10. ಅರ್ಜಿ ತುಂಬುವ ಪ್ರಕ್ರಿಯೆಯು ಅತ್ಯಂತ ಸರಳವಾಗಿದ್ದು ಕೆಲವು ಅಂಶಗಳನ್ನು ಹೊರತುಪಡಿಸಿ ಉಳಿದ ಅಂಶಗಳು ಬಹು ಆಯ್ಕೆ ಮೂಲಕ ತುಂಬಬಹುದಾಗಿದೆ. ಅರ್ಜಿಯಲ್ಲಿ ತಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಆಧಾರ ಸಂಖ್ಯೆ, ಬ್ಯಾಂಕ್ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.
11. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಾಶನ ಪಡೆಯುತ್ತಿರುವವರೂ ಸೇರಿದಂತೆ ಎಲ್ಲ ಕಲಾವಿದರು ನೋಂದಣಿ ಮಾಡಿಕೊಳ್ಳಬಹುದಾಗಿದೆ.
12. ಅರ್ಜಿ ತುಂಬುವಾಗ ಕೇಳಲಾದ ದಾಖಲೆಗಳನ್ನು ಕಡಿಮೆ ಮೆಗಾಬೈಟ್ (MB) ಇರುವಂತೆ ನೋಡಿಕೊಳ್ಳಬೇಕಾಗುತ್ತದೆ. ಇದು ಅಪ್ಲೋಡ್ ಮಾಡಲು ಅನುಕೂಲವಾಗುತ್ತದೆ. (200KBಗಳಿಗೆ ಮೀರದಂತೆ)
13. ಪ್ರಮಾಣ ಪತ್ರಗಳು/ದಾಖಲೆಗಳು/ಫೋಟೋಗಳನ್ನು ಅಪ್ಲೋಡ್ ಮಾಡುವಾಗಲೂ ಇದೇ ಕ್ರಮವನ್ನು ಅನುಸರಿಸಬೇಕಾಗುತ್ತದೆ.
14. ಕಲಾವಿದರು ಇತ್ತೀಚೆಗೆ ಪ್ರದರ್ಶಿಸಿದ ಕಾರ್ಯಕ್ರಮದ/ಇದಕ್ಕಾಗಿಯೇ ಚಿತ್ರೀಕರಿಸಿದ ವಿಡಿಯೋ ಲಿಂಕ್ ನಮೂದಿಸಬೇಕಾಗುತ್ತದೆ. (ಯೂಟ್ಯೂಬ್, ಗೂಗಲ್ ಡ್ರೈವ್ ಇತ್ಯಾದಿ.)
15. ಸ್ವೀಕೃತಗೊಂಡ ಅರ್ಜಿ ಪರಿಶೀಲಿಸಿ ಸಮಿತಿಯ ಮುಂದೆ ಬಂದಾಗ ಹೆಚ್ಚಿನ ದಾಖಲೆಗಳು/ ಮಾಹಿತಿಗಳು/ ಪುರಾವೆಗಳ ಅವಶ್ಯಕತೆ ಕಂಡುಬಂದಲ್ಲಿ ಕಲಾವಿದರನ್ನು ಸಂಪರ್ಕಿಸಬೇಕಾಗುತ್ತದೆ. ಹಾಗಾಗಿ ಕಲಾವಿದರು ಆಧಾರ್-ನಲ್ಲಿ ದಾಖಲಾಗಿರುವ ಮೊಬೈಲ್ ಸಂಖ್ಯೆಯನ್ನೇ ನೀಡತಕ್ಕದ್ದು.
16. ಅರ್ಜಿ ಭರ್ತಿ ಮಾಡುವಾಗ ಆಧಾರ್ ನಂಬರ್ ಪರಿಶೀಲನೆಗೆ ಓಟಿಪಿಯು ತಾವು ನೀಡಿರುವ ಮೊಬೈಲ್ ದೂರವಾಣಿಗೇ ಬರುತ್ತದೆ. ಇದನ್ನು ಅಧಿಕೃತ ಮೊಬೈಲ್ ನಂಬರ್ ಎಂದೇ ಪರಿಗಣಿಸಲಾಗುತ್ತದೆ.
17. ಜಿಲ್ಲಾ ಸಹಾಯಕ ನಿರ್ದೇಶಕರು ಜಿಲ್ಲಾ ಹಂತದಲ್ಲಿ ವಿವಿಧ ಅಕಾಡೆಮಿಗಳ ಸಹಕಾರದೊಂದಿಗೆ, ಈ ಬಗ್ಗೆ ಪ್ರಕಟಣೆ ಮೂಲಕ ವ್ಯಾಪಕ ಪ್ರಚಾರ ಮಾಡುವುದು.
18. ಅರ್ಜಿಯನ್ನು ಸಲ್ಲಿಸಲು ಪತ್ರಿಕಾ ಪ್ರಕಟಣೆಯ ದಿನದಿಂದ 30 ದಿನಗಳು - ಸೇವಾಸಿಂಧು ಮೂಲಕ ಬಂದ ಅರ್ಜಿಗಳನ್ನು ಸಂಬಂಧಿತ ಅಕಾಡೆಮಿಗಳು, ಅಧ್ಯಕ್ಷರು/ ರಿಜಿಸ್ಟ್ರಾರ್ ಮತ್ತು ಸದಸ್ಯರನ್ನೊಳಗೊಂಡ ಸಮಿತಿ ಮೂಲಕ 15 ದಿನಗಳಲ್ಲಿ ಪರಿಶೀಲನೆ ಮಾಡಿ, ಅರ್ಹ ಕಲಾವಿದರ ಪಟ್ಟಿಯನ್ನು ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಅನುಸರಿಸುವಂತೆ ಗ್ರೇಡ್-ವಾರು ಪದ್ಧತಿಯನ್ನು ಅನುಸರಿಸಿ ಅಂತಿಮಗೊಳಿಸುವುದು.
19. ವಿಶೇಷ ಸಾಧಕರು/ಹಿರಿಯ ಕಲಾವಿದರು/ಸಾಹಿತಿಗಳು ದತ್ತಾಂಶ ಸಂಗ್ರಹ ಅವಧಿ 1ವರ್ಷ
20. ವಿಶೇಷ ಸಾಧಕರು/ಅಂತಾರಾಷ್ಟ್ರೀಯ ಮನ್ನಣೆ ಪಡೆದಿರುವ ಮಹನೀಯರ ಕುರಿತು ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಯನ್ನು ಈ ಯೋಜನೆಗೆ ಬಳಸಿಕೊಳ್ಳುವುದು.
21. ವಿಶೇಷ ಸಾಧಕರ/ಹಿರಿಯ ಕಲಾವಿದರ, ಸಾಹಿತಿಗಳ ದತ್ತಾಂಶವನ್ನು ಆಯಾ ಅಕಾಡೆಮಿಗಳ ರಿಜಿಸ್ಟ್ರಾರ್‌ಗಳು/ ಸದಸ್ಯರು ಭರ್ತಿ ಮಾಡುವುದು.

....3/-

22. ಸಾಹಿತಿಗಳು/ಕಲಾವಿದರ ದತ್ತಾಂಶವನ್ನು ಕೇಂದ್ರ/ ರಾಜ್ಯ ಸರ್ಕಾರದ ಅಸಂಘಟಿತ ಕಾರ್ಮಿಕರ ವಿಭಾಗ ಮತ್ತು ಇತರ ಯೋಜನೆಗಳಿಗೆ ಹಂಚಿಕೊಳ್ಳಲಾಗುವುದು.
23. ಜಿಲ್ಲೆ/ತಾಲ್ಲೂಕು ಅಕಾಡೆಮಿ ಸದಸ್ಯರುಗಳು ಸಹಾಯಕ ನಿರ್ದೇಶಕರುಗಳ ಜೊತೆಗೂಡಿ ವ್ಯಾಪಕ ಪ್ರಚಾರವನ್ನು ನೀಡುವುದು ಮತ್ತು ನೋಂದಣಿಯ ಪ್ರಕ್ರಿಯೆಯನ್ನು ಯಶಸ್ವಿಗೊಳಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Sunitha S
(ಸುನೀತಾ.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ, (ಪ್ರ)
ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
(ಆಡಳಿತ ಕನ್ನಡ)

ಇವರಿಗೆ:

1. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.
2. ಸಂಬಂಧಪಟ್ಟ ಅಕಾಡೆಮಿ/ಪ್ರಾಧಿಕಾರಗಳ ಅಧ್ಯಕ್ಷರುಗಳು (ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ಇವರ ಮುಖಾಂತರ).
3. ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು/ಸಮನ್ವಯ ಶಾಖೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿನ ಟ್ರಸ್ಟ್/ಪ್ರತಿಷ್ಠಾನಗಳಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಕ ಮಾಡಲು ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಕಲನ ಟ್ರಸ್ಟ್/ಪ್ರತಿಷ್ಠಾನ.

ಪ್ರಸ್ತಾವನೆ:-

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಕಲೆ, ಸಾಹಿತ್ಯ ಮತ್ತು ಸಂಗೀತ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯರ ಹೆಸರಿನಲ್ಲಿ 23 ಟ್ರಸ್ಟ್ / ಪ್ರತಿಷ್ಠಾನಗಳನ್ನು ಸ್ಥಾಪಿಸಲಾಗಿದ್ದು, ಸದರಿ ಟ್ರಸ್ಟ್/ಪ್ರತಿಷ್ಠಾನಗಳ ಧ್ಯೇಯೋದ್ದೇಶಗಳೊಂದಿಗೆ ಕಾರ್ಯಚಟುವಟಿಕೆಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಪ್ರತಿಯೊಂದು ಟ್ರಸ್ಟ್/ಪ್ರತಿಷ್ಠಾನಗಳನ್ನು ನೋಂದಣಿ ಮಾಡುವ ಮುನ್ನ ಸರ್ಕಾರದಿಂದ ಅಧ್ಯಕ್ಷರು/ಸದಸ್ಯರನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗುತ್ತದೆಂದು, ಸರ್ಕಾರದ ಆದೇಶದನ್ವಯ ಸ್ಥಾಪಿಸುವ ಟ್ರಸ್ಟ್/ಪ್ರತಿಷ್ಠಾನಗಳನ್ನು ನಿಯಮಾನುಸಾರ ನೋಂದಣಿ ಮಾಡಿಸುತ್ತಿರುವುದಾಗಿ, ಆದರೆ ನೇಮಿಸಲಾದ ಅಧ್ಯಕ್ಷರು/ಸದಸ್ಯರನ್ನು ಬದಲಾವಣೆ ಮಾಡುವ ಅಥವಾ ಅವರ ಗೌರವ ಸೇವೆಯ ಕಾಲಾವಧಿಯ ಮಿತಿಯು ಇರುವುದಿಲ್ಲ. ಹೀಗಾಗಿ ಟ್ರಸ್ಟ್/ಪ್ರತಿಷ್ಠಾನಗಳಿಗೆ ಸುಮಾರು 10-15 ವರ್ಷಗಳಿಂದ ಒಂದೇ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಇರುವುದರಿಂದ ಸಹಜವಾಗಿಯೇ ಸಾರ್ವಜನಿಕರಿಂದ ಟೀಕೆ ಟಿಪ್ಪಣಿಗಳು ಬರುತ್ತಿದ್ದು, ಇದರಿಂದಾಗಿ ಸರ್ಕಾರಕ್ಕೆ ಮುಜುಗರ ಉಂಟಾಗುತ್ತಿರುವುದರಿಂದ, ಈ ಎಲ್ಲಾ ಅಂಶಗಳನ್ನು ಗಮನಿಸಿ ಟ್ರಸ್ಟ್/ಪ್ರತಿಷ್ಠಾನಗಳಿಗೆ ನೇಮಿಸಲಾದ ಅಧ್ಯಕ್ಷರು/ಸದಸ್ಯರ ಗೌರವ ಸೇವೆಯ ಕಾಲಾವಧಿಯನ್ನು 3 ವರ್ಷ ಅಥವಾ ಮುಂದಿನ ಆದೇಶದವರೆಗೆ ನಿಗದಿಗೊಳಿಸಿ ಮಾರ್ಗಸೂಚಿಗಳನ್ನು ಹೊರಡಿಸಲು ಸರ್ಕಾರದ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಏಕ ಕಡತದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 517 ಕಸಧ 2017, ಬೆಂಗಳೂರು, ದಿನಾಂಕ:12-02-2018.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಸ್ಥಾಪಿತವಾಗಿರುವ ಅನುಬಂಧ-1ರಲ್ಲಿನ 23 ಟ್ರಸ್ಟ್/ಪ್ರತಿಷ್ಠಾನಗಳಿಗೆ ಅಧ್ಯಕ್ಷರು/ಸದಸ್ಯರುಗಳನ್ನು ನೇಮಕ ಮಾಡಲು ಅನುಬಂಧ-2ರಲ್ಲಿನಂತೆ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರಚಿಸಿ ಆದೇಶಿಸಿದೆ.

ಕ. ಸಂಖ್ಯೆ 1012 8
ದಿನಾಂಕ 14/2/18
ಕನ್ನಡ ಭವನ
ಬೆಂಗಳೂರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ.ಎಸ್. ಮಾಲತಿ) 12/2/18
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.
(ಸಂಸ್ಕೃತಿ ಶಾಖೆ)

ಇವರಿಗೆ:-

1. ಮಹಾಲೇಖಪಾಲರು (ಎ&ಇ), (ಜಿ&ಎಸ್ ಎಸ್ ಎ), (ಇ & ಆರ್ ಎಸ್ ಎ) ಕರ್ನಾಟಕ, ಹೊಸಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
3. ಸಂಬಂಧಪಟ್ಟ ಟ್ರಸ್ಟ್ / ಪ್ರತಿಷ್ಠಾನಗಳಿಗೆ (ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಮುಖಾಂತರ).
4. ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಖಜಾನೆ ಅಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

14 FEB 2018

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 517 ಕಸಧ 2017, ಬೆಂಗಳೂರು, ದಿನಾಂಕ:12-02-2018ಕ್ಕೆ

ಅನುಬಂಧ-1

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿನ ಟ್ರಸ್ಟ್/ಪ್ರತಿಷ್ಠಾನಗಳು

ಕ್ರ.ಸಂ.	ಟ್ರಸ್ಟ್ / ಪ್ರತಿಷ್ಠಾನ
1	ಮಲ್ಲಿಕಾರ್ಜುನ ಮನ್ಸೂರು ಟ್ರಸ್ಟ್, ಧಾರವಾಡ
2	ಡಾ. ವಿ.ಕೃ.ಗೋಕಾಕ್ ಪ್ರತಿಷ್ಠಾನ, ಹಾವೇರಿ
3	ಡಾ. ಡಿ.ವಿ.ಜಿ. ಪ್ರತಿಷ್ಠಾನ, ಕೋಲಾರ
4	ಮೈಲಾರ ಮಹದೇವ ಟ್ರಸ್ಟ್, ಹಾವೇರಿ
5	ರನ್ನ ಪ್ರತಿಷ್ಠಾನ ಮುಧೋಳ, ಬಾಗಲಕೋಟೆ
6	ಡಿ.ವಿ. ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ
7	ಅಲಸಂಗಿ ಗೆಳೆಯರ ಟ್ರಸ್ಟ್, ವಿಜಯಪುರ.
8	ಧುತ್ತರಗಿ ಪ್ರತಿಷ್ಠಾನ, ಬಾಗಲಕೋಟೆ
9	ಗಳಗನಾಥರ ಪ್ರತಿಷ್ಠಾನ, ಹಾವೇರಿ
10	ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ
11	ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಶಿವಮೊಗ್ಗ
12	ಡಾ. ಪು.ತಿ.ನ. ಗ್ರಂಥಾಲಯ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು
13	ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ಕೋಲಾರ ಜಿಲ್ಲೆ
14	ಆಲೂರು ವೆಂಕಟರಾವ್ ಟ್ರಸ್ಟ್, ಧಾರವಾಡ
15	ಡಾ. ಬಸವರಾಜ ರಾಜಗುರು ಟ್ರಸ್ಟ್, ಧಾರವಾಡ
16	ನಿಜಲಿಂಗಪ್ಪ ಟ್ರಸ್ಟ್, ಚಿತ್ರದುರ್ಗ
17	ಶ್ರೀ ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್, ಬೆಳಗಾವಿ
18	ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ
19	ಡಾ. ಶಿವರಾಮ ಕಾರಂತ ಟ್ರಸ್ಟ್, ಉಡುಪಿ
20	ಡಾ. ಶಿವರಾಮ ಕಾರಂತ ಟ್ರಸ್ಟ್, ದಕ್ಷಿಣ ಕನ್ನಡ
21	ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪ ಪ್ರತಿಷ್ಠಾನ, ಬೆಂಗಳೂರು
22	ಡಾ. ಗುಬ್ಬಿ ವೀರಣ್ಣ ಟ್ರಸ್ಟ್, ತುಮಕೂರು
23	ಶ್ರೀ ಕೆ.ಎಸ್.ನರಸಿಂಹ ಸ್ವಾಮಿ ಟ್ರಸ್ಟ್, ಮಂಡ್ಯ

24 [illegible]

Malati 12/2/18
(ಪಿ.ಎಸ್. ಮಾಲತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 517 ಕಸಧ 2017, ಬೆಂಗಳೂರು, ದಿನಾಂಕ:12-02-2018ಕ್ಕೆ

ಅನುಬಂಧ-2

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ರಚಿತವಾಗಿರುವ ಟ್ರಸ್ಟ್ / ಪ್ರತಿಷ್ಠಾನಗಳಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಕ ಮಾಡಲು ಮಾರ್ಗಸೂಚಿ

1. ಪ್ರತಿಯೊಂದು ಟ್ರಸ್ಟ್/ಪ್ರತಿಷ್ಠಾನದಲ್ಲಿ ಅಧ್ಯಕ್ಷರನ್ನು ಒಳಗೊಂಡಂತೆ ಕನಿಷ್ಠ ಏಳು ಮಂದಿ ಮತ್ತು ಗರಿಷ್ಠ ಒಂಬತ್ತು ಜನ ಸದಸ್ಯರುಗಳು ಇರತಕ್ಕದ್ದು.
2. ಸದರಿ ನೇಮಕಾತಿ ಸಂದರ್ಭದಲ್ಲಿ ಆಯಾ ಕ್ಷೇತ್ರಗಳಲ್ಲಿ ಅನುಭವ ಮತ್ತು ಪರಿಣತಿ ಇರುವ ಕ್ರಿಯಾಶೀಲರನ್ನು ಮಾತ್ರ ಅಧ್ಯಕ್ಷರನ್ನಾಗಿ ಮತ್ತು ಸದಸ್ಯರನ್ನಾಗಿ ಏಕಕಾಲಕ್ಕೆ ನೇಮಕ ಮಾಡತಕ್ಕದ್ದು.
3. ಟ್ರಸ್ಟ್/ಪ್ರತಿಷ್ಠಾನಗಳಿಗೆ ಸಮಿತಿಯನ್ನು ನೇಮಿಸುವಾಗ (1) ಅಧ್ಯಕ್ಷರು-1, (2) ಸದಸ್ಯ ಕಾರ್ಯದರ್ಶಿ-1, (3) ಸಂಬಂಧಿಕರು-1, (4) ನಿಕಟವರ್ತಿ-1, (5) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ -1, (6) ಮಹಿಳೆ-1, (7) ಸಾಮಾನ್ಯ ವರ್ಗ-1 ಇವರುಗಳನ್ನು ಒಳಗೊಂಡಿರಬೇಕು. ಟ್ರಸ್ಟ್/ಪ್ರತಿಷ್ಠಾನಗಳಿಗೆ ಅಧ್ಯಕ್ಷರು/ಸದಸ್ಯರನ್ನು ನೇಮಕ ಮಾಡುವಾಗ, ಸಂಬಂಧಿಸಿದ ಸಾಹಿತಿ/ ಕಲಾವಿದರ ಒಬ್ಬರು ಸಂಬಂಧಿಗಳು ಮತ್ತು ಅವರ ನಿಕಟವರ್ತಿ ಒಬ್ಬರನ್ನು ಸಮಿತಿಯಲ್ಲಿ ಸೇರಿಸಿಕೊಳ್ಳಬಹುದು.
4. ಟ್ರಸ್ಟ್ / ಪ್ರತಿಷ್ಠಾನಗಳ ಅಧ್ಯಕ್ಷರು / ಸದಸ್ಯರ ಅಧಿಕಾರದ ಅವಧಿಯನ್ನು ಮೂರು ವರ್ಷಗಳು ಅಥವಾ ಮುಂದಿನ ಆದೇಶದವರೆಗೆ ನಿಗದಿಗೊಳಿಸುವುದು. ಯಾವುದು ಮೊದಲೋ ಅದನ್ನು ಪಾಲಿಸತಕ್ಕದ್ದು ಮತ್ತು ನೇಮಿಸತಕ್ಕದ್ದು.
5. ಸರ್ಕಾರದಿಂದ ನೇಮಿಸಲಾದ ಸಮಿತಿಯು ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಟ್ರಸ್ಟ್ / ಪ್ರತಿಷ್ಠಾನಗಳ ಕಾರ್ಯಚಟುವಟಿಕೆಗಳನ್ನು ರೂಪಿಸುವುದು ಹಾಗೂ ಅನುಪಾಲನೆ ಮಾಡುವುದು ಮತ್ತು ಸದಸ್ಯ ಕಾರ್ಯದರ್ಶಿಗಳು ಅವುಗಳನ್ನು ಅನುಷ್ಠಾನ ಮಾಡುವುದು.
6. ಸಮಿತಿ ಸಭೆಗೆ ಹಾಜರಾದ ಸಂದರ್ಭದಲ್ಲಿ ಅಧ್ಯಕ್ಷರು /ಅಧಿಕಾರೇತರ ಸದಸ್ಯರು ಸರ್ಕಾರದ ನಿಯಮಾವಳಿಗಳಂತೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.
7. ಟ್ರಸ್ಟ್/ಪ್ರತಿಷ್ಠಾನ ಆಡಳಿತ ವ್ಯವಹಾರ ಹಾಗೂ ಹಣಕಾಸಿಗೆ ಸಂಬಂಧಿಸಿದಂತೆ ಸದಸ್ಯ ಕಾರ್ಯದರ್ಶಿಗಳೇ ಈ ಕಾರ್ಯವನ್ನು ನಿರ್ವಹಿಸುವುದು.
8. ಟ್ರಸ್ಟ್/ಪ್ರತಿಷ್ಠಾನದ ಮೂಲ ಉದ್ದೇಶಗಳನ್ನು ಸಾಧಿಸಲು ಅನುಗುಣವಾಗಿ ಪ್ರತಿ ವರ್ಷ ಕಾರ್ಯಯೋಜನೆಯನ್ನು ವರ್ಷದ ಪ್ರಾರಂಭದಲ್ಲಿಯೇ ರೂಪಿಸಿಕೊಂಡು, ಅನುಷ್ಠಾನ ಮಾಡುವುದು.
9. ಟ್ರಸ್ಟ್/ಪ್ರತಿಷ್ಠಾನ ಹಣಕಾಸಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ಲೆಕ್ಕಪರಿಶೋಧಕರಿಂದ ವಾರ್ಷಿಕ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.
10. ಟ್ರಸ್ಟ್/ಪ್ರತಿಷ್ಠಾನ ದತ್ತಿ ಮತ್ತು ದಾನಗಳನ್ನು ಸ್ವೀಕರಿಸಬಹುದು. ಆದರೆ ಟ್ರಸ್ಟ್ / ಪ್ರತಿಷ್ಠಾನದ ಉದ್ದೇಶಗಳಿಗೆ ಧಕ್ಕೆ ತರುವಂತಹ ದತ್ತಿ ಅಥವಾ ದಾನಗಳನ್ನು ಸ್ವೀಕರಿಸಬಾರದು.
11. ಟ್ರಸ್ಟ್/ಪ್ರತಿಷ್ಠಾನ ಅಧ್ಯಕ್ಷರ ಹುದ್ದೆಯು ಗೌರವಯುತವಾಗಿದ್ದು, ಮಾಹೆಯಾನ ರೂ.5,000/- ಗೌರವಧನ ಪಡೆಯಲು ಅರ್ಹರಾಗಿರುತ್ತಾರೆ.
12. ಟ್ರಸ್ಟ್/ಪ್ರತಿಷ್ಠಾನಗಳು ರಾಜ್ಯದ ಹೊರಗೆ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಕಾರ್ಯಕ್ರಮದ ಎಲ್ಲಾ ವೆಚ್ಚಗಳು ನಿಯಮಾನುಸಾರ ಸರಳ ಮತ್ತು ಪ್ರಾಸಂಗಿಕವಾಗಿರಬೇಕು.
13. ಎಲ್ಲಾ ಟ್ರಸ್ಟ್/ಪ್ರತಿಷ್ಠಾನಗಳ ಸದಸ್ಯ ಕಾರ್ಯದರ್ಶಿಯು ಸರ್ಕಾರದ ಅಧಿಕಾರಿಯಾಗಿರಬೇಕು.
14. ಎಲ್ಲಾ ಟ್ರಸ್ಟ್/ಪ್ರತಿಷ್ಠಾನಗಳು ಒಂದು ಗೌರವ ವಾರ್ಷಿಕ ಪ್ರಶಸ್ತಿಯನ್ನು ನೀಡಬಹುದು, ಪ್ರಶಸ್ತಿ ಮೊತ್ತ ನಗದು ರೂ.10,000/-ಗಳನ್ನು ಹಾಗೂ ಇತರೆ ಗೌರವಗಳನ್ನು ಒಳಗೊಂಡಿರಬೇಕು.
15. ಟ್ರಸ್ಟ್/ಪ್ರತಿಷ್ಠಾನಗಳು ನಿಯಮಾನುಸಾರ ಪ್ರಕಟಣೆಗಳನ್ನು ಹೊರತರುವುದು ಹಾಗೂ ಸಂಶೋಧನೆಗಳನ್ನು ಕೈಗೊಳ್ಳಬಹುದು.

12/2/18
(ಪಿ.ಎಸ್. ಮಾಲತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.
(ಸಂಸ್ಕೃತಿ ಶಾಖೆ)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾಯಕಲ್ಪ ಯೋಜನೆಯಡಿ ವೃತ್ತಿನಾಟಕ ಕಂಪನಿಗಳಿಗೆ ಧನಸಹಾಯ ಯೋಜನೆಗೆ ಆಯ್ಕೆ ಸಮಿತಿಯನ್ನು ರಚಿಸಿ, ಮಾರ್ಗಸೂಚಿ ಹೊರಡಿಸುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ಪತ್ರ ಸಂಖ್ಯೆ: ಡಿಕೆಸಿ: 47/10/2020, ದಿನಾಂಕ:07-09-2021

* * * *

ಪ್ರಸ್ತಾವನೆ:-

ಮೇಲೆ ಓದಲಾದ ಪತ್ರದಲ್ಲಿ ಕಾಯಕಲ್ಪ ಯೋಜನೆಯಡಿ ವೃತ್ತಿ ರಂಗಭೂಮಿ ನಾಟಕ ಕಂಪನಿಗಳ ಧನಸಹಾಯ ಯೋಜನೆಗೆ ಅನುಸರಿಸಬೇಕಾದ ಮಾರ್ಗಸೂಚಿ ರೂಪಿಸಲು ವೃತ್ತಿ ನಾಟಕ ಕಂಪನಿ ಮಾಲೀಕರೊಂದಿಗೆ ದಿನಾಂಕ:15-07-2021ರಂದು ಸಭೆ ನಡೆಸಿ, ಮಾರ್ಗಸೂಚಿಯನ್ನು ಹಾಗೂ ಧನ ಸಹಾಯಕ್ಕಾಗಿ ಶಿಫಾರಸ್ಸು ಮಾಡಲು ಆಯ್ಕೆ ಸಮಿತಿಯನ್ನು ರಚಿಸಿ, ಸರ್ಕಾರದ ಆದೇಶ ಹೊರಡಿಸುವಂತೆ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 251 ಕಸಧ 2021, ಬೆಂಗಳೂರು,ದಿನಾಂಕ:24-12-2021.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕಾಯಕಲ್ಪ ಯೋಜನೆಯಡಿ ವೃತ್ತಿ ನಾಟಕ ಕಂಪನಿಗಳಿಗೆ ಧನಸಹಾಯಕ್ಕಾಗಿ ಈ ಆದೇಶದ ಅನುಬಂಧದಲ್ಲಿನ ಮಾರ್ಗಸೂಚಿಯೊಂದಿಗೆ ಈ ಕೆಳಕಂಡ ಆಯ್ಕೆ ಸಮಿತಿಯನ್ನು ರಚಿಸಿ ಆದೇಶಿಸಿದೆ.

ಕ್ರ.ಸಂ	ಹೆಸರು	ಪದನಾಮ
01	ಡಾ: ಬಿ.ವಿ. ರಾಜಾರಾಮ್	ಅಧ್ಯಕ್ಷರು
02	ಶ್ರೀ ಜಿ.ಆರ್. ಶ್ರೀವತ್ಸವ	ಸದಸ್ಯರು
03	ಶ್ರೀ ಪ್ರಭುದೇವ ಕಪ್ಪಗಲ್ಲು	ಸದಸ್ಯರು
04	ಶ್ರೀ ರಮೇಶ್‌ಗೌಡ ಪಾಟೀಲ್	ಸದಸ್ಯರು
05	ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ	ಸದಸ್ಯ ಕಾರ್ಯದರ್ಶಿಗಳು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

([illegible])
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
(ಸಂಸ್ಕೃತಿ ಶಾಖೆ)

ಗೆ:

1. ಮಹಾಲೇಖಪಾಲರು (ಎ&ಇ), (ಜಿ&ಎಸ್ ಎಸ್ ಎ), (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
3. ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ , ಇಲಾಖೆ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿಯವರ, ಆಪ್ತ ಶಾಖೆ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ಬೆಂಗಳೂರು
6. ಸಂಬಂಧಪಟ್ಟವರಿಗೆ (ನಿರ್ದೇಶಕರ ಮುಖಾಂತರ)
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 251 ಕಸಧ 2021, ದಿನಾಂಕ:24-12-2021

ಅನುಬಂಧ

ವೃತ್ತಿ ರಂಗಭೂಮಿ ನಾಟಕ ಕಂಪನಿಗಳ ಧನಸಹಾಯ ಯೋಜನೆಗೆ ಅನುಸರಿಸಬೇಕಾದ ಮಾರ್ಗಸೂಚಿ

1. ವೃತ್ತಿ ರಂಗಭೂಮಿ ನಾಟಕ ಕಂಪನಿಗಳು ನೋಂದಣಿ ಕಾಯ್ದೆಯಡಿ ನೋಂದಣಿಯಾಗಿರಬೇಕು.
2. ಪ್ರತಿ ವರ್ಷ ನವೀಕರಣ ಮಾಡಲಾದ ಪ್ರಮಾಣ ಪತ್ರವನ್ನು ಸಹಾಯಕರಿಂದ ಪಡೆದಿರುವ ಬಗ್ಗೆ ಪರಿಶೀಲಿಸುವುದು ಮತ್ತು ಅರ್ಹ ಸಂಸ್ಥೆಗಳನ್ನಷ್ಟೇ ನೆರವು ನೀಡುವ ಕಾರ್ಯಕ್ಕೆ ಯೋಜನೆಗೆ ಪರಿಗಣಿಸುವುದು.
3. ವೃತ್ತಿ ರಂಗಭೂಮಿ ಕಂಪನಿಗಳು ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಪರಿಶೀಲಿಸಿ ವರದಿ ಪಡೆಯುವುದು. ಸದರಿ ವರದಿಯನ್ನು ಶಿಫಾರಸ್ಸು ಆಯ್ಕೆ ಸಮಿತಿಯ ಮುಂದೆ ಮಂಡಿಸುವುದು.
4. ಸದರಿ ಆಯ್ಕೆ ಸಮಿತಿಯು ಬಂದಂತಹ ಎಲ್ಲಾ ವರದಿಗಳನ್ನು ಪರಿಶೀಲಿಸಿ ಅರ್ಹ ನಾಟಕ ಕಂಪನಿಗಳಿಗೆ ಸಮಿತಿ ಮುಖಾಂತರ ಅನುದಾನ ನಿಗಧಿಗೊಳಿಸಿ ಸರ್ಕಾರಕ್ಕೆ ಧನಸಹಾಯಕ್ಕೆ ಶಿಫಾರಸು ಮಾಡುವುದು.
5. ವೃತ್ತಿ ರಂಗಭೂಮಿ ಕಂಪನಿಗಳು ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ, ಕಂಪನಿಗಳು ಕ್ಯಾಂಪ್ ಮಾಡಿರುವ ಸಂದರ್ಭದಲ್ಲಿ ಪಡೆಯಲಾದ (ಜಿಲ್ಲಾಧಿಕಾರಿಗಳು/ಸಹಾಯಕ ಆಯುಕ್ತರು/ತಹಸೀಲ್ದಾರ್) ಪರವಾನಗಿ ಪತ್ರ, ಸ್ಥಳೀಯ ಪ್ರಾಧಿಕಾರದಿಂದ ಪಡೆಯಲಾದ ವಿದ್ಯುತ್ ಸಂಪರ್ಕದ ಪರವಾನಿಗೆ ಪತ್ರ, ಪಾವತಿಸಿದ ವಿದ್ಯುತ್ ಬಿಲ್ಲು ಹಾಗೂ ಪೊಲೀಸ್ ಲೈಸೆನ್ಸ್(ಧ್ವನಿ ವರ್ಧಕ) ಇತರೆ ಅಗತ್ಯ ದಾಖಲೆಗಳನ್ನು ಲಗತ್ತಿಸಬೇಕು.
6. ನಾಟಕಗಳ ಪ್ರದರ್ಶನ ಮಾಡಿದ ಬಗ್ಗೆ ಆಮಂತ್ರಣ ಪತ್ರಿಕೆ/ಕರಪತ್ರಗಳನ್ನು ಹಾಗೂ ಛಾಯಾ ಚಿತ್ರಗಳ ಮತ್ತು ಪತ್ರಿಕಾ ವರದಿಯನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸಬೇಕು.
7. ಯಾವುದೇ ವೃತ್ತಿ ರಂಗಭೂಮಿ ಕಂಪನಿಗಳು ಕಾಯಕಲ್ಪ ಯೋಜನೆಯ ಅಡಿಯಲ್ಲಿ ಅನುದಾನ ಪಡೆದ ಹಣಕ್ಕೆ ಲೆಕ್ಕ ಪರಿಶೋಧಿತ ಲೆಕ್ಕ ಪಟ್ಟಿಗಳನ್ನು ಮತ್ತು ಅನುದಾನ ಬಳಕೆ ಪ್ರಮಾಣ ಪತ್ರವನ್ನು ಆಯವ್ಯಯ ವರ್ಷ ಮುಗಿದ ಮೂರು ತಿಂಗಳ ಒಳಗಾಗಿ ಸಲ್ಲಿಸಲು ಬದ್ಧವಾಗಿರತಕ್ಕದ್ದು.
8. ವೃತ್ತಿ ರಂಗಭೂಮಿ ಕಾಯಕಲ್ಪ ಯೋಜನೆಯಡಿ ಫಲಾನುಭವಿ ಸಂಸ್ಥೆಗಳು ನಿರಂತರವಾಗಿ (ವರ್ಷದಲ್ಲಿ ಕನಿಷ್ಠ 150 ದಿನಗಳಿಗಿಂತ ಹೆಚ್ಚು ನಾಟಕ ಪ್ರದರ್ಶನ ಏರ್ಪಡಿಸಿರಬೇಕು) ಕಾರ್ಯ ನಿರ್ವಹಿಸಿರುವ ಬಗ್ಗೆ ದೃಢಪಡಿಸಿಕೊಳ್ಳುವುದು. ಯಾವುದೇ ಸಂಸ್ಥೆ ನಿರಂತರವಾಗಿ ಕಾರ್ಯನಿರ್ವಹಿಸದಿದ್ದಲ್ಲಿ ಯೋಜನೆಯಿಂದ ಅಂತಹ ಸಂಸ್ಥೆಗಳನ್ನು ಕೈಬಿಡುವುದು.
9. ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳಿಗೆ ಹೆಚ್ಚು ಆದ್ಯತೆ ನೀಡಿ ಪ್ರದರ್ಶನ ಏರ್ಪಡಿಸಬೇಕು.
10. ಯಾವುದೇ ವೃತ್ತಿ ರಂಗಭೂಮಿ ಕಂಪನಿಯು ಕಾಲಾಂತರದಲ್ಲಿ ನಿಷ್ಕ್ರಿಯವಾದಲ್ಲಿ, ಪುನಃ ಒಂದು ವರ್ಷದ ಅವಧಿಯಲ್ಲಿ ಸಕ್ರಿಯವಾಗಿದ್ದಲ್ಲಿ ಅದನ್ನು ವೃತ್ತಿ ರಂಗಭೂಮಿ ಕಾಯಕಲ್ಪ ಯೋಜನೆಯಡಿಯಲ್ಲಿ ಪರಿಗಣಿಸಲು ಮೇಲ್ಕಂಡ ಮಾರ್ಗಸೂಚಿಗಳಿಗನುಸಾರವಾಗಿ ಪರಿಗಣಿಸುವುದು.
11. ಯಾವುದೇ ವೃತ್ತಿ ರಂಗಭೂಮಿ ಕಂಪನಿಗಳು ತಮ್ಮ ನಾಟಕ ಪ್ರದರ್ಶನಗಳಲ್ಲಿ ಕೀಳು ಅಭಿರುಚಿಯ ದ್ವಂದ್ವ ಸಂಭಾಷಣೆಗಳನ್ನು ನಡೆಸುತ್ತಿರುವುದು ಮತ್ತು ರಂಗಭೂಮಿಯ ಆಶಯಗಳಿಗೆ ವ್ಯತಿರಿಕ್ತವಾಗಿ ವರ್ತಿಸುತ್ತಿರುವುದು ಕಂಡುಬಂದಲ್ಲಿ ಅಂತಹ ಕಂಪನಿಗಳಿಗೆ ಪಾವತಿಸಿದ ಅನುದಾನವನ್ನು ಹಿಂಪಡೆಯಲು ಕ್ರಮವಹಿಸುವುದಕ್ಕೆ ಅನುದಾನವು ಒಳಪಟ್ಟಿರುತ್ತದೆ.
12. ಹೊಸ ನಾಟಕ ಕಂಪನಿಗಳು ಸದರಿ ಯೋಜನೆಗೆ ಅರ್ಜಿ ಸಲ್ಲಿಸಲು ನೋಂದಣಿಯಾಗಿ ಕನಿಷ್ಠ 5 ವರ್ಷಗಳು ಪೂರೈಸಿರಬೇಕು. ಪ್ರತಿ ವರ್ಷ ನವೀಕರಣ ಮಾಡಿಸಿರಬೇಕು. 5 ವರ್ಷ ಸಕ್ರಿಯವಾಗಿ ನಾಟಕ ಪ್ರದರ್ಶನ ನೀಡಿರಬೇಕು. ನಿಯಮಾನುಸಾರ ಪಡೆದ ಪರವಾನಿಗೆ ಪತ್ರವನ್ನು ಲಗತ್ತಿಸಬೇಕು. 5 ವರ್ಷಗಳ ಆಡಿಟ್ ವರದಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು ಹಾಗು ಹೊಸ ಕಂಪನಿಗಳಿಗೆ ಮೇಲ್ಕಂಡ ಎಲ್ಲಾ ಷರತ್ತುಗಳು ಅನ್ವಯವಾಗುತ್ತದೆ.
13. ಕಾಯಕಲ್ಪ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನದಲ್ಲಿ ಕಡ್ಡಾಯವಾಗಿ ಕಲಾವಿದರ ಸಂಭಾವನೆ ಮತ್ತು ಕಂಪನಿಯ ಪುನಶ್ಚೇತನಕ್ಕೆ (ವೇಷಭೂಷಣ, ಸಲಕರಣೆಗಳು, ವಾದ್ಯಪರಿಕರ ಮುಂತಾದವು) ಉಪಯೋಗಿಸತಕ್ಕದ್ದು.

(ಕ. [illegible] (ಶ್ರೀಮತಿ))
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
(ಸಂಸ್ಕೃತಿ ಶಾಖೆ)

ಕರ್ನಾಟಕ ಸರ್ಕಾರ

ಸಂಖ್ಯೆ: ಕಸಂಪಾ 358 ಕಸಧ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 01.09.2022.

ತಿದ್ದುಪಡಿ

2020-21 ಮತ್ತು 2021-22ನೇ ಸಾಲಿಗೆ ಇಲಾಖಾ ವತಿಯಿಂದ ಪ್ರದಾನ ಮಾಡುವ ವಿವಿಧ ಪ್ರಶಸ್ತಿಗಳಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ನಿಯಮಗಳ ಕುರಿತು ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 342 ಕಸಧ 2020, ದಿನಾಂಕ: 05.10.2021ರ ಮಾರ್ಗಸೂಚಿಗಳಲ್ಲಿ ಕಾಣಿಸಿರುವ "ಆಯ್ಕೆ ಉಪ ಸಮಿತಿ" ಎಂಬುದರ ಬದಲಾಗಿ "ಆಯ್ಕೆ ಸಮಿತಿ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 342 ಕಸಧ 2020, ದಿನಾಂಕ: 05.10.2021ರಲ್ಲಿರುವ ಉಳಿದ ಮಾರ್ಗಸೂಚಿಗಳನ್ನು 2022-23ನೇ ಸಾಲಿಗೆ ಯಥಾವತ್ತಾಗಿ ಅಳವಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ.ಆರ್. ರಮೇಶ್ 01/09/2022
(ಕೆ.ಆರ್. ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸಂಸ್ಕೃತಿ)

ಇವರಿಗೆ:

1. ಮಹಾಲೇಖಾಪಾಲರು (ಎ&ಇ), (ಜಿ&ಎಸ್.ಎಸ್.ಎ), (ಇ&ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
4. ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಶಾಖೆ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಪ್ರಶಸ್ತಿಗಳಿಗೆ ಮಾರ್ಗಸೂಚಿಗಳು/ನಿಯಾಮಾವಳಿಗಳನ್ನು ರಚಿಸುವ ಕುರಿತು.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: 340 ಕಸಧ 2015 ದಿನಾಂಕ:18 09-2015
2) ಸರ್ಕಾರದ ಆದೇಶ ಸಂಖ್ಯೆ: 163 ಕಸಧ 2021 ದಿನಾಂಕ : 23-09-2021.
3) ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಕಸಂವಾ 163 ಕಸಧ 2021 ದಿನಾಂಕ: 28-0902021
4) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಇವರ ಪತ್ರದ ಸಂಖ್ಯೆ: ಡಿಕೆಸಿ: 11012/5//2020, ದಿನಾಂಕ:06-03-2021.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಆದೇಶದಲ್ಲಿ ಇಲಾಖೆಯಿಂದ ಕೊಡಲಾಗುತ್ತಿರುವ ವಾರ್ಷಿಕ ವಿವಿಧ ಪ್ರಶಸ್ತಿಗಳಿಗೆ ಅನುಸರಿಸಬೇಕಾದ ಸಾಮಾನ್ಯ ನಿಯಮಾವಳಿಗಳನ್ನು ರಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ 2020-21ನೇ ಸಾಲಿನ ವಿವಿಧ ಪ್ರಶಸ್ತಿಗಳಾದ 1) ರಾಷ್ಟ್ರೀಯ ಪ್ರಶಸ್ತಿ ವಿಭಾಗ, 2) ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಶಸ್ತಿ ವಿಭಾಗ, 3) ಸಾಹಿತ್ಯ ಹಾಗೂ ನಾಟಕ ಪ್ರಶಸ್ತಿ ವಿಭಾಗ, 4) ಕಲಾ ಪ್ರಶಸ್ತಿ ವಿಭಾಗ, 5) ಸಂಗೀತ-ನೃತ್ಯ ವಿಭಾಗ, ಅಧ್ಯಕ್ಷರು ಹಾಗೂ ಸದಸ್ಯರನ್ನೊಳಗೊಂಡ ಆಯ್ಕೆ ಉಪ ಸಮಿತಿಯನ್ನು ರಚಿಸಿ ಆದೇಶಿಸಿದೆ.

ಮೇಲೆ ಓದಲಾದ (3)ರ ಸೇರ್ಪಡೆ ಆದೇಶದಲ್ಲಿ ದಿನಾಂಕ:23-09-2021ರ ಆದೇಶದಲ್ಲಿ ರಚಿಸಲಾದ 2020-21ನೇ ಸಾಲಿನ ಆಯ್ಕೆ ಉಪಸಮಿತಿಯನ್ನೇ 2021-22ನೇ ಸಾಲಿಗೂ ಮುಂದುವರೆಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (4)ರ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ವಾರ್ಷಿಕ ವಿವಿಧ ಪ್ರಶಸ್ತಿಗಳಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಸಾಮಾನ್ಯ ನಿಯಮಗಳು ಮತ್ತು ವಿಭಾಗವಾರು ಬರುವ ನಿರ್ದಿಷ್ಟ ಕ್ಷೇತ್ರದ ಪ್ರಶಸ್ತಿಗಳಿಗೆ ಅನುಸರಿಸಬೇಕಾದ ನಿಯಮಗಳನ್ನು ರೂಪಿಸಿ ಸರ್ಕಾರದ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 342 ಕಸಧ 2020, ಬೆಂಗಳೂರು, ದಿನಾಂಕ: 05-10-2021.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2020-21 ಮತ್ತು 2021-22ನೇ ಸಾಲಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಪ್ರಧಾನ ಮಾಡುವ ವಿವಿಧ ಪ್ರಶಸ್ತಿಗಳಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ನಿಯಮಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1 ಮತ್ತು ಅನುಬಂಧ-2ರಲ್ಲಿ ರುವಂತೆ ತಕ್ಷಣದಿಂದ ಜಾರಿಗೆ ಬರುವಂತೆ ರೂಪಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ವೆಂಕಟೇಶಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
(ಸಂಸ್ಕೃತಿ ಶಾಖೆ)

ಗೆ:

1. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
2. ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲಾ ಸಹಾಯಕ ನಿರ್ದೇಶಕರುಗಳಿಗೆ (ನಿರ್ದೇಶಕರ ಮುಖಾಂತರ).
4. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕನ್ನಡ ಮತ್ತು ಸಂಸ್ಕೃತಿ
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

<u>ಅನುಬಂಧ-1</u>

<u>ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರದಾನ ಮಾಡಲಾಗುವ ವಾರ್ಷಿಕ ಪ್ರಶಸ್ತಿಗಳ</u>
<u>ಕುರಿತಂತೆ ಅನುಸರಿಸಬೇಕಾದ ಸಾಮಾನ್ಯ ನಿಯಮಗಳು</u>

1. ವಿಭಾಗವಾರು ಬರುವ ಪ್ರಶಸ್ತಿಗಳಲ್ಲಿ ಪ್ರಶಸ್ತಿ ಆಯ್ಕೆಗೆ ನಿರ್ದಿಷ್ಟ ವಿಷಯ ಕ್ಷೇತ್ರಗಳಲ್ಲಿ ಅನುಪಮ ಸಾಧನೆ ಮಾಡಿರುವ ಸಾಧಕರ ಹೆಸರುಗಳನ್ನು ಮಾತ್ರ ಪರಿಗಣಿಸಬೇಕು.

2. ನಿರ್ದಿಷ್ಟ ವಿಷಯ ಕ್ಷೇತ್ರಗಳಲ್ಲಿ ನೀಡುವ ಪ್ರಶಸ್ತಿಗಳಿಗೆ ಮರಣೋತ್ತರವಾಗಿ ಪರಿಗಣಿಸಬಾರದು.

3. ಇತರ ಪ್ರಶಸ್ತಿಗಳನ್ನು ಪಡೆದಿರುವುದು ಇಲಾಖೆ ಕೊಡಮಾಡುವ ವಾರ್ಷಿಕ ಪ್ರಶಸ್ತಿ ಪರಿಗಣನೆಗೆ ತಡೆಯಾಗಬಾರದು.

4. ಆಯ್ಕೆಗೆ ಪರಿಗಣಿಸುವ ಸಾಧಕರು ಕನಿಷ್ಟ 10 ರಿಂದ 15 ವರ್ಷಗಳ ವಿಷಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರಬೇಕು.

5. ಆಯ್ಕೆ ಉಪಸಮಿತಿಯು ವಿಷಯಕ್ಷೇತ್ರ ತಜ್ಞರು ಸೂಚಿಸಿರುವ ಹೆಸರುಗಳಷ್ಟೆ ಅಲ್ಲದೆ ಸಭೆಯಲ್ಲಿ ವಿವರವಾದ ಚರ್ಚೆ ನಡೆಸುವ ಮೂಲಕ ಬೇರೆ ಹೆಸರುಗಳನ್ನು ಸಹ ಪರಿಗಣಿಸಬಹುದು.

6. ವಾರ್ಷಿಕ ಪ್ರಶಸ್ತಿಯನ್ನು ಒಬ್ಬರಿಗಿಂತ ಹೆಚ್ಚು ಜನರಿಗೆ ನೀಡುವಂತೆ ಆಯ್ಕೆ ಉಪಸಮಿತಿ ಸೂಚಿಸಬಾರದು. ಹಾಗೂ ಒಂದೇ ಪ್ರಶಸ್ತಿಯನ್ನು ವಿಭಾಗಿಸಿ ಒಬ್ಬರಿಗಿಂತ ಹೆಚ್ಚು ಜನರಿಗೆ ಪರಿಗಣಿಸಬಾರದು.

7. ವಾರ್ಷಿಕ ಪ್ರಶಸ್ತಿಗಳಿಗೆ ಭಾರತೀಯ ಪೌರರನ್ನು ಮಾತ್ರ ಪರಿಗಣಿಸಬೇಕು. ಹಾಗೆ ಪರಿಗಣಿಸಲ್ಪಡುವ ಮಹನೀಯರು ಯಾವುದೇ ಅಪರಾಧ ಹಿನ್ನೆಲೆ ಹೊಂದಿರಬಾರದು.

8. ನಿರ್ದಿಷ್ಟ ವಿಷಯ ಕ್ಷೇತ್ರದಲ್ಲಿ ಪ್ರಶಸ್ತಿಗೆ ಆಯ್ಕೆಯಾಗುವ ಪ್ರಶಸ್ತಿ ಪುರಸ್ಕೃತರ ಕುರಿತು ಮಾಹಿತಿ ಕೊರತೆಯಿಂದ (ಪ್ರಶಸ್ತಿ ಪುರಸ್ಕೃತರ ನಡತೆ/ನಿರ್ದಿಷ್ಟ ಕ್ಷೇತ್ರದಲ್ಲಿನ ಅನುಭವ ಇಲ್ಲದೆ ಇರುವ ಬಗ್ಗೆ ಮಾಹಿತಿ ಬಂದಲ್ಲಿ) ಪ್ರಶಸ್ತಿಗೆ ಆಯ್ಕೆ ಮಾಡಿದ್ದಲ್ಲಿ, ಅದನ್ನು ಸರ್ಕಾರವು ಹಿಂಪಡೆಯಲು ಅವಕಾಶ ಇರುತ್ತದೆ.

9. ಆಯ್ಕೆ ಉಸಮಿತಿಯ ಅಧ್ಯಕ್ಷರು/ಸದಸ್ಯರನ್ನು ಪ್ರಶಸ್ತಿಗೆ ಪರಿಗಣಿಸಬಾರದು, ಪ್ರಶಸ್ತಿ ಉಪಸಮಿತಿಯಲ್ಲಿರುವ ಸದಸ್ಯರು ತಮ್ಮನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡಿಕೊಳ್ಳುವಂತಿಲ್ಲ ಅಥವಾ ಪರಸ್ಪರ ಶಿಫಾರಸ್ಸು ಮಾಡಿಕೊಳ್ಳುವಂತಿಲ್ಲ.

10. ಆಯ್ಕೆ ಉಪ ಸಮಿತಿ ಹಾಗೂ ಆಯ್ಕೆ ಸಮಿತಿಯ ಸದಸ್ಯರು, ಪ್ರಶಸ್ತಿ ಆಯ್ಕೆ ಪ್ರಕ್ರಿಯೆ ನಂತರ ಸರ್ಕಾರಿ ಆದೇಶ ಪ್ರಕಟಣೆಯಾಗುವವರೆಗೆ ಗೋಪ್ಯತೆಯನ್ನು ಕಾಪಾಡಬೇಕು.

11. ಯಾವುದೇ ಪ್ರಶಸ್ತಿಗೆ ಅರ್ಹರು ಲಭ್ಯವಿಲ್ಲವೆಂದು ಆಯ್ಕೆ ಉಪ ಸಮಿತಿಯು ಸಾಧಾರಣವಾಗಿ ತೀರ್ಮಾನಿಸಿದ ಪಕ್ಷದಲ್ಲಿ ಆ ವರ್ಷದ ಆಯ್ಕೆ ಪ್ರಕ್ರಿಯೆಯನ್ನು ಕೈ ಬಿಡತಕ್ಕದ್ದು.

12. ಆಯ್ಕೆ ಉಪಸಮಿತಿಯು ನಿರ್ದಿಷ್ಟ ವಿಷಯ ಕ್ಷೇತ್ರದ ಪ್ರಶಸ್ತಿಗೆ ಪುರಸ್ಕೃತರನ್ನು ಶಿಫಾರಸ್ಸು ಮಾಡಲು, ಆ ವ್ಯಕ್ತಿಯ ಹಿನ್ನಲೆ ಮತ್ತು ವಿಷಯ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಪರಿಶೀಲಿಸಿ ಶಿಫಾರಸ್ಸು ಮಾಡುವುದು. ನೈತಿಕ ಅಧಃಪತನಕೊಳ್ಳಪಡುವ ಅಪರಾಧ ಹಿನ್ನಲೆಯ ವ್ಯಕ್ತಿಗಳನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡಬಾರದು.

13. ಆಯ್ಕೆ ಉಪಸಮಿತಿಯು ಸಲ್ಲಿಸಿದ 1:2 ಅನುಪಾತದದಲ್ಲಿ ಆಯ್ಕೆ ಸಮಿತಿಯ ಪರಾಮರ್ಶೆ ಮತ್ತು ಅಂತಿಮ ಆಯ್ಕೆಗಾಗಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳ ಮೂಲಕ ಪ್ರಶಸ್ತಿ ಆಯ್ಕೆ ಸಮಿತಿಯ ಮುಂದೆ ಮಂಡಿಸುವುದು.

14. ಆಯ್ಕೆ ಸಮಿತಿಯು ಆಯ್ಕೆ ಪ್ರಕ್ರಿಯೆಗಾಗಿ ನಡೆಸುವ ಸಭೆಯಲ್ಲಿ ಆಯ್ಕೆ ಉಪಸಮಿತಿಯ ಸದಸ್ಯರನ್ನು ಸಹ ಸಭೆಗೆ ಕಡ್ಡಾಯವಾಗಿ ಆಹ್ವಾನಿಸುವುದು.

15. ಪ್ರಶಸ್ತಿ ಪುರಸ್ಕೃತರ ಆಯ್ಕೆಯಲ್ಲಿ ಆಯ್ಕೆಸಮಿತಿಯ ನಿರ್ಣಯವೇ ಅಂತಿಮವಾಗಿರುತ್ತದೆ.

16. ಎಲ್ಲಾ ಆಯ್ಕೆ ಸಮಿತಿಗಳಲ್ಲಿಯೂ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯವನ್ನು ಕಲ್ಪಿಸಬೇಕು.

17. ಆಯ್ಕೆ ಉಪಸಮಿತಿಯಲ್ಲಿ ಇರುವ ಸದಸ್ಯರು ಮತ್ತೊಂದು ಉಪಸಮಿತಿಯ ಸದಸ್ಯರಾಗಿರಬಾರದು.

18. ಆಯ್ಕೆ ಉಪಸಮಿತಿಯ ಅಧ್ಯಕ್ಷರು/ಸದಸ್ಯರು ಆಯಾ ವಿಭಾಗದಲ್ಲಿ ಬರುವ ನಿರ್ಧಿಷ್ಟ ವಿಷಯ ಕ್ಷೇತ್ರದಲ್ಲಿ ಕನಿಷ್ಟ15-20 ವರ್ಷಗಳ ಅನುಭವ ಹೊಂದಿದವರಾಗಿರಬೇಕು.

19. ಎಲ್ಲಾ ಪ್ರಶಸ್ತಿ ಆಯ್ಕೆ ಉಪ ಸಮಿತಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ಸರ್ಕಾರವು ಆದೇಶದ ಮೂಲಕ ನೇಮಕ ಮಾಡುವುದು.

20. ಆಯ್ಕೆ ಉಪಸಮಿತಿಯ ಸದಸ್ಯರು ಸಂಬಂಧಿತ ವಿಷಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರಬೇಕು.

21. ಆಯಾ ವಿಭಾಗದಲ್ಲಿ ಬರುವ ನಿರ್ದಿಷ್ಟ ವಿಷಯ ಕ್ಷೇತ್ರದ ಪ್ರಶಸ್ತಿಗಳಿಗೆ, ಆಯಾ ಕ್ಷೇತ್ರದ ಅಕಾಡೆಮಿಗಳ ಅಧ್ಯಕ್ಷರು ಪದನಿಮಿತ್ತ ಸದಸ್ಯರಾಗಿರುತ್ತಾರೆ. ಆ ಸ್ಥಾನವು ತೆರವಾಗಿದ್ದಲ್ಲಿ, ಅದನ್ನು ನಾಮನಿರ್ದೇಶನದ ಮೂಲಕವೇ ಭರ್ತಿ ಮಾಡುವುದು.

22. ಎಲ್ಲಾ ವಾರ್ಷಿಕ ಪ್ರಶಸ್ತಿಗಳ ಆಯ್ಕೆ ಉಪಸಮಿತಿಯಲ್ಲಿ ಜಂಟಿ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

23. ಎಲ್ಲಾ ವಾರ್ಷಿಕ ಪ್ರಶಸ್ತಿಗಳ ಆಯ್ಕೆ ಸಮಿತಿಯಲ್ಲಿ ನಿರ್ದೇಶಕರು/ಆಯುಕ್ತರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

24. ಆಯ್ಕೆ ಉಪಸಮಿತಿಯ ಸದಸ್ಯರಿಗೆ ರೂ 1000/- ಗಳ ಸಭಾಭತ್ಯೆ ಹಾಗೂ ಸ್ಥಳೀಯ ಪ್ರಯಾಣ ಭತ್ಯೆ ರೂ.500/- ಗಳನ್ನು ನೀಡುವುದು. ಹೊರಪ್ರದೇಶಗಳಿಂದ ಆಗಮಿಸುವ ಅಧ್ಯಕ್ಷರು/ಸದಸ್ಯರಿಗೆ ಹವಾನಿಯಂತ್ರಿತ ಎರಡನೆ ದರ್ಜೆ ರೈಲು ಪ್ರಯಾಣ ಭತ್ಯೆ/ವೋಲ್ವೋ ಬಸ್ ಪ್ರಯಾಣ ದರವನ್ನು ನೀಡಲಾಗುವುದು ಮತ್ತು ವಸತಿ, ಊಟ-ಉಪಹಾರದ ವ್ಯವಸ್ಥೆ ಮಾಡುವುದು.

25. ಪ್ರಶಸ್ತಿ ಪುರಸ್ಕೃತರಿಗೆ ನಿರ್ದಿಷ್ಟ ಕ್ಷೇತ್ರದ ಪ್ರಶಸ್ತಿ ಸ್ಮರಣಿಕೆ, ಪ್ರಶಸ್ತಿ ಫಲಕ, ಶಾಲು, ಹಾರ, ಫಲ-ತಾಂಬೂಲದೊಂದಿಗೆ ಆಯಾ ಪ್ರಶಸ್ತಿಗೆ ನಿಗದಿ ಮಾಡಿರುವ ಗೌರವಧನದ ಮೊತ್ತವನ್ನು RTGS/NEFT(K2) ಮೂಲಕ ಪ್ರಶಸ್ತಿ ಪುರಸ್ಕೃತರ ಬ್ಯಾಂಕ್ ಖಾತೆಗೆ ಪಾವತಿ ಮಾಡುವುದು.

26. ಎಲ್ಲಾ ವಿಭಾಗದ ವಿವಿಧ ಪ್ರಶಸ್ತಿಗಳನ್ನು ಎರಡು ಹಂತದಲ್ಲಿ ಆಯ್ಕೆ ಮಾಡುವುದು.

(ಎ) ಆಯ್ಕೆ ಉಪ ಸಮಿತಿಯು 1:2 ಅನುಪಾತದಲ್ಲಿ ಪ್ರಶಸ್ತಿ ಪುರಸ್ಕೃತರ ಹೆಸರನ್ನು ಅಂತಿಮಗೊಳಿಸಿ ಆಯ್ಕೆ ಸಮಿತಿಗೆ ಸಲ್ಲಿಸುವುದು.

(ಬಿ) ಆಯ್ಕೆ ಸಮಿತಿಯು ಅಂತಿಮವಾಗಿ ಆಯ್ಕೆ ಮಾಡಿದ ಪ್ರಶಸ್ತಿ ಪುರಸ್ಕೃತರನ್ನು ಸರ್ಕಾರದ ಆದೇಶ ಹೊರಡಿಸುವ ಮೂಲಕ ಆಯ್ಕೆ ಅಂತಿಮಗೊಳಿಸುವುದು.

..3

27. ಪ್ರತಿ ವರ್ಷ ನೀಡುವ ಎಲ್ಲಾ ವಿಭಾಗದ ಪ್ರಶಸ್ತಿಗಳಿಗೂ ಪ್ರತ್ಯೇಕವಾಗಿ ಆಯ್ಕೆ ಉಪಸಮಿತಿಯನ್ನು ರಚಿಸಿ ಸರ್ಕಾರದ ಆದೇಶ ಹೊರಡಿಸತಕ್ಕದ್ದು.

28. ವಿವಿಧ ಪ್ರಶಸ್ತಿ ಆಯ್ಕೆ ವೇಳಾ ಪಟ್ಟಿ ಈ ಕೆಳಕಂಡಂತಿದೆ.

1. ವಿವಿಧ ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸುವ ದಿನಾಂಕ- ನವೆಂಬರ್ 01 ರಿಂದ ನವೆಂಬರ್ 30 ರವರೆಗೆ.
2. ಆಯ್ಕೆ ಉಪಸಮಿತಿಯ ಪರಿಶೀಲನೆ ಶಿಫಾರಸ್ಸು ಪ್ರಕ್ರಿಯೆ - ಡಿಸಂಬರ್ 01 ರಿಂದ 15 ರವರೆಗೆ.
3. ಆಯ್ಕೆ ಸಮಿತಿ ಆಯ್ಕೆ ಪ್ರಕ್ರಿಯೆ -ಡಿಸಂಬರ್ 16 ರಿಂದ ಡಿಸಂಬರ್ 31ರವರೆಗೆ.
4. ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸುವ ಪ್ರಕ್ರಿಯೆ - ಜನವರಿ 01 ರಿಂದ ಜನವರಿ 31 ರೊಳಗೆ.

29. ವಾರ್ಷಿಕ ಪ್ರಶಸ್ತಿಗಳ ಆಯ್ಕೆ ಸಮಿತಿಯು ಈ ಕೆಳಕಂಡಂತಿರುತ್ತದೆ.

(ಅ) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು-ಅಧ್ಯಕ್ಷರು.
(ಆ) ಸರ್ಕಾರದ ಕಾಯರ್ದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ-ಸದಸ್ಯರು
(ಇ) ನಿರ್ದೇಶಕರು/ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ-ಸದಸ್ಯ ಕಾರ್ಯದರ್ಶಿಗಳು
(ಈ) ಎಲ್ಲಾ ಪ್ರಶಸ್ತಿಗಳ ಆಯ್ಕೆ ಉಪಸಮಿತಿ ಅಧ್ಯಕ್ಷರು/ಸದಸ್ಯರು-ವಿಶೇಷ ಆಹ್ವಾನಿತರು.

30. ಇಲಾಖೆಯಿಂದ ನೀಡುತ್ತಿರುವ ವಾರ್ಷಿಕ ಪ್ರಶಸ್ತಿಗಳು, ಅವುಗಳಿಗೆ ನಿಗದಿಪಡಿಸಲಾದ ಪ್ರಶಸ್ತಿ ಮೊತ್ತದ ವಿವರಗಳು ಈ ಕೆಳಗಿನಂತಿರುತ್ತವೆ.

ಕ್ರ.ಸಂ.	ಪ್ರಶಸ್ತಿ ವಿಭಾಗ		ಪ್ರಶಸ್ತಿಯ ಹೆಸರು	ಪ್ರಶಸ್ತಿ ಮೊತ್ತ ರೂ. ಲಕ್ಷಗಳಲ್ಲಿ
1.	ರಾಷ್ಟ್ರೀಯ ಪ್ರಶಸ್ತಿ	(ಅ)	ಬಸವ ಪ್ರಶಸ್ತಿ	10.00
		(ಆ)	ಟಿ ಚೌಡಯ್ಯ ಪ್ರಶಸ್ತಿ	10.00
		(ಇ)	ಭಗವಾನ್ ಮಹಾವೀರ ಶಾಂತಿ ಪ್ರಶಸ್ತಿ	10.00
2.	ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಭಾಗ	(ಅ)	ಸಂಗೊಳ್ಳಿ ರಾಯಣ್ಣ ಪ್ರಶಸ್ತಿ	5.00
		(ಆ)	ಅಕ್ಕಮಹಾದೇವಿ ಪ್ರಶಸ್ತಿ	5.00
		(ಇ)	ಕನಕಶ್ರೀ ಪ್ರಶಸ್ತಿ	5.00
3.	ಸಾಹಿತ್ಯ ಹಾಗೂ ನಾಟಕ ವಿಭಾಗ	(ಅ)	ಪಂಪ ಪ್ರಶಸ್ತಿ	5.00
		(ಅ)	ಪ್ರೊ।। ಕೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ	5.00
		(ಆ)	ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ	5.00
		(ಇ)	ಬಿ.ವಿ. ಕಾರಂತ ಪ್ರಶಸ್ತಿ	5.00
		(ಈ)	ಡಾ।। ಗುಬ್ಬಿ ವೀರಣ್ಣ ಪ್ರಶಸ್ತಿ	
4.	ಕಲಾ ವಿಭಾಗ	(ಅ)	ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ	5.00
		(ಆ)	ಜಕಣಾಚಾರಿ ಪ್ರಶಸ್ತಿ	5.00
		(ಇ)	ಜಾನಪದ ಶ್ರೀ ಪ್ರಶಸ್ತಿ	5.00
5.	ಸಂಗೀತ ನೃತ್ಯ ವಿಭಾಗ	(ಅ)	ಶ್ರೀ ನಿಜಗುಣ-ಪುರಂದರ ಪ್ರಶಸ್ತಿ	5.00
		(ಆ)	ಕುಮಾರವ್ಯಾಸ ಪ್ರಶಸ್ತಿ	5.00
		(ಇ)	ಶಾಂತಲಾ ನಾಟ್ಯರಾಣಿ ಪ್ರಶಸ್ತಿ	5.00
		(ಈ)	ಸಂತ ಶಿಶುನಾಳ ಷರೀಫ ಪ್ರಶಸ್ತಿ	5.00
		(ಉ)	ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ	5.00

(ಕೆ.ವೆಂಕಟೇಶಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
(ಸಂಸ್ಕೃತಿ ಶಾಖೆ)

ಅನುಬಂಧ-2

ವಿಭಾಗವಾರು ಬರುವ ನಿರ್ಧಿಷ್ಟ ಕ್ಷೇತ್ರದ ಪ್ರಶಸ್ತಿಗಳಿಗೆ ಅನುಸರಿಸಬೇಕಾದ ನಿಯಮಗಳು

ಕ್ರ. ಸಂ	ಪ್ರಶಸ್ತಿ ವಿಭಾಗ		ಪ್ರಶಸ್ತಿ ಹೆಸರು	ನಿಯಮಗಳು
1.	ರಾಷ್ಟ್ರೀಯ ಪ್ರಶಸ್ತಿ	(ಅ)	ಬಸವ ಪ್ರಶಸ್ತಿ	1. ಈ ಪ್ರಶಸ್ತಿಯು ರಾಷ್ಟ್ರ ಮಟ್ಟದ ಪ್ರಶಸ್ತಿ ಆಗಿದ್ದು, ಜಗಜ್ಯೋತಿ ಬಸವೇಶ್ವರರು ಪ್ರತಿಪಾದಿಸಿದ ಸಿದ್ಧಾಂತ, ಶರಣ ಸಂಸ್ಕೃತಿ, ಸಾಹಿತ್ಯ ಕ್ಷೇತ್ರಗಳಲ್ಲಿ ಅನನ್ಯ ಸಾಧನೆಗೈದಿರುವ, ಸಾಮಾಜಿಕ ನ್ಯಾಯ ಮತ್ತು ಸಾಮರಸ್ಯಕ್ಕಾಗಿ ನೇರ ಮತ್ತು ನಿರಂತರವಾಗಿ ಭಾರತದ ಯಾವುದೇ ಪ್ರದೇಶದಲ್ಲಿ ಅನುಪಮ ಸೇವೆ ಸಲ್ಲಿಸುತ್ತಿರುವ ವಿಶಿಷ್ಟ ವ್ಯಕ್ತಿ ಮತ್ತು ಸಂಸ್ಥೆಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದು.
				2. ಒಂದು ವರ್ಷ ರಾಜ್ಯದಲ್ಲಿರುವ ವ್ಯಕ್ತಿ/ಸಂಸ್ಥೆಗಳನ್ನು ಮತ್ತು ನಂತರದ ಒಂದು ವರ್ಷ ರಾಷ್ಟ್ರದ ಯಾವುದೇ ಹೊರರಾಜ್ಯದ ವ್ಯಕ್ತಿ/ಸಂಸ್ಥೆಗಳನ್ನು ಪ್ರತಿ ಆವರ್ತನದಲ್ಲಿ ಪರಿಗಣಿಸಬೇಕು. ಈ ಪ್ರಶಸ್ತಿಗೆ ಕನಿಷ್ಠ 10 ರಿಂದ 15 ವರ್ಷಗಳ ಸೇವೆ ಸಲ್ಲಿಸಿದ ಸಂಸ್ಥೆಗಳು, ಮತ್ತು ಕನಿಷ್ಠ 50 ವರ್ಷ ಮೇಲ್ಪಟ್ಟ ವಯೋಮಾನದ ಸಾಧಕರನ್ನಷ್ಟೆ ಪರಿಗಣಿಸಲಾಗುವುದು. ಒಂದೊಮ್ಮೆ ಅರ್ಹ ವ್ಯಕ್ತಿ/ ಸಂಸ್ಥೆಗಳು ಲಭ್ಯರಿಲ್ಲದಿದ್ದಲ್ಲಿ ಆ ವರ್ಷದ ಪ್ರಶಸ್ತಿಗೆ ಆವರ್ತನದ ಇನ್ನೊಂದು ಕ್ಷೇತ್ರವನ್ನು ಪರಿಗಣಿಸುವಂತಿಲ್ಲ.
				3. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
		(ಆ)	ಟಿ. ಚೌಡಯ್ಯ ಪ್ರಶಸ್ತಿ	1. ಕರ್ನಾಟಕ ಹಿರಿಯ ಕಲಾವಿದ, ಮೈಸೂರು ಸಂಸ್ಥಾನದ ಪಿಟೀಲು ವಾದನದ ಮಾಂತ್ರಿಕ ಟಿ. ಚೌಡಯ್ಯ ಅವರ ಹೆಸರಿನಲ್ಲಿ 'ಟಿ. ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ' ಪುರಸ್ಕಾರವನ್ನು ಸ್ಥಾಪಿಸಲಾಗಿದೆ
				2. ಈ ಪ್ರಶಸ್ತಿಯು ರಾಷ್ಟ್ರ ಮಟ್ಟದ್ದಾಗಿದ್ದು, ಕರ್ನಾಟಕ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರಗಳ ವಾದ್ಯ ಸಂಗೀತ ಕಲಾವಿದರಿಗೆ, ಅವರು ಸಂಗೀತ ಕ್ಷೇತ್ರದಲ್ಲಿ ಕನಿಷ್ಠ 10 ರಿಂದ 15 ವರ್ಷ ಸತತವಾಗಿ ಸಲ್ಲಿಸಿರುವ ಅನುಪಮ ಸಾಧನೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗುವುದು

				3. ಈ ಪ್ರಶಸ್ತಿಯನ್ನು ಒಂದು ವರ್ಷ ರಾಜ್ಯದ ಕಲಾವಿದರಿಗೆ ನಂತರದ ಒಂದು ವರ್ಷ ಹೊರರಾಜ್ಯಗಳ ಕಲಾವಿದರಿಗೆ ನೀಡಿ ಪುರಸ್ಕರಿಸಲಾಗುವುದು
				4. ಈ ಪ್ರಶಸ್ತಿಗೆ ಪರಿಗಣಿಸಲಾಗುವ ಸಂಗೀತ ವಾದ್ಯ ಕಲಾವಿದರು :- ಕರ್ನಾಟಕ ವಾದ್ಯ ಸಂಗೀತ - ವೀಣೆ, ಪಿಟೀಲು, ಕೊಳಲು, ನಾದಸ್ವರ, ಡೋಲು, ಗೋಟು ವಾದ್ಯ, ಘಟಂ, ಮೃದಂಗ, ಖಂಜಿರಾ, ಸ್ಯಾಕ್ಸೋಫೋನ್, ಮೋರ್ಚಿಂಗ್, ಮ್ಯಾಂಡೊಲಿನ್, ಹಿಂದೂಸ್ತಾನಿ ವಾದ್ಯ ಸಂಗೀತ - ಸಿತಾರ, ಸರೋದ್, ಬಾನ್ಸುರಿ, ಸಾರಂಗಿ, ತಬಲ, ಹಾರ್ಮೋನಿಯಂ, ಪಕ್ಕವಾದ್ಯ , ಬೀನ್, ಕ್ಲಾರಿಯೋನೆಟ್, ಷಹನಾಯಿ, ಹಾಗೂ ಆಯ್ಕೆ ಸಮಿತಿಯು ಸರ್ವ ಸಮ್ಮತವಾಗಿ ಅರ್ಹವೆಂದು ಪರಿಗಣಿಸುವ ಇತರೆ ವಾದ್ಯ ಸಂಗೀತಗಾರರು.
				5. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
		(ಇ)	ಶ್ರೀ ಭಗವಾನ್ ಮಹಾವೀರ ಶಾಂತಿ ಪ್ರಶಸ್ತಿ	1. ಈ ಪ್ರಶಸ್ತಿಯು ರಾಷ್ಟ್ರ ಮಟ್ಟದ ಪ್ರಶಸ್ತಿಯಾಗಿದ್ದು, ಅಹಿಂಸೆ, ಶಾಂತಿ-ಸೌಹಾರ್ದ, ಜನಕಲ್ಯಾಣ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಪ್ರತಿಪಾದನೆ ಮತ್ತು ಅನುಷ್ಠಾನಕ್ಕಾಗಿ ನಿರಂತರ ಶ್ರಮಿಸುತ್ತಿರುವ ಮತ್ತು ಅನುಪಮ ಸೇವೆಗೈದಿರುವ ಸಂಘ ಸಂಸ್ಥೆಗಳು, ವ್ಯಕ್ತಿಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದು
				2. 50 ವರ್ಷಕ್ಕೆ ಮೇಲ್ಪಟ್ಟ ವ್ಯಕ್ತಿಗಳು ಮತ್ತು ಕನಿಷ್ಠ ಎರಡು ದಶಕಗಳ ಕಾಲ ಮೇಲಿನ ಉದ್ದೇಶಗಳ ಅನುಷ್ಠಾನದಲ್ಲಿ ಸೇವಾನಿರತವಾಗಿರುವ ಸಂಘ-ಸಂಸ್ಥೆಗಳನ್ನು ಮಾತ್ರ ಈ ಪ್ರಶಸ್ತಿಗೆ ಪರಿಗಣಿಸುವುದು
				3. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.

				4. ಈ ಪ್ರಶಸ್ತಿಯನ್ನು ಒಂದು ವರ್ಷ ರಾಜ್ಯದ ಕಲಾವಿದರಿಗೆ ಮತ್ತು ನಂತರದ ಒಂದು ವರ್ಷ ಹೊರರಾಜ್ಯಗಳ ಕಲಾವಿದರಿಗೆ ನೀಡಿ ಪುರಸ್ಕರಿಸಲಾಗುವುದು

ಮೇಲ್ಕಂಡ ರಾಷ್ಟ್ರೀಯ ಪ್ರಶಸ್ತಿ ವಿಭಾಗದ ಆಯ್ಕೆ ಉಪ ಸಮಿತಿಯ ರಚನೆಗೆ ಕೆಳಕಂಡ ನಿಯಮಗಳನ್ನು ಪಾಲಿಸುವುದು.

1. ಸಮಾಜ ಸೇವೆ/ಕನ್ನಡ ಸಾಹಿತ್ಯ/ವಚನ ಸಾಹಿತ್ಯದಲ್ಲಿ ಹೆಸರು ಮಾಡಿದ ಹಿರಿಯ ಸಾಧಕರು ಅಧ್ಯಕ್ಷರಾಗಿರಬೇಕು.
2. ಕನ್ನಡ ಸಾಹಿತ್ಯ/ವಚನ ಸಾಹಿತ್ಯದಲ್ಲಿ ಸೇವೆ ಮಾಡಿದ ಹಿರಿಯ ಮೂರು (3) ಸಾಧಕರು ಸದಸ್ಯರಾಗಿರಬೇಕು.
3. ಸಮಾಜ ಸೇವೆಯಲ್ಲಿ ನಿರಂತರವಾಗಿ ಸುದೀರ್ಘ ಸೇವೆ ಸಲ್ಲಿಸಿದ, ವಿಶೇಷವಾಗಿ (ಅಹಿಂಸೆ, ಶಾಂತಿ ಸೌಹಾರ್ದತೆಗೆ ಒತ್ತು ನೀಡಿದ ಮೂರು (3) ಹಿರಿಯ ಸಾಧಕರು ಸದಸ್ಯರಾಗಿರಬೇಕು.
4. ವಾದ್ಯ ಸಂಗೀತದಲ್ಲಿ ಹಿರಿಯ ಮೂರು (3) ಸಾಧಕರು ಸದಸ್ಯರಾಗಿರಬೇಕು
5. ಅಧ್ಯಕ್ಷರು, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ- ಪದನಿಮಿತ್ತ ಸದಸ್ಯರು.
6. ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-ಸದಸ್ಯ ಕಾರ್ಯದರ್ಶಿ.
7. ಸಮಿತಿಯಲ್ಲಿ ಕನಿಷ್ಠ ಒಬ್ಬರು (1) ಮಹಿಳಾ ಸದಸ್ಯರು ಕಡ್ಡಾಯವಾಗಿರಬೇಕು.
8. ಸಭೆಯ ಕನಿಷ್ಠ ಕೋರಮ್ 1/3

2.	**ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಭಾಗ**	(ಅ)	**ಸಂಗೊಳ್ಳಿ ರಾಯಣ್ಣ ಪ್ರಶಸ್ತಿ**	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಕನ್ನಡ ನಾಡಿನ ನೆಲ-ಜಲ, ಭಾಷೆ-ಸಂಸ್ಕೃತಿಯ ಸಂರಕ್ಷಣೆಗಾಗಿ ತನ್ನ ಪ್ರಾಣವನ್ನೇ ಬಲಿಗೊಟ್ಟ ಕನ್ನಡ ನಾಡಿನ ಕಿತ್ತೂರು ಸಂಸ್ಥಾನದ ನಿಸ್ವಾರ್ಥಿ ಹೋರಾಟಗಾರ ಸಂಗೊಳ್ಳಿ ರಾಯಣ್ಣ ಅವರ ಹೆಸರಿನಲ್ಲಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ.
				2. ಕನ್ನಡ ನಾಡಿನ ನೆಲ-ಜಲ, ಭಾಷೆ-ಸಂಸ್ಕೃತಿಯ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಶ್ರಮಿಸುವ ಸಾಧಕರಿಗೆ ಈ ಪ್ರಶಸ್ತಿ ನೀಡಿ ಪುರಸ್ಕರಿಲಾಗುವುದು.
				3. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.

		(ಆ)	ಅಕ್ಕಮಹಾದೇವಿ ಪ್ರಶಸ್ತಿ	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು, ಶಿವಶರಣೆಯರ ಆಶಯಗಳಿಗೆ ಅನುಗುಣವಾಗಿ ಸೇವೆ ಸಲ್ಲಿಸುತ್ತಿರುವ ಯಾವುದೇ ಕ್ಷೇತ್ರದ ಮಹಿಳಾ ಸಾಧಕರನ್ನು ಮತ್ತು ಸಂಘ ಸಂಸ್ಥೆಗಳನ್ನು ಮಾತ್ರ ಪರಿಗಣಿಸಲಾಗುವುದು.
				2. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
				3. ಈ ಪ್ರಶಸ್ತಿಯು ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಭಾಗದ ಆಯ್ಕೆ ಸಮಿತಿಯ ಪಟ್ಟಿಯಲ್ಲಿ ನಮೂದಾಗಿರುವ ಪ್ರಶಸ್ತಿಯಂತೆ ಪರಿಗಣಿತವಾಗಿ, ಸಮಿತಿಯಡಿ ಆಯ್ಕೆ ಪ್ರಕ್ರಿಯೆಗೆ ಒಳಪಡುತ್ತದೆ.
				4. ವಚನ ಸಾಹಿತ್ಯದಲ್ಲಿ ಕೃಷಿ ಮಾಡಿದ ಮಹಿಳೆಯನ್ನು ಪರಿಗಣಿಸುವುದು.
		(ಇ)	ಕನಕಶ್ರೀ ಪ್ರಶಸ್ತಿ	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಕರ್ನಾಟಕ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ಹದಿನಾರನೆಯ ಶತಮಾನದಲ್ಲಿ ನಡೆದ ದೊಡ್ಡ ಸಾಮಾಜಿಕ ಕ್ರಾಂತಿಯ ಅಧ್ವರ್ಯುಗಳಲ್ಲಿ ಪ್ರಮುಖರಾದ ಕನಕದಾಸರು ದಾಸಶ್ರೇಷ್ಠರೆಂದೇ ಪರಿಗಣಿತರಾದವರು. ಈ ದಾಸ ಶ್ರೇಷ್ಠರ ಹೆಸರಿನಲ್ಲಿ ಸ್ಥಾಪಿತವಾದ ಪ್ರಶಸ್ತಿಯನ್ನು ಕನಕಶ್ರೀ ಪ್ರಶಸ್ತಿ ಎಂದು ಕರೆಯಲಾಗುವುದು.
				2. ಕನಕದಾಸರು ಪ್ರತಿಪಾದಿಸಿದ ಮೌಲ್ಯಗಳು, ಸಾಹಿತ್ಯ ಸಂದೇಶಗಳು, ದಾರ್ಶನಿಕ ಕೊಡುಗೆಗಳನ್ನು ಸಮರ್ಥವಾಗಿ ಪ್ರತಿಪಾದಿಸುವ ಸಂಶೋಧಕರಿಗೆ ಹಾಗೂ ದಾಸಸಾಹಿತ್ಯ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ವಿದ್ವಾಂಸರಿಗೆ ಈ ಪ್ರಶಸ್ತಿಯನ್ನು ಆವರ್ತನ ಕ್ರಮದಲ್ಲಿ ನೀಡಲಾಗುವುದು.
				3. ಈ ಪ್ರಶಸ್ತಿಗೆ ವಿಷಯ ಕ್ಷೇತ್ರದ ಅರ್ಹ ಸಂಶೋಧಕರು ಮತ್ತು ವಿದ್ವಾಂಸರು ದೊರೆಯದಿದ್ದ ಪಕ್ಷದಲ್ಲಿ ಇನ್ನೊಂದು ವಿಷಯ ಕ್ಷೇತ್ರದ ಸಾಧಕರನ್ನು ಗುರುತಿಸಿ ಆಯ್ಕೆ ಮಾಡಬಹುದು.

				4. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
	ಮೇಲ್ಕಂಡ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಭಾಗದ ಆಯ್ಕೆ ಉಪ ಸಮಿತಿಯ ರಚನೆಗೆ ಕೆಳಕಂಡ ನಿಯಮಗಳನ್ನು ಪಾಲಿಸುವುದು. 1. ವಚನ ಸಾಹಿತ್ಯ/ದಾಸ ಸಾಹಿತ್ಯ/ಸಮಾಜ ಸೇವೆ ಕ್ಷೇತ್ರದಲ್ಲಿ ಅನನ್ಯ ಸೇವೆ ಮಾಡಿದ ಹಿರಿಯ ಸಾಧಕರು ಅಧ್ಯಕ್ಷರಾಗಿರಬೇಕು. 2. ವಚನ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ಇಬ್ಬರು (2) ಸಾಧಕರು ಸದಸ್ಯರಾಗಿರಬೇಕು. 3. ದಾಸ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ಇಬ್ಬರು (2) ಸಾಧಕರು ಸದಸ್ಯರಾಗಿರಬೇಕು. 4. ಸಮಾಜ ಸೇವೆ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ಇಬ್ಬರು (2) ಸಾಧಕರು ಸದಸ್ಯರಾಗಿರಬೇಕು 5. ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ- ಪದನಿಮಿತ್ತ ಸದಸ್ಯರು. 6. ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು - ಸದಸ್ಯ ಕಾರ್ಯದರ್ಶಿ. 7. ಸಮಿತಿಯಲ್ಲಿ ಕನಿಷ್ಠ ಒಬ್ಬರು (1) ಮಹಿಳಾ ಸದಸ್ಯರು ಕಡ್ಡಾಯವಾಗಿರಬೇಕು. 8. ಸಭೆಯ ಕನಿಷ್ಠ ಕೋರಮ್ 1/3			
3.	ಸಾಹಿತ್ಯ ಹಾಗೂ ನಾಟಕ ವಿಭಾಗ	(ಅ)	ಪಂಪ ಪ್ರಶಸ್ತಿ	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಕನ್ನಡ ಸಾಹಿತ್ಯ ಲೋಕದಲ್ಲಿ ಆದಿಕವಿ ಎಂದೇ ಬಿರುದಾಂಕಿತನಾಗಿರುವ ಕವಿಯು-ಕಲಿಯು ಆದ ಪಂಪನ ಹೆಸರಿನಲ್ಲಿ ಸ್ಥಾಪಿಸಲಾಗಿದೆ.
				2. ಲೇಖಕರ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿನ ಒಟ್ಟಾರೆ ಸಾಹಿತ್ಯ ಕೃಷಿ, ಅವರ ಅನುಪಮ ಸಾಹಿತ್ಯ ಸೇವೆ ಮತ್ತು ಮಹತ್ತರ ಸಾಹಿತ್ಯ ಸಾಧನೆಯು ಈ ಪ್ರಶಸ್ತಿ ಪರಿಗಣನೆಗೆ ಮಾನದಂಡ ಆಗಿರುತ್ತದೆ
				3. ಕನ್ನಡ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಮತ್ತು ಆ ಮೂಲಕ ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆ ಸಲ್ಲಿಸಿರುವ ಲೇಖಕರನ್ನು ಪ್ರಶಸ್ತಿಗಾಗಿ ಪರಿಗಣಿಸಬೇಕು. ಪ್ರಶಸ್ತಿಯನ್ನು ಆವರ್ತನದಲ್ಲಿ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ಲೇಖಕರಿಗೆ ನೀಡಬೇಕು. ಯಾವುದೇ ಪ್ರಕಾರದ ಅರ್ಹ ಲೇಖಕರು ಲಭ್ಯವಿಲ್ಲದಿದ್ದಲ್ಲಿ, ಇನ್ನೊಂದು ಪ್ರಕಾರದ ಲೇಖಕರನ್ನು ಸಹ ಪರಿಗಣಿಸಬಹುದು.

				4. ಸೃಜನಶೀಲ ಪ್ರಕಾರಗಳು ಎಂದರೆ ಕಾವ್ಯ, ನಾಟಕ, ಕಾದಂಬರಿ, ಸಣ್ಣಕಥೆ, ಜೀವನಚರಿತ್ರೆ, ಆತ್ಮಚರಿತ್ರೆ, ಪ್ರವಾಸ ಕಥನ, ಅಂಕಣ ಬರಹ, ಲಲಿತ ಪ್ರಬಂಧ, ಮತ್ತು ವ್ಯಕ್ತಿ ಚಿತ್ರ.
				5. ಸೃಜನೇತರ ಪ್ರಕಾರಗಳು ಎಂದರೆ ಶುದ್ಧ ಹಾಗೂ ಅನ್ವಯಿಕ ವಿಜ್ಞಾನ, ಸಮಾಜ ವಿಜ್ಞಾನ, ಇತಿಹಾಸ, ಶಿಕ್ಷಣ, ಕಾನೂನು ಮಾನವಿಕ ಶಾಸ್ತ್ರ, ಸಂಶೋಧನೆ, ಆಕರ ಸಾಹಿತ್ಯ, ಅಂಕಣ, ಸಾಹಿತ್ಯ ವಿಮರ್ಶೆ ಹಾಗೂ ಪರಾಮರ್ಶನ ಸಾಹಿತ್ಯ ಗ್ರಂಥಗಳು
				6. ಪಠ್ಯಪುಸ್ತಕ, ಸಂಶೋಧನಾ ಪ್ರಬಂಧ, ರೂಪಾಂತರಿತ ಪುಸ್ತಕಗಳ ಲೇಖಕರನ್ನು ಹಾಗೂ ಕೇವಲ ಸಹ ಲೇಖಕರನ್ನು ಪ್ರಶಸ್ತಿಗೆ ಪರಿಗಣಿಸಬಾರದು.
				7. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
		(ಆ)	**ಪ್ರೊ|| ಕೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ**	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಕನ್ನಡ ನಾಡು ಭಾಷಿಕ ಪ್ರಾಂತ್ಯವಾಗಿ ರಚನೆಯಾದಾಗ ರಾಜ್ಯದ ಗಡಿಭಾಗಗಳ ಪರಿಸರದಲ್ಲಿ ಪರಭಾಷೆಯ ಪ್ರಭಾವ ಮತ್ತು ಒತ್ತಡಗಳ ನಡುವೆ ಕನ್ನಡ ನಾಡು-ನುಡಿಯನ್ನು ಉಳಿಸಿ ಬೆಳೆಸಲು ಅವಿರತ ಶ್ರಮಿಸಿದ ಪ್ರೊ|| ಕೆ.ಜಿ. ಕುಂದಣಗಾರ ಅವರ ಅನುಪಮ ಸೇವೆಯನ್ನು ಗೌರವಿಸಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ
				2. ಕರ್ನಾಟಕ ಗಡಿಭಾಗದಲ್ಲಿ ಸಾಹಿತ್ಯ/ಸಂಶೋಧನೆಗೆ ಅನುಪಮ ಸೇವೆ ಸಲ್ಲಿಸಿದ ಸಾಹಿತಿ ಮತ್ತು ಸಂಶೋಧಕರನ್ನು ಆವರ್ತನದಲ್ಲಿ ಆಯ್ಕೆ ಮಾಡುವುದು. ಒಂದು ಪಕ್ಷ ಆಯಾ ವರ್ಷದ ವಿಷಯ ಕ್ಷೇತ್ರದಲ್ಲಿ ಅರ್ಹ ಸಾಧಕರು ದೊರೆಯದಿದ್ದ ಪಕ್ಷದಲ್ಲಿ ಇನ್ನೊಂದು ವಿಷಯ ಕ್ಷೇತ್ರದ ಸಾಧಕರನ್ನು ಗುರುತಿಸಿ ಆಯ್ಕೆ ಮಾಡಬಹುದು
				3. ಪಠ್ಯಪುಸ್ತಕ, ಸಂಶೋಧನಾ ಪ್ರಬಂಧ, ರೂಪಾಂತರಿತ ಪುಸ್ತಕಗಳ ಲೇಖಕರನ್ನು ಹಾಗೂ ಕೇವಲ ಸಹಲೇಖಕರನ್ನು ಪ್ರಶಸ್ತಿಗೆ ಪರಿಗಣಿಸಬಾರದು.

				4. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
		(ಇ)	ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಕನ್ನಡ ಸಾರಸ್ವತ ಲೋಕದ ಕವಿರತ್ನ ರನ್ನನಿಗೆ ಆಶ್ರಯನೀಡಿತ್ತು, ಆತನ ಸಾಹಿತ್ಯ ಕೃಷಿಗೆ ಬೆನ್ನೆಲುಬಾದ ದಾನಚಿಂತಾಮಣಿ ಅತ್ತಿಮಬ್ಬೆಯ ಹೆಸರಿನಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅನುಪಮ ಸಾಧನೆ ಮಾಡಿರುವ ಮಹಿಳಾ ಲೇಖಕಿಗೆ ಅವರ ಸಮಗ್ರ ಸಾಧನೆಯನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗುವುದು.
				2. ಕನ್ನಡದ ಮಹಿಳಾ ಸಾಹಿತಿಗಳ ಸೃಜನಶೀಲ ಮತ್ತು ಸೃಜನೇತರ ಸ್ವತಂತ್ರ ಕೃತಿಗಳು ಈ ಪ್ರಶಸ್ತಿಗಾಗಿ ಪರಿಗಣನೆಗೆ ಅರ್ಹವಾಗಿರುತ್ತವೆ. ಪ್ರಶಸ್ತಿಯನ್ನು ಆವರ್ತನದಲ್ಲಿ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ಲೇಖಕಿಯರಿಗೆ ನೀಡಬೇಕು. ಯಾವುದೇ ಪ್ರಕಾರದ ಅರ್ಹ ಲೇಖಕಿ ಲಭ್ಯವಿಲ್ಲದಿದ್ದಲ್ಲಿ, ಇನ್ನೊಂದು ಪ್ರಕಾರದ ಲೇಖಕಿಯನ್ನು ಸಹ ಪರಿಗಣಿಸಬಹುದು
				3. ಸೃಜನಶೀಲ ಪ್ರಕಾರಗಳು ಎಂದರೆ ಕಾವ್ಯ, ನಾಟಕ, ಕಾದಂಬರಿ, ಸಣ್ಣಕಥೆ, ಜೀವನಚರಿತ್ರೆ, ಆತ್ಮಚರಿತ್ರೆ, ಪ್ರವಾಸ ಕಥನ ಅಂಕಣ ಬರಹ, ಲಲಿತ ಪ್ರಬಂಧ ಮತ್ತು ವ್ಯಕ್ತಿ ಚಿತ್ರ.
				4. ಸೃಜನೇತರ ಪ್ರಕಾರಗಳು ಎಂದರೆ ಶುದ್ಧ ಹಾಗೂ ಅನ್ವಯಿಕ ವಿಜ್ಞಾನ, ಸಮಾಜ ವಿಜ್ಞಾನ, ಇತಿಹಾಸ, ಶಿಕ್ಷಣ, ಕಾನೂನು, ಮಾನವಿಕ ಶಾಸ್ತ್ರ, ಸಂಶೋಧನ, ಆಕರ ಸಾಹಿತ್ಯ, ಅಂಕಣ, ಸಾಹಿತ್ಯ ವಿಮರ್ಶೆ ಹಾಗೂ ಪರಾಮರ್ಶನ ಸಾಹಿತ್ಯ ಗ್ರಂಥಗಳು
				5. ಪಠ್ಯಪುಸ್ತಕ, ಸಂಶೋಧನಾ ಪ್ರಬಂಧ, ರೂಪಾಂತರಿಕ ಪುಸ್ತಕಗಳ ಲೇಖಕರನ್ನು ಹಾಗೂ ಕೇವಲ ಸಹಲೇಖಕರನ್ನು ಪ್ರಶಸ್ತಿಗೆ ಪರಿಗಣಿಸಬಾರದು.

...8

				6. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
		(ಈ)	ಬಿ.ವಿ. ಕಾರಂತ ಪ್ರಶಸ್ತಿ	1. ಕನ್ನಡ ನಾಡಿನ ಹವ್ಯಾಸಿ ರಂಗಭೂಮಿಯ ರೆಪರ್ಟರಿ ಪರಿಕಲ್ಪನೆಯನ್ನು ಹವ್ಯಾಸಿ ರಂಗಭೂಮಿಯಲ್ಲಿ ಪುನರುಜ್ಜೀವಿಸಿದ ಹಿರಿಯ ರಂಗಕರ್ಮಿ ಬಿ.ವಿ. ಕಾರಂತರ ಹೆಸರಿನಲ್ಲಿ ಹವ್ಯಾಸಿ ರಂಗಭೂಮಿ ಕ್ಷೇತ್ರದಲ್ಲಿ ಅನನ್ಯ ಸಾಧನೆ ಮಾಡಿದ ಕಲಾವಿದರಿಗೆ 'ಬಿ.ವಿ. ಕಾರಂತ್ ಪ್ರಶಸ್ತಿ' ನೀಡಿ ಗೌರವಿಸಲಾಗುವುದು
				2. ಹವ್ಯಾಸಿ ರಂಗಭೂಮಿಯ ನಟ-ನಟಿ, ನಿರ್ದೇಶಕ, ತಂತ್ರಜ್ಞರು, ರಂಗ ಸಂಗೀತ ತಜ್ಞರು, ಮತ್ತು ನಾಟಕಕಾರರನ್ನು ರಂಗಭೂಮಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದು.
				3. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
		(ಉ)	ಡಾ|| ಗುಬ್ಬಿ ವೀರಣ್ಣ ಪ್ರಶಸ್ತಿ	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಕನ್ನಡ ರಂಗಭೂಮಿಯ ಮೇರು ಕಲಾವಿದ, ಗುಬ್ಬಿ ಕಂಪನಿಯ ಸ್ಥಾಪಕರಾದ ಗುಬ್ಬಿ ವೀರಣ್ಣನವರ ಹೆಸರಿನಲ್ಲಿ ವೃತ್ತಿ ರಂಗಭೂಮಿಯ ಹಿರಿಯ ಕಲಾವಿದರಿಗೆ 'ಡಾ|| ಗುಬ್ಬಿ ವೀರಣ್ಣ ಪ್ರಶಸ್ತಿ' ನೀಡಲಾಗುವುದು
				2. ಈ ಪ್ರಶಸ್ತಿಗೆ ವೃತ್ತಿ ರಂಗಭೂಮಿಯ ನಟ-ನಟಿಯರು, ನಿರ್ದೇಶಕರು, ತಂತ್ರಜ್ಞರು, ಸಂಗೀತ ತಜ್ಞರನ್ನು ಅವರ ಜೀವಮಾನದ ಸೇವೆಯನ್ನು ಪರಿಗಣಿಸಿ ಪ್ರಶಸ್ತಿ ನೀಡಲಾಗುವುದು.
				3. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.

ಮೇಲ್ಕಂಡ ಸಾಹಿತ್ಯ ಹಾಗೂ ನಾಟಕ ವಿಭಾಗದ ಆಯ್ಕೆ ಉಪ ಸಮಿತಿಯ ರಚನೆಗೆ ಕೆಳಕಂಡ ನಿಯಮಗಳನ್ನು ಪಾಲಿಸುವುದು.

1. ಕನ್ನಡ ಸಾಹಿತ್ಯ/ನಾಟಕ/ಸಾಹಿತ್ಯ ಪರಿಚಾರಕ ಕ್ಷೇತ್ರದಲ್ಲಿ ಸಾಧನೆಗೈದ ಹಿರಿಯ ಸಾಧಕರು ಅಧ್ಯಕ್ಷರಾಗಿರಬೇಕು.
2. ಕನ್ನಡ ಸಾಹಿತ್ಯ ಸಾಧನೆ ಮಾಡಿದ ಹಿರಿಯ ಇಬ್ಬರು (2) ಸಾಧಕರು ಸದಸ್ಯರಾಗಿರಬೇಕು.
3. ನಾಟಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ಮೂರು (3) ಸಾಧಕರು ಸದಸ್ಯರಾಗಿರಬೇಕು.
4. ಸಾಹಿತ್ಯ ಪರಿಚಾರಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ಒಬ್ಬರು (1) ಸಾಧಕರು ಸದಸ್ಯರಾಗಿರಬೇಕು
5. ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ- ಪದನಿಮಿತ್ತ ಸದಸ್ಯರು.
6. ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ- ಪದನಿಮಿತ್ತ ಸದಸ್ಯರು.
7. ಒಬ್ಬರು ರಂಗಾಯಣ ನಿರ್ದೇಶಕರು- ಪದನಿಮಿತ್ತ ಸದಸ್ಯರು. (ನಾಲ್ಕು (4) ರಂಗಾಯಣಗಳ ನಿರ್ದೇಶಕರು ಒಬ್ಬರಂತೆ ಪ್ರತಿ ವರ್ಷ ಪುನರಾವರ್ತನೆಯಾಗಬೇಕು).
8. ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು- ಸದಸ್ಯ ಕಾರ್ಯದರ್ಶಿ.
9. ಸಮಿತಿಯಲ್ಲಿ ಒಬ್ಬರು (1) ಮಹಿಳಾ ಸದಸ್ಯರು ಕಡ್ಡಾಯವಾಗಿರಬೇಕು.
10. ಸಭೆಯ ಕನಿಷ್ಠ ಕೋರಮ್ 1/3

4.	**ಕಲಾ ವಿಭಾಗ**	(ಅ)	**ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ**	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಕರ್ನಾಟಕದ ಚಿತ್ರಕಲಾ ಕ್ಷೇತ್ರದಲ್ಲಿ ಮಹತ್ವದ ಕೊಡುಗೆ ಸಲ್ಲಿಸಿರುವ ಚಿತ್ರಶಿಲ್ಪಿಗಳಲ್ಲಿ ವರ್ಣ ಶಿಲ್ಪಿ ವೆಂಕಟಪ್ಪ ಅವರದು ಬಹುಮಾನ್ಯವಾದ ಹೆಸರು ಅವರು ವರ್ಣಚಿತ್ರ ಕ್ಷೇತ್ರಕ್ಕೆ ಸಲ್ಲಿಸಿರುವ ಅನುಪಮ ಸೇವೆಯನ್ನು ಗುರುತಿಸಿ ಚಿತ್ರಕಲಾ ಕ್ಷೇತ್ರದಲ್ಲಿ ಅನನ್ಯ ಸಾಧನೆ ಮಾಡಿರುವ ಕಲಾವಿದರಿಗೆ 'ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ' ನೀಡಿ ಗೌರವಿಸಲಾಗುವುದು.
				2. ಈ ಪ್ರಶಸ್ತಿಗೆ ಎಲ್ಲಾ ಪ್ರಕಾರಗಳ ಚಿತ್ರಕಲಾವಿದರನ್ನು ಪರಿಗಣಿಸಲಾಗುವುದು.
				3. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
		(ಆ)	**ಜಕಣಾಚಾರಿ ಪ್ರಶಸ್ತಿ**	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಕನ್ನಡ ನಾಡಿನ ಶಿಲ್ಪ ಸೌಂದರ್ಯದ ಖನಿ ಬೇಲೂರು-ಹಳೇಬೀಡು, ಶಿಲ್ಪ ವೈಭವಗಳ ಸಾಮ್ರಾಜ್ಯವನ್ನು ಕನ್ನಡನಾಡಿಗೆ ಒದಗಿಸಿಕೊಟ್ಟ ಅಮರಶಿಲ್ಪಿ ಜಕಣಾಚಾರಿಯ ಹೆಸರಿನಲ್ಲಿ ಶಿಲ್ಪ ಕಲಾವಿದರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

...10

				2. ಈ ಪ್ರಶಸ್ತಿಗೆ ಲೋಹಶಿಲ್ಪ, ಕಾಷ್ಟಶಿಲ್ಪ ಮತ್ತಿತರ ಪ್ರಕಾರದ ಸಾಂಪ್ರದಾಯಿಕ ಮತ್ತು ಆಧುನಿಕ ಶಿಲ್ಪಕಲಾ ಕಲಾವಿದರನ್ನು ಪರಿಗಣಿಸಲಾಗುವುದು.
				3. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
		(ಇ)	ಜಾನಪದಶ್ರೀ ಪ್ರಶಸ್ತಿ	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ನಾಡಿನ ಮೌಖಿಕ ಪರಂಪರೆ ಸಾಂಸ್ಕೃತಿಕ ವೈಭವಗಳ ಉಗಮ ಜನಪದ ಪರಂಪರೆ. ಈ ಜನಪದ ಪರಂಪರೆಯು ನಿರಂತರವಾಗಿ ಜನಪದರಲ್ಲಿ ಹಾಸುಹೊಕ್ಕಾಗಿ ನಾಡಿನ ಸಾಂಸ್ಕೃತಿಕ ಸಿರಿಯನ್ನು ವಿಸ್ತರಿಸುತ್ತಿದೆ. ಜಾನಪದ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮೂಲ ಜನಪದ ಕಲಾವಿದರನ್ನು ಗುರುತ್ತಿಸಿ "ಜಾನಪದ ಶ್ರೀ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿವುದು.
				2. ಈ ಪ್ರಶಸ್ತಿಗೆ ವಿದ್ವಾಂಸರು, ಸಂಶೋಧಕರು, ಜನಪದ ಕ್ಷೇತ್ರಗಳ ಕಾರ್ಯಕರ್ತರನ್ನು ಪರಿಗಣಿಸುವುದಿಲ್ಲ. ಕೇವಲ ಜನಪದ ಕಲಾವಿದರು ಅಂದರೆ ಜನಪದ ವಾದನ, ಜನಪದ ಗಾಯನ, ಜನಪದ ನೃತ್ಯ, ಯಕ್ಷಗಾನದ ಪ್ರಕಾರಗಳ ಕಲಾವಿದರನ್ನು ಮಾತ್ರ ಆವರ್ತನ ಪದ್ಧತಿಯಲ್ಲಿ ಪರಿಗಣಿಸಲಾಗುವುದು. ಒಂದೊಮ್ಮೆ ಸಂಬಂಧಿತ ಪ್ರಕಾರದಲ್ಲಿ ಅರ್ಹ ಕಲಾವಿದರು ಲಭ್ಯರಿಲ್ಲದಿದ್ದಲ್ಲಿ ಇನ್ನೊಂದು ಪ್ರಕಾರದ ಕಲಾವಿದರನ್ನು ಪ್ರಶಸ್ತಿಗೆ ಆಯ್ಕೆ ಮಾಡಬಹುದು.
				3. ಸರ್ಕಾರದ ಆದೇಶ ಸಂಖ್ಯೆ ಕಸಂವಾ:497:ಕಸಧ:2017, ದಿನಾಂಕ:15.12.2017ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕೊಡಮಾಡಲಾಗುವ ಜಾನಪದಶ್ರೀ ಪ್ರಶಸ್ತಿಯ ಸಂಖ್ಯೆಯನ್ನು ಮುಂದಿನ 10 ವರ್ಷಗಳ ಅವಧಿಗೆ ಪ್ರತಿ ವರ್ಷ ಇಬ್ಬರು ಕಲಾವಿದರಿಗೆ ವಿತರಿಸಲು ಅನುಕೂಲವಾಗುವಂತೆ ಹೆಚ್ಚಿಸಿ ಆದೇಶಿಸಿದೆ.

				4. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
	ಮೇಲ್ಕಂಡ ಕಲಾ ವಿಭಾಗದ ಆಯ್ಕೆ ಉಪ ಸಮಿತಿಯ ರಚನೆಗೆ ಕೆಳಕಂಡ ನಿಯಮಗಳನ್ನು ಪಾಲಿಸುವುದು. 1. ಲಲಿತಕಲೆ/ಶಿಲ್ಪಕಲೆ/ ಜಾನಪದ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ಸಾಧಕರು ಅಧ್ಯಕ್ಷರಾಗಿರಬೇಕು. (ಆಯ್ಕೆ ಉಪಸಮಿತಿಯಲ್ಲಿನ ಅಧ್ಯಕ್ಷರು ಮೇಲಿನ ಮೂರು ಕ್ಷೇತ್ರಗಳಲ್ಲಿ ಪ್ರತಿ ವರ್ಷ ಪುನರಾವರ್ತನೆ ಆಗತಕ್ಕದ್ದು) 2. ಲಲಿತಕಲೆ ಕ್ಷೇತ್ರದಲ್ಲಿ ಸಾಧನೆ ಹಿರಿಯ ಇಬ್ಬರು (2) ಸಾಧಕರು ಸದಸ್ಯರಾಗಿರಬೇಕು. 3. ಶಿಲ್ಪಕಲೆ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ಒಬ್ಬರು (1) ಸಾಧಕರು ಸದಸ್ಯರಾಗಿರಬೇಕು. 4. ಜಾನಪದ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ಇಬ್ಬರು (2) ಸಾಧಕರು ಸದಸ್ಯರಾಗಿರಬೇಕು 5. ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ- ಪದನಿಮಿತ್ತ ಸದಸ್ಯರು. 6. ಅಧ್ಯಕ್ಷರು, ಕರ್ನಾಟಕ ಶಿಲ್ಪಕಲಾ ಅಕಾಡೆಮಿ- ಪದನಿಮಿತ್ತ ಸದಸ್ಯರು. 7. ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ- ಪದನಿಮಿತ್ತ ಸದಸ್ಯರು. 8. ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-ಸದಸ್ಯ ಕಾರ್ಯದರ್ಶಿ. 9. ಸಮಿತಿಯಲ್ಲಿ ಕನಿಷ್ಠ ಒಬ್ಬರು (1) ಮಹಿಳಾ ಸದಸ್ಯರು ಕಡ್ಡಾಯವಾಗಿರಬೇಕು. 10. ಸಭೆಯ ಕನಿಷ್ಠ ಕೋರಮ್ 1/3			
5.	**ಸಂಗೀತ ನೃತ್ಯ ವಿಭಾಗ**	(ಅ)	**ಶ್ರೀ ನಿಜಗುಣ ಪುರಂದರ ಪ್ರಶಸ್ತಿ**	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಕರ್ನಾಟಕ ಸಾಂಸ್ಕೃತಿಕ ಲೋಕದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿರುವ ಶ್ರೀ ನಿಜಗುಣ ಶಿವಯೋಗಿಗಳು ಹಾಗೂ ಶ್ರೀ ಪುರಂದರದಾಸರಿಗೆ ಮಹತ್ವದ ಸ್ಥಾನವಿದೆ. ಈ ಶರಣ-ದಾಸ ಶ್ರೇಷ್ಠರ ಸಂಗೀತ-ಸಂಸ್ಕೃತಿ ಕ್ಷೇತ್ರಗಳ ಅನನ್ಯ ಸಾಧನೆಯ ಹೆಗ್ಗುರುತಾಗಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ
				2. ಕರ್ನಾಟಕದ ಪ್ರತಿಭಾವಂತ ಕರ್ನಾಟಕ ಶಾಸ್ತ್ರೀಯ ಸಂಗೀತ, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರಗಳ ಗಾಯಕರು ಹಾಗೂ ವಾದ್ಯ ಸಂಗೀತಗಾರರನ್ನು ಈ ಪ್ರಶಸ್ತಿಗೆ ಆವರ್ತನ ಕ್ರಮದಲ್ಲಿ ಪರಿಗಣಿಸಲಾಗುವುದು. ಒಂದೊಮ್ಮೆ ಸಂಬಂಧಿತ ಪ್ರಕಾರದಲ್ಲಿ ಅರ್ಹ ಕಲಾವಿದರು ಲಭ್ಯರಿಲ್ಲದಿದ್ದಲ್ಲಿ ಇನ್ನೊಂದು ಪ್ರಕಾರದ ಕಲಾವಿದರನ್ನು ಪ್ರಶಸ್ತಿಗೆ ಆಯ್ಕೆ ಮಾಡಬಹುದು.

				3. ಇಲಾಖೆಯು ಕೊಡ ಮಾಡುವ 'ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
		(ಆ)	ಕುಮಾರವ್ಯಾಸ ಪ್ರಶಸ್ತಿ	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಕನ್ನಡದ ಸಾಹಿತ್ಯ ಲೋಕದಲ್ಲಿ ಕುಮಾರವ್ಯಾಸ 'ಗದುಗಿನ ಭಾರತ' ಚಿರಸ್ಥಾಯಿಯಾದ ಕೃತಿ . ಈ ಶ್ರೇಷ್ಠಕವಿ ಹೆಸರಿನಲ್ಲಿ ಗಮಕ ಮತ್ತು ಕಥಾ ಕೀರ್ತನ ಕ್ಷೇತ್ರಗಳಲ್ಲಿ ಅನುಪಮ ಸಾಧನೆಗೈದಿರುವ ಹಿರಿಯ ಸಾಧಕರನ್ನು "ಕುಮಾರವ್ಯಾಸ ಪ್ರಶಸ್ತಿ" ನೀಡಿ ಗೌರವಿಸಲಾಗುವುದು.
				2. ಗಮಕ ವಾಚನ ಮತ್ತು ವ್ಯಾಖ್ಯಾನ ಹಾಗೂ ಕಥಾ ಕೀರ್ತನ ಕ್ಷೇತ್ರಗಳ ಸಾಧಕರಿಗೆ ಆವರ್ತನ ಕ್ರಮದಲ್ಲಿ ಪ್ರಶಸ್ತಿ ನೀಡಲಾಗುವುದು. ಒಂದೊಮ್ಮೆ ಸಂಬಂಧಿತ ಪ್ರಕಾರದಲ್ಲಿ ಅರ್ಹ ಕಲಾವಿದರು ಲಭ್ಯರಿಲ್ಲದಿದ್ದಲ್ಲಿ ಇನ್ನೊಂದು ಪ್ರಕಾರದ ಕಲಾವಿದರನ್ನು ಆಯ್ಕೆ ಮಾಡಬಹುದು.
				3. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
		(ಇ)	ಶಾಂತಲಾ ನಾಟ್ಯ ಪ್ರಶಸ್ತಿ	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಕನ್ನಡ ನಾಡಿನ ಪ್ರತಿಷ್ಠಿತ ಹೊಯ್ಸಳ ಸಾಮ್ರಾಜ್ಞಿ, ಕನ್ನಡ ನಾಡಿನ ಶಿಲ್ಪವೈಭವಗಳಾದ ಬೇಲೂರಿನ ನೃತ್ಯಶಿಲ್ಪಗಳ ರೂಪದರ್ಶಿ ನಾಟ್ಯರಾಣಿ ಶಾಂತಲಾ ಹೆಸರನ್ನು ಚಿರಸ್ಥಾಯಿಯಾಗಿಸಲು ಶಾಸ್ತ್ರೀಯ ನೃತ್ಯ ಕ್ಷೇತ್ರದಲ್ಲಿ ಅನುಪಮ ಸಾಧನೆ ಮಾಡಿರುವ ಸಾಧಕರಿಗೆ 'ಶಾಂತಲಾ ನಾಟ್ಯ ಪ್ರಶಸ್ತಿ' ನೀಡಿ ಗೌರವಿಸಲಾಗುತ್ತಿದೆ
				2. ಈ ಪ್ರಶಸ್ತಿಗೆ ಭರತನಾಟ್ಯ , ಕಥಕ್, ಕೂಚುಪುಡಿ, ಒಡಿಸ್ಸಿ, ಮೋಹಿನಿಯಾಟ್ಟಂ ಮತ್ತಿತರ ಪ್ರಕಾರಗಳಲ್ಲಿ ಅರ್ಹ ನೃತ್ಯ ಕಲಾವಿದರನ್ನು ಪರಿಗಣಿಸಲಾಗುವುದು

				3. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
		(ಈ)	ಸಂತ ಶಿಶುನಾಳ ಷರೀಫ ಪ್ರಶಸ್ತಿ	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಸಂತ ಶಿಶುನಾಳ ಷರೀಪ ಕನ್ನಡ ಸಾಹಿತ್ಯ ಲೋಕದ ಹೆಮ್ಮೆಯ ಸಂತ ಕವಿ, ಈ ಹಿರಿಯ ಸಂತ ಕವಿಯ ಹೆಸರಿನಲ್ಲಿ ಅನುಪಮ ಸಾಧನೆ ಮಾಡಿರುವ ಸುಗಮ ಸಂಗೀತಗಾರರಿಗೆ 'ಸಂತ ಶಿಶುನಾಳ ಷರೀಫ ಪ್ರಶಸ್ತಿ' ನೀಡಲಾಗುವುದು
				2. ಸುಗಮ ಸಂಗೀತ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿ ವಿಖ್ಯಾತರಾದ ಗಾಯಕರು ಮತ್ತು ಸ್ವರ ಸಂಯೋಜಕರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು.
				3. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
		(ಉ)	ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ	1. ಈ ಪ್ರಶಸ್ತಿಯು ರಾಜ್ಯಮಟ್ಟದ ಪ್ರಶಸ್ತಿಯಾಗಿದ್ದು ಚಾರಿತ್ರಿಕ ಮೈಸೂರು ದಸರಾ ಉತ್ಸವ ಸಂದರ್ಭದಲ್ಲಿ ರಾಜ್ಯದ ಹಿರಿಯ ಸಂಗೀತಗಾರರನ್ನು "ರಾಜ್ಯ ಸಂಗೀತ ವಿದ್ವಾನ್" ಎಂದು ಅಭಿದಾನವನ್ನಿತ್ತು ಪುರಸ್ಕರಿಸಲಾಗುವುದು
				2. ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತ ಕ್ಷೇತ್ರಗಳ ವಾದ್ಯ ಸಂಗೀತ ಮತ್ತು ಗಾಯನ ಕ್ಷೇತ್ರಗಳಲ್ಲಿ ಸುದೀರ್ಘವಾದ ಅನುಪಮ ಸೇವೆ ಹಾಗೂ ಅನನ್ಯ ಸಾಧನೆ ಮಾಡಿರುವ ಹಿರಿಯ ಸಂಗೀತಗಾರರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು
				3. ಪ್ರಶಸ್ತಿಗೆ ಆಯ್ಕೆಯಾದ ಸಂಗೀತಗಾರರನ್ನು ಆ ವರ್ಷದಲ್ಲಿ ಸರ್ಕಾರದ ಅತಿಥಿ ಎಂದು ಗೌರವಿಸಲಾಗುವುದು. ಸರ್ಕಾರವು ನಡೆಸುವ ವಿಶೇಷ ಸಾಂಸ್ಕೃತಿಕ ಉತ್ಸವಗಳಲ್ಲಿ ಅವರು ಪ್ರತಿಷ್ಠಿತ ಆಹ್ವಾನಿತರಾಗಿರುತ್ತಾರೆ

				4. ಪ್ರಶಸ್ತಿಗೆ ಆಯ್ಕೆಯಾದ ಸಂಗೀತಗಾರರು ಆ ವರ್ಷದಲ್ಲಿ ಸರ್ಕಾರಕ್ಕೆ ಸಂಗೀತ ಸಲಹೆಗಾರರಾಗಿರುತ್ತಾರೆ.
				5. ಇಲಾಖೆಯು ಕೊಡ ಮಾಡುವ ಇತರ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ.
	ಮೇಲ್ಕಂಡ ಸಂಗೀತ ನೃತ್ಯ ವಿಭಾಗದ ಆಯ್ಕೆ ಉಪ ಸಮಿತಿಯ ರಚನೆಗೆ ಕೆಳಕಂಡ ನಿಯಮಗಳನ್ನು ಪಾಲಿಸುವುದು. 1. ಕರ್ನಾಟಕ ಸಂಗೀತ/ಹಿಂದುಸ್ತಾನಿ ಸಂಗೀತ/ನೃತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ಸಾಧಕರು ಅಧ್ಯಕ್ಷರಾಗಿರಬೇಕು. 2. ಕರ್ನಾಟಕ ಸಂಗೀತ/ ಸುಗಮ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ಇಬ್ಬರು (2) ಸಾಧಕರು ಸದಸ್ಯರಾಗಿರಬೇಕು. 3. ಹಿಂದುಸ್ತಾನಿ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ಇಬ್ಬರು (2) ಸಾಧಕರು ಸದಸ್ಯರಾಗಿರಬೇಕು. 4. ನೃತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಿರಿಯ ಮೂರು (3) ಸಾಧಕರು ಸದಸ್ಯರಾಗಿರಬೇಕು 5. ಅಧ್ಯಕ್ಷರು, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ- ಪದನಿಮಿತ್ತ ಸದಸ್ಯರು. 6. ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-ಸದಸ್ಯ ಕಾರ್ಯದರ್ಶಿ. 7. ಸಮಿತಿಯಲ್ಲಿ ಕನಿಷ್ಠ ಒಬ್ಬರು (1) ಮಹಿಳಾ ಸದಸ್ಯರು ಕಡ್ಡಾಯವಾಗಿರಬೇಕು. 8. ಸಭೆಯ ಕನಿಷ್ಠ ಕೋರಮ್ 1/3			

(ಕೆ.ವೆಂಕಟೇಶಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
(ಸಂಸ್ಕೃತಿ ಶಾಖೆ)

ಅನುಬಂಧ-3

ಕ್ರ. ಸಂ.	ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ರಂಗಮಂದಿರ/ಭವನದ ಹೆಸರು	ಮಂಜೂರಾದ ಮೊತ್ತ (ರೂ.ಗಳಲ್ಲಿ)
1.	ಕಸಂವಾ/159/ಕಸಧ/2022, ದಿನಾಂಕ:21.05.2022	ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕೋಟಿ ಚೆನ್ನಯ್ಯ ಥೀಂ ಪಾರ್ಕ್‌ನ ಆವರಣದಲ್ಲಿನ ಯಕ್ಷ ರಂಗಾಯಣದ ನಿರ್ಮಾಣದ ಕುರಿತು	2,00,00,000
2.	ಕಸಂವಾ/280/ಕಸಧ/2022, ದಿನಾಂಕ:27.07.2022	ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯಲ್ಲಿ ಪ್ರೊ.ತೀ.ನಂ.ಶ್ರೀಕಂಠಯ್ಯರವರ ಜನ್ಮಶತಮಾನೋತ್ಸವ ಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.	21,04,989
3.	ಕಸಂವಾ/152 ಕಸಧ 2022 ದಿನಾಂಕ:04.08.2022	ದಿವಂಗತ ಶ್ರೀ ಜಗನ್ನಾಥರಾವ್ ಜೋಷಿ ಇವರ 100ನೇ ವರ್ಷದ ಹುಟ್ಟು ಹಬ್ಬದ ಸ್ಮರಣಾರ್ಥ ಬೆಳಗಾವಿಯಲ್ಲಿ ದಿವಂಗತ ಶ್ರೀ ಜಗನ್ನಾಥ ಜನ್ಮಶತಾಬ್ದಿ ಸ್ಮಾರಕ ಭವನ ನಿರ್ಮಾಣ ಕುರಿತು.	30,00,00,000
4.	ಕಸಂವಾ/147/ಕಸಧ/2022 ದಿನಾಂಕ:17.08.2022	ಶ್ರೀ ಗುರುದೇವ ರಾನಡೆಯವರ ಜನ್ಮಸ್ಥಾನ ಜಮಖಂಡಿಯಲ್ಲಿ ಸಾಂಸ್ಕೃತಿಕ ಭವನ ಅಭಿವೃದ್ಧಿ ಕಾಮಗಾರಿಗೆ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ	26,00,000
5.	ಕಸಂವಾ/199/ಕಸಧ/2021 ದಿನಾಂಕ.11.08.2022	ದಾಂಡೇಲಿ ನಗರದಲ್ಲಿ ಜಗಜ್ಯೋತಿ ಶ್ರೀ ಬಸವೇಶ್ವರ ಪುತ್ಥಳಿ ಪ್ರತಿಷ್ಠಾಪಿಸಲು ಅನುದಾನ	15,00,000
6.	ಕಸಂವಾ/224/ಕಸಧ/2021, ದಿನಾಂಕ:29.06.2022	ಉಡುಪಿ ಜಿಲ್ಲಾ ರಂಗಮಂದಿರ ನಿರ್ಮಾಣ ಕಾಮಗಾರಿಗೆ ಅನುದಾನ	2,50,00,000
7.	ಕಸಂವಾ/279/ಕಸಧ/2022, ದಿನಾಂಕ:27.07.2022	ಮೈಸೂರು ಕಲಾಮಂದಿರದ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಕುರಿತು	68,50,000
8.	ಕಸಂವಾ/309/ಕಸಧ/2022, ದಿನಾಂಕ:03.08.2022	ಉಡುಪಿ ಜಿಲ್ಲೆಯ ಅಲೆವೂರಿನಲ್ಲಿ ಗ್ರಾ.ಪಂ. ವ್ಯಾಪ್ತಿಯ ಪ್ರಗತಿನಗರದ ಡಯಟ್ ಆವರಣದಲ್ಲಿ ಬಯಲು ರಂಗಮಂದಿರ ನಿರ್ಮಾಣಕ್ಕೆ ಅನುದಾನ	10,00,000
9.	ಕಸಂವಾ/380/ಕಸಧ/2022, ದಿನಾಂಕ:09.09.2022	ಮೈಸೂರಿನ ಕರ್ನಾಟಕ ಕಲಾಮಂದಿರ ಹಾಗೂ ಕಿರುರಂಗಮಂದಿರದ ಧ್ವನಿ ಬೆಳಕು ವ್ಯವಸ್ಥೆ ದುರಸ್ಥಿಗೊಳಿಸಲು ಅನುದಾನ	46,75,000
10.	ಕಸಂವಾ 527 ಕಸಧ 2022, ದಿನಾಂಕ:06.12.2022	ಬಳ್ಳಾರಿ ನಗರದ ಸಂಗನಕಲ್ಲು ರಸ್ತೆಯಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಬಡಾವಣೆಯಲ್ಲಿ ರಂಗತೋರಣ ಸಂಸ್ಥೆ ವತಿಯಿಂದ ರಂಗಮಂದಿರ ನಿರ್ಮಾಣಕ್ಕೆ ಬಾಕಿ ಉಳಿದಿರುವ ಅನುದಾನ ಬಿಡುಗಡೆ ಮಾಡುವ ಬಗ್ಗೆ.	50,00,000
11.	ಕಸಂವಾ/202/ಕಸಧ/2022, ದಿ:25.10.2022	ಶ್ರೀ ರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಬೆಂಗಳೂರು ಇವರು "ಕಲಾ ಸಾಕೇತ" The Mandali Center for Performing Arts" ಸ್ಥಾಪನೆಗಾಗಿ ಅನುದಾನ ಬಿಡುಗಡೆಗೊಳಿಸುವ ಕುರಿತು.	1,99,96000
		ಒಟ್ಟು	38,87,25,989/-

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	436
ಸದಸ್ಯರ ಹೆಸರು	ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ)
ಉತ್ತರಿಸುವ ದಿನಾಂಕ	22.12.2022.
ಉತ್ತರಿಸುವ ಸಚಿವರು	ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕರಾವಳಿ ಪ್ರದೇಶದ ಸಾರ್ವಜನಿಕರ ಬಹು ವರ್ಷಗಳ ಬೇಡಿಕೆಯಾದ ಮರೈನ್ ಇಂಜಿನೀಯರಿಂಗ್ ಕಾಲೇಜನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭಿಸುವ ಬಗ್ಗೆ ಸರ್ಕಾರದ ಮುಂದಿರುವ ಪ್ರಸ್ತಾವನೆಗಳೇನು;	ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಆ)	ಈ ಕುರಿತಾದ ಸಮೀಕ್ಷೆ ಮತ್ತು ಇತರ ಮೂಲಸೌಕರ್ಯಗಳ ಲಭ್ಯತೆ ಇತ್ಯಾದಿಗಳನ್ನು ಸರ್ಕಾರವು ಕೈಗೊಂಡಿದೆಯೇ;	ಉದ್ಭವಿಸುವುದಿಲ್ಲ.
ಇ)	ಕರಾವಳಿ ಪ್ರದೇಶದಲ್ಲಿ ಮರೈನ್ ಇಂಜಿನೀಯರಿಂಗ್ ಕಾಲೇಜು ಅತ್ಯಾವಶ್ಯಕವಾಗಿದ್ದು, ಪ್ರಸ್ತುತ ವಿದ್ಯಾರ್ಥಿಗಳು ಹೊರ ರಾಜ್ಯಗಳಿಗೆ ಪದವಿಯ ವ್ಯಾಸಂಗಕ್ಕಾಗಿ ಹೋಗಬೇಕಾಗಿರುವುದರಿಂದ ರಾಜ್ಯದಲ್ಲಿ ಮರೈನ್ ಇಂಜಿನೀಯರಿಂಗ್ ಕಾಲೇಜನ್ನು ದಕ್ಷಿಣ ಕನ್ನಡ ಜಿಲ್ಲೆ ವ್ಯಾಪ್ತಿಯ ಪ್ರದೇಶದಲ್ಲಿ ಪ್ರಾರಂಭಿಸುವ ಮೂಲಕ ಕರಾವಳಿ ಪ್ರದೇಶದ ಯುವಕರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮ ಜರುಗಿಸುವುದೇ?	ರಾಜ್ಯದ ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಡಿಯಲ್ಲಿ ಒಟ್ಟು 16 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. 2022-23ನೇ ಆರ್ಥಿಕ ಸಾಲಿನ ಆಯವ್ಯಯದ ಭಾಷಣದ ಕಂಡಿಕೆ-102ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿದೆ. "ಅತ್ಯುನ್ನತ ಗುಣಮಟ್ಟದ ತಾಂತ್ರಿಕ ಬೋಧನೆ-ಕಲಿಕೆಗಳಿಗೆ ಹಾಗೂ ಸಂಶೋಧನೆಯನ್ನು ಉತ್ತೇಜಿಸಲು ರಾಜ್ಯದ ಏಳು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು "Karnataka Institute of Technology" ಗಳನ್ನಾಗಿ ಉನ್ನತೀಕರಿಸಿ, ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗುವುದು" 2022-23ನೇ ಆರ್ಥಿಕ ಸಾಲಿನ ಆಯ-ವ್ಯಯ ಭಾಷಣ ಕಂಡಿಕೆ-102ರಲ್ಲಿನ ಮೇಲ್ಕಂಡ ಘೋಷಣೆಯಂತೆ "ಅತ್ಯುನ್ನತ ಗುಣಮಟ್ಟದ ತಾಂತ್ರಿಕ ಬೋಧನೆ-ಕಲಿಕೆಗಳಿಗೆ ಹಾಗೂ ಸಂಶೋಧನೆಯನ್ನು ಉತ್ತೇಜಿಸಲು ಸರ್ಕಾರದ ಆದೇಶ ಸಂಖ್ಯೆ: ಇಡಿ 62 ಹೆಚ್‌ಪಿಟಿ 2022, ದಿನಾಂಕ: 07.07.2022ರನ್ವಯ ರಾಜ್ಯದ ಕೆಳಕಂಡ ಏಳು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು "Karnataka Institute of Technology" ಗಳನ್ನಾಗಿ ಉನ್ನತೀಕರಿಸಿ, ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಒಪ್ಪಂದ

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
ಮಾಡಿಕೊಳ್ಳಲಾಗುವುದು" ಎಂಬ ಯೋಜನೆಯನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಶೈಕ್ಷಣಿಕ ತಜ್ಞರ ಕಾರ್ಯಪಡೆಯನ್ನು ಈ ಮೂಲಕ ರಚಿಸಿ ಆದೇಶಿಸಿದೆ.
<table>
<tr><th>ಕ್ರ.ಸ</th><th>ಸಂಸ್ಥೆಯ ಹೆಸರು</th><th>ಪ್ರದೇಶ</th></tr>
<tr><td>1</td><td>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ.</td><td>ಮೈಸೂರು</td></tr>
<tr><td>2</td><td>SKSJIT, ಬೆಂಗಳೂರು.</td><td>ಬೆಂಗಳೂರು</td></tr>
<tr><td>3</td><td>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ.</td><td>ಕಿತ್ತೂರು</td></tr>
<tr><td>4</td><td>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು,ಕೆ.ಆರ್.ಪೇಟೆ.</td><td>ಮೈಸೂರು</td></tr>
<tr><td>5</td><td>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ.</td><td>ಬೆಂಗಳೂರು</td></tr>
<tr><td>6</td><td>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ತಳಕಲ್.</td><td>ಕಲ್ಯಾಣ</td></tr>
<tr><td>7</td><td>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರವಾರ.</td><td>ಕರಾವಳಿ</td></tr>
</table>
ಹಾಗೂ ರಾಜ್ಯದ ಪ್ರತಿ ಜಿಲ್ಲೆಯಲ್ಲೂ, ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ ತಲಾ ಒಂದು ಮಾದರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಉತ್ಕೃಷ್ಟ ಗುಣಮಟ್ಟಕ್ಕೇರಿಸಲು ಹಾಗೂ ಮಾದರಿ ಉನ್ನತ ಶಿಕ್ಷಣ ಸಂಸ್ಥೆಯನ್ನಾಗಿಸಲು ಹಾಗೂ ಈ ಮೂಲಕ ಜಿಲ್ಲೆಗಳ ಮಟ್ಟದಲ್ಲಿಯೂ ಸಹ ಅಂತರಾಷ್ಟ್ರೀಯ ಗುಣಮಟ್ಟದ ಶಿಕ್ಷಣ ಮತ್ತು ತಾಂತ್ರಿಕ ಕೌಶಲ್ಯತೆಯನ್ನು ವಿದ್ಯಾರ್ಥಿಗಳಿಗೆ ಒದಗಿಸುವ ಮೂಲ ಉದ್ದೇಶವನ್ನು "ರೀತಿ" ಯೋಜನೆಯ ಪರಿಕಲ್ಪನೆಯಡಿ ರೂಪುರೇಷೆ ಸಿದ್ಧಪಡಿಸಲಾಗುತ್ತಿದೆ. ಮುಂದುವರೆದು, ಪ್ರಸ್ತುತ ಎಐಸಿಟಿಇ ನಿಯಮಗಳ ಪ್ರಕಾರ ಈಗಾಗಲೇ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸಲು ಒತ್ತು ನೀಡಲಾಗುತ್ತಿದ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಬಲವರ್ಧನೆಗೊಳಿಸುವ ಉದ್ದೇಶವನ್ನು ಹೊಂದಿರುವುದರಿಂದ, ನೂತನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸುವ ಯಾವುದೇ ಕೋರಿಕೆಗಳನ್ನು ಪರಿಗಣಿಸದಿರುವಂತೆ ನಿರ್ಣಯಿಸಲಾಗಿದೆ.
</td></tr>
</table>

ಸಂಖ್ಯೆ: ಇಡಿ 137 ಹೆಚ್‌ಪಿಟಿ 2022)

(ಡಾ: ಅಶ್ವತ್ಥ್ ನಾರಾಯಣ ಸಿ.ಎನ್)
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು
ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು
ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 437
ಮಾನ್ಯ ಸದಸ್ಯರ ಹೆಸರು : ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ)
ಉತ್ತರಿಸಬೇಕಾದ ದಿನಾಂಕ : 22-12-2022
ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

*****

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ಕರಾವಳಿ ಪ್ರದೇಶಗಳ ಕಡಲ ತೀರಗಳಲ್ಲಿ ಪ್ರವಾಸೋದ್ಯಮ ತಾಣಗಳನ್ನು ಗುರುತಿಸಿ ವೈಶಿಷ್ಟ್ಯ ಮತ್ತು ವೈವಿಧ್ಯಮಯವಾದ ಪ್ರವಾಸೋದ್ಯಮ ತಾಣಗಳನ್ನು ವ್ಯವಸ್ಥೆಗೊಳಿಸುವ ಕುರಿತು ಸರಕಾರ ಕೈಗೊಂಡ ಪರಿಣಾಮಕಾರಿ ಕ್ರಮಗಳು ಯಾವುವು;	ಪ್ರವಾಸೋದ್ಯಮ ಇಲಾಖೆಯಿಂದ ರಾಜ್ಯದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗುರುತಿಸಿರುವ ಪ್ರವಾಸಿ ತಾಣಗಳ ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ. ಕರ್ನಾಟಕ ಪ್ರವಾಸೋದ್ಯಮ ನೀತಿ 2020-26ರ ಅಡಿಯಲ್ಲಿ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಆದ್ಯತಾ ಪ್ರವಾಸಿ ತಾಣಗಳನ್ನಾಗಿ ಗುರುತಿಸಲಾಗಿದೆ. ಸದರಿ ನೀತಿಯಡಿ ಗುರುತಿಸಿರುವ ಈ ಕೆಳಕಂಡ 26 ಪ್ರವಾಸಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ಸಹಾಯಧನ, ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.
ಆ)	ಪ್ರವಾಸಿ ತಾಣಗಳನ್ನು ಗುರುತಿಸಿ ಅವುಗಳ ಅಭಿವೃದ್ಧಿ ಮತ್ತು ನೂತನ ನಿರ್ಮಾಣ ಕಾರ್ಯಗಳಿಗಾಗಿ ಸರ್ಕಾರವು ಕೈಗೊಂಡ ಕ್ರಮಗಳಾವುವು;	1. ಸಾಹಸ ಪ್ರವಾಸೋದ್ಯಮ ಯೋಜನೆ 2. ಕೃಷಿ ಪ್ರವಾಸೋದ್ಯಮ ಯೋಜನೆ 3. ಮನರಂಜನಾ ಪಾರ್ಕ್ 4. ಕ್ಯಾರವಾನ್ ಪಾರ್ಕ್ ಯೋಜನೆ 5. ಕ್ಯಾರವಾನ್ ಪ್ರವಾಸೋದ್ಯಮ ಯೋಜನೆ 6. ಸಮಾವೇಶ ಕೇಂದ್ರ 7. ಸಾಂಸ್ಕೃತಿಕ ಪ್ರವಾಸೋದ್ಯಮ ಯೋಜನೆ 8. ಸಾಂಸ್ಕೃತಿಕ ಗ್ರಾಮ 9. ಪರಿಸರ ಪ್ರವಾಸೋದ್ಯಮ ಯೋಜನೆ. 10. ಪಾರಂಪರಿಕ ಹೋಟೆಲ್ 11. ಪಾರಂಪರಿಕ ಪ್ರವಾಸೋದ್ಯಮ ಯೋಜನೆ 12. ಪಾರಂಪರಿಕ ನಡಿಗೆ 13. ಹೋಂ ಸ್ಟೇ 14. ಹೋಟೆಲ್ ಯೋಜನೆ (ಬಜೆಟ್) 15. ಹೋಟೆಲ್ ಯೋಜನೆ (ಪ್ರೀಮಿಯಂ) 16. ಹೌಸ್‌ಬೋಟ್ ಯೋಜನೆ 17. ವಸ್ತುಸಂಗ್ರಹಾಲಯಗಳು ಮತ್ತು ಗ್ಯಾಲರಿಗಳು 18. ರೋಪ್ ವೇ 19. ಸುರಕ್ಷತೆ ಮತ್ತು ನೈರ್ಮಲ್ಯ ಪ್ರವಾಸೋದ್ಯಮ ಯೋಜನೆ 20. ಧ್ವನಿ ಮತ್ತು ಬೆಳಕಿನ ದರ್ಶನ 21. ಟೆಂಟ್ ವಸತಿ ಸೌಕರ್ಯ 22. ಥೀಮ್ ಪಾರ್ಕ್ 23. ಪ್ರವಾಸಿ ವಿವರಣಾ ಕೇಂದ್ರ 24. ಪ್ರವಾಸಿ ಲಕ್ಸುರಿ ಕೋಚ್ 25. ಸ್ವಾಸ್ಥ್ಯ ಕೇಂದ್ರ 26. ರಸ್ತೆ ಬದಿ ಸೌಲಭ್ಯಗಳು

		Ministry of Environment, Forest and Climate Change, IA-III (CRZ Division)ರವರ ಪತ್ರ ದಿನಾಂಕ:02-09-2022ರಲ್ಲಿ ರಾಜ್ಯದಿಂದ ಸಲ್ಲಿಸಿರುವ ಕರಾವಳಿ ವಲಯ ನಿರ್ವಹಣಾ ಯೋಜನೆ(Coastal Zone Management Plan)ಗೆ ಅನುಮೋದನೆ ನೀಡಲಾಗಿದೆ. ಪ್ರವಾಸೋದ್ಯಮ ಇಲಾಖೆಗೆ ಆಯವ್ಯಯದಲ್ಲಿ ಒದಗಿಸುವ ಅನುದಾನದ ಲಭ್ಯತೆಗೆ ಅನುಗುಣವಾಗಿ ಇಲಾಖೆಯಿಂದ ಗುರುತಿಸಿರುವ ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಮೂಲಸೌಲಭ್ಯಗಳನ್ನು ಹಂತಹಂತವಾಗಿ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುತ್ತಿದೆ.
ಇ)	ಸಸಿಹಿತ್ತಲು ಪ್ರದೇಶದ ಸಮುದ್ರ ಮತ್ತು ಹಿನ್ನೀರು ಪ್ರದೇಶಗಳಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯಗತಗೊಳಿಸುವ ಹಾಗೂ ಸ್ಥಳೀಯ ಮೀನುಗಾರರಿಗೆ ಮತ್ಸ್ಯೋದ್ಯಮದ ಜೊತೆಗೆ ಪ್ರವಾಸೋದ್ಯಮದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರವಾಸೋದ್ಯಮ ಕೌಶಲ್ಯಗಳನ್ನು ಕಲಿಸುವ ಮೂಲಕ ಉದ್ಯೋಗ ಸೃಷ್ಟಿ ಮಾಡಲು ಸರ್ಕಾರದ ಸಕಾಲಿಕ ಕ್ರಮಗಳೇನು;	ಪ್ರಸಕ್ತ ಸಾಲಿನಲ್ಲಿ ಸ್ಥಳೀಯ ಮೀನುಗಾರರಿಗೆ ಮತ್ಸ್ಯೋದ್ಯಮದ ಜೊತೆಗೆ ಪ್ರವಾಸೋದ್ಯಮದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರವಾಸೋದ್ಯಮ ಕೌಶಲ್ಯಗಳನ್ನು ಕಲ್ಪಿಸುವ ಮೂಲಕ ಉದ್ಯೋಗ ಸೃಷ್ಟಿ ಮಾಡುವಂತಹ ಯಾವುದೇ ಯೋಜನೆ / ಕಾರ್ಯಕ್ರಮಗಳನ್ನು ಇಲಾಖೆಯಿಂದ ಹಮ್ಮಿಕೊಂಡಿರುವುದಿಲ್ಲ.
ಈ)	ಕಡಲತೀರದ ಸಸಿಹಿತ್ತಲು ಪ್ರದೇಶದಲ್ಲಿ ಪ್ರವಾಸೋದ್ಯಮ ಇಲಾಖೆಯವರು ಹೊಂದಿರುವ ಜಮೀನು ಮತ್ತಿತರ ಸೌಲಭ್ಯಗಳ ವಿವರ ನೀಡುವುದು?	ದಿನಾಂಕ: 07.10.2021ರ ಆದೇಶದಲ್ಲಿ ಸಹಾಯಕ ಆಯುಕ್ತರು, ಮಂಗಳೂರು ಉಪ ವಿಭಾಗರವರು ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಮುಲ್ಕಿ ಹೋಬಳಿ ಸಸಿಹಿತ್ಲು ಕಡಲ ತೀರ ಪ್ರದೇಶದಲ್ಲಿ ಮುಲ್ಕಿ ತಾಲ್ಲೂಕಿನ ಸಸಿಹಿತ್ಲು ಗ್ರಾಮದ ಸರ್ವೆ ನಂ. 34/1ಎ ರಲ್ಲಿ 29-00 ಎಕರೆ ಸರ್ಕಾರಿ ಜಮೀನನ್ನು ಪ್ರವಾಸೋದ್ಯಮ ಇಲಾಖೆಯ ಹೆಸರಿಗೆ ಕಾಯ್ದಿರಿಸಿರುತ್ತಾರೆ.

ಸಂಖ್ಯೆ:**TOR 327 TDV 2022**

(ಆನಂದ್ ಸಿಂಗ್)
ಪ್ರವಾಸೋದ್ಯಮ,
ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

ಅನುಬಂಧ

ಜಿಲ್ಲೆಯ ಹೆಸರು	ತಾಲ್ಲೂಕು	ಪ್ರವಾಸಿ ತಾಣಗಳು	ಒಟ್ಟು ಸಂಖ್ಯೆ
ದಕ್ಷಿಣ ಕನ್ನಡ	ಮಂಗಳೂರು	ಸೂರತ್ಕಲ್, ಪಣಂಬೂರು, ಉಲ್ಲಾಳ, ಸೋಮೇಶ್ವರ, ಕಟೀಲು, ಮೂಡಬಿದರೆ, ತಣ್ಣೀರುಬಾವಿ, ಪಿಲಿಕುಳ ನಿಸರ್ಗಧಾಮ, ಸಸಿಹಿತ್ಲು ಬೀಚ್, ತಲಪಾಡಿ ಬೀಚ್, ನೆಲ್ಲಿತೀರ್ಥ ಗುಹಾಲಯ, ಗುರುಪುರ ನದಿ, ನೇತ್ರಾವತಿ ನದಿ, ಶ್ರೀಮಂತಿಬಾಯಿ ಸರ್ಕಾರಿ ಸಂಗ್ರಹಾಲಯ, ಸುಲ್ತಾನ್ ಭತ್ತೇರಿ ವಾಚ್ ಟವರ್, ಅಂಚೆ ಚೀಟಿಗಳ ಸಂಗ್ರಹ ಕೇಂದ್ರ-ಪಾಂಡೇಶ್ವರ, ಮರೋಳಿ ಸೂರ್ಯನಾರಾಯಣ ದೇವಸ್ಥಾನ	17
	ಬೆಳ್ತಂಗಡಿ	ಧರ್ಮಸ್ಥಳ, ವೇಣೂರು, ಜಮಲಾಬಾದ್ ಕೋಟೆ (ನರಸಿಂಹಗಡ), ಎರ್ಮಾಯಿ ಜಲಪಾತ, ದಿಡುಪೆ ಜಲಪಾತ, ಕಡಮಗುಂಡಿ ಜಲಪಾತ, ಪಶ್ಚಿಮಘಟ್ಟ	7
	ಸುಳ್ಯ	ತೋಡಿನಕಾನ ಜಲಪಾತ-ಮತ್ಸ್ಯಧಾಮ, ಎಣ್ಮೂರು-ಬಂಟಮಲೆ ಮತ್ತು ಪೂಮಲೆ	3
	ಪುತ್ತೂರು	ಬೇಂದ್ರೆ ತೀರ್ಥ, ಉಪ್ಪಿನಂಗಡಿ, ಶಿರಡಿ, ಬಿರುಮಲೆ ಬೆಟ್ಟ, ಪಡುಮಲೆ ಬೆಟ್ಟ, ಶಿವರಾಂ ಕಾರಂತ ಬಾಲವನ	6
	ಬಂಟ್ವಾಳ	ಅನಂತಪಾಡಿಯ ಪಾಂಡವರ ಗುಹೆ	1
	ಮೂಡಬಿದರೆ	ಕೊಡಿಯಡ್ಕ, ಸಮ್ಮಿಲನ ಬಟರ್ ಫ್ಲೈ ಪಾರ್ಕ್-ಬೆಳುವಾಯಿ	2
	ಮೂಲ್ಕಿ	ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನ ಮೂಲ್ಕಿ	1
		ಒಟ್ಟು	**37**
ಉತ್ತರ ಕನ್ನಡ	ಕಾರವಾರ	ಕಾರವಾರ, ಕುರುಮಗಡ, ಅಂಜದೀವ್ ದ್ವೀಪ್, ದೇವಗಡಶೇಜವಾಡ, ತಿಲಮಾತಿ ಕಡಲ ತೀರ	6
	ಜೋಯಿಡಾ	ಉಳವಿ, ರಾಮನಗರ, ಕ್ಯಾಸಲ್ ರಾಕ್	3
	ಯಲ್ಲಾಪುರ	ಯಲ್ಲಾಪುರ, ಮಾಗೋಡು ಜಲಪಾತ, ಲಾಲಗೂಳಿ ಜಲಪಾತ, ಸಾಥೋಡಿ ಜಲಪಾತ	4
	ಹಳಿಯಾಳ	ಹಳಿಯಾಳ, ದಾಂಡೇಲಿ, ದಾಂಡೇಲಿ ವನ್ಯಜೀವಿ ಧಾಮ, ಅಂಬಿಕಾ ನಗರ ಪವರ್ ಸ್ಟೇಷನ್, ಹಳಿಯಾಳ ಕೋಟೆ	5
	ಸಿದ್ದಾಪುರ	ಸಿದ್ದಾಪುರ, ಉಂಚಳ್ಳಿ ಜಲಪಾತ	2
	ಶಿರಸಿ	ಶಿರಸಿ, ಸೋಂದ, ಬನವಾಸಿ, ಶಿವಗಂಗಾ ಜಲಪಾತ	4
	ಕುಮಟಾ	ಕುಮಟಾ, ಗೋಕರ್ಣ, ಯಾಣ, ಧಾರೇಶ್ವರ, ಓಂ ಕಡಲ ತೀರ, ರವೀಂದ್ರನಾಥ ಟ್ಯಾಗೋರ್ ಮತ್ತು ದೇವಭಾಗ ಕಡಲತೀರ, ಮಿರ್ಜಾನ ಕೋಟೆ, ಕೂಡ್ಲೆ ಕಡಲ ತೀರ	8
	ಅಂಕೋಲಾ	ಅಂಕೋಲಾ, ವಿಭೂತಿ ಜಲಪಾತ	2
	ಭಟ್ಕಳ	ಭಟ್ಕಳ, ಮುರುಡೇಶ್ವರ	2
	ಹೊನ್ನಾವರ	ಬಸವರಾಜ ದುರ್ಗ, ಇಡುಗುಂಜಿ, ಕಾಸರಗೋಡು ಕಡಲತೀರ	3
	ಮುಂಡಗೋಡ	ಅತ್ತಿವೇರಿ ಪಕ್ಷಿಧಾಮ	1
		ಒಟ್ಟು	**40**

2...

ಜಿಲ್ಲೆಯ ಹೆಸರು	ತಾಲ್ಲೂಕು	ಪ್ರವಾಸಿ ತಾಣಗಳು	ಒಟ್ಟು ಸಂಖ್ಯೆ
ಉಡುಪಿ	ಉಡುಪಿ	ಉಡುಪಿ, ಮಲ್ಪೆ, ಸೇಂಟ್ ಮೇರಿಸ್ ಐಲ್ಯಾಂಡ್, ಕಾಪು, ಕೂಡ್ಲು ತೀರ್ಥ, ಹಸ್ತಶಿಲ್ಪ ಮತ್ತು ಮಣ್ಣಪಳ್ಳ ಕೆರೆ, ಹೌಸ್ ಬೋಟ್ ಕೋಡಿ ಬೇಂಗ್ರೆ, ಪಡುಕೆರೆ ಬೀಚ್, ಮಲ್ಪೆ ಸೀವಾಕ ವೇ & ಮಲ್ಪೆ ಬಂದರು, ನಾಣ್ಯ ಮ್ಯೂಸಿಯಂ, ಸಾಲುಮರದ ತಿಮ್ಮಕ್ಕ ಟ್ರೀ ಪಾರ್ಕ್, ಅರ್ಬಿ ಫಾಲ್ಸ್-ಮಣಿಪಾಲ	12
	ಕಾರ್ಕಳ	ಸೋಮೇಶ್ವರ ಬೀಚ್, ಗೊಮ್ಮಟೇಶ್ವರ ಬೆಟ್ಟ, ಕೋಟೆ ಚೆನ್ನಯ್ಯ ಥೀಮ್ ಪಾರ್ಕ್, ಚತುರ್ಮುಖ ಬಸದಿ, ಆನೆಕೆರೆ	5
	ಕುಂದಾಪುರ	ಮರವಂತೆ, ಕೊಲ್ಲೂರು, ಆನೆಜರಿ ಕೋಡಿ ಬೀಚ್, ಬಬ್ಬುಕುದ್ರು(ಪಂಚಗಂಗೊಳ್ಳು), ಮಲ್ಯಾಡಿ ಪಕ್ಷಿಧಾಮ, ಉಪ್ಪಿನಕುದ್ರು ದ್ವೀಪ, ಗಂಗೊಳ್ಳಿ ಬೀಚ್, ಹೌಸ್ ಬೋಟ್, ಸೌಪರ್ಣಿಕಾ ನದಿ	9
	ಬ್ರಹ್ಮಾವರ	ಬಾರ್ಕೂರು ಕೋಟೆ, ಕತ್ತಲೆ ಬಸದಿ, ಡಿವೈನ್ ಪಾರ್ಕ್, ಸೂರಾಲು ಅರಮನೆ, ಬಾಳಕುದ್ರು(ಉಪ್ಪಿನಕೋಟೆ) ದ್ವೀಪ, ಕೋಟಾ ಶಿವರಾಮ ಕಾರಂತ್ ಥೀಮ್ ಪಾರ್ಕ್	6
	ಕಾಪು	ಕಾಪು ಬೀಚ್-ಲೈಟ್ ಹೌಸ್/ಸ್ಕೂಬಾ ಡೈವಿಂಗ್, ಪಡುಬಿದ್ರೆ ಬೀಚ್ ಮತ್ತು ಪಡುಬಿದ್ರೆ ಎಂಡ್ ಪಾಯಿಂಟ್ (ಬಿಎಫ್‌ಸಿ ಬೀಚ್)	2
	ಬೈಂದೂರು	ಮರವಂತೆ ಬೀಚ್, ಒತ್ತಿನಾಣೆ-ಪಡುವರಿ ಸೋಮೇಶ್ವರ ಬೀಚ್, ಮೂಕಾಂಬಿಕಾ ವನ್ಯಜೀವಿ ಅಭಯಾರಣ್ಯ, ಕೊಡಚಾದ್ರಿ ಬೆಟ್ಟ, ಕೂಸಳ್ಳಿ ಫಾಲ್ಸ್, ಕಿರು ಮಂಜೇಶ್ವರ ಬೀಚ್, ಮೂಡಗಲ್ಲು ಪಾದೆ, ಶಿರೂರ ಬೀಚ್, ಬೆಳಕಲ ತೀರ್ಥ ಫಾಲ್ಸ್	9
	ಹೆಬ್ರಿ	ಕೂಡ್ಲು ತೀರ್ಥ, ಜೋಮ್ಲು ತೀರ್ಥ, ಸೀತಾನದಿ ಪ್ರಕೃತಿ ಕೇಂದ್ರ, ಬಕ್ರಮಠ-ಮುದ್ರಾಡಿ, ಮುದ್ರಾಡಿ ಗರಡಿ	5
		ಒಟ್ಟು	**48**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	438
ಸದಸ್ಯರ ಹೆಸರು	:	ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ)
ಉತ್ತರಿಸಬೇಕಾದ ದಿನಾಂಕ	:	22.12.2022
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಮೂಡಬಿದರೆ/ಮೂಲ್ಕಿ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಗಣನೀಯ ಸಂಖ್ಯೆಯ ಶಾಲೆಗಳು ಮೂಲಭೂತ ಸೌಲಭ್ಯ/ ಸೌಕರ್ಯಗಳ ಕೊರತೆಯನ್ನು ಎದುರಿಸುತ್ತಿದ್ದು, ಅಂತಹ ಶಾಲೆಗಳನ್ನು ಗುರುತಿಸಿ ಅವುಗಳನ್ನು ಸುವ್ಯವಸ್ಥಿತಗೊಳಿಸಲು ಸರ್ಕಾರ ಕ್ರಮ ಜರುಗಿಸುವುದೇ;	ಮೂಡಬಿದರೆ/ಮೂಲ್ಕಿ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕಳೆದ 3 ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ. • 2020-21ನೇ ಸಾಲಿಗೆ ಮುಂದುವರೆದ ಯೋಜನಾ ಕಾರ್ಯಕ್ರಮಗಳಡಿ 02 ಸರ್ಕಾರಿ ಪ್ರಾಥಮಿಕ ಶಾಲೆಗಳ 03 ಕೊಠಡಿಗಳ ನಿರ್ಮಾಣಕ್ಕಾಗಿ ರೂ.31.80 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ ಮತ್ತು 01 ಪ್ರೌಢ ಶಾಲೆಯ 02 ಕೊಠಡಿಗಳ ನಿರ್ಮಾಣಕ್ಕಾಗಿ ರೂ.31.50 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. • 2021-22ನೇ ಸಾಲಿಗೆ ಸದರಿ ಕ್ಷೇತ್ರದ 01 ಸರ್ಕಾರಿ ಶಾಲೆಯ ದುರಸ್ತಿ ಕಾಮಗಾರಿಗೆ ರೂ.6.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. • 2022-23ನೇ ಸಾಲಿಗೆ 09 ಸರ್ಕಾರಿ ಶಾಲೆಗಳ ಕೊಠಡಿಗಳ ದುರಸ್ತಿ ಕಾಮಗಾರಿಗೆ ರೂ.15.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. • 2022-23ನೇ ಸಾಲಿಗೆ ವಿವೇಕಾ ಶಾಲಾ ಯೋಜನೆಯಡಿ 35 ಕೊಠಡಿಗಳ ನಿರ್ಮಾಣಕ್ಕೆ ಕ್ರಮವಹಿಸಲಾಗಿದೆ. • 2022-23ನೇ ಸಾಲಿನಲ್ಲಿ 13 ಸರ್ಕಾರಿ ಶಾಲೆಗಳಿಗೆ ಜಿಲ್ಲಾ ಪಂಚಾಯತ್ ಯೋಜನೆಯಡಿಯಲ್ಲಿ ಪೀಠೋಪಕರಣ ಒದಗಿಸಲು ರೂ.13.44 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. • 2022-23ನೇ ಸಾಲಿನ ನರೇಗಾ ಒಗ್ಗೂಡಿಸುವಿಕೆಯ ಮೂಲಕ 22 ಶಾಲೆಗಳ ಶೌಚಾಲಯ ನಿರ್ಮಾಣಕ್ಕಾಗಿ ರೂ.113.40 ಲಕ್ಷಗಳಿಗೆ ಅನುದಾನ ಮಂಜೂರಾಗಿರುತ್ತದೆ. • 2022-23ನೇ ಸಾಲಿನ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ 28 ಸರ್ಕಾರಿ ಶಾಲೆಗಳ ದುರಸ್ತಿ ಕಾಮಗಾರಿಗೆ ರೂ.56.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ.

ಆ)	ಗ್ರಾಮಾಂತರ ಪ್ರದೇಶಗಳು ಹೆಚ್ಚಾಗಿರುವ ಮತ್ತು ಬಡ, ಮದ್ಯಮ ಜನರು ಈ ಪ್ರದೇಶಗಳಲ್ಲಿರುವ ಸರ್ಕಾರಿ ಶಾಲೆಗಳನ್ನು ಅವಲಂಬಿಸಿರುವುದರಿಂದ ಗುಣಮಟ್ಟದ ಶಿಕ್ಷಣ ಮತ್ತು ಸುವ್ಯವಸ್ಥಿತ ಕಟ್ಟಡಗಳನ್ನು ಸರ್ಕಾರವು ಪರಿಪೂರ್ಣವಾಗಿ ಒದಗಿಸಿ ಕೊಡಬೇಕಾದುದನ್ನು ಗಮನಿಸಿ ಸೂಕ್ತ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸರ್ಕಾರದ ಅನುಕರಣೀಯ ಕ್ರಮಗಳೇನು;	ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರು ಗುಣಮಟ್ಟದ ಬೋಧನೆಯನ್ನು ನಿರ್ವಹಿಸಲು ಅನುವಾಗುವಂತೆ ಶಿಕ್ಷಕರಿಗೆ ವಿವಿಧ ಸ್ವರೂಪದ ಸೇವಾನಿರತ ತರಬೇತಿಗಳನ್ನು ಒದಗಿಸಲಾಗುತ್ತಿದೆ. (ಮಾಹಿತಿಯನ್ನು **ಅನುಬಂಧ-1**ರಲ್ಲಿ ಒದಗಿಸಿದೆ) 2022-23ನೇ ಸಾಲಿನಲ್ಲಿ ವಿವೇಕ ಯೋಜನೆಯಡಿ ರಾಜ್ಯದಾದ್ಯಂತ ಸರ್ಕಾರಿ ಶಾಲೆಗಳಲ್ಲಿ 6601 ಕೊಠಡಿ ನಿರ್ಮಾಣಕ್ಕೆ ಕ್ರಮವಹಿಸಲಾಗಿದೆ. 2022-23ನೇ ಸಾಲಿಗೆ ಸರ್ಕಾರಿ ಶಾಲೆಗಳ ದುರಸ್ತಿ ಕಾಮಗಾರಿಗೆ ಹೆಚ್ಚುವರಿಯಾಗಿ ರೂ.100.00 ಕೋಟಿಗಳ ಅನುದಾನ ಮಂಜೂರಾಗಿರುತ್ತದೆ. ಸದರಿ ಅನುದಾನದಲ್ಲಿ ಅಗತ್ಯತೆಗೆ ಅನುಗುಣವಾಗಿ ರಾಜ್ಯದಾದ್ಯಂತ ಶಾಲೆಗಳಲ್ಲಿ ದುರಸ್ತಿ ಕಾರ್ಯ ಕೈಗೊಳ್ಳಲು ಅಗತ್ಯ ಕ್ರಮವಹಿಸಲಾಗುತ್ತಿದೆ.
ಇ)	ಈ ಪ್ರದೇಶದಲ್ಲಿರುವ ಎಷ್ಟು ಸರಕಾರಿ ಶಾಲೆಗಳ ಅಭಿವೃದ್ಧಿಗಾಗಿ ಸರಕಾರವು ಸಮೀಕ್ಷಿಸಿ ಅಭಿವೃದ್ಧಿಗೆ ಕ್ರಮ ಜರುಗಿಸಿದೆ?	2022-23ನೇ ಸಾಲಿಗೆ ಮೂಲ್ಕಿ ವಿಧಾನಸಭಾಕ್ಷೇತ್ರ ವ್ಯಾಪ್ತಿಯಲ್ಲಿನ ಒಟ್ಟು 127 ಸರ್ಕಾರಿ ಶಾಲೆಗಳ ಪೈಕಿ 72 ಶಾಲೆಗಳ ಅಭಿವೃದ್ಧಿಗಾಗಿ ಹಾಗೂ ವಿವೇಕ ಯೋಜನೆಯಡಿ ಸರ್ಕಾರಿ ಶಾಲೆಗಳ 35 ಕೊಠಡಿಗಳ ನಿರ್ಮಾಣ ಕಾಮಗಾರಿಗಾಗಿ ಕ್ರಮ ವಹಿಸಲಾಗಿದೆ. 2022-23ನೇ ಸಾಲಿನಲ್ಲಿ ಮಾಡಬಿದರೆ ವಿಧಾನಸಭಾ ಕ್ಷೇತ್ರಕ್ಕೆ ಶಾಲಾ ಕೊಠಡಿಗಳ ತುರ್ತು ದುರಸ್ತಿಗಾಗಿ ರೂ.30.00 ಲಕ್ಷಗಳ ಅನುದಾನ ಹಾಗೂ ಹೆಚ್ಚುವರಿಯಾಗಿ ರೂ.20.00ಲಕ್ಷಗಳ ಅನುದಾನ ಮಂಜೂರು ಮಾಡಲಾಗಿದೆ.

ಇಪಿ: 357 ಯೋಸಕ 2022

(ಬಿ.ಸಿ.ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಅನುಬಂಧ-1 LAQ-438

ಪೂರಕ ಟಿಪ್ಪಣಿ:

ಶಾಖೆಯ ಹೆಸರು: ಎಸ್.ಎಸ್.ಕೆ ಸಮಗ್ರ ಶಿಕ್ಷಣ ಕರ್ನಾಟಕ, ಪ್ರಾಥಮಿಕ ಮತ್ತು ಪ್ರೌಢ ವಿಭಾಗ

ಈ ವಿಭಾಗವು 1 ರಿಂದ 8ನೇ ತರಗತಿಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸೇವಾನಿರತ ತರಬೇತಿಯನ್ನು ನೀಡುತ್ತದೆ. ಈ ತರಬೇತಿಗಳು ಶಿಕ್ಷಕರ ವೃತ್ತಿಪರ ಬೆಳವಣಿಗೆಯನ್ನು ವೃದ್ಧಿಸುತ್ತದೆ. ಶಿಕ್ಷಕರನ್ನು ಪ್ರತಿಫಲಿತ ಅಭ್ಯಸಿಗರನ್ನಾಗಿ ಮಾಡಲು ಸಹಾಯ ಮಾಡುವುದರೊಂದಿಗೆ ಶಿಕ್ಷಕರು ಸ್ವಯಂ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಅವಕಾಶವನ್ನು ಒದಗಿಸುತ್ತದೆ. ಪ್ರತಿ ಮಗುವಿನ ಅನನ್ಯತೆ ಮತ್ತು ಸಾಮರ್ಥ್ಯವನ್ನು ಪರಿಗಣಿಸಿ ಕಲಿಕೆಯನ್ನು ಸುಗಮಗೊಳಿಸುವಂತೆ ಶಿಕ್ಷಕರನ್ನು ಸಿದ್ಧಪಡಿಸುತ್ತದೆ.

ಶಾಖೆಯಿಂದ ನಿರ್ವಹಿಸಲಾಗುತ್ತಿರುವ ತರಬೇತಿಗಳ ವಿವರ:

ನಿಷ್ಠಾ-1.0 ನಿಷ್ಠಾ-2.0 ಮತ್ತು ನಿಷ್ಠಾ-3.0 ಕಾರ್ಯಕ್ರಮವು ರಾಷ್ಟ್ರೀಯ ಉಪಕ್ರಮವಾಗಿದ್ದು, ಸಮಗ್ರ ಶಿಕ್ಷಕರ ತರಬೇತಿಯ ಮೂಲಕ ಶಾಲಾಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಮತ್ತು ಶಿಕ್ಷಕರ ಸಾಮರ್ಥ್ಯವನ್ನು ವೃದ್ಧಿಸುವ ಉದ್ದೇಶವನ್ನು ಹೊಂದಿದೆ. ಇವು ಮೆಗಾಟ್ರೈನಿಂಗ್ ಪ್ರೋಗ್ರಾಂಗಳಾಗಿದ್ದು, ಸ್ವ-ವೇಗದ ಕಲಿಕೆಗೆ ಅವಕಾಶವಿರುವ, ರಾಷ್ಟ್ರಾದ್ಯಂತ ಏಕರೂಪವಾಗಿ ಅನುಷ್ಠಾನವಾಗುತ್ತಿರುವ, ವೈವಿಧ್ಯಮಯ ಕೋರ್ಸ್‌ಗಳಿಂದ ಕೂಡಿದ ಡಿಜಿಟಲ್ ಪ್ರಮಾಣ ಪತ್ರ ದೊರೆಯುವ ಅತಿ ದೊಡ್ಡ ತರಬೇತಿಯಾಗಿದೆ. ಎನ್.ಸಿ.ಇ.ಆರ್.ಟಿ .ನೇತೃತ್ವದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗದ ಸರ್ಕಾರಿ ಮತ್ತು ಅನುದಾನಿತ, ಖಾಸಗಿ, ಅನುದಾನರಹಿತ ಶಾಲಾ ಶಿಕ್ಷಕರಿಗೆ ದೀಕ್ಷಾ ಪೋರ್ಟಲ್‌ನಲ್ಲಿ ನಿಷ್ಠಾ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.

- ನಿಷ್ಠಾ 1.0 2020-21ನೇ ಸಾಲಿಗಾಗಿ ಪಿ.ಎ.ಬಿ.ಯಿಂದ ಅನುಮೋದನೆಯಾಗಿರುವಂತೆ 1,52,773 ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 1-8 ನಿಷ್ಠಾ ತರಬೇತಿಯನ್ನು ಆನ್‌ಲೈನ್‌ನಲ್ಲಿ ನೀಡಲಾಗಿದ್ದು ಒಟ್ಟು 1,46,487 2021 ಮಾರ್ಚ್ 3ನೇ ವಾರದಲ್ಲಿ ಒಟ್ಟು 18 ಮಾಡ್ಯೂಲ್‌ಗಳನ್ನು ಎಲ್ಲಾ ಶಿಕ್ಷಕರು ಪರಿಚಯಿಸಿಕೊಂಡಿರುತ್ತಾರೆ.
- ನಿಷ್ಠಾ-2.0 2021-22ನೇ ಸಾಲಿಗಾಗಿ ಪಿ.ಎ.ಬಿ ಯಿಂದ ಅನುಮೋದನೆಯಾಗಿರುವಂತೆ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲಾ ಶಿಕ್ಷಕರಿಗೆ ಆನ್‌ಲೈನ್ ತರಬೇತಿಗಳಲ್ಲಿ ಎನ್.ಇ.ಪಿ-2020ರ ಆಶಯಗಳನ್ನು ಒಳಗೊಂಡಿದ್ದು, ರಾಜ್ಯಾದ್ಯಾಂತ ಶಿಕ್ಷಕರು ತರಬೇತಿಯನ್ನು ಪಡೆದಿದ್ದಾರೆ. ಜುಲೈ 01 ರಿಂದ ಈ ತರಬೇತಿಯನ್ನು ಪ್ರಾರಂಭಿಸಿದ್ದು ಮೇ-2022 ರ ಅಂತ್ಯಕ್ಕೆ ಕೋರ್ಸ್ ತರಬೇತಿಯನ್ನು ಹೊಂದಿ ಪ್ರಮಾಣ ಪತ್ರವನ್ನು ಪಡೆದಿರುತ್ತಾರೆ. 2021-22 ಸಾಲಿಗೆ ಗುರಿ 58249 ಇದ್ದು 54165 ಗಳ ಸಾಧನೆಯನ್ನು ಸಾಧಿಸಲಾಗಿದೆ.

- ನಿಷ್ಠಾ-3.0(FLN) 2021-22 ಸಾಲಿಗಾಗಿ ಪಿ.ಎ.ಬಿ ಯಿಂದ ಅನುಮೋದನೆಯಾಗಿರುವಂತೆ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ (1-5) ಆನ್‌ಲೈನ್ ಈ ತರಬೇತಿಗಳಲ್ಲಿ ಎನ್.ಇ.ಪಿ-2020ರ ಆಶಯಗಳನ್ನು ಒಳಗೊಂಡಿದ್ದು, ರಾಜ್ಯಾದ್ಯಾಂತ ಶಿಕ್ಷಕರು ತರಬೇತಿಯನ್ನು ಪಡೆಯುತ್ತಿದ್ದಾರೆ. ಅಕ್ಟೋಬರ್ 01 ರಿಂದ ಪ್ರಾರಂಭಿಸಿ ಮೇ-2022 ರ ಅಂತ್ಯಕ್ಕೆ ಕೋರ್ಸ್ ತರಬೇತಿ ಹೊಂದಿದ್ದು, ಪ್ರಮಾಣ ಪತ್ರವನ್ನು ಪಡೆದಿರುತ್ತಾರೆ. 2021-22 ಸಾಲಿಗೆ ಗುರಿ 51056 ಇದ್ದು 94401 ಸಾಧನೆಯನ್ನು ಸಾಧಿಸಲಾಗಿದೆ.
- **2022-23 ನೇ ಸಾಲಿನ ಎಸ್.ಎಸ್.ಕೆ ಪ್ರಾಥಮಿಕ ವಿಭಾಗದ ಗುರುಚೇತನ ಕಾರ್ಯಕ್ರಮದಡಿ** 1 ರಿಂದ 8ನೇ ತರಗತಿ ಬೋಧಿಸುತ್ತಿರುವ ಶಿಕ್ಷಕರಿಗಾಗಿ ಎನ್.ಇ.ಪಿ-2020 ರ ಆಶಯದಂತೆ 34 ಮಾಡ್ಯೂಲ್‌ಗಳ ಕಪ್ಲೆಟ್ ಮತ್ತು ವೀಡಿಯೋಗಳನ್ನು ಸೃಜಿಸಿ ದೀಕ್ಷಾ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಜೂನ್-2022 ರ ಮಾಹೆಯಿಂದ ಶಿಕ್ಷಕರ ತರಬೇತಿಯು ಆಯೋಜನೆಗೊಂಡಿದೆ, ದೀಕ್ಷಾ ಪೋರ್ಟಲ್‌ನಲ್ಲಿ ಮಾಡ್ಯೂಲ್ ಕೋರ್ಸ್ ಗಳು ಲಭ್ಯವಿದೆ. ಪ್ರತಿ ಡಯಟ್‌ನಲ್ಲಿ ಯಾವುದಾದರೊಂದು ಮಾಡ್ಯೂಲ್‌ನ್ನು ಐಚ್ಛಿಕವಾಗಿ ಆಯ್ಕೆ ಮಾಡಿಕೊಂಡು ಭೌತಿಕವಾಗಿ ಮುಖಾಮುಖಿ ತರಬೇತಿಯನ್ನು ಆಯೋಜಿಸಿರುತ್ತಾರೆ.
- **ಎಸ್.ಎಸ್.ಕೆ ಪ್ರೌಢ ವಿಭಾಗದಿಂದ** IISc ಗಣಿತ & ವಿಜ್ಞಾನ ಬೋಧಿಸುವ ಶಿಕ್ಷಕರ ತರಬೇತಿಯನ್ನು ಅಕ್ಟೋಬರ್ ಮಾಹೆಯಿಂದ ಪ್ರಾರಂಭಿಸಲಾಗಿದೆ. ಇದುವರೆಗೂ 2 ಬ್ಯಾಚ್‌ಗಳಲ್ಲಿ 206 ಶಿಕ್ಷಕರು IISc ಚಳ್ಳಕೆರೆಯಲ್ಲಿ ತರಬೇತಿ ಪಡೆದಿರುತ್ತಾರೆ.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ, ಬೆಂಗಳೂರು-85

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	440
2)	ಮಾನ್ಯ ಸದಸ್ಯರ ಹೆಸರು	ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)
3)	ಉತ್ತರಿಸಬೇಕಾದ ದಿನಾಂಕ	22-12-2022
4)	ಉತ್ತರಿಸುವವರು	ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಪ್ರಶ್ನೆ	ಉತ್ತರ
(ಅ) ಗ್ರಾಮೀಣ ಪ್ರದೇಶಗಳಲ್ಲಿನ ಮಹಿಳೆಯರು/ಯುವಕ/ಯುವತಿಯರು ಸೇರಿದಂತೆ ಸ್ವ-ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ಯೋಜನೆಗಳ ಸೌಲಭ್ಯ ಪಡೆದುಕೊಳ್ಳುವ ದಿಶೆಯಲ್ಲಿ ಸರ್ಕಾರ ಹಮ್ಮಿಕೊಂಡ ಸುಲಭ/ಸರಳ ಕಾರ್ಯಕ್ರಮಗಳು ಯಾವುವು;	ಗ್ರಾಮೀಣ ಪ್ರದೇಶಗಳಲ್ಲಿನ ಮಹಿಳೆಯರು/ಯುವಕ/ಯುವತಿಯರು ಸೇರಿದಂತೆ ಸ್ವ-ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ಯೋಜನೆಗಳ ಸೌಲಭ್ಯ ಪಡೆದುಕೊಳ್ಳುವ ದಿಶೆಯಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಕೆಳಕಂಡಂತಿರುತ್ತವೆ. **<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ</u>** • ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ರಾಜ್ಯದಲ್ಲಿ ಈಗಾಗಲೇ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ (ಸಿಎಂಕೆಕೆವೈ) ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆ (ಪಿಎಂಕೆಕೆವೈ) ಜಾರಿಗೊಳಿಸಲಾಗಿದೆ ಹಾಗೂ ಈ ಯೋಜನೆಗಳಡಿ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ 630 ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ 234 ವಿವಿಧ ಸರ್ಕಾರಿ/ಸರ್ಕಾರೇತರ ತರಬೇತಿ ಸಂಸ್ಥೆಗಳ ಮೂಲಕ ನೀಡಲಾಗುತ್ತಿದೆ ಮತ್ತು ಈ ಕೆಳಕಂಡಂತೆ ಕಾರ್ಯಕ್ರಮ/ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 1)**Skill Connect** (ಕೌಶಲ್ಯ ಸಂಪರ್ಕ) 2)ಸ್ಕಿಲ್ ಹಬ್ (**Skill Hub**) 3)ಸ್ಕಿಲ್ ಆನ್ ವೀಲ್ಸ್ (**Skill on Wheels**) 4)ಕೃಷಿ ಇಲಾಖೆ 5)ಪಂಚಾಯತ್ ರಾಜ್ ಇಲಾಖೆ:- (ಘನತ್ಯಾಜ್ಯ ನಿರ್ವಹಣೆ/ವಾಹನ ಚಾಲನೆ) 6) ಉದ್ಯಮಶೀಲತಾ ತರಬೇತಿ 7) ಒಂದು ಜಿಲ್ಲೆ ಒಂದು ಕೌಶಲ್ಯ 8) ಅಂತರ್‌ರಾಷ್ಟ್ರೀಯ ವಲಸಿಗ ಕೇಂದ್ರ 9)ಉದ್ಯೋಗ ಮೇಳಗಳು <u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u> ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿ ಪ್ರಮುಖವಾಗಿ ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಸ್ವ-ಸಹಾಯ ಗುಂಪುಗಳಾಗಿ ಸಂಘಟಿಸುವ ಮೂಲಕ ಅವರ ಸಾಮರ್ಥ್ಯ ಅಭಿವೃದ್ಧಿಗೊಳಿಸಿ ಜೀವನೋಪಾಯ ಉದ್ಯೋಗವನ್ನು ಕಲ್ಪಿಸುವ ಉದ್ದೇಶದಿಂದ ಈ ಕೆಳಕಂಡ ಕಾರ್ಯಕ್ರಮಗಳಡಿ ವಿವಿಧ ರೀತಿಯ ಯೋಜನಾ ಸೌಲಭ್ಯಗಳನ್ನು ನೀಡಲಾಗುತ್ತಿದೆ. 1) ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ(**NRLM**) 2)ದೀನ್‌ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯುಜಿಕೆವೈ) 3)ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೆಟಿ) 4)ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ (ಎನ್‌ಆರ್‌ಇಟಿಪಿ) 5) ಆರಂಭಿಕ ಗ್ರಾಮೀಣ ಉದ್ಯಮಶೀಲತಾ ಯೋಜನೆ (ಎಸ್‌ವಿಇಪಿ)

	<u>ದೀನ್‌ದಯಾಳ್ ಅಂತ್ಯೋದಯ-ಯೋಜನೆ ರಾಷ್ಟ್ರೀಯ ನಗರ ಜೀವನೋಪಾಯ</u> **<u>(NULM)</u>** **1)ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ** **2)ಸ್ವಯಂ ಉದ್ಯೋಗ ಕಾರ್ಯಕ್ರಮ** **3)ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ** **4)ನಗರದ ವಸತಿ ರಹಿತರಿಗೆ ಆಶ್ರಯ** **5)ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ** <u>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್)</u> ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್)ದಿಂದ ಈ ಕೆಳಕಂಡ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. 1.ಉದ್ಯಮಶೀಲತಾ ಪ್ರೇರಣಾ ಶಿಬಿರ 2. ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕೆ ಕಾರ್ಯಕ್ರಮ (ವಿಶೇಷವಾಗಿ ವಿದ್ಯಾರ್ಥಿಗಳಿಗೆ) 3. ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮ 4.ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ.
(ಆ) ಗ್ರಾಮೀಣದಿಂದ ಪ್ರಾರಂಭಿಸಿ ನಗರ, ಪಟ್ಟಣ, ಮಹಾನಗರ ಪ್ರದೇಶಗಳಿಗೂ ಕೌಶಲ್ಯಾಭಿವೃದ್ಧಿ ಯೋಜನಾ ಸೌಲಭ್ಯವನ್ನು ತಲುಪಿಸುವಲ್ಲಿ ಸರ್ಕಾರ ಅನುಸರಿಸುತ್ತಿರುವ ಕ್ರಮಗಳೇನು:	ಗ್ರಾಮೀಣದಿಂದ ಪ್ರಾರಂಭಿಸಿ ನಗರ, ಪಟ್ಟಣ, ಮಹಾನಗರ ಪ್ರದೇಶಗಳಿಗೂ ಕೌಶಲ್ಯಾಭಿವೃದ್ಧಿ ಯೋಜನಾ ಸೌಲಭ್ಯವನ್ನು ತಲುಪಿಸುವಲ್ಲಿ ಅನುಸರಿಸುತ್ತಿರುವ ಕ್ರಮಗಳು ಈ ಕೆಳಕಂಡಂತಿರುತ್ತದೆ. <u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ</u> • ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಆಸಕ್ತ ಉದ್ಯೋಗದಾತರು ಹಾಗೂ ಉದ್ಯೋಗಾಂಕ್ಷಿಗಳನ್ನು ಒಂದೇ ವೇದಿಕೆಯಡಿ ತರಲು Skill Connect (ಕೌಶಲ್ಯ ಸಂಪರ್ಕ) ಪೋರ್ಟಲ್ ಅನ್ನು ಸೃಷ್ಟಿಸಿದೆ. • ರಾಮನಗರ ಜಿಲ್ಲೆಯಲ್ಲಿ ಪೈಲಟ್ ಆಧಾರದ ಮೇರೆಗೆ ಸ್ಕಿಲ್ ಹಬ್ ಅನ್ನು (Skill Hub) ಈಗಾಗಲೇ ಸ್ಥಾಪಿಸಲಾಗಿದ್ದು, ಸದರಿ (Skill Hub)ನಲ್ಲಿ ಒಂದೇ ಸೂರಿನಡಿ ಯುವಕ-ಯುವತಿಯರಿಗೆ ಉದ್ಯೋಗಾವಕಾಶ, ಕೌಶಲ್ಯ ತರಬೇತಿ ಮತ್ತು ಉದ್ಯಮಶೀಲತೆಯ ತರಬೇತಿ ನೀಡಲು ಅವಕಾಶ ಕಲ್ಪಿಸಲಾಗಿದೆ. • Skill on Wheels ಯೋಜನೆಯನ್ನು ಪೈಲಟ್ ಆಧಾರದ ಮೇರೆಗೆ ಪ್ರಾರಂಭಿಸಿ ಈಗಾಗಲೇ ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಒಟ್ಟಾರೆ 90 ಅಭ್ಯರ್ಥಿಗಳಿಗೆ ಉಚಿತ ಕೌಶಲ್ಯಾಧಾರಿತ ತರಬೇತಿ ನೀಡಲಾಗಿದೆ. ಅದೇ ರೀತಿ ದೂರದ ಹಳ್ಳಿಗಾಡಿನ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಇತರೆ ಪ್ರದೇಶಗಳಲ್ಲಿನ ಯುವ ಜನತೆಗೆ ಸ್ಥಳದಲ್ಲಿಯೇ ಕೌಶಲ್ಯಾಧಾರಿತ ತರಬೇತಿಯನ್ನು ನೀಡುವ ಆಕಾಂಕ್ಷೆ ಹೊಂದಲಾಗಿದೆ. • ಕೃಷಿ ವಿಜ್ಞಾನ ಕೇಂದ್ರಗಳನ್ನು ತರಬೇತಿ ಪಾಲುದಾರರನ್ನಾಗಿ ಮಾಡಿ ಕೃಷಿ ತರಬೇತಿ ಸೇರಿ ಸ್ವಯಂ ಉದ್ಯೋಗಗಳಲ್ಲಿ ಅಂದರೆ organic grower, Agricultural mechanic, seeds grower ಕುರಿತು ತರಬೇತಿ ನೀಡಲಾಗಿದೆ ಹಾಗೂ ಜಿ.ಕೆ.ವಿ.ಕೆ ವಿಶ್ವವಿದ್ಯಾನಿಲಯದಿಂದ ಈಗಾಗಲೇ 30 ಅಭ್ಯರ್ಥಿಗಳಿಗೆ ಹೈನುಗಾರಿಕೆ ಹಾಗೂ ಬೇಕರಿ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಉಚಿತ ಕೌಶಲ್ಯಾಧಾರಿತ ತರಬೇತಿ ನೀಡಲಾಗಿದೆ. • ಸ್ವ-ಸಹಾಯ ಸಂಘಗಳ 818 ಮಹಿಳೆಯರಿಗೆ ಘನತ್ಯಾಜ್ಯ ನಿರ್ವಹಣೆ ತರಬೇತಿ ಮತ್ತು ವಾಹನ ಚಾಲನೆ ಬಗ್ಗೆ ಈಗಾಗಲೇ ತರಬೇತಿಯನ್ನು ನೀಡಲಾಗಿದೆ. <u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u> ರಾಷ್ಟ್ರೀಯ ಜೀವನೋಪಾಯದಡಿ ಬರುವ ದೀನ್‌ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಯೋಜನೆಯಡಿ (ಡೇ-ನಲ್ಮ್) ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1) ಸಾಮಾಜಿಕ ಸಜ್ಜುಗೊಳಿಸುವಿಕೆ ಮತ್ತು ಸಾಂಸ್ಥಿಕ ಅಭಿವೃದ್ಧಿ

ಸದರಿ ಉಪಘಟಕದಡಿ ಮಹಿಳಾ ಸ್ವ-ಸಹಾಯ ಸಂಘ, ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ ಹಾಗೂ ಸ್ವ-ಸಹಾಯ ಸಂಘಗಳಿಗೆ ರೂ.10,000/- ಮತ್ತು ಒಕ್ಕೂಟಗಳಿಗೆ ರೂ.50,000/- ಆವರ್ತಕ ನಿಧಿ ವಿತರಣೆ ಹಾಗೂ ಸಂಘ ಮತ್ತು ಒಕ್ಕೂಟದ ಸದಸ್ಯರುಗಳಿಗೆ ವಿವಿಧ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

2) **ಸ್ವಯಂ ಉದ್ಯೋಗ ಕಾರ್ಯಕ್ರಮ:**

ಈ ಉಪಘಟಕದ ಯೋಜನೆಯಡಿ ವೈಯಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00ಲಕ್ಷ, ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುತ್ತಿದೆ.

3) **ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:**

ಈ ಉಪಘಟಕದ ಯೋಜನೆಯಡಿ ನಗರದ ನಿರುದ್ಯೋಗ ಯುವಕ/ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಪ್ರಮಾಣೀಕರಣ ಮತ್ತು ಮೌಲ್ಯಮಾಪನವನ್ನು ಕೈಗೊಂಡು, ಕೇಂದ್ರ ಸರ್ಕಾರದ ಪ್ರಮಾಣ ಪತ್ರವನ್ನು ನೀಡಿ, ತರಬೇತಿಯನ್ನು ಪಡೆದುಕೊಂಡ ಶೇ.70 ರಷ್ಟು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಅಥವಾ ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗುತ್ತಿದೆ.

4) **ನಗರದ ವಸತಿ ರಹಿತರಿಗೆ ಆಶ್ರಯ:**

ಈ ಉಪಘಟಕದ ಯೋಜನೆಯಡಿ ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ, ಆಶ್ರಯವನ್ನು ಕಲ್ಪಿಸಲಾಗುತ್ತಿದೆ.

5) **ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:**

ಈ ಉಪಘಟಕದ ಯೋಜನೆಯಡಿ ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ಮತ್ತು ವ್ಯಾಪಾರ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತಿದೆ.

6) **ಸಾಮರ್ಥ್ಯ ಅಭಿವೃದ್ಧಿ ಮತ್ತು ತರಬೇತಿ:**

ಈ ಉಪಘಟಕದ ಯೋಜನೆಯಡಿ ಅಭಿಯಾನದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೊಡಗಿಸಿಕೊಂಡಿರುವ ಅಧಿಕಾರಿ/ಸಿಬ್ಬಂದಿಗಳಿಗೆ ವಿವಿಧ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ. ಮುಂದುವರೆದು ಇದೇ ಯೋಜನೆಯಡಿ 1,41,160 ನಗರದ ಯುವಕ/ಯುವತಿಯರಿಗೆ ವಿವಿಧ ರೀತಿಯ ಉದ್ಯೋಗ ಆಧಾರಿತ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತಿದೆ.

ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು ರಾಷ್ಟ್ರೀಯ ಜೀವನೋಪಾಯ ಅಭಿಯಾನ ಕಾರ್ಯಕ್ರಮದಡಿ ರಾಜ್ಯದ 226 ತಾಲ್ಲೂಕುಗಳಲ್ಲಿ ಗ್ರಾಮೀಣ ಮಹಿಳಾ ಬಡತನ ರೇಖೆಯ ಮಹಿಳೆಯರನ್ನು ಸ್ವ-ಸಹಾಯ ಗುಂಪಿನಡಿ ಸಂಘಟಿಸುವ ಮೂಲಕ ಜೀವನೋಪಾಯ ಸ್ವ-ಉದ್ಯೋಗಗಳನ್ನು ಕಲ್ಪಿಸುವ ಗುರಿ ಮತ್ತು ಉದ್ದೇಶದಿಂದ ಗ್ರಾಮೀಣ ಭಾಗದ ಎಲ್ಲಾ ಬಡ ಕುಟುಂಬದಿಂದ ಒಬ್ಬ ಮಹಿಳೆಯನ್ನು ಸ್ವ-ಸಹಾಯ ಗುಂಪಿಗೆ ಸೇರಿಸಲು ಕ್ರಮವಹಿಸಲಾಗಿದೆ. ಈ ಯೋಜನೆಯ ಪ್ರಮುಖ ಚಟುವಟಿಕೆಯೆಂದರೆ ಹೊಸ ಸ್ವ-ಸಹಾಯ ಗುಂಪುಗಳ ರಚನೆ, ಹಾಗೂ ಸ್ವ-ಸಹಾಯ ಗುಂಪುಗಳ ಬಲವರ್ಧನೆ ಹಾಗೂ ವಾರ್ಡ್ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳನ್ನು ರಚಿಸುವ ಮೂಲಕ ಅವರಿಗೆ ಜೀವನೋಪಾಯ ಉದ್ಯೋಗಗಳನ್ನು ಕಲ್ಪಿಸುವುದಾಗಿರುತ್ತದೆ. ಇದುವರೆಗೂ ರಾಜ್ಯದಲ್ಲಿ 29.48ಲಕ್ಷ ಮಹಿಳೆಯರನ್ನು 2.45ಲಕ್ಷ ಸ್ವ-ಸಹಾಯ ಗುಂಪುಗಳಡಿ ಸಂಘಟಿಸಲಾಗಿದೆ. ಅಲ್ಲದೇ ಸ್ವ-ಸಹಾಯ ಗುಂಪುಗಳಿಗೆ ಪಂಚಸೂತ್ರಗಳ ಪಾಲನೆ, ಬ್ಯಾಂಕ್ ಸಂಪರ್ಕ, ಜೀವನೋಪಾಯ ಚಟುವಟಿಕೆಗಳು, ವಾರ್ಷಿಕ ಲೆಕ್ಕ ಪರಿಶೋಧನೆ ಮುಂತಾದ ತರಬೇತಿಗಳನ್ನು ನೀಡುವುದರ ಮೂಲಕ ಗುಂಪುಗಳನ್ನು ಸುಸ್ಥಿರವಾಗಿಸಲು ಕ್ಷೇತ್ರ ಮಟ್ಟದಲ್ಲಿ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಮೂಲಕ ನಿರಂತರ ಬೆಂಬಲ ನೀಡಲಾಗುತ್ತಿದೆ.

ಸುತ್ತುನಿಧಿ:-

ಸ್ವ-ಸಹಾಯ ಗುಂಪುಗಳ ಸದಸ್ಯರು ಸ್ವ-ಉದ್ಯೋಗ ಕೈಗೊಳ್ಳಲು ಬ್ಯಾಂಕ್ ಸಾಲ ಪಡೆದು ಆರ್ಥಿಕವಾಗಿ ಸಬಲರಾಗುವಂತೆ ಮಾಡಲು ಅರ್ಹ ಗುಂಪುಗಳನ್ನು ಗುರುತಿಸಿ, ಶ್ರೇಣೀಕ[illegible] ರೂ.15000/-ಗಳನ್ನು ಅನುದಾನ ರೂಪದಲ್ಲಿ ಒದಗಿಸಲು ಕ್ರಮವಹಿಸಲಾಗಿದೆ. ರಾಜ್ಯದಲ್ಲಿ ಇದುವರೆಗೂ 2013-14 ರಿಂದ 2022-23 ವರೆಗೆ 37954 ಸ್ವ-ಸಹಾಯ ಗುಂಪುಗಳಿಗೆ ರೂ.5665.00 ಲಕ್ಷಗಳ ಸುತ್ತು ನಿಧಿಯನ್ನು ನೀಡಲಾಗುತ್ತಿದೆ.

ಸಮುದಾಯ ಬಂಡವಾಳ ನಿಧಿ:-

(ಸಿ.ಐ.ಎಫ್) ಒಕ್ಕೂಟಗಳ ಸುಸ್ಥಿರತೆಯೊಂದಿಗೆ ಜೀವನೋಪಾಯ ಉದ್ಯೋಗಗಳನ್ನು ಕೈಗೊಳ್ಳಲು ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ಅನುಕೂಲ ಒದಗಿಸುವ ದೃಷ್ಟಿಯಿಂದ ಕಡಿಮೆ ಬಡ್ಡಿದರದಲ್ಲಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ ಮೂಲಕ ರೂ.1.50 ಲಕ್ಷ ಸಮುದಾಯ ಬಂಡವಾಳ ನಿಧಿಯನ್ನು ನೀಡಲಾಗುತ್ತಿದೆ. ಇದುವರೆಗೆ ಒಕ್ಕೂಟಗಳ ಮೂಲಕ 98,493 ಸ್ವ-ಸಹಾಯ ಗುಂಪುಗಳಿಗೆ ರೂ.97909.00 ಲಕ್ಷಗಳಷ್ಟು ಸಮುದಾಯ ಬಂಡವಾಳ ನಿಧಿಯನ್ನು ನೀಡಲಾಗಿದ್ದು ಈ ಮೊತ್ತವು ಗುಂಪುಗಳಲ್ಲಿ ನಿರಂತರವಾಗಿ ಲಭ್ಯವಿರುತ್ತದೆ. ಅಲ್ಲದೇ ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕ್ ಲಿಂಕೇಜ್ ಮೂಲಕ ಅವಶ್ಯಕ ಸಾಲ-ಸೌಲಭ್ಯ ಒದಗಿಸಲಾಗುತ್ತಿದೆ.

ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ:-

ರಾಜ್ಯದ 3 ಜಿಲ್ಲೆಗಳ ಆಯ್ದ 15 ತಾಲ್ಲೂಕುಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ ಅನುಷ್ಠಾನಗೊಳ್ಳುತ್ತಿದ್ದು, 13 ಒನ್‌ಸ್ಟಾಪ್ ಸೆಂಟರ್‌ಗಳ ಮೂಲಕ ಪ್ರಮುಖವಾಗಿ ಮಹಿಳೆಯರನ್ನು ಉದ್ದಿಮೆದಾರರನ್ನಾಗಿ ಬೆಳೆಸುವಲ್ಲಿ ಸೂಕ್ತ ತರಬೇತಿ, ಕೌಶಲ್ಯಗಳ ತಾಂತ್ರಿಕ ಬೆಂಬಲ ಮತ್ತು ಮಾರುಕಟ್ಟೆ ವ್ಯವಸ್ಥೆ ಮತ್ತು ಸಮುದಾಯ ಉದ್ಯಮ ನಿಧಿಗಳನ್ನು ಅರ್ಹತೆಯಾನುಸಾರ ಕಲ್ಪಿಸಲಾಗುತ್ತಿದೆ. ಅಲ್ಲದೇ ಈ 03 ಜಿಲ್ಲೆಗಳಲ್ಲಿ 2017 ಮಹಿಳೆಯರನ್ನು ಉದ್ಯಮದಾರರನ್ನಾಗಿಸುವ ಕಾರ್ಯ ಪ್ರಗತಿಯಲ್ಲಿದೆ.

ದೀನ್ ದಯಾಳ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ ಡಿಡಿಯುಜಿಕೆವೈ:-

ರಾಜ್ಯದಲ್ಲಿ 13 ಯೋಜನಾ ಅನುಷ್ಠಾನ ಸಂಸ್ಥೆಗಳಡಿ 17 ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಮುಖವಾಗಿ ಗ್ರಾಮೀಣ ಯುವಕ ಯುವತಿಯರಿಗೆ ಬೇಡಿಕೆಗನುಗುಣವಾಗಿ ವೇತನ ಆಧಾರಿತ ವಿವಿಧ ಕೌಶಲ್ಯ ತರಬೇತಿಗಳನ್ನು ಒದಗಿಸಿ ಉದ್ಯೋಗ ಹೊಂದಲು ಬೆಂಬಲಿಸಲಾಗುತ್ತಿದೆ. ಇದುವರೆಗೆ ರಾಜ್ಯದಲ್ಲಿ 50127 ಅಭ್ಯರ್ಥಿಗಳಿಗೆ ವಿವಿಧ ತರಬೇತಿಗಳನ್ನು ನೀಡಿ 25840 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ.

ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಯೋಜನೆ:-

ಈ ಯೋಜನಾ ಕಾರ್ಯಕ್ರಮದಡಿ 31 ತರಬೇತಿ ಸಂಸ್ಥೆಗಳ ಮೂಲಕ ಗ್ರಾಮೀಣ ಯುವಕ ಯುವತಿಯರಿಗೆ ಅಭ್ಯರ್ಥಿಗಳ ಆಯ್ಕೆಯಾನುಸಾರ ಸ್ವ-ಉದ್ಯೋಗ ಆಧಾರಿತ ಉಚಿತ ತರಬೇತಿಯನ್ನು ನೀಡಲಾಗುತ್ತಿದ್ದು, ರಾಜ್ಯದಲ್ಲಿ ಒಟ್ಟು 347646 ಅಭ್ಯರ್ಥಿಗಳಿಗೆ ನೀಡಿ ಸ್ವ-ಉದ್ಯೋಗ ಒದಗಿಸಲಾಗಿರುತ್ತದೆ. ಇವರುಗಳಲ್ಲಿ 290806 ಬಡತನ ರೇಖೆಯ ಕುಟುಂಬಗಳ ಅಭ್ಯರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

ಸಿಡಾಕ್

ಉದ್ಯಮಶೀಲತಾ ತಿಳುವಳಿಕೆ ಶಿಬಿರ :

ಉದ್ಯಮಶೀಲತೆಯ ಬಗ್ಗೆ ತಿಳುವಳಿಕೆ ನೀಡುವುದು, ಉದ್ಯಮಶೀಲತೆಗೆ ಸರ್ಕಾರದಿಂದ ದೊರೆಯುವ ನೆರವಿನ ಬಗ್ಗೆ ತಿಳುವಳಿಕೆ ನೀಡುವುದು. ಈ ತರಬೇತಿಗಳಲ್ಲಿ ಪಾಲ್ಗೊಳ್ಳುತ್ತಿರುವ ವಿದ್ಯಾವಂತ ಯುವಕ / ಯುವತಿಯರನ್ನು ಉದ್ಯಮಶೀಲತೆಯತ್ತ ಸೆಳೆಯಲು ಹಾಗೂ ಅವರುಗಳು ತಮ್ಮದೇ ಆದಂತಹ ಸ್ವಂತ ಉದ್ಯೋಗಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಸೂಕ್ತ ತಿಳುವಳಿಕೆಯ ಮುಖಾಂತರ ಪ್ರೇರೆಪಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.

ಮುಂದುವರೆದು, ಈ ಒಂದು ದಿನದಲ್ಲಿ ಅಭ್ಯರ್ಥಿಗಳಿಗೆ ಸ್ವ-ಉದ್ಯೋಗ

ಪ್ರಾರಂಭಿಸಲು ಬೇಕಾಗುವ ಮಾರ್ಗದರ್ಶನ ನೀಡಿ ಯೋಜನಾ ಅನುಷ್ಠಾನದಲ್ಲಿ ಬರುವ ಹಂತಗಳ ಬಗ್ಗೆ ತಿಳುವಳಿಕೆ ನೀಡಲಾಗುವುದು.

ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕೆ ಕಾರ್ಯಕ್ರಮ:- ಈ ತರಬೇತಿ ಶಿಬಿರದಲ್ಲಿ ಅಂತಿಮ ವರ್ಷದ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸ್ವಯಂ ಉದ್ಯೋಗವನ್ನು ಪ್ರಾರಂಭಿಸಲು ಹಾಗೂ ಸಣ್ಣ ಉದ್ಯಮಗಳ ಸ್ಥಾಪನೆಯತ್ತ ಆಕರ್ಷಿಸುವ ಸಲುವಾಗಿ ಹಮ್ಮಿಕೊಳ್ಳಲಾಗುವುದು. ಈ ಮೂರು ದಿನಗಳಲ್ಲಿ ಅಭ್ಯರ್ಥಿಗಳಿಗೆ ಸ್ವ-ಉದ್ಯೋಗ ಪ್ರಾರಂಭಿಸಲು ಬೇಕಾಗುವ ಮಾರ್ಗದರ್ಶನ ನೀಡಿ ಯೋಜನಾ ಅನುಷ್ಠಾನದಲ್ಲಿ ಬರುವ ಹಂತಗಳ ಬಗ್ಗೆ ತಿಳುವಳಿಕೆ ನೀಡಲಾಗುವುದು.

<u>ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ :</u>

ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಆಸಕ್ತ ಯುವಕ-ಯುವತಿಯರಿಗೆ ತಮ್ಮದೇ ಆದ ಉದ್ಯಮವನ್ನು ಪ್ರಾರಂಭಿಸಲು ಹಮ್ಮಿಕೊಳ್ಳಲಾಗುವುದು. ಈ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳುವದಕ್ಕೆ ಪ್ರೇರಣೆಯನ್ನು ಒದಗಿಸುವಲ್ಲದೇ ಉದ್ಯಮದ ಸ್ಪಷ್ಟತೆ, ಮಾರಾಟ ಹಾಗೂ ಮಾರುಕಟ್ಟೆ ಕೌಶಲ್ಯ ಹಾಗೂ ತಂತ್ರ, ಕಾನೂನು ಮತ್ತು ಕಾಯಿದೆಗಳನ್ನು ಅರ್ಥೈಸಿಕೊಳ್ಳುವಲ್ಲಿ ಅತೀ ಅವಶ್ಯಕವಾಗಿದೆ.

<u>ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ :</u>

ಮೂವತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಆಸಕ್ತ ಯುವಕ ಯುವತಿಯರಿಗೆ ಮತ್ತು ತಮ್ಮದೇ ಆದ ಉದ್ಯಮವನ್ನು ಪ್ರಾರಂಭಿಸಲು ಹಮ್ಮಿಕೊಳ್ಳಲಾಗುವುದು. ಈ ಕಾರ್ಯಕ್ರಮಗಳು ಅಭ್ಯರ್ಥಿಗಳ ಉದ್ಯಮಶೀಲತಾ ಮತ್ತು ಸಾಮರ್ಥ್ಯ ಮತ್ತು ಅಭಿವೃದ್ಧಿಗೆ ಸಹಕಾರಿಯಾಗುವುದು.

(ಇ) ಕಳೆದ ಮೂರು ವರ್ಷಗಳಲ್ಲಿ ಈ ಕುರಿತಾದ ಗುರಿ-ಸಾಧನೆಗಳನ್ನು ಸಾಧಿಸಿದ ವಿವರಗಳು ಯಾವುವು:

ಕಳೆದ ಮೂರು ವರ್ಷಗಳಲ್ಲಿ ಗುರಿ-ಸಾಧನೆಗಳ ವಿವರ ಕೆಳಕಂಡಂತಿದೆ.

<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ</u>

ಕೌಶಲ್ಯಾಭಿವೃದ್ಧಿ ನಿಗಮವು ರಾಜ್ಯಾದ್ಯಂತ ಈಗಾಗಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮಹಾತ್ವಕಾಂಕ್ಷಿ ಯೋಜನೆಗಳಾದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಗಳನ್ನು ಜಾರಿಗೊಳಿಸಿದೆ. (ಗುರಿ ಮತ್ತು ಸಾಧನೆಗಳ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.)

<u>ದೀನ್‌ದಯಾಳ್ ಅಂತ್ಯೋದಯ ನಗರ ಜೀವನೋಪಾಯ (NULM)</u>

ಅನುಬಂಧ-2ರಲ್ಲಿ ಲಗತ್ತಿಸಿದೆ.

<u>ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ (NRLM)</u>

ಈ ತರಬೇತಿ ಕಾರ್ಯಕ್ರಮಗಳು ಬೇಡಿಕೆ ಆಧಾರಿತವಾಗಿದ್ದು, ಕಳೆದ ಮೂರು ವರ್ಷಗಳಲ್ಲಿ ಈ ಕುರಿತಾದ ಸಾಧನೆಗಳನ್ನು ಸಾಧಿಸಿದ ವಿವರಗಳು				
ಯೋಜನೆ	ಸಂಖ್ಯೆ	2019-20	2020-21	2021-22
ಡಿಡಿಯುಜಿಕೆವೈ ಯೋಜನೆ	ತರಬೇತಿ ಪಡೆದವರು	5998	1815	2964
	ಉದ್ಯೋಗ ಪಡೆದವರು	1854	1812	989
ಆರ್‌ಸೆಟಿ ಯೋಜನೆ	ತರಬೇತಿ ಪಡೆದವರು	24676	16333	18332
	ಸ್ವಯಂ ಉದ್ಯೋಗ (ಬ್ಯಾಂಕ್ ಸಾಲದೊಂದಿಗೆ)	9060	4694	3410
	ಸ್ವಯಂ ಉದ್ಯೋಗ (ಸ್ವಂತ ಬಂಡವಾಳ)	11376	4941	2341
	ಉದ್ಯೋಗ ಪಡೆದವರ	1813	308	151

<u>ಸಿಡಾಕ್</u>

ವರ್ಷ	ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ	
	ಗುರಿ	ಸಾಧನೆ
2019-20	22340	27694
2020-21	2135	2308
2021-22	9753	9773

(ಈ) ಒಬ್ಬ ವ್ಯಕ್ತಿಯನ್ನು ಅವರು ಬಯಸುವ ಉದ್ಯೋಗದ ಕೌಶಲ್ಯವನ್ನು ದೊರಕಿಸಿಕೊಟ್ಟು ಸ್ವಯಂ ಉದ್ಯೋಗ ಕೈಗೊಳ್ಳಲು ಅನುವು ಮಾಡಿಕೊಡಲು ಸರ್ಕಾರದ ಸರಳ ಕ್ರಿಯಾ ಯೋಜನೆಗಳು ಯಾವುವು;

ಒಬ್ಬ ವ್ಯಕ್ತಿಯನ್ನು ಅವರು ಬಯಸುವ ಉದ್ಯೋಗದ ಕೌಶಲ್ಯವನ್ನು ದೊರಕಿಸಿಕೊಟ್ಟು ಸ್ವಯಂ ಉದ್ಯೋಗ ಕೈಗೊಳ್ಳಲು ಅನುವು ಮಾಡಿಕೊಡಲು ಅನುಷ್ಠಾನಗೊಳಿಸಲಾದ ಕ್ರಿಯಾ ಯೋಜನೆಗಳ ವಿವರಗಳು

<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ</u>

- ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ರಾಜ್ಯದಾದ್ಯಂತ ಈಗಾಗಲೇ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆಯಡಿ ವಿವಿಧ ಜಾಬ್‌ರೋಲ್‌ಗಳಲ್ಲಿ ರಾಜ್ಯದ ಯುವಕ-ಯುವತಿಯರಿಗೆ ವಿವಿಧ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಉಚಿತ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದ್ದು, ಈಯೋಜನೆಯಡಿ ತರಬೇತಿ ಪಡೆಯುವ ಒಟ್ಟಾರೆ ಅಭ್ಯರ್ಥಿಗಳ ಪೈಕಿ ಶೇ.70ರಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ಷರತ್ತಿನೊಂದಿಗೆ ತರಬೇತುದಾರ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮವನ್ನು ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.
- Skill on Wheels ಯೋಜನೆಯಡಿ ದೂರದ ಹಳ್ಳಿಗಾಡಿನ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಯುವ ಜನತೆಗೆ ಹಾಗೂ ಇತರೆ ಪ್ರದೇಶಗಳಲ್ಲಿನ ಯುವ ಜನತೆಗೆ ಕೌಶಲ್ಯಾಧಾರಿತ ತರಬೇತಿಯನ್ನು ಸ್ಥಳದಲ್ಲಿಯೇ ನೀಡಲಾಗುತ್ತದೆ.

<u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u>

ದೀನ್‌ದಯಾಳ್ ಅಂತ್ಯೋದಯ ನಗರ ಯೋಜನೆಯಡಿ (ಡೇ-ಎನ್‌ಯುಎಲ್‌ಎಂ) ಅಭಿಯಾನವು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ಈ ಯೋಜನೆಯಡಿ ವಿವಿಧ ಕೌಶಲ್ಯಾಭಿವೃದ್ಧಿ ವಿಷಯಗಳು ಲಭ್ಯವಿದ್ದು, ಅವುಗಳಲ್ಲಿ ಅಭ್ಯರ್ಥಿಗಳು ಇಚ್ಛಿಸುವ/ಬಯಸುವ ತರಬೇತಿಗಳನ್ನು ಆಯ್ಕೆಮಾಡಿಕೊಳ್ಳಲು ಅವಕಾಶವಿರುತ್ತದೆ ಹಾಗೂ ತರಬೇತಿ ಕಾರ್ಯಕ್ರಮ ಮುಕ್ತಾಯಗೊಂಡ ನಂತರ ಅಭ್ಯರ್ಥಿಗಳು ಸ್ವಯಂ ಉದ್ಯೋಗ ಪ್ರಾರಂಭಿಸಲು ಇಚ್ಛಿಸಿದಲ್ಲಿ ಬ್ಯಾಂಕ್‌ನಿಂದ ರೂ.2.00 ಲಕ್ಷದವರೆಗೆ, ಗುಂಪು ಉದ್ದಿಮೆಯನ್ನು ಪ್ರಾರಂಭಿಸಲು ಇಚ್ಛಿಸಿದಲ್ಲಿ ರೂ.10.00 ಲಕ್ಷದವರೆಗೆ ಸಾಲ ಸೌಲಭ್ಯವನ್ನು ಕಲ್ಪಿಸಿ ಶೇ.7ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಭರಿಸಿ ಪಾವತಿಸಲಾಗುವುದು.

<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM)</u>

- ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿ ಅನುಷ್ಠಾನಗೊಳ್ಳುತ್ತಿರುವ ಡಿಡಿಯುಜಿಕೆವೈ ಮತ್ತು ಆರ್‌ಸೆಟಿ ಯೋಜನೆಗಳಡಿ ಒಬ್ಬ ವ್ಯಕ್ತಿಯು ಅವರು ಬಯಸುವ ಉದ್ಯೋಗದ ಕೌಶಲ್ಯವನ್ನು ಆಯ್ಕೆ ಮಾಡಿಕೊಳ್ಳಲು ಸೂಕ್ತವಾದ ಸಮಾಲೋಚನೆ ವ್ಯವಸ್ಥೆ ತರಬೇತಿ ಕೇಂದ್ರದಲ್ಲಿ ಲಭ್ಯವಿದ್ದು, ಈ ಸಮಾಲೋಚನೆಯಲ್ಲಿ ಕೌಶಲ್ಯ ತರಬೇತಿಗಳ ಸಂಪೂರ್ಣ ವಿವರಗಳನ್ನು ನೀಡಿ ಸೂಕ್ತವಾದ ತರಬೇತಿಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿವೆ. ಮುಂದುವರೆದು ಡಿಡಿಯುಜಿಕೆವೈ ಯೋಜನೆಯಡಿ ತರಬೇತಿ ನಂತರ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿ ಪಡೆಯಲು ಕೌಶಲ್ಯ ಸಹಾಯವಾಣಿ ಸಂಖ್ಯೆ 155267 ಸ್ಥಾಪಿಸಲಾಗಿರುತ್ತದೆ.

	<u>ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್)</u> ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆ (ಸಿ.ಎಂ.ಕೆ.ಕೆ.ವೈ) ಯೋಜನೆಯಡಿ ಕೌಶಲ್ಯ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರು ಸ್ವ-ಉದ್ಯೋಗಗಳನ್ನು ಕೈಗೊಳ್ಳಲು ಪ್ರೇರೇಪಿಸಲಾಗುತ್ತಿದೆ
(ಉ) ಎಲ್ಲಾ ವರ್ಗದ ಮಹಿಳೆಯರನ್ನು ಸ್ವಯಂ ಸುಲಭ ಸಾಧ್ಯವೆನಿಸುವ ವೃತ್ತಿಯಲ್ಲಿ ತೊಡಗಿಸಿಕೊಂಡು ಜೀವನಾಧಾರಕ್ಕೆ ಪರಿಪೂರ್ಣತೆಯನ್ನು ಪಡೆಯುವಲ್ಲಿ ಆರ್ಥಿಕ ಬಲ ಹೆಚ್ಚಿಸುವ ಕ್ರಿಯಾ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವಲ್ಲಿ ಸರ್ಕಾರದ ಅನುಕರಣೀಯ ಕ್ರಮಗಳೇನು?	ಎಲ್ಲಾ ವರ್ಗದ ಮಹಿಳೆಯರನ್ನು ಸ್ವಯಂ ಸುಲಭ ಸಾಧ್ಯವೆನಿಸುವ ವೃತ್ತಿಯಲ್ಲಿ ತೊಡಗಿಸಿಕೊಂಡು ಜೀವನಾಧಾರಕ್ಕೆ ಪರಿಪೂರ್ಣತೆಯನ್ನು ಪಡೆಯುವಲ್ಲಿ ಆರ್ಥಿಕ ಬಲ ಹೆಚ್ಚಿಸುವ ಕ್ರಿಯಾ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವಲ್ಲಿ ಕೈಗೊಂಡ ಅನುಕರಣೀಯ ಕ್ರಮಗಳು ಕೆಳಕಂಡಂತಿರುತ್ತದೆ. **<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ</u>** • ಕೌಶಲ್ಯಾಭಿವೃದ್ಧಿ ನಿಗಮ ಹಾಗೂ ಮಹಿಂದ್ರಾ ಮತ್ತು ಮಹಿಂದ್ರಾ ಸಮೂಹ ಸಂಸ್ಥೆಯವರು, ಮೆ: ನಾಂದಿ ಫೌಂಡೇಶನ್ ರವರ ಸಹಭಾಗಿತ್ವದಲ್ಲಿ 30,000 ಪದವಿ ವ್ಯಾಸಂಗ ಪೂರ್ಣಗೊಳಿಸುತ್ತಿರುವ ಹೆಣ್ಣು ಮಕ್ಕಳಿಗಾಗಿ Python, Digital Marketing, Soft Skills ಅಡಿಯಲ್ಲಿ ಉಚಿತ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, **ಈಗಾಗಲೇ 11,000 ಹೆಣ್ಣುಮಕ್ಕಳು ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದಿರುತ್ತಾರೆ.** ಉಳಿದಂತೆ ತರಬೇತಿ ಕಾರ್ಯಕ್ರಮವು ಪ್ರಗತಿಯಲ್ಲಿರುತ್ತದೆ. • "ಒಂದು ಜಿಲ್ಲೆ ಒಂದು ಕೌಶಲ್ಯ" ಎಂಬ ಶೀರ್ಷಿಕೆಯಡಿ ಸಾಂಪ್ರದಾಯಿಕ ಕಲೆ ಮತ್ತು ಕರಕುಶಲ ತಯಾರಿಕೆಯ ತಂತ್ರಗಳೊಂದಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು/ ಉದ್ಯಮಶೀಲರನ್ನಾಗಿಸಲು, ಅವಶ್ಯ ತರಬೇತಿ, ಮಾರುಕಟ್ಟೆ ಸಂಪರ್ಕ ಹಾಗೂ ಸಾಲ ಸೌಲಭ್ಯವನ್ನು ನೀಡುವ ತರಬೇತಿ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮದಡಿ ರಾಜ್ಯದ 31 ಜಿಲ್ಲೆಗಳಲ್ಲಿ ಆಯಾ ಜಿಲ್ಲೆಯಲ್ಲಿ ಜಾರಿಯಲ್ಲಿರುವ ಪಾರಂಪರಿಕ ಕುಲವೃತ್ತಿಗಳೆಂದು ಗುರುತಿಸಲ್ಪಟ್ಟಿರುವ **(ಅನುಬಂಧ-3 ರಲ್ಲಿ ನೀಡಿರುವಂತೆ)** ವೃತ್ತಿ/ಕಲೆಗಳಡಿ ಆಯಾ ಜಿಲ್ಲೆಯ ಕನಿಷ್ಠ **100 ಕುಶಲಕರ್ಮಿಗಳಿಗೆ** ಅವರದೇ ತರಬೇತಿ ನೀಡಲಾಗಿದೆ. ಅದರಂತೆ ಮೇದಾರ ಜನಾಂಗದ **50 ಅಭ್ಯರ್ಥಿಗಳಿಗೆ ಈಗಾಗಲೇ ತರಬೇತಿಯನ್ನು ನೀಡಲಾಗಿದ್ದು, ಉಳಿದ 50 ಅಭ್ಯರ್ಥಿಗಳಿಗೆ ತರಬೇತಿ ಕಾರ್ಯಕ್ರಮವು ಪ್ರಗತಿಯಲ್ಲಿರುತ್ತದೆ ಹಾಗೂ ಕಿನ್ನಳ ಬೊಂಬೆಗಳ ತಯಾರಿಕಾ ತರಬೇತಿ ಕಾರ್ಯಕ್ರಮದಡಿ 50 ಅಭ್ಯರ್ಥಿಗಳಿಗೆ 3 ತಿಂಗಳ ತರಬೇತಿ ನೀಡುವ ಕಾರ್ಯವು ಪ್ರಗತಿಯಲ್ಲಿರುತ್ತದೆ.** • ಈ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ National Institute of Design-Ahmadabad, National Institute of Fashion Technology – Bangalore, NABARD, KSHDCL, KVIC, Deshpande Foundation, TATA Trust, Flipkart, TRIFED, EPCH.,etc ಸಂಸ್ಥೆಗಳ ಸಹಯೋಗದೊಂದಿಗೆ ಜಾರಿಗೊಳಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. • ಸ್ವ-ಸಹಾಯ ಸಂಘಗಳ ಮಹಿಳೆಯರಿಗೆ ಘನತ್ಯಾಜ್ಯ ನಿರ್ವಹಣೆ ಮತ್ತು ವಾಹನ ಚಾಲನಾ ತರಬೇತಿಯಲ್ಲಿ ಈಗಾಗಲೇ 818 ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ. **<u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u>** ದೀನ್‌ದಯಾಳ್ ಅಂತ್ಯೋದಯ (ಡೇ-ಎನ್‌ಯುಎಲ್‌ಎಂ) ಯೋಜನಾ ಅಭಿಯಾನವು ಸ್ವಯಂ ಉದ್ಯೋಗ ಕಾರ್ಯಕ್ರಮದಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ವೈಯಕ್ತಿಕ ಉದ್ದಿಮೆಗೆ ರೂ.2.00 ಲಕ್ಷ, ಗುಂಪು ಕಿರು ಉದ್ದಿಮೆಗೆ ರೂ.10.00 ಲಕ್ಷ, ಎಸ್.ಹೆಚ್.ಜಿ ಕ್ರೆಡಿಟ್ ಲಿಂಕೇಜ್‌ಗೆ ರೂ.1.00 ಲಕ್ಷಗಳಷ್ಟು ಬ್ಯಾಂಕ್ ಮೂಲಕ ಸಾಲ ಸೌಲಭ್ಯ ಒದಗಿಸಿ ಸದರಿ ಸಾಲದ ಶೇ.7 ಕ್ಕಿಂತ ಮೇಲಿನ ಬಡ್ಡಿ ಸಹಾಯ ಧನವನ್ನು ಪಾವತಿಸಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ಆಯೋಜಿಸಲಾಗುವುದು.

ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ.

- ಸದರಿ ಉಪಘಟಕದಡಿ ನಗರ ನಿರುದ್ಯೋಗ ಯುವಕ/ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.
- ತರಬೇತಿ ಕಾರ್ಯಕ್ರಮ ಮುಕ್ತಾಯಗೊಂಡ ನಂತರ ಶೇ.70 ರಷ್ಟು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಅಥವಾ ವೇತನ ಆಧಾರಿತ ಉದ್ಯೋಗವನ್ನು ಕಲ್ಪಿಸಲಾಗುವುದು.

ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಯೋಜನಾ ಸಂಸ್ಥೆಯು ಎಲ್ಲಾ ವರ್ಗದ ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ನಿಯಮಾನುಸಾರ ಸಮುದಾಯ ಬಂಡವಾಳ ನಿಧಿ, ಸುತ್ತು ನಿಧಿ, ಬ್ಯಾಂಕ್ ಸಾಲ ಸೌಲಭ್ಯ, ಪಿಎಂಎಫ್‌ಎಂಇ ಯೋಜನೆಯಡಿ ಮೂಲ ಬಂಡವಾಳ ಸೌಲಭ್ಯ, ಕಿರು ಬಂಡವಾಳ ಉದ್ಯಮಗಳನ್ನು ಕೈಗೊಳ್ಳಲು ಸೂಕ್ತ ತರಬೇತಿ ಮತ್ತು ಲಿಂಕೇಜ್ ಒದಗಿಸಲಾಗುತ್ತಿದೆ. ಮುಂದುವರೆದು ನರೇಗಾ ಯೋಜನೆ ಸೇರಿದಂತೆ ಇತರೆ ಇಲಾಖೆಗಳಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಕೃಷಿ, ತೋಟಗಾರಿಕೆ ಮತ್ತು ಇತರೆ ಅವಶ್ಯಕ ಇಲಾಖೆಗಳೊಂದಿಗೆ ಒಗ್ಗೂಡಿಸುವಿಕೆ ಕಾರ್ಯಕ್ರಮದಡಿ ನಿರಂತರವಾಗಿ ಜೀವನೋಪಾಯ ಸೌಲಭ್ಯ ಒದಗಿಸಿ ಆರ್ಥಿಕ ಬಲ ವೃದ್ಧಿಸಲು ಕ್ರಮ ಕೈಗೊಳ್ಳಲಾಗಿದೆ.

<u>ಸಿಡಾಕ್</u>

ಎಲ್ಲಾ ವರ್ಗದ ಮಹಿಳೆಯರಿಗೆ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವಶ್ಯಕ ಮಾರ್ಗದರ್ಶನದೊಂದಿಗೆ ಬೆಂಬಲ ಸೇವೆ ನೀಡಿ ಅವರು ಸ್ವ-ಉದ್ಯೋಗಗಳನ್ನು ಕೈಗೊಳ್ಳಲು ಸಹಾಯ ಮಾಡಲಾಗುತ್ತಿದೆ.

ಸಂಖ್ಯೆ: ಕೌಉಜೀಇ 41 ಉಜೀಪ್ರ 2022

(ಡಾ|| ಸಿ.ಎನ್. ಅಶ್ವತ್ಥ್‌ನಾರಾಯಣ)
ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.

ಅನುಬಂಧ-1

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಕಾರ್ಯಕ್ರಮದಡಿ ಕಳೆದ ಮೂರು ವರ್ಷದಲ್ಲಿ ಕೋಲಾರ ಜಿಲ್ಲೆಗೆ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

ತಾಲ್ಲೂಕು	2020-21		2021-22		2022-23		ಒಟ್ಟು	
	ಅನುದಾನ ಬಿಡುಗಡೆ	ಅನುದಾನ ಖರ್ಚು	ಅನುದಾನ ಬಿಡುಗಡೆ	ಅನುದಾನ ಖರ್ಚು	ಅನುದಾನ ಬಿಡುಗಡೆ	ಅನುದಾನ ಖರ್ಚು	ಅನುದಾನ ಬಿಡುಗಡೆ	ಅನುದಾನ ಖರ್ಚು
ಬಂಗಾರಪೇಟೆ	6.15	6.15	45.15	45.15	187.50	187.50	238.80	238.80
ಕೆ.ಜಿ.ಎಫ್	6.00	6.00	2.85	2.85	423.00	423.00	431.85	431.85
ಕೋಲಾರ	287.40	287.40	125.75	125.75	411.00	411.00	824.15	824.15
ಮಾಲೂರು	115.15	115.15	158.90	158.90	109.50	109.50	383.55	383.55
ಮುಳಬಾಗಿಲು	87.40	87.40	84.10	84.10	00	00	171.50	171.50
ಶ್ರೀನಿವಾಸಪುರ	6.15	6.15	43.60	43.60	526.50	526.50	576.25	576.25
ಒಟ್ಟು	**508.25**	**508.25**	**460.35**	**460.35**	**1657.50**	**1657.50**	**2626.10**	**2626.10**

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

ಅನುಬಂಧ – 2

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ವರ್ಷ	ನಗರ ಸ್ಥಳೀಯ ಸಂಸ್ಥೆ ಹೆಸರು	ಪ್ರಾರಂಭಿಕ ಶಿಲ್ಕು(ಅನುದಾನ)	ಬಿಡುಗಡೆಯಾದ ಅನುದಾನ	ಖರ್ಚು ಮಾಡಲಾದ ಅನುದಾನ
1	2019-20	ಕೋಲಾರ	33.86	10.60	15.16
		ಬಂಗಾರಪೇಟೆ	12.92	4.61	5.57
		ಮಾಲೂರು	13.79	1.80	4.08
		ಮುಳಬಾಗಿಲು	21.71	2.48	5.52
		ರಾಬರ್ಟ್ಸನ್‌ಪೇಟೆ (ಕೆ.ಜಿ.ಎಫ್.)	60.78	8.29	12.15
		ಶ್ರೀನಿವಾಸಪುರ	13.66	0.70	3.21
		ಒಟ್ಟು	**156.72**	**28.48**	**45.69**
2	2020-21	ಕೋಲಾರ	22.66	13.80	15.19
		ಬಂಗಾರಪೇಟೆ	12.31	0	1.95
		ಮಾಲೂರು	11.93	0	1.80
		ಮುಳಬಾಗಿಲು	14.04	0	0.33
		ರಾಬರ್ಟ್ಸನ್‌ಪೇಟೆ (ಕೆ.ಜಿ.ಎಫ್.)	53.11	0	7.22
		ಶ್ರೀನಿವಾಸಪುರ	9.57	0	1.01
		ಒಟ್ಟು	**123.62**	**13.80**	**27.5**
3	2021-22	ಕೋಲಾರ	12.72	30.70	21.51
		ಬಂಗಾರಪೇಟೆ	10.70	0.72	0.71
		ಮಾಲೂರು	10.69	0.30	0.57
		ಮುಳಬಾಗಿಲು	14.08	0.46	0.52
		ರಾಬರ್ಟ್ಸನ್‌ಪೇಟೆ (ಕೆ.ಜಿ.ಎಫ್.)	47.52	15.91	6.96
		ಶ್ರೀನಿವಾಸಪುರ	8.81	0	1.92
		ಒಟ್ಟು	**104.52**	**48.09**	**32.19**
		ಒಟ್ಟು	384.86	**90.37**	**105.38**

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	441
2)	ಮಾನ್ಯ ಸದಸ್ಯರ ಹೆಸರು	ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)
3)	ಉತ್ತರಿಸಬೇಕಾದ ದಿನಾಂಕ	22-12-2022
4)	ಉತ್ತರಿಸುವವರು	ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಪ್ರಶ್ನೆ	ಉತ್ತರ
(ಅ) ರಾಜ್ಯದಲ್ಲಿ ಕೇಂದ್ರ ಪುರಸ್ಕೃತ ದೀನದಯಾಳ್ ಅಂತ್ಯೋದಯ ಯೋಜನೆ/ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನಾನುಷ್ಠಾನದ ಗುರಿ ಮತ್ತು ಸಾಧನೆಯ ವಿವರಗಳೇನು: (ಎರಡು ವರ್ಷದ ಮಾಹಿತಿ ನೀಡುವುದು)	ರಾಜ್ಯದಲ್ಲಿ ಕೇಂದ್ರ ಪುರಸ್ಕೃತ ದೀನದಯಾಳ್ ಅಂತ್ಯೋದಯ ಯೋಜನೆ/ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನಾನುಷ್ಠಾನದ ಗುರಿ ಮತ್ತು ಸಾಧನೆ ವಿವರಗಳು ಕೆಳಕಂಡಂತಿರುತ್ತವೆ. **<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM)</u>** 1)ಡಿಡಿಯುಜಿಕೆವೈ 2)ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ 3)ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ 4)ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ 5)ದೀನ್‌ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ 6)ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ 7)ಸುತ್ತು ನಿಧಿ 8)ಸಮುದಾಯ ಬಂಡವಾಳ 9)ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣ ಉದ್ದಿಮೆಗಳ ನಿಯಮ ಬದ್ಧಗೊಳಿಸುವಿಕೆ ಯೋಜನೆ **<u>ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (NULM)</u>** 1)ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ 2)ಸ್ವಯಂ ಉದ್ಯೋಗ ಕಾರ್ಯಕ್ರಮ 3)ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ 4)ನಗರದ ವಸತಿ ರಹಿತರಿಗೆ ಆಶ್ರಯ: 5)ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ ಗ್ರಾಮೀಣ ಪ್ರದೇಶದ ಬಡವರಲ್ಲಿನ ಕುಟುಂಬ ಆದಾಯವನ್ನು ಉತ್ತಮಪಡಿಸಲು ದೀರ್ಘಾವಧಿಯ ಜೀವನೋಪಾಯ ಚಟುವಟಿಕೆಗಳ ಅವಕಾಶಗಳನ್ನು ಹೆಚ್ಚಿಸುವುದರೊಂದಿಗೆ ಹಣಕಾಸು ಮತ್ತು ಹಣಕಾಸೇತರ ಸೇವೆಗಳನ್ನು ಅಭಿವೃದ್ಧಿಪಡಿಸುವುದಾಗಿರುತ್ತದೆ. ಅಭಿಯಾನದ ಗುರಿಯಂತೆ ಗ್ರಾಮೀಣ ಬಡತನ ನಿರ್ಮೂಲನೆಗಾಗಿ ಸಮರ್ಥ ಮತ್ತು ಪರಿಣಾಮಕಾರಿಯಾದ ಸಾಂಸ್ಥಿಕ ವೇದಿಕೆಗಳನ್ನು ರಚಿಸಿ ಸದೃಢಗೊಳಿಸಲಾಗುತ್ತಿದೆ. ಎಲ್ಲಾ ಗ್ರಾಮೀಣ ಬಡ ಕುಟುಂಬಗಳನ್ನು ಸ್ವ-ಸಹಾಯ ಗುಂಪುಗಳ ರಚನೆ ಮೂಲಕ ಅಭಿಯಾನದ ವ್ಯಾಪ್ತಿಗೆ ತರುವುದರೊಂದಿಗೆ ವಾರ್ಡ್ ಮಟ್ಟದ ಒಕ್ಕೂಟಗಳು ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳು ಮತ್ತು ತಾಲ್ಲೂಕು ಮಟ್ಟದ ಒಕ್ಕೂಟಗಳಾಗಿ ಸಂಘಟಿಸಲಾಗಿದೆ. ಅಭಿಯಾನವು ಅರ್ಹ ಸ್ವ-ಸಹಾಯ ಗುಂಪುಗಳು ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳಿಗೆ ಸಮುದಾಯ ಬಂಡವಾಳ ನಿಧಿ, ಸುತ್ತು ನಿಧಿ ಮತ್ತು ದುರ್ಬಲ ವರ್ಗದವರಿಗೆ (ಸಂಕಷ್ಟಗೊಳಪಟ್ಟ) ಸಮುದಾಯ ಪರಿಷ್ಕರಣಾ ನಿಧಿಗಳನ್ನು ಅಭಿಯಾನದಡಿ ಒದಗಿಸಲಾಗಿರುತ್ತದೆ.

	ಗ್ರಾಮೀಣ ಬಡತನ ನಿವಾರಣೆ ಕ್ರಿಯಾ ಯೋಜನೆ ತಯಾರಿಕೆ, ಲಿಂಗತ್ವದ ಚಟುವಟಿಕೆ, ಮಹಿಳೆಯರ ಆರೋಗ್ಯಕರ ಜೀವನಕ್ಕಾಗಿ ಆಹಾರ ಪೌಷ್ಟಿಕತೆ ಹಾಗೂ ಆರೋಗ್ಯ ನೈರ್ಮಲ್ಯತೆ ಕುರಿತಾದ ಅನೇಕ ಕಾರ್ಯಕ್ರಮಗಳನ್ನು ಪ್ರತಿ ಕುಟುಂಬದ ಮನೆ ಬಾಗಿಲಿಗೂ ತಲುಪಿಸಲಾಗುತ್ತಿದೆ. ವನ ಧನ ವಿಕಾಸ ಕೇಂದ್ರಗಳ ಸ್ಥಾಪನೆ, ರೈತ ಉತ್ಪಾದಕರ ಗುಂಪುಗಳ ರಚನೆ, ಸ್ವ-ಸಹಾಯ ಗುಂಪಿನವರು ತಯಾರಿಸುವ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ, ಪ್ರತಿ ತಾಲ್ಲೂಕಿನಲ್ಲಿ ಮಾಸಿಕ ಸಂತೆ, ಆನ್‌ಲೈನ್ ಮಾರುಕಟ್ಟೆಗಳ ಸೌಲಭ್ಯ ಸೇರಿದಂತೆ ಮಹಿಳೆಯರ ಸಬಲೀಕರಣಕ್ಕಾಗಿ ಉದ್ಯಮಿ ಚಟುವಟಿಕೆಗಳು ಮತ್ತು ಸುಸ್ಥಿರ ಜೀವನೋಪಾಯ ಉದ್ಯೋಗಗಳಿಗಾಗಿ ಇತರೆ ಇಲಾಖೆಗಳೊಂದಿಗೆ ಒಗ್ಗೂಡಿಸುವಿಕೆ ವೇದಿಕೆ ಮೂಲಕ ವಿವಿಧ ಸೇವಾ ಸೌಕರ್ಯಗಳ ಸೌಲಭ್ಯ ಪಡೆಯುವಲ್ಲಿ ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ. ರಾಜ್ಯದಲ್ಲಿ 2013-14 ರಿಂದ 2022-23 ರವರೆಗೆ 2948498 ಮಹಿಳೆಯರನ್ನು 245185 ಗುಂಪುಗಳಡಿ ಸಂಘಟಿಸಲಾಗಿದೆ.

ರಾಷ್ಟ್ರೀಯ ಜೀವನೋಪಾಯದ ಎರಡು ವರ್ಷದ ಸಾಧನೆಯ ವಿವರ

ಪ್ರಮುಖ ಪ್ರಗತಿಯ ಸೂಚಕಗಳು	2020-21		2021-22	
	ಭೌತಿಕಗುರಿ	ಆರ್ಥಿಕ ಸಾಧನೆ (ರೂ.ಲಕ್ಷಗಳಲ್ಲಿ)	ಭೌತಿಕ ಗುರಿ	ಆರ್ಥಿಕ ಸಾಧನೆ (ರೂ.ಲಕ್ಷಗಳಲ್ಲಿ)
ಸ್ವಸಹಾಯ ಗುಂಪುಗಳ ರಚನೆ/ವ್ಯಾಪ್ತಿಗೆತರುವ ಸಂಖ್ಯೆ	39942	25383	26400	24208
ವಾರ್ಡ್ ಮಟ್ಟದ ಒಕ್ಕೂಟಗಳ ರಚನೆ	5000	3057	4000	3406
ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳ ಸಂಖ್ಯೆ	1000	611	800	807
ಸಮುದಾಯ ಬಂಡವಾಳ ನಿಧಿ	23305	20649	27888	29840.50
ಸುತ್ತು ನಿಧಿ	10000	1500.00	-	-
ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣ ಉದ್ದಿಮೆಗಳ ನಿಯಮ ಬದ್ಧಗೊಳಿಸುವಿಕೆ ಯೋಜನೆ	2066	817.14	-	-

(ಆ) ಗ್ರಾಮೀಣರ ನೆರವಿಗೆ ಸಹಕಾರಿಯಾಗಿ ನಿಲ್ಲುವ ಈ ಯೋಜನಾನುಷ್ಠಾನವನ್ನು ಎಷ್ಟು ಜನ ಫಲಾನುಭವಿಗಳಿಗೆ ತಲುಪಿಸಲಾಗಿದೆ;	• ಗ್ರಾಮೀಣರ ನೆರವಿಗೆ ಸಹಕಾರಿಯಾಗಿರುವ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ವಿವಿಧ ಸೌಲಭ್ಯಗಳನ್ನು ಅರ್ಹತೆಗನುಗುಣವಾಗಿ ಸ್ವ-ಸಹಾಯ ಗುಂಪಿನ ಮಹಿಳಾ ಫಲಾನುಭವಿಗಳಿಗೆ ತಲುಪಿಸಲಾಗುತ್ತಿದೆ.

ಸೌಲಭ್ಯ	2020-21		2021-22	
	ಸೌಲಭ್ಯ ಪಡೆದ ಸ್ವ-ಸಹಾಯ ಗುಂಪುಗಳ ಸಂಖ್ಯೆ	ಒದಗಿಸಲಾಗಿರುವ ಮೊತ್ತ (ರೂ. ಲಕ್ಷಗಳಲ್ಲಿ)	ಸೌಲಭ್ಯ ಪಡೆದ ಸ್ವ-ಸಹಾಯ ಗುಂಪುಗಳ ಸಂಖ್ಯೆ	ಒದಗಿಸಲಾಗಿರುವ ಮೊತ್ತ (ರೂ. ಲಕ್ಷಗಳಲ್ಲಿ)
ಸಮುದಾಯ ಬಂಡವಾಳ ನಿಧಿ	23305	20649.25	27888	29842.50
ಸುತ್ತು ನಿಧಿ:	0	0	10000	1500.00

(ಇ) ಗ್ರಾಮೀಣ ಮಹಿಳೆಯರನ್ನು ಸಾಕ್ಷರ ಮತ್ತು ಸ್ವಾವಲಂಭಿಗಳನ್ನಾಗಿ ಮಾಡಲು ರಾಜ್ಯ **ಮತ್ತು ಕೇಂದ್ರ ಸರ್ಕಾರಗಳ ಯೋಜನೆಗಳನ್ನು** ಆದ್ಯತೆಯೊಂದಿಗೆ ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳಿಸುವಲ್ಲಿ ಸರ್ಕಾರದ ಅಗತ್ಯ ಕ್ರಮಗಳೇನು?	• ಗ್ರಾಮೀಣ ಮಹಿಳೆಯರನ್ನು ಸಾಕ್ಷರ ಮತ್ತು ಸ್ವಾವಲಂಬಿಗಳನ್ನಾಗಿ ಬದುಕನ್ನು ರೂಪಿಸಿಕೊಳ್ಳಲು ರಾಜ್ಯದಲ್ಲಿ ರಾಷ್ಟ್ರೀಯ ಗ್ರಾಮೀಣ **ಜೀವನೋಪಾಯ ಅಭಿಯಾನ ಮತ್ತು ರಾಷ್ಟ್ರೀಯ ಗ್ರಾಮೀಣ ಆರ್ಥಿಕ** ಪರಿವರ್ತನೆ ಯೋಜನೆ, ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಮತ್ತು ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾರ್ಗಸೂಚಿಗಳಂತೆ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ. • ಸಾಮಾಜಿಕ ಆರ್ಥಿಕ ಮತ್ತು ಜಾತಿ ಜನಗಣತಿ ದತ್ತಾಂಶಗಳ ಪ್ರಕಾರ ಅರ್ಹ ಗ್ರಾಮೀಣ ಮಹಿಳೆಯರನ್ನು ಸ್ವ-ಸಹಾಯ ಗುಂಪಿನಡಿ ಸಂಘಟಿಸಲು/ ವ್ಯಾಪ್ತಿಗೆ ತರಲು ನಿರಂತರವಾಗಿ ಶ್ರಮಿಸಲಾಗುತ್ತಿದೆ. ಅಭಿಯಾನದ ವ್ಯಾಪ್ತಿಯಲ್ಲಿ 29.50 ಲಕ್ಷ ಕುಟುಂಬಗಳನ್ನು ಸಂಘಟಿಸಲಾಗಿದ್ದು ಅರ್ಹತೆಯನುಸಾರ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತಿದ್ದು ಮಾರ್ಚ್ 2023ರ ಒಳಗಾಗಿ ನಿಗದಿತ ಗುರಿಯಂತೆ 32.39 ಲಕ್ಷ ಕುಟುಂಬಗಳನ್ನು ತಲುಪಲು ಕ್ರಮವಹಿಸಲಾಗುತ್ತಿದೆ. • ನಿಗದಿತ ಗುರಿ ಸಾಧಿಸಲು ಎಲ್ಲಾ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಅಭಿಯಾನ ಘಟಕಗಳನ್ನು (ಹೊಸ ತಾಲ್ಲೂಕುಗಳನ್ನು ಹೊರತುಪಡಿಸಿ) ಸೃಜನಗೊಳಿಸಲಾಗಿದೆ. ಅಭಿಯಾನದ ಎಲ್ಲಾ ಸಿಬ್ಬಂದಿಗಳು ಸಮುದಾಯ ಕಾರ್ಯಕರ್ತರು ಸ್ವ-ಸಹಾಯ ಗುಂಪಿನ ಸದಸ್ಯರು ಮುಂತಾದವರು ಜ್ಞಾನ ಮತ್ತು ಕೌಶಲ್ಯಗಳನ್ನು ಹೆಚ್ಚಿಸಲು ಸಾಮರ್ಥ್ಯ ಅಭಿವೃದ್ಧಿ ತರಬೇತಿಗಳನ್ನು ನಿರಂತರವಾಗಿ ಸಂಘಟಿಸಲಾಗುತ್ತಿದೆ. • ಗ್ರಾಮೀಣ ಮಹಿಳೆಯರಿಗೆ ಬ್ಯಾಂಕಿನ ವ್ಯವಹಾರ ಕುರಿತು ಆರ್ಥಿಕ ಸಾಕ್ಷರತೆ ತರಬೇತಿಗಳನ್ನು ಒದಗಿಸಲಾಗುತ್ತಿದೆ. ಅಷ್ಟೇ ಅಲ್ಲದೆ ಪ್ರತಿ ಮನೆ ಬಾಗಿಲಿಗೆ ಬ್ಯಾಂಕ್ ವ್ಯವಸ್ಥೆ ತಲುಪಿಸಲು ಗ್ರಾಮ ಪಂಚಾಯತಿ ಮಟ್ಟದಲ್ಲಿ ಒಬ್ಬರಂತೆ ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ತರಬೇತಿ ನೀಡಿ ಬಿ.ಸಿ. ಸಖೀ (Business Correspondence Sakhi)ಗಳಾಗಿ ಕಾರ್ಯನಿರ್ವಹಿಸಲು ವ್ಯವಸ್ಥೆ ಕಲ್ಪಿಸಲಾಗುತ್ತಿದೆ. • ಬ್ಯಾಂಕಿನ ಸಾಲ ಸೌಲಭ್ಯ ಸೇರಿದಂತೆ ಬ್ಯಾಂಕಿನ ಸೇವೆಗಳನ್ನು ಸಮರ್ಪಕವಾಗಿ ನಿಗದಿತ ಸಮಯದಲ್ಲಿ ಪ್ರತಿಯೊಬ್ಬ ಫಲಾನುಭವಿಗೂ ಪ್ರಯೋಜನ ದೊರಕಿಸಿಕೊಳ್ಳಲು ಸಹಕಾರಿಯಾಗಲೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಘೋಷಿಸಿದಂತೆ ಕೆನರಾ ಬ್ಯಾಂಕ್‌ಅನ್ನು Anchor Bank ಎಂದು ಗುರುತಿಸಿ ಬ್ಯಾಂಕ್ ಸೌಲಭ್ಯವನ್ನು ಮಹಿಳೆಯರಿಗೆ ತಲುಪಿಸಲು ಕ್ರಮವಹಿಸಲಾಗುತ್ತಿದೆ. • ಸ್ವಸಹಾಯ ಗುಂಪಿನ ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸ್ಪರ್ಧಿಸಲು ಉತ್ಪನ್ನಗಳ ಮೌಲ್ಯವರ್ಧನ ಉತ್ತಮ ಬ್ರಾಂಡಿಂಗ್ ಪ್ಯಾಕಿಂಗ್ ಮತ್ತು ಮಾರುಕಟ್ಟೆ ಕೌಶಲ್ಯಗಳನ್ನು ಕಲ್ಪಿಸಿ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಉತ್ತಮ ಫಲಿತಾಂಶ ಮತ್ತು ಸುಸ್ಥಿರ ವ್ಯವಸ್ಥೆ ಉದ್ದೇಶದಿಂದ ಈ ಕ್ಷೇತ್ರಗಳಲ್ಲಿ ನುರಿತ ಅನುಭವಿ 20 ಸಂಸ್ಥೆ/ಯೋಜನಾ ಅನುಷ್ಠಾನ ಸಂಸ್ಥೆಗಳನ್ನು ಗುರುತಿಸಿ ಆ ಸಂಸ್ಥೆಗಳೊಟ್ಟಿಗೆ ಒಡಂಬಡಿಕೆ ಮಾಡಿಕೊಂಡು ಫಲಾನುಭವಿಗಳಿಗೆ ನೇರವಾಗಿ ತಾಂತ್ರಿಕ ಬೆಂಬಲವನ್ನು ನೀಡಲಾಗುತ್ತಿದೆ. • ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕೃಷಿ ತೋಟಗಾರಿಕೆ, ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆ ಸಣ್ಣ ನೀರಾವರಿ, ಸಮಾಜಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಒಗ್ಗೂಡಿಸುವಿಕೆ ವೇದಿಕೆಯಡಿ ಸ್ವಸಹಾಯ ಗುಂಪಿನ ಮಹಿಳೆಯರು ಮತ್ತು ಅವರ ಕುಟುಂಬದವರು ವಿವಿಧ ಸೌಲಭ್ಯಗಳನ್ನು ಪಡೆಯಲು ಆದ್ಯತೆಯೊಂದಿಗೆ ಸರ್ಕಾರದ ಹಂತದಲ್ಲಿ ನಿರಂತರ ಶ್ರಮಿಸಲಾಗುತ್ತಿದೆ.

	• ಉದ್ಯಮಶೀಲತಾಭಿವೃದ್ಧಿ ಕೇಂದ (ಸಿಡಾಕ್) ಧಾರವಾಡ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ), ಕೃಷಿ ವಿಶ್ವವಿದ್ಯಾನಿಲಯಗಳು, ಕೃಷಿ ವಿಜ್ಞಾನ ಕೇಂದ್ರಗಳು ಸೇರಿದಂತೆ ಸರ್ಕಾರದ ಇತರ ಇಲಾಖೆಗಳಿಂದ ಕೌಶಲ್ಯಾಭಿವೃದ್ಧಿ ವ್ಯಾಪಾರ ಯೋಜನಾ ತಯಾರಿಕೆ ಮಾರುಕಟ್ಟೆ ಕೌಶಲ್ಯ ತರಬೇತಿಗಳನ್ನು ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ನೀಡಲಾಗುತ್ತಿದೆ. • ಸನ್ಮಾನ್ಯ ಮುಖ್ಯಮಂತ್ರಿಗಳು ಆಯವ್ಯದಲ್ಲಿ ಘೋಷಿಸಿದಂತೆ ಪ್ರತಿಯೊಂದು ತಾಲ್ಲೂಕಿನಲ್ಲಿ ಸ್ವ-ಸಹಾಯ ಗುಂಪಿನ ಮಹಿಳೆಯರ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆಗಾಗಿ 226 ತಾಲ್ಲೂಕು ಸ್ತ್ರೀ ಸಾಮರ್ಥ್ಯ ಮಳಿಗೆಗಳನ್ನು(kiosk) ಸ್ಥಾಪಿಸಲಾಗುತ್ತಿದೆ. ಮುಂದುವರೆದು ತಾಲ್ಲೂಕು ಮಟ್ಟದಲ್ಲಿ ಮಾಸಿಕ ಸಂತೆಗಳು ಹಾಗೂ ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಉತ್ಪನ್ನಗಳ ಪ್ರದರ್ಶನ ಮಾರಾಟ ಮತ್ತು ಆನ್ ಲೈನ್ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗಿದೆ. • ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅವಶ್ಯಕತೆಯನುಸಾರ ಮಹಿಳೆಯರು ತಯಾರಿಸುವ ಉತ್ಪನ್ನಗಳ ಮಾರುಕಟ್ಟೆಗೆ ಮತ್ತು ಕ್ಯಾಂಟೀನ್ ಸೌಲಭ್ಯಗಳನ್ನು ಸ್ವ-ಸಹಾಯ ಗುಂಪಿನ ಮಹಿಳೆಯರಿಂದಲೇ ಪಡೆಯುವಂತೆ ಕ್ರಮವಹಿಸಿ ಆದ್ಯತೆಯೊಂದಿಗೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸುವಲ್ಲಿ ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಕೌಉಜೀಇ 42 ಉಜೀಪ್ರ 2022

(ಡಾ॥ ಸಿ.ಎನ್. **ಅಶ್ವಥ್**ನಾರಾಯಣ)
ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**442**
ಸದಸ್ಯರ ಹೆಸರು	:	**ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)**
ಉತ್ತರಿಸಬೇಕಾದ ದಿನಾಂಕ	:	**22.12.2022**
ಉತ್ತರಿಸುವ ಸಚಿವರು	:	**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**

ಕ್ರ.ಸಂ	ಪ್ರಶ್ನೆ	ಉತ್ತರ				
		ವರ್ಷ	ಖರೀದಿ ಮಾಡಿದ ಸಂಸ್ಥೆಗಳು	ಸರಬರಾಜು ಮಾಡಿದ ಜಿಲ್ಲೆಗಳ ವಿವರ	ಮಕ್ಕಳ ಸಂಖ್ಯೆ ಮತ್ತು ಸರಬರಾಜು ಪ್ರಮಾಣ	ಖರೀದಿ ಮೊತ್ತ
ಅ)	ಶಾಲಾ ಮಕ್ಕಳಿಗೆ ಸಮವಸ್ತ್ರ ಪೂರೈಸುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ 2021-22 ಹಾಗೂ 2022-23ನೇ ಶೈಕ್ಷಣಿಕ ವರ್ಷಕ್ಕಾಗಿ ವಿದ್ಯಾವಿಕಾಸ ಯೋಜನೆಯಡಿ ಸಮವಸ್ತ್ರ ಖರೀದಿ ಪ್ರಕ್ರಿಯೆಯ ಸಮಗ್ರ ವಿವರಗಳೇನು;	2021-22ನೇ ಸಾಲಿನ ಮೊದಲನೇ ಜೊತೆ	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ. (ಕೆ.ಹೆಚ್.ಡಿ.ಸಿ)	ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳ ಮತ್ತು ಬೆಂಗಳೂರು ವಿಭಾಗದ 6 ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ	15,13,911 ಮಕ್ಕಳಿಗೆ 37.13 ಲಕ್ಷ ಮೀಟರ್	ರೂ.34.22 ಕೋಟಿಗಳು
			ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ	ಬೆಳಗಾವಿ ಮತ್ತು ಚಿಕ್ಕೋಡಿ ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ	4,10,032 ಮಕ್ಕಳಿಗೆ 10.02 ಮೀಟರ್	ರೂ.5.6 ಕೋಟಿಗಳು

				ಇ–ಟೆಂಡರ್‌ನಲ್ಲಿ ಆಯ್ಕೆಯಾದ ಮೆ: ಪದಂಚಂದ್ ಮಿಲಾಪ್‌ಚಂದ್ ಜೈನ್	ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳ, ಬೆಳಗಾವಿ ವಿಭಾಗದ 7 ಜಿಲ್ಲೆಗಳ, ಬೆಂಗಳೂರು ವಿಭಾಗದ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳ 8 ರಿಂದ 10ನೇ ತರಗತಿ ಹೆಣ್ಣುಮಕ್ಕಳಿಗೆ ಚೂಡೀದಾರ್ ಸಮವಸ್ತ್ರ	24,68,212 ಮಕ್ಕಳಿಗೆ 79.36 ಲಕ್ಷ ಮೀಟರ್	ರೂ.38.82 ಕೋಟಿಗಳು	
			2021–22ನೇ ಸಾಲಿನ ಎರಡನೇ ಜೊತೆ (2022–23ನೇ ಸಾಲಿನಲ್ಲಿ ವಿತರಿಸಲಾಗಿರುತ್ತದೆ)	ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ (ಕೆ.ಹೆಚ್.ಡಿ.ಸಿ)	ರಾಜ್ಯದ ಎಲ್ಲಾ ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 10ನೇ ತರಗತಿಯ ಮಕ್ಕಳಿಗೆ	47,05,960 ಮಕ್ಕಳಿಗೆ 134.05 ಲಕ್ಷ ಮೀಟರ್	ರೂ.96.92 ಕೋಟಿಗಳು	
			2022–23ನೇ ಸಾಲಿನ ಮೊದಲನೇ ಜೊತೆ	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ. (ಕೆ.ಹೆಚ್.ಡಿ.ಸಿ)	ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ	11,84,352 ಮಕ್ಕಳಿಗೆ 28.79 ಮೀಟರ್	ರೂ.22.40 ಕೋಟಿಗಳು	

				ಹೆಣ್ಣು ಮಕ್ಕಳಿಗೆ		
			ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ	ಬೆಳಗಾವಿ ಮತ್ತು ಚಿಕ್ಕೋಡಿ ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ	4,33,614 ಮಕ್ಕಳಿಗೆ 10.48 ಲಕ್ಷ ಮೀಟರ್	ರೂ.8.06 ಕೋಟಿಗಳು
			ಇ-ಟೆಂಡರ್‌ನಲ್ಲಿ ಆಯ್ಕೆಯಾದ ಮೆ: ಪದಂಚಂದ್ ಮಿಲಾಪ್‌ಚಂದ್ ಜೈನ್	ಮೈಸೂರು, ಬೆಂಗಳೂರು ವಿಭಾಗದ ಎಲ್ಲಾ ಜಿಲ್ಲೆಗಳ, ಬೆಳಗಾವಿ ವಿಭಾಗದ 7 ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳ 8 ರಿಂದ 10ನೇ ತರಗತಿ ಹೆಣ್ಣುಮಕ್ಕಳಿಗೆ ಚೂಡೀದಾರ್ ಸಮವಸ್ತ್ರ	30,87,994 ಮಕ್ಕಳಿಗೆ 94.79 ಲಕ್ಷ ಮೀಟರ್	ರೂ.67.74 ಕೋಟಿಗಳು
ಆ)	ಸದರಿ ವರ್ಷಗಳಿಗಾಗಿ ಸಮವಸ್ತ್ರ ಖರೀದಿಸುವ ಕುರಿತು ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದೊಂದಿಗೆ	ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದೊಂದಿಗೆ 2021-22 ಹಾಗೂ 2022-23ನೇ ಸಾಲಿಗೆ ಮಾಡಿಕೊಂಡಿರುವ ಒಪ್ಪಂದದ ವಿವರ, ಬಟ್ಟೆ ಖರೀದಿ ಪ್ರಮಾಣ ಮತ್ತು ದರದ ವಿವರ ಕೆಳಗಿನಂತಿದೆ.				

<table>
<tr>
<td></td>
<td>ಮಾಡಿಕೊಂಡಿರುವ ಒಪ್ಪಂದದ ವಿವರ, ಬಟ್ಟೆ ಖರೀದಿ ಪ್ರಮಾಣ ಮತ್ತು ದರದ ವಿವರಗಳನ್ನು ನೀಡುವುದು;</td>
<td>2021-22.
1. 2021-22ನೇ ಸಾಲಿನಲ್ಲಿ ಮೆ:ಕೆ.ಹೆಚ್.ಡಿ.ಸಿ ಸಂಸ್ಥೆಯೊಂದಿಗೆ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳ ಮತ್ತು ಬೆಂಗಳೂರು ವಿಭಾಗದ 6 ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡುಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣುಮಕ್ಕಳಿಗೆ 37.13 ಲಕ್ಷ ಮೀಟರ್ ಸಮವಸ್ತ್ರ ಸರಬರಾಜಿಗೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಒಪ್ಪಂದದ ಮೊತ್ತ ರೂ.34.22 ಕೋಟಿಗಳು
2. ಪ್ರತಿ ಮೀಟರ್ ಬಟ್ಟೆಗೆ ದರಗಳು ಕೆಳಗಿನಂತಿದೆ.
<table>
<tr><th>ಬಟ್ಟೆಯ ವಿಧ</th><th>ಪ್ರತಿ ಮೀಟರ್ ದರ (ರೂ.ಗಳಲ್ಲಿ)</th></tr>
<tr><td>ಷರ್ಟಿಂಗ್</td><td>74.75</td></tr>
<tr><td>ಸೂಟಿಂಗ್</td><td>149.5</td></tr>
<tr><td>ಸ್ಕರ್ಟಿಂಗ್</td><td>78.2</td></tr>
</table>
2022-23
1. 2021-22ನೇ ಸಾಲಿನಲ್ಲಿ ಮೆ:ಕೆ.ಹೆಚ್.ಡಿ.ಸಿ ಸಂಸ್ಥೆಯೊಂದಿಗೆ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡುಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣುಮಕ್ಕಳಿಗೆ 28.79 ಲಕ್ಷ ಮೀಟರ್ ಸಮವಸ್ತ್ರ ಸರಬರಾಜಿಗೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಒಪ್ಪಂದದ ಮೊತ್ತ ರೂ.22.40 ಕೋಟಿಗಳು
2. ಪ್ರತಿ ಮೀಟರ್ ಬಟ್ಟೆಗೆ ದರಗಳು ಕೆಳಗಿನಂತಿದೆ.
<table>
<tr><th>ಬಟ್ಟೆಯ ವಿಧ</th><th>ಪ್ರತಿ ಮೀಟರ್ ದರ (ರೂ.ಗಳಲ್ಲಿ)</th></tr>
<tr><td>ಷರ್ಟಿಂಗ್</td><td>59.1</td></tr>
<tr><td>ಸೂಟಿಂಗ್</td><td>149.54</td></tr>
<tr><td>ಸ್ಕರ್ಟಿಂಗ್</td><td>73.08</td></tr>
</table>
</td>
</tr>
<tr>
<td>ಇ)</td>
<td>2021-22 ಮತ್ತು 2022-23ನೇ ಶೈಕ್ಷಣಿಕ ವರ್ಷಕ್ಕಾಗಿ ಕರ್ನಾಟಕ ಜವಳಿ ಮೂಲಸೌಕರ್ಯ ಅಭಿವೃದ್ಧಿ ನಿಗಮ ಹಾಗೂ ಖಾಸಗಿ ಸಂಸ್ಥೆಗಳಿಂದ ಖರೀದಿಸಿದ ಮತ್ತು ಖರೀದಿಸಲಿರುವ ಸಮವಸ್ತ್ರ ಬಟ್ಟೆಯ ಪ್ರಮಾಣ ಎಷ್ಟು; ಈ ಕುರಿತು ಮಾಡಿಕೊಂಡ ಒಪ್ಪಂದದ ಅನ್ವಯ ವಿವಿಧ ಮಾದರಿ</td>
<td>ಕರ್ನಾಟಕ ರಾಜ್ಯ ಜವಳಿ ಮೂಲ ಸೌಕರ್ಯ ಅಭಿವೃದ್ಧಿ ನಿಗಮದೊಂದಿಗೆ 2021-22 ಹಾಗೂ 2022-23ನೇ ಸಾಲಿಗೆ ಸಮವಸ್ತ್ರ ಬಟ್ಟೆಗಳನ್ನು ಖರೀದಿಸಲು ಮಾಡಿಕೊಂಡಿರುವ ಒಪ್ಪಂದದ ಅನ್ವಯ ವಿವಿಧ ಮಾದರಿ ಬಟ್ಟೆಗಳ ದರಗಳು ಸೇರಿದಂತೆ ಸಮಗ್ರ ವಿವರ ಕೆಳಗಿನಂತಿದೆ.

2021-22
1. 2021-22ನೇ ಸಾಲಿನಲ್ಲಿ ಮೆ:ಕೆ.ಎಸ್.ಟಿ.ಐ.ಡಿ.ಸಿ ಸಂಸ್ಥೆಯೊಂದಿಗೆ ಬೆಳಗಾವಿ ಮತ್ತು ಚಿಕ್ಕೋಡಿ ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡುಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ 10.02 ಲಕ್ಷ ಮೀಟರ್ ಸಮವಸ್ತ್ರ ಸರಬರಾಜಿಗೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಒಪ್ಪಂದದ ಮೊತ್ತ ರೂ.5.6 ಕೋಟಿಗಳು</td>
</tr>
</table>

ಬಟ್ಟೆಗಳ ದರಗಳು ಸೇರಿದಂತೆ ಸಮಗ್ರ ಮಾಹಿತಿಗಳು ಯಾವುವು? (ವಿವರ ನೀಡುವುದು)

2. ಪ್ರತಿ ಮೀಟರ್ ಬಟ್ಟೆಗೆ ದರಗಳು ಕೆಳಗಿನಂತಿದೆ.

ಬಟ್ಟೆಯ ವಿಧ	ಪ್ರತಿ ಮೀಟರ್ ದರ (ರೂ.ಗಳಲ್ಲಿ)
ಷರ್ಟಿಂಗ್	45.36
ಸೂಟಿಂಗ್	95.45
ಸ್ಕರ್ಟಿಂಗ್	55.66

2022–23

1. 2022–23ನೇ ಸಾಲಿನಲ್ಲಿ ಮೆ:ಕೆ.ಎಸ್.ಟಿ.ಐ.ಡಿ.ಸಿ ಸಂಸ್ಥೆಯೊಂದಿಗೆ ಬೆಳಗಾವಿ ಮತ್ತು ಚಿಕ್ಕೋಡಿ ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡುಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ 10.48 ಲಕ್ಷ ಮೀಟರ್ ಸಮವಸ್ತ್ರ ಸರಬರಾಜಿಗೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಒಪ್ಪಂದದ ಮೊತ್ತ ರೂ.8.06 ಕೋಟಿಗಳು
2. ಪ್ರತಿ ಮೀಟರ್ ಬಟ್ಟೆಗೆ ದರಗಳು ಕೆಳಗಿನಂತಿದೆ.

ಬಟ್ಟೆಯ ವಿಧ	ಪ್ರತಿ ಮೀಟರ್ ದರ (ರೂ.ಗಳಲ್ಲಿ)
ಷರ್ಟಿಂಗ್	59.1
ಸೂಟಿಂಗ್	149.54
ಸ್ಕರ್ಟಿಂಗ್	73.08

ಖಾಸಗಿ ಸಂಸ್ಥೆಯೊಂದಿಗೆ 2021–22 ಹಾಗೂ 2022–23ನೇ ಸಾಲಿಗೆ ಸಮವಸ್ತ್ರ ಬಟ್ಟೆಗಳನ್ನು ಖರೀದಿಸಲು ಮಾಡಿಕೊಂಡಿರುವ ಒಪ್ಪಂದದ ಅನ್ವಯ ವಿವಿಧ ಮಾದರಿ ಬಟ್ಟೆಗಳ ದರಗಳು ಸೇರಿದಂತೆ ಸಮಗ್ರ ವಿವರ ಕೆಳಗಿನಂತಿದೆ.

2021–22

1. 2021–22ನೇ ಸಾಲಿನಲ್ಲಿ ಇ–ಟೆಂಡರ್‌ನಲ್ಲಿ ಎಲ್–1 ಆಗಿ ಆಯ್ಕೆಯಾದ ಮೆ:ಪದಮಚಂದ್ ಮಿಲಾಪ್‌ಚಂದ್ ಸಂಸ್ಥೆಯೊಂದಿಗೆ ಮೈಸೂರು, ವಿಭಾಗದ ಎಲ್ಲಾ ಜಿಲ್ಲೆಗಳ, ಬೆಳಗಾವಿ ವಿಭಾಗದ 7 ಜಿಲ್ಲೆಗಳ, ಬೆಂಗಳೂರು ವಿಭಾಗದ 5 ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳ 8 ರಿಂದ 10ನೇ ತರಗತಿ ಹೆಣ್ಣುಮಕ್ಕಳಿಗೆ ಚೂಡೀದಾರ್ ಸಮವಸ್ತ್ರ ಒಟ್ಟು 79.36ಲಕ್ಷ ಮೀಟರ್ ಸಮವಸ್ತ್ರ ಸರಬರಾಜಿಗೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಒಪ್ಪಂದದ ಮೊತ್ತ ರೂ.38.82 ಕೋಟಿಗಳು

2. ಪ್ರತಿ ಮೀಟರ್ ಬಟ್ಟೆಗೆ ದರಗಳು ಕೆಳಗಿನಂತಿದೆ.

ಬಟ್ಟೆಯ ವಿಧ	ಪ್ರತಿ ಮೀಟರ್ ದರ (ರೂ.ಗಳಲ್ಲಿ)
ಷರ್ಟಿಂಗ್	43.2

ಸೂಟಿಂಗ್	90.09
ಸ್ಕರ್ಟಿಂಗ್	53.01
ಚೂಡಿದಾರ್ ಟಾಪ್	45.45
ಚೂಡಿದಾರ್ ಬಾಟಮ್	39.6
ಚೂಡಿದಾರ್ ದುಪಟ್ಟಾ	40.5

2022–23

1. 2022–23ನೇ ಸಾಲಿನಲ್ಲಿ ಇ-ಟೆಂಡರ್‌ನಲ್ಲಿ ಎಲ್–1 ಆಗಿ ಆಯ್ಕೆಯಾದ ಮೆ:ಪದಮಚಂದ್ ಮಿಲಾಪ್‌ಚಂದ್ ಸಂಸ್ಥೆಯೊಂದಿಗೆ ಮೈಸೂರು, ಬೆಂಗಳೂರು ವಿಭಾಗದ ಎಲ್ಲಾ ಜಿಲ್ಲೆಗಳ, ಬೆಳಗಾವಿ ವಿಭಾಗದ 7 ಜಿಲ್ಲೆಗಳ 1 ರಿಂದ 10ನೇ ತರಗತಿಯ ಗಂಡು ಮಕ್ಕಳಿಗೆ ಹಾಗೂ 1 ರಿಂದ 7ನೇ ತರಗತಿಯ ಹೆಣ್ಣು ಮಕ್ಕಳಿಗೆ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳ 8 ರಿಂದ 10ನೇ ತರಗತಿ ಹೆಣ್ಣುಮಕ್ಕಳಿಗೆ ಚೂಡೀದಾರ್ ಸಮವಸ್ತ್ರ ಒಟ್ಟು 94.97ಲಕ್ಷ ಮೀಟರ್ ಸಮವಸ್ತ್ರ ಸರಬರಾಜಿಗೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಒಪ್ಪಂದದ ಮೊತ್ತ ರೂ.67.74 ಕೋಟಿಗಳು
2. ಪ್ರತಿ ಮೀಟರ್ ಬಟ್ಟೆಗೆ ದರಗಳು ಕೆಳಗಿನಂತಿದೆ.

ಬಟ್ಟೆಯ ವಿಧ	ಪ್ರತಿ ಮೀಟರ್ ದರ (ರೂ.ಗಳಲ್ಲಿ)
ಷರ್ಟಿಂಗ್	59.1
ಸೂಟಿಂಗ್	149.54
ಸ್ಕರ್ಟಿಂಗ್	73.08
ಚೂಡಿದಾರ್ ಟಾಪ್	64.15
ಚೂಡಿದಾರ್ ಬಾಟಮ್	57.02
ಚೂಡಿದಾರ್ ದುಪಟ್ಟಾ	59.69

ಇಪಿ: 109 ಎಂಪಿಇ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	443
ಸದಸ್ಯರ ಹೆಸರು	:	ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	:	22.12.2022
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಶಾಲಾ ಮಕ್ಕಳು ದಿನದ ಕಲಿಕಾ ಅವಧಿಯಲ್ಲಿ ವಾಟರ್ ಬೆಲ್ ಅನುಸರಿಸಿ ನೀರು ಕುಡಿಯುವುದರಿಂದ ಸರ್ಕಾರ ಮಕ್ಕಳಿಗೆ ಶೌಚಾಲಯದ ಸುವ್ಯವಸ್ಥೆಯನ್ನು ಒದಗಿಸಿಕೊಡುವ ಕುರಿತು ಕೈಗೊಂಡ ಕಟ್ಟುನಿಟ್ಟಿನ ಕ್ರಮಗಳೇನು;	ರಾಜ್ಯದಲ್ಲಿ ಒಟ್ಟು 42239 ಸರ್ಕಾರಿ ಪ್ರಾಥಮಿಕ ಮತ್ತು 4819 ಸರ್ಕಾರಿ ಪ್ರೌಢ ಶಾಲೆಗಳಿವೆ. ಇದರಲ್ಲಿ 41636 ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಮತ್ತು 4748 ಸರ್ಕಾರಿ ಪ್ರೌಢ ಶಾಲೆಗಳಿಗೆ ಶೌಚಾಲಯ ಸೌಲಭ್ಯ ಕಲ್ಪಿಸಲಾಗಿದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–01ರಲ್ಲಿ ಲಗತ್ತಿಸಿದೆ). ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕವಾಗಿ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ.
ಆ)	ಮಕ್ಕಳು ನೀರು ಕುಡಿಯುವುದು ಅನುಕರಣೀಯ ಮತ್ತು ಆರೋಗ್ಯಕ್ಕೆ ಪೂರಕ ಕ್ರಮವಾಗಿದ್ದರೂ ಶೌಚಾಲಯಗಳಿಗೆ ಹೋಗಬೇಕಾಗಿರುವ ಅನಿವಾರ್ಯತೆಯನ್ನು ಗಮನಿಸಿ ಸುವ್ಯವಸ್ಥಿತವಾಗಿ ಬಾಲಕ/ಬಾಲಕಿಯರುಗಳಿಗೆ ಶೌಚಾಲಯಗಳನ್ನು ಕಡ್ಡಾಯವಾಗಿ ಒದಗಿಸಿಕೊಡುವ ನಿಟ್ಟಿನಲ್ಲಿ ಇಲಾಖೆಯವರು ಕೈಗೊಂಡ ಕ್ರಮಗಳೇನು;	2020–21 ಮತ್ತು 2021–22ನೇ ಸಾಲಿಗೆ ರಾಜ್ಯ ವಲಯ ಹಾಗೂ ನರೇಗಾ ಅನುದಾನ ಒಗ್ಗೂಡಿಸುವಿಕೆಯ ಮೂಲಕ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ಕ್ರಮವಾಗಿ ರೂ.2920.99ಲಕ್ಷಗಳು ಮತ್ತು ರೂ.3500.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ದೇಶದ 76ನೇ ಸ್ವಾತಂತ್ರ್ಯ ದಿನಾಚರಣೆ ಭಾಷಣದ ಕಂಡಿಕೆ ಸಂಖ್ಯೆ:73ರಲ್ಲಿ "ರಾಜ್ಯದ ಎಲ್ಲಾ ಸರ್ಕಾರಿ ಶಾಲೆ, ಕಾಲೇಜುಗಳಲ್ಲಿ ಶೇ.100 ರಷ್ಟು ಶೌಚಾಲಯಗಳ ನಿರ್ಮಾಣವನ್ನು ರೂ.250.00ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗುವುದು. ಆ ಮೂಲಕ ಶಾಲೆ, ಕಾಲೇಜುಗಳಲ್ಲಿ ಸ್ವಚ್ಛ-ಆರೋಗ್ಯಕರ ವಾತಾವರಣ ನಿರ್ಮಿಸಲಾಗುವುದು"ಎಂದು ಘೋಷಿಸಿರುತ್ತಾರೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ: ಇಪಿ 254 ಯೋಸಕ 2022, ಬೆಂಗಳೂರು,ದಿನಾಂಕ:23.08.2022 ರಲ್ಲಿ ಮುಂದುವರೆದ ಕಾರ್ಯಕ್ರಮದಡಿಯಲ್ಲಿ ರೂ.250.00 ಕೋಟಿ ವೆಚ್ಚದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ವ್ಯಾಪ್ತಿಯ ಶಾಲಾ/ಕಾಲೇಜುಗಳಲ್ಲಿ ಶೌಚಾಲಯ ನಿರ್ಮಾಣ ಕಾರ್ಯ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ. 2020–21, 2021–22 ಮತ್ತು 2022–23ನೇ ಸಾಲಿನಲ್ಲಿ ರಾಜ್ಯ ಮುಂದುವರಿದ ಕಾರ್ಯಕ್ರಮಗಳಡಿಯಲ್ಲಿ ಕುಡಿಯುವ ನೀರು, ಶೌಚಾಲಯಗಳ ನಿರ್ವಹಣೆಗಾಗಿ ಕ್ರಮವಾಗಿ ರೂ.2999.80, ರೂ.2500.00 ಹಾಗೂ ರೂ.3500.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಇ)	ಸರ್ಕಾರಿ ಶಾಲೆಗಳಲ್ಲಿ ಅತ್ಯಂತ ಅವಶ್ಯಕವಾಗಿರುವ ಶೌಚಾಲಯಗಳು ಮತ್ತು ಕುಡಿಯುವ ನೀರಿನ ವ್ಯವಸ್ಥೆಯಲ್ಲಿರುವ ಕೊರತೆ ಮತ್ತು ಲೋಪದೋಷಗಳನ್ನು ಪರಿಗಣಿಸಿ ಸುವ್ಯವಸ್ಥೆಗಳನ್ನು ಒದಗಿಸಿಕೊಡುವಲ್ಲಿ ಸರ್ಕಾರದ ಬದ್ಧತಾ ಕ್ರಮಗಳು ಯಾವುವು?	ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಲಭ್ಯತೆಯನ್ನು ಆಧರಿಸಿ ಸರ್ಕಾರಿ ಶಾಲೆಗಳಿಗೆ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ವ್ಯವಸ್ಥೆಯನ್ನು ಅವಶ್ಯಕತೆಯಿರುವ ಕಡೆ ಆದ್ಯತೆಯ ಮೇರೆಗೆ ಹಂತ ಹಂತವಾಗಿ ಒದಗಿಸಲು ಕ್ರಮವಹಿಸಲಾಗುತ್ತಿದೆ.

ಇಪಿ: 359 ಯೋಸಕ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 587

2) ಮಾನ್ಯ ಸದಸ್ಯರ ಹೆಸರು : ಶ್ರೀ ನರೇಂದ್ರ. ಆರ್ (ಹನೂರು)

3) ಉತ್ತರಿಸುವ ದಿನಾಂಕ : 22/12/2022

4) ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಜಿಲ್ಲೆಯ ಹನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರಸಿದ್ಧ ಯಾತ್ರಾ ಸ್ಥಳ ಶ್ರೀ ಮಲೈಮಹದೇಶ್ವರ ಬೆಟ್ಟದಲ್ಲಿರುವ "ಆರಕ್ಷಕ ಠಾಣೆಗೆ" ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಪ್ರಸ್ತುತ ಶ್ರೀ ಮಲೈ ಮಹದೇಶ್ವರ ಪೊಲೀಸ್ ಠಾಣೆಯು ಶ್ರೀ ಮಲೈ ಮಹದೇಶ್ವರ ಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಕಟ್ಟಡವನ್ನು ಪೊಲೀಸ್ ಇಲಾಖೆಗೆ ಹಸ್ತಾಂತರಿಸುವಂತೆ ಕೋರಿ ಕಾರ್ಯದರ್ಶಿಗಳು, ಶ್ರೀ ಮಲೈಮಹದೇಶ್ವರ ಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ, ಮಲೈಮಹದೇಶ್ವರ ಬೆಟ್ಟ ರವರಿಗೆ ಪತ್ರ ವ್ಯವಹರಿಸಲಾಗಿದೆ. ಆದರೆ ಇದುವರೆವಿಗೂ ಸದರಿ ಕಟ್ಟಡವು ಪೊಲೀಸ್ ಇಲಾಖೆಗೆ ಹಸ್ತಾಂತರವಾಗಿರುವುದಿಲ್ಲ.
ಆ)	ಬಂದಿದ್ದಲ್ಲಿ, ಈ ಪೊಲೀಸ್ ಠಾಣೆಗೆ ಸ್ವಂತ ಕಟ್ಟಡ ಮಂಜೂರು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)	
ಇ)	ಪ್ರಸ್ತುತ ಈಗ ಇರುವ ಕಟ್ಟಡದಲ್ಲಿ ಸರಿಯಾದ ಮೂಲಭೂತ ಸೌಕರ್ಯಗಳಿಲ್ಲದೇ ಅಲ್ಲಿನ ಸಿಬ್ಬಂದಿಗಳಿಗೂ ಹಾಗೂ ಸಾರ್ವಜನಿಕರಿಗೂ ಸಹ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಈಗ ಇರುವ ಕಟ್ಟಡದಲ್ಲಿ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.
ಈ)	ಬಂದಿದ್ದಲ್ಲಿ, ಒಂದು ಸುಸಜ್ಜಿತವಾದ ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	ಪ್ರಸ್ತುತ ಶ್ರೀ ಮಲೈ ಮಹದೇಶ್ವರ ಪೊಲೀಸ್ ಠಾಣೆಯು ಕಾರ್ಯನಿರ್ವಹಿಸುತ್ತಿರುವ ಶ್ರೀ ಮಲೈಮಹದೇಶ್ವರ ಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ, ಮಲೈಮಹದೇಶ್ವರ ಬೆಟ್ಟ ರವರ ಕಟ್ಟಡವನ್ನು ಪೊಲೀಸ್ ಇಲಾಖೆಗೆ ಹಸ್ತಾಂತರವಾದ ನಂತರ ಅಗತ್ಯತೆ ಹಾಗೂ ಅನುದಾನ ಲಭ್ಯತೆಯ ಮೇಲೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸುವ ಬಗ್ಗೆ ಪರಿಶೀಲಿಸಲಾಗುವುದು.

ಹೆಚ್‌ಡಿ 106 ಪಿಬಿಎಲ್ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 589
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಎ. (ಮಾಗಡಿ)
ಉತ್ತರಿಸಬೇಕಾದ ದಿನಾಂಕ : 22-12-2022
ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

***

	ಪ್ರಶ್ನೆ	ಉತ್ತರ
ಅ)	ರಾಜ್ಯದ ಇಂಧನ ಇಲಾಖೆಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಲೈನ್‌ಮ್ಯಾನ್‌ಗಳು, ಮೀಟರ್ ರೀಡರ್‌ಗಳು ಹಾಗೂ ಕಛೇರಿ ಸಿಬ್ಬಂದಿಗಳು ಅನೇಕ ವರ್ಷಗಳಿಂದ ಏಜೆನ್ಸಿ ಮತ್ತು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ಇವರುಗಳನ್ನು ಖಾಯಂಗೊಳಿಸುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	**<u>ಕವಿಪ್ರನಿನಿ:</u>** ಕವಿಪ್ರನಿನಿಯಲ್ಲಿ ಲೈನ್‌ಮ್ಯಾನ್‌ಗಳು, ಮೀಟರ್ ರೀಡರ್‌ಗಳು ಹಾಗೂ ಕಛೇರಿ ಸಿಬ್ಬಂದಿಗಳ ಸೇವೆಯನ್ನು ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಪಡೆದಿರುವುದಿಲ್ಲ. ಮುಂದುವರೆದು, ರಾಜ್ಯ ಸರ್ಕಾರದ ದಿನಾಂಕ: 26.07.2005 ರ ಆದೇಶದನ್ವಯ ಡಿ ದರ್ಜೆ ನೌಕರರ ನೇರ ನೇಮಕಾತಿಯ ಬಗ್ಗೆ ನಿಷೇದವಿರುವ ಹಿನ್ನಲೆಯಲ್ಲಿ, ಕಚೇರಿ ಪರಿಚಾರಕರು, ವಾಹನ ಚಾಲಕರು, ಡಾಟಾ ಎಂಟ್ರಿ ಆಪರೇಟರ್, ಪಾಳಿ ನೆರವುಗಾರರು ಮತ್ತು ಇತರೆ ಸೇವೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಟೆಂಡರ್ ಪ್ರಕ್ರಿಯೆ ಮೂಲಕ ಪಡೆಯಲಾಗುತ್ತಿದೆ. ಇಂತಹ ಹೊರಗುತ್ತಿಗೆ ಕೆಲಸಗಾರರಿಗೆ ಕಾರ್ಮಿಕ ಇಲಾಖೆಯು ಕಾಲಕಾಲಕ್ಕೆ ನಿಗಧಿಪಡಿಸಿರುವ ಕನಿಷ್ಟ ವೇತನ ಮತ್ತು ಇತರೆ ಶಾಸನಬದ್ಧ ಪಾವತಿಗಳನ್ನು ಪಾವತಿಸುವುದನ್ನು ಖಾತರಿಪಡಿಸಿಕೊಳ್ಳಲಾಗುತ್ತಿದೆ. ಹೊರಗುತ್ತಿಗೆ ಆಧಾರದಲ್ಲಿ ಪಡೆಯುತ್ತಿರುವ ಸೇವೆಯಲ್ಲಿ ಕರ್ತವ್ಯ ನಿರ್ವಹಿಸುವ ಯಾವುದೇ ಸಿಬ್ಬಂದಿಯೊಂದಿಗೆ ಕವಿಪ್ರನಿನಿಯು ನೇರ ವ್ಯವಹಾರಿಕ ಸಂಬಂಧ ಹೊಂದಿರುವುದಿಲ್ಲವಾದ್ದರಿಂದ ಇಂತಹ ಹೊರಗುತ್ತಿಗೆ ಸೇವೆಗಳನ್ನು ನಿಗಮದಲ್ಲಿ ಖಾಯಂಗೊಳಿಸಲು ನಿಗಮದ ನಿಯಮಾನುಸಾರ ಅವಕಾಶವಿರುವುದಿಲ್ಲ. **<u>ವಿದ್ಯುತ್ ಸರಬರಾಜು ಕಂಪನಿಗಳು:</u>** ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಲೈನ್ ಮ್ಯಾನ್ ಗಳನ್ನು ಏಜನ್ಸಿ ಹಾಗೂ ಗುತ್ತಿಗೆ ಆಧಾರದಡಿ ನೇಮಕಾತಿ ಮಾಡಿಕೊಂಡಿರುವುದಿಲ್ಲ. ಮೀಟರ್ ರೀಡರ್ ಹಾಗೂ ಕಛೇರಿ ಸಿಬ್ಬಂದಿಗಳು ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು ನಿಗಮದಲ್ಲಿ ಚಾಲ್ತಿಯಲ್ಲಿರುವ ನೇಮಕಾತಿ ಮತ್ತು ಬಡ್ತಿ ನಿಯಮಾವಳಿಗಳನ್ವಯ ಖಾಯಂಗೊಳಿಸಲು ಅವಕಾಶವಿರುವುದಿಲ್ಲ.
ಆ)	ಬಂದಿದ್ದಲ್ಲಿ, ಸದರಿ ಸಿಬ್ಬಂದಿಗಳನ್ನು ಖಾಯಂಗೊಳಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;	
ಇ)	ಯಾವ ಯಾವ ಹಂತಗಳಲ್ಲಿ, ಖಾಯಂಗೊಳಿಸುವ ಪ್ರಕ್ರಿಯೆ ಜರುಗಿಸಲಾಗುತ್ತಿದೆಯೇ? (ಸಂಪೂರ್ಣ ವಿವರ ನೀಡುವುದು)	

		ಮುಂದುವರೆದು, ಮೆಸ್ಕಾಂ ನಲ್ಲಿ ತಾತ್ಕಾಲಿಕವಾಗಿ 40 ಮಾಪಕ ಓದುಗರು ನೇರ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರನ್ನು ಕಂಪೆನಿ ಸೇವೆಯಲ್ಲಿ ಖಾಯಂಗೊಳಿಸಲು ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 8 ಸೇನಿಸೇ 2013, ದಿನಾಂಕ 04.09.2013ರನ್ವಯ ಅವಕಾಶವಿರುವುದಿಲ್ಲ. ಸದರಿ ಗುತ್ತಿಗೆ ಮಾಪಕ ಓದುಗರು ತಮ್ಮ ಸೇವೆಯನ್ನು ಖಾಯಂಗೊಳಿಸುವಂತೆ W.P.42603-639/2016ರಲ್ಲಿ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಸ್ತುತ ಪ್ರಕರಣವು ಇತ್ಯರ್ಥಕ್ಕೆ ಬಾಕಿಯಿರುತ್ತದೆ.

ಸಂಖ್ಯೆ:ಎನರ್ಜಿ 341 ಪಿಪಿಎಂ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ
ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 590
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಎ. (ಮಾಗಡಿ)
ಉತ್ತರಿಸಬೇಕಾದ ದಿನಾಂಕ : 22-12-2022
ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

****

	ಪ್ರಶ್ನೆ	ಉತ್ತರ
ಅ)	ರಾಮನಗರ ಜಿಲ್ಲೆ ಮಾಗಡಿ ವಿಧಾನಸಭಾ ವ್ಯಾಪ್ತಿಯಲ್ಲಿನ ಗುಡ್ಡಗಾಡು ಪ್ರದೇಶಗಲ್ಲಿ ಚಿರತೆಗಳ ಹಾವಳಿಯಿಂದ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಬಂದಿದ್ದಲ್ಲಿ, ಚಿರತೆ ಹಾವಳಿಯಿಂದ ಆಗುತ್ತಿರುವ ತೊಂದರೆಗಳಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಚಿರತೆ ಹಾವಳಿಯನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳು ಹಾಗೂ ಚಿರತೆಯಿಂದ ಉಂಟಾದ ನಷ್ಟ ಹಾನಿ ಪ್ರಕರಣಗಳಿಗೆ ಪಾವತಿಸಿರುವ ಪರಿಹಾರ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.
ಇ)	ಚಿರತೆ ಹಾವಳಿ ಇರುವ ಪ್ರದೇಶಗಳಲ್ಲಿ ನಿರಂತರ ಜ್ಯೋತಿ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಮನಗರ ಜಿಲ್ಲೆ ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಂದಾಯ ಗ್ರಾಮಗಳಿಗೆ ಈಗಾಗಲೇ ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ಮುಂದುವರೆದು, ಗುಡ್ಡಗಾಡು ಪ್ರದೇಶ, ತೋಟದ ಮನೆ ಹಾಗೂ ಗ್ರಾಮಗಳಿಂದ ದೂರವಿರುವ ಒಂಟಿ ಮನೆಗಳಿಗೆ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಕೃಷಿ ಫೀಡರ್ ಗಳಿಂದ ನಿರ್ದಿಷ್ಟ ಅವಧಿಯಂತೆ 7 ಗಂಟೆಗಳ ಕಾಲ (ಹಗಲಿನ ವೇಳೆ 4 ಗಂಟೆ ಹಾಗೂ ರಾತ್ರಿ ವೇಳೆ 3 ಗಂಟೆಗಳ ಕಾಲ) 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. 6-8 ಗಂಟೆಗಳ ಕಾಲ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಹಾಗೂ ನಿರಂತರ ವಿದ್ಯುತ್ ಸರಬರಾಜು ಕೃಷಿಯೇತರ ಸ್ಥಾವರಗಳಿಗೆ ನಿರಂತರ ವಿದ್ಯುತ್ ಸರಬರಾಜು ಕಲ್ಪಿಸಲು ಕೇಂದ್ರ ಸರ್ಕಾರದ ಯೋಜನೆಯಾದ ಫಲಿತಾಂಶ ಆಧಾರಿತ ನವೀಕರಿಸಿದ ವಿತರಣ ವಲಯ ಯೋಜನೆ (RDSS) ನಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.
ಈ)	ಹಾಗಿದ್ದಲ್ಲಿ, ನಿರಂತರ ಜ್ಯೋತಿ ವ್ಯವಸ್ಥೆ ಕಲ್ಪಿಸುವಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	

ಉ)	ಯಾವ ಕಾಲಮಿತಿಯೊಳಗೆ ನಿರಂತರ ಜ್ಯೋತಿ ವ್ಯವಸ್ಥೆ ಕಲ್ಪಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	ಮಾಗಡಿ ವಿಧಾನಸಭಾ ವ್ಯಾಪ್ತಿಯ ಕಂದಾಯ ಗ್ರಾಮಗಳಿಗೆ ಈಗಾಗಲೇ ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಹಾಗೂ ನಿರಂತರ ವಿದ್ಯುತ್ ಸರಬರಾಜು ಇಲ್ಲದ ಕೃಷಿಯೇತರ ಸ್ಥಾವರಗಳಿಗೆ ಕೇಂದ್ರ ಸರ್ಕಾರದ ಯೋಜನೆಯಾದ ಫಲಿತಾಂಶ ಆಧಾರಿತ ನವೀಕರಿಸಿದ ವಿತರಣಾ ವಲಯ ಯೋಜನೆ (RDSS) ನಲ್ಲಿ ನಿರಂತರ ವಿದ್ಯುತ್ ಸರಬರಾಜು ವ್ಯವಸ್ಥೆ ಕಲ್ಪಿಸಲು ಕ್ರಿಯಾ ಯೋಜನೆ ರೂಪಿಸಿದ್ದು, ಕೇಂದ್ರ ಸರ್ಕಾರದ ಅನುಮೋದನೆಯಾದ ನಂತರ ನಿಯಮಾನುಸಾರ ನಿರಂತರ ವಿದ್ಯುತ್ ಕಲ್ಪಿಸಲು ಕ್ರಮವಹಿಸಲಾಗುವುದು.

ಸಂಖ್ಯೆ:ಎನರ್ಜಿ 337 ಪಿಪಿಎಂ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ
ಸಚಿವರು

ಅನುಬಂಧ -4

ಕ್ರ.ಸಂ	ಗ್ರಾಮಸ್ಥರಿಂದ ಸ್ವೀಕೃತವಾದ ಅರ್ಜಿ ಮತ್ತು ದೂರುಗಳನ್ವಯ ಬೋನುಗಳನ್ನು ಇರಿಸಲಾಗಿರುವ ವಿವರ
1	ಶ್ರೀ ಐ.ಡಿ.ಚಂದ್ರಶೇಖರ್ ಬಿನ್ ದೊಡ್ಡಗಂಗಯ್ಯ ಐಯ್ಯಂಡಹಳ್ಳಿ, ರಂಗೇನಹಳ್ಳಿ, ಸಿಡಗನಹಳ್ಳಿ ಗ್ರಾಮಸ್ಥರು
2	ನಾಗರಾಜು ಬಿನ್ ಗಂಗಣ್ಣ, ಚಿಕ್ಕಸೋಲೂರು, ಬಾಚೇನಹಟ್ಟಿ ಗ್ರಾಮ ಪಂಚಾಯಿತಿ, ಸಿಂಗದಾಸನಹಳ್ಳಿ ಗ್ರಾಮಸ್ಥರು.
3	ಗುಡೇಮಾರನಹಳ್ಳಿ ಗ್ರಾಮ ಪಂಚಾಯಿತಿ ತಾಂಡೇನಪುರ ಗ್ರಾಮ, ಮೋಟಗೊಂಡನಹಳ್ಳಿ ಗ್ರಾಮ ಪಂಚಾಯ್ತಿ ಶ್ರೀರಾಂಪುರ ಕಾಲೋನಿ ಮತ್ತು ಕಾಟನಪಾಳ್ಯ.
4	ದಲಿತ ಹಕ್ಕುಗಳ ಸಮಿತಿ ಕರ್ನಾಟಕ ನಾಗಶೆಟ್ಟಿಹಳ್ಳಿ, ಗೊಲ್ಲರಹಟ್ಟಿ, ಮುದಲಾರಯ್ಯನಪಾಳ್ಯ ಇತರೆ ಗ್ರಾಮ, ಮೋಟಗಾನಹಳ್ಳಿ, ಪೆಮ್ಮನಹಳ್ಳಿ, ಅಕ್ಕ-ಪಕ್ಕ ಗ್ರಾಮಸ್ಥರು.
5	ಸೀಗೇಕುಪ್ಪೆ ಗ್ರಾಮ ಪಂಚಾಯ್ತಿ, ಸೀಗೆಕುಪ್ಪೆ ಕಾಲೋನಿ, ನಾಗೇಶ್ ಎಂ (ವಕೀಲರು ಹೊಸಪೇಟೆ ತಿರುಮಲೆ ಸುತ್ತ-ಮುತ್ತ, ಕುರಸಕಟ್ಟೆಪಾಳ್ಯ ತಿಪ್ಪಸಂದ್ರ ಹೋಬಳಿ, ಮಾಗಡಿ ತಾಲ್ಲೂಕು ಗ್ರಾಮಸ್ಥರು.
6	ಚಂದ್ರಶೇಖರ್ ಟಿ.ಹೆಚ್ ತಿಪ್ಪಸಂದ್ರ ಮಾಗಡಿ ತಾಲ್ಲೂಕು, ನಾರಸಂದ್ರ ಗ್ರಾಮ ಪಂಚಾಯಿತಿ ಕುದೂರು ಹೋಬಳಿ.
7	ಸಹಾಯಕ ನಿರ್ದೇಶಕರ ಕಛೇರಿ ಮಾಗಡಿ
8	ಬೆಟ್ಟಹಳ್ಳಿ ಕಾಲೋನಿ ಇ.ಓ ಮಾಗಡಿ, ಮೋಟಗೊಂಡನಹಳ್ಳಿ ಗ್ರಾಮ ಪಂಚಾಯ್ತಿ
9	ಸೀಗೆಕುಪ್ಪೆ ಕಾಲೋನಿ ಗ್ರಾಮದ ಹುಚ್ಚಲಕ್ಕಯ್ಯ.
10	ಬಾಳೇನಹಳ್ಳಿ ಗ್ರಾಮದ ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ
11	ಹಾರೋಹಳ್ಳಿ ಗ್ರಾಮಸ್ಥರು ಮತ್ತು ನಾರಸಂದ್ರ ಮತ್ತು ಪಸಪ್ಪನಪಾಳ್ಯ ಗ್ರಾಮ

- ಇಲಾಖಾ ವತಿಯಿಂದ ಚಿರತೆಗಳು ಯಾವ ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಿವೆ ಎಂಬ ಮಾಹಿತಿ ಮೇರೆಗೆ ನೇತೇನಹಳ್ಳಿ, ಹೊಸಹಳ್ಳಿ, ಸಾವನದುರ್ಗ, ಅರವಯನಪಾಳ್ಯ, ರಂಗೇನಹಳ್ಳಿ, ತಿರುಮಲಾಪುರ, ಭಂಟರಕುಪ್ಪೆ ಹಲವುಬಾರಿ ಇರಿಸಲಾಗಿದೆ, ತೊರೆಚನ್ನಹಳ್ಳಿ, ಶಂಬುದೇವನಹಳ್ಳಿ, ಜುಟ್ಟನಹಳ್ಳಿ 03 ಬಾರಿ ಇರಿಸಲಾಗಿದೆ. ಬಾಸೆಗೌಡನಪಾಳ್ಯ, ವರದೇನಹಳ್ಳಿ, ಮಲ್ಲೂರು, ಕಲ್ಯಾಣಪುರ, ಸಂಕೀಘಟ್ಟ, ಕಣ್ಣೂರು, ಹುಲಿಕಲ್, ಕುದೂರು, ಗೊಲ್ಲರದೊಡ್ಡಿ, ಕೊತ್ತಗೊಂಡನಹಳ್ಳಿ, ಕದರಯ್ಯನಪಾಳ್ಯ, ಇತರೆ ಗ್ರಾಮಗಳಲ್ಲಿ ಇರಿಸಲಾಗುತ್ತಿದೆ. ಹಾಗೂ 32 ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪ್ರತಿ ದಿನ 10-15 ಗ್ರಾಮಗಳಲ್ಲಿ ಬೋನುಗಳನ್ನು ಇರಿಸಲಾಗುತ್ತಿದೆ.

- ಚಿರತೆ ಹಾವಳಿಯಿಂದ ಮಾನವಗಾಯ, ಮಾನವಪ್ರಾಣಹಾನಿ ಸಂಬಂಧಿಸಿದ ಪ್ರಕರಣಗಳ ಸ್ಥಳದಿಂದ 100-150 ಮೀ ಅಂತರದಲ್ಲಿ 5-6 ಸಂಖ್ಯೆಯ ಬೋನುಗಳನ್ನು ಇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಘಟನೆ ನಡೆದ ಸ್ಥಳದ ಸುತ್ತ-ಮುತ್ತ ಚಿರತೆಯು ಅವಿತುಕೊಳ್ಳದಂತೆ ಪೊದೆಗಳನ್ನು ತೆರವುಗೊಳಿಸಲಾಗುತ್ತಿದೆ.
- ಚಿರತೆಯ ಚಲನವಲನಗಳನ್ನು ಗುರುತಿಸುವ ಸಲುವಾಗಿ ನಿಗಾ ತಂಡಗಳನ್ನು ರಚಿಸಿ ಹಗಲು-ರಾತ್ರಿ ನಿಗಾ ವಹಿಸುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

- ಮೂವಿಂಗ್ ಕ್ಯಾಮರ ಅಳವಡಿಸಿ ಚಿರತೆಗಳ ಚಲನ-ವಲನಗಳನ್ನು ಪರಿಶೀಲಿಸಿ, 2019 20ನೇ ಸಾಲಿನಿಂದ 2022 23ನೇ ಸಾಲಿನ ಪ್ರಸ್ತುತ ಮಾಹೆಯವರೆವಿಗೆ ಚಿರತೆಗಳು ಗ್ರಾಮಗಳಲ್ಲಿ ಕಂಡುಬಂದಲ್ಲಿ ಸದರಿ ಪರದೇಶದ ಸುತ್ತಮುತ್ತ 5-6 ಕಡೆ ಬೋನುಗಳನ್ನು ಇರಿಸಿ 63 ಚಿರತೆಗಳನ್ನು ಸೆರೆಹಿಡಿದು ಕಾವೇರಿ ವನ್ಯಜೀವಿ ವಿಭಾಗದ ಅರಣ್ಯ ಪ್ರದೇಶಕ್ಕೆ ಬಿಡಲಾಗಿರುತ್ತದೆ ಹಾಗೂ ಚಿರತೆಗಳು ಸದರಿ ಸ್ಥಳಗಳಲ್ಲಿ ಇರುವ ಬಗ್ಗೆ ಸಾರ್ವಜನಿಕರಿಗೆ ಭಿತ್ತಿ ಪತ್ರಗಳನ್ನು ಮುದ್ರಿಸಿ ಗ್ರಾಮಗಳಿಗೆ ಹಂಚಲು ಕ್ರಮ ಕೈಗೊಳ್ಳಲಾಗಿದೆ ಮತ್ತು ಸಾರ್ವಜನಿಕರು ರಾತ್ರಿಯ ವೇಳೆ ಮನೆಯಿಂದ ಹೊರಗೆ ಬರದಂತೆ ಮುನ್ನೆಚ್ಚರಿಕೆ ಕ್ರಮವಹಿಸಲು ಸಲಹೆ/ಪ್ರಚಾರ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಮತ್ತು ಮಾನವ ಗಾಯ ಹಾಗೂ ಜಾನುವಾರು ಹತ್ಯೆ ಪ್ರಕರಣಗಳಲ್ಲಿ ಸರ್ಕಾರದ ಆದೇಶದಂತೆ ಸಾಕು ಪ್ರಾಣಿಗಳಾದ ಕುರಿ. ಮೇಕೆ. ಟಗರುಗಳ ಪ್ರಾಣಹಾನಿ ಹತ್ಯೆಯಾದಲ್ಲಿ ರೂ. 5,000/-ಗಳು. ಹಸುಗಳ ಪ್ರಾಣಹಾನಿ ರೂ. 20,000/-ಗಳು. ಮಾನವ ಗಾಯ ಪ್ರಕರಣಗಳಿಗೆ ದಯಾತ್ಮಕ ಧನವಾಗಿ ರೂ. 30,000/- ಹಾಗೂ ವೈದ್ಯಕೀಯ ವೆಚ್ಚವನ್ನು CGHS ದರಗಳನ್ವಯ ಮತ್ತು ಮಾನವ ಹತ್ಯೆ ಪ್ರಕರಣಗಳಿಗೆ ರೂ. 7.50 ಲಕ್ಷ ಗಳ ಹಾಗೂ ಶೇಕಡಾ 50% ಭಾಗಶಃ ಅಂಗವಿಕಲತೆಯ ಪ್ರಕರಣಗಳಿಗೆ ರೂ. 2.50 ಲಕ್ಷ, ಶಾಶ್ವತ ಅಂಗವಿಕಲತೆಗೆ ರೂ. 5.00 ಲಕ್ಷಗಳನ್ನು ಪರಿಹಾರ ಧನವಾಗಿ ವಿತರಿಸಲಾಗುವುದು ಹಾಗೂ ಶಾಶ್ವತ ಅಂಗವಿಕಲತೆ ಹೊಂದಿದವರಿಗೆ ಮತ್ತು ಮೃತಪಟ್ಟ ಕುಟುಂಬದವರಿಗೆ ಪ್ರಕರಣ ನಡೆದ ದಿನದಿಂದ 5 ವರ್ಷಗಳ ಅವಧಿಗೆ ಪ್ರತಿ ಮಾಹೆಯಾನ ರೂ. 2000/ ರಂತೆ ಪರಿಹಾರ ಧನ ಪಾವತಿಸಲಾಗುತ್ತಿದೆ. ಅದರಂತೆ ರಾಮನಗರ ಜಿಲ್ಲೆ, ಮಾಗಡಿ ವಿಧಾನಸಭಾ ಕ್ಷೇತ್ರ ದಲ್ಲಿ 2018-19 ನೇ ಸಾಲಿನಿಂದ ಪ್ರಸಕ್ತ ಸಾಲಿನ ವರೆಗೆ ಚಿರತೆ ದಾಳಿಯಿಂದ ಉಂಟಾದ ಮಾನವ ಪ್ರಾಣ, ಮಾನವ ಗಾಯ ಹಾಗೂ ಸಾಕು ಪ್ರಾಣಿಗಳ ಹತ್ಯೆ ಪ್ರಕರಣಗಳಿಗೆ ಪಾವತಿಸಲಾದ ಪರಿಹಾರದ ವಿವರ ಈ ಕೆಳಕಂಡಂತಿದೆ.

ಕ್ರ. ಸಂ	ಜಿಲ್ಲೆ	ದಾಳಿ ಮಾಡಿದ ದಿನಾಂಕ ಮತ್ತು ವರ್ಷ	ದಾಳಿ ಮಾಡಿದ ಪ್ರಾಣಿ	ದಾಳಿಗೊಳಗಾಗಿ ಗಾಯಹೊಂದಿದವರ ವಿವರ	ದಾಳಿಗೊಳಗಾಗಿ ಮೃತಪಟ್ಟವರ ವಿವರ	ಪರಿಹಾರದ ಬಗ್ಗೆ ಮಾಹಿತಿ
ಮೃತಪಟ್ಟಿರುವ ವ್ಯಕ್ತಿಗಳ ವಿವರ ಹಾಗೂ ಪರಿಹಾರದ ವಿವರ						
1	ರಾಮನಗರ	09.05.2020 2020-21	ಚಿರತೆ		ಹೇಮಂತ್ ಬಿ ಸಿ ಚವರಯ್ಯನ ಪಾಳ್ಯ ಗ್ರಾಮ, ಕಸಬಾ ಹೋಬಳಿ, ಮಾಗಡಿ ತಾಲ್ಲೂಕು,	ರೂ. 7.50 ಲಕ್ಷ ಪರಿಹಾರ ಪಾವತಿಸಲಾಗಿರುತ್ತದೆ.
2	ರಾಮನಗರ	16.05.2020 2020-21	ಚಿರತೆ		ಶ್ರೀಮತಿ ಗಂಗಮ್ಮ, ಚಿಕ್ಕಗೊಂಡನಹಳ್ಳಿ, ಗ್ರಾಮ, ಸೋಲೂರು ಹೋಬಳಿ, ಮಾಗಡಿ ತಾಲ್ಲೂಕು,	ರೂ. 7.50 ಲಕ್ಷ ಪರಿಹಾರ ಪಾವತಿಸಲಾಗಿರುತ್ತದೆ
3	ರಾಮನಗರ	09.08.2022 2021-22	ಚಿರತೆ		ಶ್ರೀಮತಿ ಮಹಾಲಕ್ಷ್ಮಮ್ಮ, ಕಲ್ಯಾಪಾಳ್ಯ, ಕಸಬಾ ಹೋಬಳಿ, ಮಾಗಡಿ ತಾಲ್ಲೂಕು.	ರೂ. 7.50 ಲಕ್ಷ ಪರಿಹಾರ ಪಾವತಿಸಲಾಗಿರುತ್ತದೆ
ಗಾಯಗೊಂಡ ವ್ಯಕ್ತಿಗೆ ದಯಾತ್ಮಕ ಧನ ಮತ್ತು CGHS ದರಗಳನ್ವಯ ವೈದ್ಯಕೀಯ ವೆಚ್ಚ ಪಾವತಿ ವಿವರ						
4	ರಾಮನಗರ	19.11.2020 2020-21	ಚಿರತೆ	ರತ್ನಮ್ಮ, ಮಣ್ಣಿಗನಹಳ್ಳಿ, ಗ್ರಾಮ, ಕುದೂರು ಹೋಬಳಿ, ಮಾಗಡಿ		ರೂ. 40999/- ಗಳನ್ನು ಪರಿಹಾರವಾಗಿ ವಿತರಿಸಲಾಗಿದೆ.
5	ರಾಮನಗರ	04.10.2021 2021-22	ಚಿರತೆ	ಚಿರತೆ ಗಂಗಮ್ಮ ಕೋಂ ಶಿವಲಿಂಗಯ್ಯ ಕಲ್ಯಾ ಹೊಸದೊಡ್ಡಿ, ಗ್ರಾಮ, ಕಸಬಾ, ಹೋಬಳಿ, ಮಾಗಡಿ ತಾಲ್ಲೂಕು	-	ರೂ.50594/- ಗಳನ್ನು ಪರಿಹಾರವಾಗಿ ವಿತರಿಸಲಾಗಿದೆ

ಚಿರತೆ ಯಿಂದ ಹತ್ಯೆಯಾದ ಜಾನುವಾರುಗಳ ವಿವರ		
ವರ್ಷ	ಪ್ರಕರಣಗಳ ಸಂಖ್ಯೆ	ಮೊತ್ತ ರೂ.ಗಳಲ್ಲಿ
2018-19	191	1511594
2019-20	156	907270
2020-21	164	1149000
2021-22	358	2944800
2022 -23	51	340000
Total	**920**	**68,52,664**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು,
ಕರ್ನಾಟಕ, ಬೆಂಗಳೂರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	591
ಸದಸ್ಯರ ಹೆಸರು	:	ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ)
ಉತ್ತರಿಸಬೇಕಾದ ದಿನಾಂಕ	:	22.12.2022
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ಸುರಿದ ಭಾರಿ ಮಳೆಯಿಂದ ಶಾಲಾ ಕಟ್ಟಡಗಳು ಹಾನಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಲವಾರು ಶಾಲಾ ಕಟ್ಟಡಗಳು ತುಂಬಾ ಹಾನಿಗೊಳಗಾಗಿ ಶಿಥಿಲಾವಸ್ಥೆಯಲ್ಲಿ ಇದ್ದರೂ ಅವುಗಳ ಬಗ್ಗೆ ಸರ್ಕಾರವು ಗಮನಹರಿಸದೇ ಇರುವುದಕ್ಕೆ ಕಾರಣವೇನು; ಇವುಗಳ ದುರಸ್ತಿಗಾಗಿ ಸರ್ಕಾರವು ಕೈಗೊಳ್ಳುವ ಕ್ರಮಗಳೇನು;	ಪ್ರಸಕ್ತ 2022-23ನೇ ಸಾಲಿನಲ್ಲಿ ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತುರ್ತು ದುರಸ್ತಿಗಾಗಿ ರೂ.40.00 ಲಕ್ಷಗಳ ಅನುದಾನ ಹಾಗೂ ಹೆಚ್ಚುವರಿಯಾಗಿ ರೂ.20.00ಲಕ್ಷಗಳ ಅನುದಾನ ಮಂಜೂರು ಮಾಡಲಾಗಿದೆ. ಮುಂದುವರೆದು, ಮಹಾತ್ಮಾ ಗಾಂಧಿ ನರೇಗಾ ಯೋಜನೆ ಅಡಿಯಲ್ಲಿ ಶಾಲೆಗಳಿಗೆ ಕಟ್ಟಡ ನಿರ್ಮಾಣ/ದುರಸ್ತಿ ಯನ್ನೊಳಗೊಂಡಂತೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು 14 ಮತ್ತು 15ನೇ ಹಣಕಾಸು ಆಯೋಗದಲ್ಲಿ ಸಂಬಂಧಿಸಿದ ಗ್ರಾಮ ಪಂಚಾಯತಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕ್ರಮವಹಿಸಲು ಸುತ್ತೋಲೆ ಸಂಖ್ಯೆ:ಗ್ರಾಅಪಂರಾ 435 ಜಿಪಸ 2021, ದಿನಾಂಕ:08.11.2021ರನ್ವಯ ಅಗತ್ಯ ಕ್ರಮವಹಿಸುವಂತೆ ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ.
ಇ)	ಕಳೆದ ಮೂರು ವರ್ಷಗಳಲ್ಲಿ ಎಷ್ಟು ಶಾಲಾ ಕಟ್ಟಡಗಳನ್ನು ದುರಸ್ತಿ ಮಾಡಲಾಗಿದೆ; ಹಾನಿಗೊಳಗಾದ ಶಾಲೆಗಳಿಗೆ ಎಷ್ಟೆಷ್ಟು ಅನುದಾನ ನೀಡಲಾಗಿದೆ; (ಗ್ರಾಮವಾರು ಹೆಸರು ಸಹಿತ ವಿವರ ನೀಡುವುದು)	ಕಳೆದ 3 ವರ್ಷಗಳಲ್ಲಿ ವರ್ಷವಾರು. ಶಾಲಾವಾರು, ಕೊಠಡಿಗಳನ್ನು ದುರಸ್ತಿ ಗೊಳಿಸಿದ ವಿವರ ಕೆಳಕಂಡಂತಿದೆ.

ರೂ.ಲಕ್ಷಗಳಲ್ಲಿ

ವರ್ಷ	ಶಾಲೆಗಳ ಸಂಖ್ಯೆ	ಕೊಠಡಿಗಳ ಸಂಖ್ಯೆ	ಬಿಡುಗಡೆಯಾದ ಅನುದಾನ
2019-20	06	32	20.913
2020-21	0	0	0
2021-22	02	03	6.00
2022-23	20	64	40.0
ಒಟ್ಟು	**28**	**99**	**66.913**

(ಶಾಲಾವಾರು ಪಟ್ಟಿಯನ್ನು **ಅನುಬಂಧ-1,2,3ರಲ್ಲಿ**

		ಲಗತ್ತಿಸಿದೆ.)
ಈ)	ಹಾನಿಗೊಳಗಾದ ಶಾಲಾ ಕಟ್ಟಡಗಳನ್ನು ದುರಸ್ತಿ ಮಾಡದೇ ಇರುವುದಕ್ಕೆ ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು)	ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಲಭ್ಯತೆ ಹಾಗೂ ಅಗತ್ಯತೆಗೆ ಅನುಗುಣವಾಗಿ ಚಾಮರಾಜನಗರ ವಿಧಾನಸಭಾ ಕ್ಷೇತ್ರವನ್ನು ಒಳಗೊಂಡಂತೆ ರಾಜ್ಯದಾದ್ಯಂತ ಶಾಲಾ ಕಟ್ಟಡ ದುರಸ್ತಿಗೊಳಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ.

ಇಪಿ: 354 ಯೋಸಕ 2022

(ಬಿ.ಸಿ.ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

[redacted]

LAQ-591

ಉಪನಿರ್ದೇಶಕರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಚಾಮರಾಜನಗರ

2019–20 ನೇ ಸಾಲಿಗೆ ರಾಜ್ಯ ವಲಯ ಕಾರ್ಯಕ್ರಮದಡಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ದುರಸ್ಥಿ ಹಾಗೂ ನಿರ್ಮಾಣ ಸಂಬಂಧ ಬಿಡುಗಡೆಯಾಗಿರುವ ಅನುದಾನದ ವಿವರ.

ದುರಸ್ಥಿ ಕಾಮಗಾರಿ ವಿವರ

ಅನುಬಂಧ-01

ಕ್ರ.ಸಂ	ವರ್ಷ	ವಿಧಾನ ಸಭಾ ಕ್ಷೇತ್ರ	ಕಾರ್ಯಕ್ರಮ & ಲೆಕ್ಕ ಶೀರ್ಷಿಕೆ	ಶಾಲೆಗಳ ಸಂಖ್ಯೆ	ಭೌತಿಕ/ ಕೊಠಡಿ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ
1	CH-NAGARA	CH-NAGARA	ಸ.ಪ್ರೌ.ಶಾಲೆ, ಹರದನಹಳ್ಳಿ	1	3	2.367	2.367
2	CH-NAGARA	CH-NAGARA	ಸ.ಪ.ಪೂ.ಕಾಲೇಜು (ಪ್ರೌ.ಶಾ.ವಿ) ವೆಂಟಯ್ಯನಛತ್ರ	1	3	2.367	2.367
3	CH-NAGARA	CH-NAGARA	ಸ.ಪ್ರೌ.ಶಾಲೆ, ಜ್ಯೋತಿಗೌಡನಪುರ	1	4	3.156	3.156
4	CH-NAGARA	CH-NAGARA	ಸ.ಪ.ಪೂ.ಕಾಲೇಜು ಬಾಲಕರು(ಪ್ರೌ.ಶಾ.ವಿ) ಚಾ.ನಗರ	1	5	3.945	3.945
5	CH-NAGARA	CH-NAGARA	ಸ.ಹಿ.ಪ್ರಾ.ಶಾಲೆ, ನಾಗವಳ್ಳಿ	1	11	5.874	5.874
6	CH-NAGARA	CH-NAGARA	ಸ.ಹಿ.ಪ್ರಾ.ಶಾಲೆ, ಹೆಬ್ಬಸೂರು	1	6	3.204	3.204
ಒಟ್ಟು				6	32	20.913	20.913

ಉಪ ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
ಚಾಮರಾಜನಗರ

[redacted]

LAQ-591

ಅನುಬಂಧ-೦೨

ಉಪನಿರ್ದೇಶಕರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಚಾಮರಾಜನಗರ ಜಿಲ್ಲೆ. ಚಾಮರಾಜನಗರ

2021-22 ನೇ ಸಾಲಿಗೆ ರಾಜ್ಯ ವಲಯ ಕಾರ್ಯಕ್ರಮದಡಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ದುರಸ್ಥಿ ಹಾಗೂ ನಿರ್ಮಾಣ ಸಂಬಂಧ ಬಿಡುಗಡೆಯಾಗಿರುವ ಅನುದಾನವನ್ನು ಸೆಳೆದಿರುವ ವಿವರ.

ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಗಳಿಗೆ ಅವಶ್ಯಕವಿರುವ ದುರಸ್ಥಿ ಕಾರ್ಯಕ್ಕೆ ಬಿಡುಗಡೆಯಾದ ಅನುದಾನದ ವಿವರ.

ಕ್ರ.ಸಂ	ವರ್ಷ	ವಿಧಾನ ಸಭಾ ಕ್ಷೇತ್ರ	ಕಾರ್ಯಕ್ರಮ	ಲೆಕ್ಕ ಶೀರ್ಷಿಕೆ	ಶಾಲೆಗಳ ಸಂಖ್ಯೆ	ಭೌತಿಕ/ ಕೊಠಡಿ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ
1	ಚಾ.ನಗರ	CH-NAGARA	ಸ.ಹಿ.ಪ್ರಾ.ಶಾಲೆ ಉಪ್ಪಾರ ಬೀದಿ ಚಾಮರಾಜನಗರ	ಪ್ರಾಥಮಿಕ ಶಾಲೆ	ಕೊಠಡಿ ದುರಸ್ಥಿ	2	4.00	4.00
2	ಚಾ.ನಗರ	CH-NAGARA	ಸ.ಹಿ.ಪ್ರಾ.ಶಾಲೆ ಕಾಳನಹುಂಡಿ	ಪ್ರಾಥಮಿಕ ಶಾಲೆ	ಕೊಠಡಿ ದುರಸ್ಥಿ	1	2.00	2.00
ಒಟ್ಟು						**3**	**6.00**	**6.00**

ಉಪ ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
ಚಾಮರಾಜನಗರ

ಕ್ರ.ಸಂ	ಜಿಲ್ಲೆಯ ಹೆಸರು	ವಿಧಾನ ಸಭಾ ಕ್ಷೇತ್ರ	ಶಾಲೆಯ ಹೆಸರು	ದುರಸ್ತಿಯಾಗಬೇಕಾದ ಕೊಠಡಿಗಳ ಸಂಖ್ಯೆ	ದುರಸ್ತಿಯ ಸ್ವರೂಪ	[illegible] ಮೊತ್ತ ಲಕ್ಷಗಳಲ್ಲಿ
14	ಚಾಮರಾಜನಗರ	ಚಾಮರಾಜನಗರ	ಸ.ಕಿ.ಪ್ರಾ.ಶಾಲೆ ವರದರಾಜಪುರ	1	[illegible] ಮತ್ತು ಗೋಡೆ, ಕಿಟಕಿ [illegible] ರಿಪೇರಿ	[illegible]
15	ಚಾಮರಾಜನಗರ	ಚಾಮರಾಜನಗರ	ಸ.ಹಿ.ಪ್ರಾ.ಶಾಲೆ ಅರಳೀಮರ	1	ಮೇಲ್ಛಾವಣಿ	[illegible]
16	ಚಾಮರಾಜನಗರ	ಚಾಮರಾಜನಗರ	ಸ.ಹಿ.ಪ್ರಾ.ಶಾಲೆ ಉರ್ದು ಬಾಲಕಿಯರು, ಚಾ.ನಗರ	2	ಮೇಲ್ಛಾವಣಿ ದುರಸ್ತಿ	[illegible]
17	ಚಾಮರಾಜನಗರ	ಚಾಮರಾಜನಗರ	ಸ.ಹಿ.ಪ್ರಾ.ಶಾಲೆ ಯಾನಗಹಳ್ಳಿ	3	ಮೇಲ್ಛಾವಣಿ ಮತ್ತು ಗೋಡೆ, ಕಿಟಕಿ ಬಾಗಿಲು ರಿಪೇರಿ	[illegible]
18	ಚಾಮರಾಜನಗರ	ಚಾಮರಾಜನಗರ	ಸ.ಹಿ.ಪ್ರಾ.ಶಾಲೆ ದಡದಹಳ್ಳಿ	4	ಮೇಲ್ಛಾವಣಿ ಮತ್ತು ಗೋಡೆ, ಕಿಟಕಿ ಬಾಗಿಲು ರಿಪೇರಿ	2.00
19	ಚಾಮರಾಜನಗರ	ಚಾಮರಾಜನಗರ	ಸ.ಹಿ.ಪ್ರಾ.ಶಾಲೆ ಮಂಗಲ ಹೊಸೂರು	1	ಮೇಲ್ಛಾವಣಿ ಮತ್ತು ಗೋಡೆ, ಕಿಟಕಿ ಬಾಗಿಲು ರಿಪೇರಿ	2.50
20	ಚಾಮರಾಜನಗರ	ಚಾಮರಾಜನಗರ	ಸ.ಹಿ.ಪ್ರಾ.ಶಾಲೆ ಗೂಳಿಪುರ	1	ಮೇಲ್ಛಾವಣಿ ಮತ್ತು ಗೋಡೆ, ಕಿಟಕಿ ಬಾಗಿಲು ರಿಪೇರಿ	2.50
	ಒಟ್ಟು			64		40.00

ಉಪ ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
ಚಾಮರಾಜನಗರ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	593
ಸದಸ್ಯರ ಹೆಸರು	:	ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ)
ಉತ್ತರಿಸಬೇಕಾದ ದಿನಾಂಕ	:	22-12-2022
ಉತ್ತರಿಸುವ ಸಚಿವರು	:	ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

***

	ಪ್ರಶ್ನೆ	ಉತ್ತರ
ಅ)	ಇಂಧನ ಇಲಾಖೆಯಲ್ಲಿ ಪ್ರಸ್ತುತ ಎಷ್ಟು ಯೋಜನೆಗಳಿವೆ; ಅವುಗಳು ಯಾವುವು; (ಯೋಜನಾವಾರು ಆದೇಶದ ಪ್ರತಿವಾರು ವಿವರ ನೀಡುವುದು)	ಪ್ರಸ್ತುತ ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕೈಗೊಳ್ಳಲಾಗುತ್ತಿರುವ ಯೋಜನೆಗಳು ಹಾಗೂ ಇವುಗಳ ಮಾನದಂಡಗಳ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. ಆದೇಶದ ಪ್ರತಿಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.
ಆ)	ಈ ಯೋಜನೆಗಳ ಸೌಲಭ್ಯಗಳನ್ನು ಬಡವರು ಪಡೆಯಲು ಸರ್ಕಾರ ನಿಗದಿ ಮಾಡಿರುವ ಅರ್ಹತೆಯ ಮಾನದಂಡಗಳೇನು; (ಆದೇಶದ ಪ್ರತಿವಾರು ವಿವರ ನೀಡುವುದು)	
ಇ)	ಈ ಎಲ್ಲಾ ಯೋಜನೆಗಳಿಗೆ ಆಯ್ಕೆಯಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಫಲಾನುಭವಿವಾರು, ಗ್ರಾಮವಾರು ವಿವರ ನೀಡುವುದು)	ವಿದ್ಯುತ್ ಸರಬರಾಜು ಕಂಪನಿಗಳವತಿಯಿಂದ ಕೈಗೊಳ್ಳಲಾಗುತ್ತಿರುವ ಯೋಜನೆಗಳಿಗೆ ಆಯ್ಕೆಯಾಗಿರುವ ಫಲಾನುಭವಿಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ.
ಈ)	ರಾಜ್ಯದಲ್ಲಿರುವ ಬೆಸ್ಕಾಂ,ಚೆಸ್ಕಾಂ, ಜೆಸ್ಕಾಂ ಮತ್ತು ಮೆಸ್ಕಾಂ ವಿದ್ಯುತ್ ಕಂಪನಿಗಳಲ್ಲಿ ಕಳೆದ ಮೂರು ವರ್ಷಗಳಿಂದ ವಿದ್ಯುತ್ ಅಭಿವೃದ್ಧಿಗಾಗಿ ಕೈಗೊಂಡ ಯೋಜನೆಗಳಾವುವು;	ರಾಜ್ಯದಲ್ಲಿರುವ ಬೆಸ್ಕಾಂ, ಚೆಸ್ಕಾಂ, ಜೆಸ್ಕಾಂ ಮತ್ತು ಮೆಸ್ಕಾಂ ವಿದ್ಯುತ್ ಕಂಪನಿಗಳಲ್ಲಿ ಕಳೆದ 03 (ಮೂರು) ವರ್ಷಗಳಿಂದ ವಿದ್ಯುತ್ ಅಭಿವೃದ್ಧಿಗಾಗಿ ಕೈಗೊಂಡ ಯೋಜನೆಗಳು ಹಾಗೂ ಈ ಯೋಜನೆಗಳಿಗೆ ಒದಗಿಸಿದ ಅನುದಾನದ ವಿವರಗಳನ್ನು **ಅನುಬಂಧ-4** ರಲ್ಲಿ ಒದಗಿಸಲಾಗಿದೆ.
ಉ)	ಈ ಯೋಜನೆಗಳಿಗೆ ಒದಗಿಸಿದ ಅನುದಾನವೆಷ್ಟು? (ಕಂಪನಿವಾರು ಮತ್ತು ವರ್ಷವಾರು ವಿವರ ನೀಡುವುದು)	

ಸಂಖ್ಯೆ:ಎನರ್ಜಿ 342 ಪಿಪಿಎಂ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ
ಸಚಿವರು

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಪುಟ್ಟರಂಗಶೆಟ್ಟಿ .ಸಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 593ಕ್ಕೆ ಅನುಬಂಧ-1

ಪ್ರಸ್ತುತ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳಲಾಗುತ್ತಿರುವ ಯೋಜನೆಗಳು ಮತ್ತು ಅವುಗಳ ಮಾನದಂಡಗಳ ವಿವರಗಳು:

ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪನೆ : ಆಯಾ ಪ್ರದೇಶದ ವಿದ್ಯುತ್ ಬೇಡಿಕೆ, ಗುಣಮಟ್ಟದ /ನಿರಂತರ ವಿದ್ಯುತ್ ಪೂರೈಕೆಯಲ್ಲಿನ ಸಮಸ್ಯೆ, ಕಡಿಮೆ ವೋಲ್ಟೇಜ್‌ನ ತೊಂದರೆ ಇತ್ಯಾದಿ ವಿವರಗಳ ಅನುಗುಣವಾಗಿ, ಆ ಪ್ರದೇಶದ ವಿದ್ಯುತ್ ಸರಬರಾಜು ಕಂಪನಿವತಿಯಿಂದ ವಿದ್ಯುತ್ ವಿತರಣಾ ಉಪ-ಕೇಂದ್ರವನ್ನು ನಿರ್ಮಿಸುವ ಪ್ರಸ್ತಾವನೆಯನ್ನು ಕವಿಪ್ರನಿನಿಗೆ ಸಲ್ಲಿಸಲಾಗುತ್ತದೆ. ಪ್ರಸ್ತಾವನೆಯನ್ನು ಕ.ವಿಪ್ರ.ನಿ.ನಿ. ತಾಂತ್ರಿಕ ಸಮನ್ವಯ ಸಮಿತಿ ಸಭೆಯ ಮುಂದಿಟ್ಟು, ಸದರಿ ಪ್ರದೇಶದಲ್ಲಿ ವಿದ್ಯುತ್ ಸಮಸ್ಯೆಗಳ ಅನುಗುಣದಂತೆ, ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಆವಶ್ಯಕತೆಯು ಕಂಡು ಬಂದಲ್ಲಿ ಪ್ರಸ್ತಾವನೆಯನ್ನು ಅನುಮೋದಿಸಲಾಗುವುದು.

ಅನುಮೋದನೆಗೊಂಡ ಪ್ರಸ್ತಾವನೆಯ ಪ್ರದೇಶದಲ್ಲಿ ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣ ಮಾಡುವ ಸಲುವಾಗಿ ಸೂಕ್ತ ಜಮೀನನ್ನು ಗುರುತಿಸಿ ಜಮೀನನ್ನು ಕವಿಪ್ರನಿನಿಗೆ ಸ್ವಾಧೀನದಲ್ಲಿ ಪಡೆದು, ಕಾಮಗಾರಿಯ ಅಂದಾಜುಪಟ್ಟಿಯನ್ನು ತಯಾರಿಸಿ, ವಿವರವಾದ ಯೋಜನಾ ವರದಿ ಅನುಮೋದನೆಗೊಂಡ ನಂತರ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ವಿದ್ಯುತ್ ಮಾರ್ಗ ನಿರ್ಮಾಣ: ಹೊಸದಾದ / ಉನ್ನತೀಕರಿಸ ಬೇಕಾದ ವಿದ್ಯುತ್ ಮಾರ್ಗಗಳ ಪ್ರಸ್ತಾವನೆಗಳನ್ನು ಕವಿವಿಪ್ರನಿ ಪ್ರಸರಣ ವಲಯಗಳಿಂದ ಸ್ವೀಕೃತವಾಗುತ್ತದೆ. ಪ್ರಸ್ತಾವನೆಯನ್ನು ತಾಂತ್ರಿಕ ಸಮನ್ವಯ ಸಮಿತಿ ಸಭೆಯ ಮುಂದಿಟ್ಟು, ಸದರಿ ವಿದ್ಯುತ್ ಮಾರ್ಗಗಳನ್ನು ನಿರ್ಮಾಣ ಆವಶ್ಯಕತೆಯು ಕಂಡು ಬಂದಲ್ಲಿ ಪ್ರಸ್ತಾವನೆಯನ್ನು ಅನುಮೋದಿಸಲಾಗುವುದು.

ಅನುಮೋದನೆಗೊಂಡ ಪ್ರಸ್ತಾವನೆಯ ಮಾರ್ಗದ ಸರ್ವೆ ಮಾಡಲಾಗುವುದು, ಅಂದಾಜುಪಟ್ಟಿಯನ್ನು ತಯಾರಿಸಿ, ವಿವರವಾದ ಯೋಜನಾ ವರದಿ ಅನುಮೋದನೆಗೊಂಡ, ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ಹೆಚ್ಚುವರಿ ಪರಿವರ್ತಕ ಅಳವಡಿಕೆ ಹಾಗೂ ಹಾಲಿ ಪರಿವರ್ತಕಗಳ ಉನ್ನತೀಕರಣ : ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ಹೆಚ್ಚುವರಿ ಪರಿವರ್ತಕ ಅಳವಡಿಕೆ ಹಾಗೂ ಹಾಲಿ ಪರಿವರ್ತಕಗಳ ಉನ್ನತೀಕರಿಸ ಬೇಕಾದ ಪ್ರಸ್ತಾವನೆಗಳನ್ನು ಕವಿವಿಪ್ರನಿ ಪ್ರಸರಣ ವಲಯಗಳಿಂದ ಸ್ವೀಕೃತವಾಗುತ್ತದೆ. ಪ್ರಸ್ತಾವನೆಯನ್ನು ತಾಂತ್ರಿಕ ಸಮನ್ವಯ ಸಮಿತಿ ಸಭೆಯ ಮುಂದಿಟ್ಟು, ಸದರಿ ಪ್ರಸ್ತಾವನೆಗಳ ಆವಶ್ಯಕತೆಯು ಕಂಡು ಬಂದಲ್ಲಿ ಪ್ರಸ್ತಾವನೆಯನ್ನು ಅನುಮೋದಿಸಲಾಗುವುದು.

ಅನುಮೋದನೆಗೊಂಡ ಪ್ರಸ್ತಾವನೆಯ ಅಂದಾಜುಪಟ್ಟಿಯನ್ನು ತಯಾರಿಸಿ, ವಿವರವಾದ ಯೋಜನಾ ವರದಿ ಅನುಮೋದನೆಗೊಂಡ ನಂತರ, ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ರಾಜ್ಯದ ~~□□□□~~ ಪ್ರಸ್ತುತ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ ಕೈಗೊಂಡಿರುವ ಯೋಜನೆಗಳು ಮತ್ತು ಅವುಗಳ ಮಾನದಂಡಗಳ ವಿವರಗಳು:

ಪ್ರಸ್ತುತ ರಾಜ್ಯ ಸರ್ಕಾರದಿಂದ ಅನುದಾನವನ್ನು ಪಡೆಯಲಾಗಿರುವ ಯೋಜನೆಗಳು ಈ ಕೆಳಕಂಡಂತಿವೆ.

1. ಪರಿಶಿಷ್ಟ ವರ್ಗದ ಉಪಯೋಜನೆ(ಎಸ್ ಸಿ ಎಸ್ ಪಿ)
2. ಪರಿಶಿಷ್ಟ ಪಂಗಡದ ಉಪಯೋಜನೆ (ಟಿ ಎಸ್ ಪಿ)
3. ವಿಶೇಷ ಅಭಿವೃದ್ಧಿ ಯೋಜನೆ (ಎಸ್ ಡಿ ಪಿ)

ಪರಿಶಿಷ್ಟ ವರ್ಗದ ಉಪಯೋಜನೆ(ಎಸ್ ಸಿ ಎಸ್ ಪಿ) ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆ (ಟಿ ಎಸ್ ಪಿ) :

ಪರಿಶಿಷ್ಟ ಜಾತಿ ಉಪಯೋಜನೆ, ಪರಿಶಿಷ್ಟ ಪಂಗಡ ಉಪಯೋಜನೆಯ ಬಡ ಅಶಕ್ತ ಭೂಮಿ ಹೊಂದಿರುವ ರೈತರು ನೀರಾವರಿ ಸೌಲಭ್ಯ ಪಡೆದು ಆರ್ಥಿಕ ಸ್ವಾವಲಂಬಿಗಳಾಗಿ ಜೀವನ ನಡೆಸಲು ಅನುಕೂಲವಾಗುತ್ತದೆ.

ಎಸ್.ಸಿ.ಎಸ್.ಪಿ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಿ, ಕೊಳವೆ ಬಾವಿ ಕೊರೆದು, ಮೋಟಾರ್ ಪಂಪುಗಳನ್ನು ಅಳವಡಿಸಿ, ನಿಗಧಿತ ಠೇವಣಿ ಮೊತ್ತವನ್ನು ಪಾವತಿಸಿ, ಎಸ್ಕಾಂಗಳ ಸಂಬಂಧಿತ ಉಪ ವಿಭಾಗಗಳಲ್ಲಿ ಅರ್ಜಿ ನೋಂದಾಯಿಸುತ್ತಾರೆ. ತದ ನಂತರ ವಿದ್ಯುತ್ ಸರಬರಾಜು ಕಂಪನಿಗಳ ನಿಯಮಾನುಸಾರ ರೈತರ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ.

ಮುಂದುವರೆದು ಪರಿಶಿಷ್ಟ ಪಂಗಡ ಉಪಯೋಜನೆಯಡಿ ನೋಂದಣಿಗೊಂಡ ಅರ್ಜಿಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಅನುಗುಣವಾಗಿ ಗಿರಿಜನ ಉಪಯೋಜನೆಯಡಿಯಲ್ಲಿ ಪರಿಶಿಷ್ಟ ಪಂಗಡದವರ

ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ. ಸದರಿ ಯೋಜನೆಯಡಿ ಸರ್ಕಾರ ನಿಗದಿಪಡಿಸಿರುವ ಅರ್ಹತೆಗಳ ಮೇರೆಗೆ ಎಸ್.ಸಿ/ಎಸ್.ಟಿ. ಕಾಲೋನಿಗಳಿಗೆ ಹಾಗೂ ಕೃಷಿ ನೀರಾವರಿ ಪಂಪು ಸೆಟ್ಟು ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಫಲಾನುಭವಿಗಳನ್ನು ಆಯ್ಕೆ ಮಾಡಿ ಸಂಬಂಧಿಸಿದ ಇಲಾಖೆಗಳ ವತಿಯಿಂದ ಎಸ್ಕಾಂನ ಉಪವಿಭಾಗಗಳಲ್ಲಿ ನೋಂದಾಯಿಸಲ್ಪಟ್ಟ ಅರ್ಜಿಗಳಿಗೆ ಎಸ್ಕಾಂ ನಿಯಮಾನುಸಾರ ವಿದ್ಯುತ್ ಸಂಪರ್ಕ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಶೇಷ ಅಭಿವೃದ್ಧಿ ಯೋಜನೆಯಡಿ ವಿತರಣಾ ಜಾಲವನ್ನು ವಿಸ್ತರಿಸುವುದು ಮತ್ತು ಬಲಪಡಿಸುವ ಕಾಮಗಾರಿಗಳು:

ಎಸ್.ಡಿ.ಪಿ ಯೋಜನೆಯಡಿಯಲ್ಲಿ, ಹೊಸ ವಿದ್ಯುತ್ ಕೇಂದ್ರಗಳಿಂದ ಹೊಸ 11 ಕೆವಿ ಮಾರ್ಗಗಳನ್ನು ನಿರ್ಮಿಸುವುದು, ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸುವುದು/ಸಾಮರ್ಥ್ಯವನ್ನು ಹೆಚ್ಚಿಸುವುದು, ಮೇಲ್ಮಾರ್ಗ/ಭೂಗತ ಕೇಬಲ್/ಕವರ್ಡ್ ವಾಹಕ/ಏರಿಯಲ್ ಬಂಚ್ಡ್ ಕೇಬಲ್ ಒಳಗೊಂಡಂತೆ, ಎಚ್.ಟಿ/ಎಲ್.ಟಿ ಕಾರ್ಯಜಾಲವನ್ನು ಬಲಪಡಿಸುವುದು, ಸ್ಥಳಿಯ ಯೋಜನೆಗಳು, ಸುರಕ್ಷಾ ಕೆಲಸಗಳು, ತುರ್ತು/ನೈಸರ್ಗಿಕ ವಿಕೋಪ ಕಾಮಗಾರಿಗಳನ್ನು ನಿರ್ವಹಿಸಲಾಗುವುದು.

ಗಂಗಾ ಕಲ್ಯಾಣ ಯೋಜನೆ:

ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೆಳಕಂಡ ಅಭಿವೃದ್ಧಿ ನಿಗಮಗಳಿಂದ ನೋಂದಣಿಗೊಂಡ ನೀರಾವರಿ ಪಂಪುಸೆಟ್ಟುಗಳಿಗೆ (ಫಲಾನುಭವಿಗಳಿಗೆ) ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ.

- ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ (ಪರಿಶಿಷ್ಟ ಜಾತಿ).
- ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ (ಪರಿಶಿಷ್ಟ ಪಂಗಡ)
- ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ಹಿಂದುಳಿದ ವರ್ಗ)
- ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ (ಅಲ್ಪ ಸಂಖ್ಯಾತ)
- ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃಧ್ಧಿ ನಿಗಮ ನಿಯಮಿತ
- ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ
- ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ
- ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ
- ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ

ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ವಿಶ್ವಕರ್ಮ ಸಮುದಾಯ, ಕರ್ನಾಟಕ ಉಪ್ಪಾರ, ಕರ್ನಾಟಕ ಆಧಿ ಜಾಂಬವ, ನಿಜಶರಣ ಅಂಬಿಗರ ಚೌಡಯ್ಯ ಹಾಗೂ ಕರ್ನಾಟಕ ಭೋವಿ ಸಮುದಾಯದ ರೈತರ ನೀರಾವರಿ ಪಂಪುಸೆಟ್ಟುಗಳಿಗೆ (ಫಲಾನುಭವಿಗಳ) ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ.

ಅಭಿವೃದ್ಧಿ ನಿಗಮದವರು ಫಲಾನುಭವಿಗಳನ್ನು ಗುರುತಿಸಿ, ಮೋಟಾರ್ ಪಂಪ್ ಅನ್ನು ಅಳವಡಿಸಿ, ಅಭಿವೃದ್ಧಿ ನಿಗಮಗಳ ಜಿಲ್ಲಾಧಿಕಾರಿಗಳು ಆರ್.ಟಿ.ಸಿ, ವಾಟರ್ ರೈಟ್ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರದ ಆರ್.ಡಿ ಸಂಖ್ಯೆ, ಆಧಾರ್ ಸಂಖ್ಯೆ ಹಾಗೂ ಕೊಳವೆ ಬಾವಿ ಕೊರೆದ ವಿವರಗಳನ್ನು ಹಾಗೂ ನಿಗಧಿತ ಠೇವಣಿಗಳನ್ನು ಪಾವತಿಸಿ ಸಂಬಂಧಪಟ್ಟ ಉಪ ವಿಭಾಗಗಳಲ್ಲಿ ಅರ್ಜಿ ನೋಂದಣಿ ಮಾಡುತ್ತಾರೆ.

ಸಂಬಂಧಿತ ಶಾಖಾ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಅಂದಾಜು ಪಟ್ಟಿ ತಯಾರಿಸಿ, ವಿಭಾಗ ಕಚೇರಿಗೆ ಸಲ್ಲಿಸಿ ಅನುಮೋದನೆ ಪಡೆದು, ವಿದ್ಯುತ್ ಅನುಮತಿ ಪತ್ರವನ್ನು ಸಂಬಂಧಿತ ಗ್ರಾಹಕರಿಗೆ ನೀಡಿ, ಪ್ರತಿಯನ್ನು ಅಭಿವೃದ್ಧಿ ನಿಗಮಗಳ ಜಿಲ್ಲಾವ್ಯವಸ್ಥಾಪಕರಿಗೆ ಸಲ್ಲಿಸಲಾಗುತ್ತಿದೆ.

ಸದರಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಪ್ರತಿ ಕೊಳವೆ ಬಾವಿಗೆ ಸರಾಸರಿ ಅಭಿವೃದ್ಧಿ ನಿಗಮಗಳಿಂದ ಪ್ರತಿ ಕೊಳವೆ ಬಾವಿಗೆ ರೂ. 50,000/- ಗಳನ್ನು ಮಾತ್ರ ಬಿಡುಗಡೆ ಮಾಡಲಾಗುತ್ತಿದೆ.

ಅಧಿಕೃತ ನೀರಾವರಿ ಪಂಪ್‌ಸೆಟ್ ಗಳಿಗೆ ವಿದ್ಯುತ್ ಮೂಲಭೂತಸೌಕರ್ಯವನ್ನು ಕಲ್ಪಿಸುವ ಕಾಮಗಾರಿಗಳು:

ದಿನಾಂಕ: 15.03.2005 ರ ನಂತರ ಅನಧಿಕೃತವಾಗಿ ಸೇರ್ಪಡೆಗೊಂಡು ನೋಂದಾಯಿಸಿರುವ ಮತ್ತು ಹೊಸದಾಗಿ ನೊಂದಾಯಿಸಲ್ಪಡುವ ಪಂಪ್ ಸೆಟ್ ಗಳ ಅರ್ಜಿದಾರರು ಠೇವಣಿ ಶುಲ್ಕ ಮತ್ತು ರೂ.10,000/- ಗಳನ್ನು ವಿದ್ಯುತ್ ಸರಬರಾಜು ಕಂಪನಿಗೆ ಪಾವತಿಸುವುದು. ಅನಂತರ ಜೇಷ್ಠತೆಯ ಆಧಾರದಲ್ಲಿ ಮೂಲ ಸೌಕರ್ಯ ರಚಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. ಮೂಲ ಸೌಕರ್ಯ ರಚನೆಯ ಅಗತ್ಯತೆ ಇಲ್ಲದಿದ್ದಲ್ಲಿ ಸರ್ವೀಸ್ ಮೈನ್ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

ಎಸ್ಕಾಂ ವ್ಯಾಪ್ತಿಯಲ್ಲಿ ಬಾಕಿ ಉಳಿದಿರುವ (ರೂ. 10,000 & ಇತರೇ ಅವಶ್ಯಕ ಠೇವಣಿಗಳನ್ನು ಪಾವತಿ ಮಾಡಿರುವ) IP ಸೆಟ್‌ಗಳಿಗೆ ಮೂಲಭೂತಸೌಕರ್ಯವನ್ನು ಕಲ್ಪಿಸಲು ಟೆಂಡರ್ ಅನ್ನು ಕರೆಯಲಾಗಿರುತ್ತದೆ ಮತ್ತು ಕಾಮಗಾರಿಗಳನ್ನು ಗುತ್ತಿಗೆ ನೀಡಿದ ನಂತರ ಜೇಷ್ಠತೆ ಆದಾರದ ಮೇರೆಗೆ ವಿದ್ಯುತ್ ಮೂಲಭೂತಸೌಕರ್ಯವನ್ನು ಕಲ್ಪಿಸಲಾಗುವುದು

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿವತಿಯಿಂದ ಭಾಗ್ಯಜ್ಯೋತಿ, ಕುಟೀರಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆದ ಫಲಾನುಭವಿಗಳಿಗೆ **(40 ಯುನಿಟ್ ವರೆಗೆ)** ಮತ್ತು **10** ಹೆಚ್.ಪಿ ವರೆಗಿನ ನೀರಾವರಿ ಪಂಪಸೆಟ್ಟುಗಳಿಗೆ ಉಚಿತ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಸದರಿ ಗ್ರಾಹಕರ ವಿದ್ಯುತ್ತಿ ಬಳಕೆಯ ಮೊತ್ತವನ್ನು ಸರ್ಕಾರದಿಂದ ಭರಿಸಲಾಗುತ್ತದೆ.

ನೇಕಾರರಿಗೆ ವಿಶೇಷ ಪ್ಯಾಕೇಜ್ : 20 ಹೆಚ್.ಪಿ ವರೆಗಿನ ವಿದ್ಯುತ್ ಮಗ್ಗಗಳಿಗೆ ಸಬ್ಸಿಡಿ ದರದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಹಾಗೂ ಸದರಿ ನೇಕಾರರು ಉಪಯೋಗಿಸುತ್ತಿರುವ ಮಗ್ಗಗಳಿಗೆ ಕರ್ನಾಟಕ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಆಯ್ಕೆಯಾದ ಫಲಾನುಭವಿಗಳಿಗೆ ರಿಯಾಯಿತಿಯನ್ನು ನೀಡಲಾಗುತ್ತಲಿದೆ. ಹುಬ್ಬಳ್ಳಿ ವಿದ್ಯುತ್ ಸರವರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಅಕ್ಟೋಬರ್-**2022** ರ ಅಂತ್ಯಕ್ಕೆ ಒಟ್ಟು **12821** ಫಲಾನುಭವಿಗಳಿದ್ದಾರೆ.

ಅಮೃತ ಜ್ಯೋತಿ ಯೋಜನೆ : ಹುಬ್ಬಳ್ಳಿ ವಿದ್ಯುತ್ ಸರವರಾಜು ಕಂಪನಿ ವ್ಯಾಪ್ತಿಯಲ್ಲಿ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ**232** ಪಿಎಸ್‌ಆರ್ **2022** ಬೆಂಗಳೂರು ದಿನಾಂಕ: **18.05.2022** ರ ಪ್ರಕಾರ ಜಾರಿಗೊಳಿಸಲಾಗಿರುತ್ತದೆ. ಬಿ.ಪಿ.ಎಲ್ ಕಾರ್ಡ್ ಹೊಂದಿದ ಭಾಗ್ಯ ಜ್ಯೋತಿ ಹಾಗೂ ಕುಟೀರ್ ಜ್ಯೋತಿ ಸ್ಥಾವರಗಳು ಮತ್ತು ಎಲ್.ಟಿ-**2** ಜಕಾತಿ ಹೊಂದಿದ ಫಲಾನುಭವಿಗಳಿಗೆ ನೀಡಲಾಗುತ್ತಿದ್ದು, ಪ್ರತಿ ತಿಂಗಳು **75** ಯೂನಿಟ್ ಗಳವರೆಗೆ ರಿಯಾಯಿತಿ ನೀಡಲಾಗುತ್ತಿದ್ದು, ಒಟ್ಟು ಬಿಲ್ ಮೊತ್ತವನ್ನು ಪಾವತಿ ಮಾಡಿದ ಗ್ರಾಹಕರಿಗೆ **DBT** ಮೂಲಕ ಮೊತ್ತವನ್ನು ಪಾವತಿಸಲಾಗುತ್ತಲಿದೆ.

ಬೆಳಕು ಯೋಜನೆ:

ಬೆಳಕು ಯೋಜನೆಯು ವಿದ್ಯುತ್ ರಹಿತ ಮನೆಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಿ ವಿದ್ಯುತ್ ಸಂಪರ್ಕವನ್ನು ನೀಡುವ ಯೋಜನೆಯಾಗಿದೆ.

ಬೆಳಕು ಯೋಜನೆಯು ಸರ್ಕಾರದ ಒಂದು ಪ್ರಮುಖ ಯೋಜನೆಯಾಗಿದ್ದು, ಆದೇಶ ಸಂಖ್ಯೆ: Energy/606/VSC/2021 dated: 29.09.2021 & No:Energy/ 169/VSC /2022 dated 05-04-2022 ರ ನಿರ್ದೇಶನದಂತೆ ವಿದ್ಯುತ್ ಸಂಪರ್ಕದಿಂದ ವಂಚಿತರಾಗಿರುವ ಬಡ ಕುಟುಂಬದ ಮನೆಗಳಿಗೆ (ಫಲಾನುಭವಿಗಳು) ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ.

ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನೆ ಕಟ್ಟಿ ವಿದ್ಯುತ್ ಸಂಪರ್ಕದಿಂದ ವಂಚಿತರಾಗಿರುವ ಸಾರ್ವಜನಿಕರ ದೃಢೀಕರಿಸಿದ ಪಟ್ಟಿಯನ್ನು, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಣಾಧಿಕಾರಿಗಳಿಂದ ಪಡೆದಿರುತ್ತಾರೆ. ಎಸ್ಕಾಂ ಸಿಬ್ಬಂದಿಗಳು ಸರ್ವೇ ನಡೆಸಿ ಅಗತ್ಯ ದಾಖಲೆಗಳೊಂದಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸೌರಶಕ್ತಿ ವಿದ್ಯುತ್ ಮೇಲ್ಛಾವಣಿ (ಸೋಲಾರ್ ರೂಫ್ ಟಾಪ್) :

ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ ಸೌರ ಮೇಲ್ಛಾವಣಿ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಗ್ರಾಹಕರು ಸೋಲಾರ್‌ನಿಂದ ಉತ್ಪಾದಿಸಿರುವ ವಿದ್ಯುತ್ ನ್ನು ನೆಟ್ ಮೀಟರಿಂಗ್ ವ್ಯವಸ್ಥೆಯಲ್ಲಿ ಸ್ವಂತ ಬಳಕೆಯ ನಂತರ ಉಳಿದ ವಿದ್ಯುತ್ ನ್ನು ಹಾಗೂ ಗ್ರಾಸ್ ಮೀಟರಿಂಗ್ ವ್ಯವಸ್ಥೆಯಲ್ಲಿ ಉತ್ಪಾದಿಸಿರುವ ಸಂಪೂರ್ಣ ವಿದ್ಯುತ್ ನ್ನು ವಿದ್ಯುತ್ ವಿತರಣಾ ಕಂಪನಿಗಳಿಗೆ ಕೆ.ಇ.ಆರ್.ಸಿ ರವರು ನಿಗದಿಪಡಿಸಿರುವ ದರದಲ್ಲಿ ಮಾರಾಟ ಮಾಡಬಹುದಾಗಿದೆ. ಸೌರಮೇಲ್ಛಾವಣಿ ಘಟಕ ಅಳವಡಿಸಿಕೊಳ್ಳಲು ಎಮ್.ಎನ್.ಆರ್.ಇ ಯಿಂದ ಸಹಾಯ-ಧನವಿರುತ್ತದೆ.

ಸರ್ಕಾರಿ ಕಟ್ಟಡಗಳಲ್ಲಿ ಸೌರಶಕ್ತಿ ಮೇಲ್ಛಾವಣಿ ಪ್ರೋತ್ಸಾಹಿಸಲು ಕೇಂದ್ರ ಸರ್ಕಾರ, 13ನೇ ಹಣಕಾಸು ಆಯೋಗವು ರಾಜ್ಯ ಸರ್ಕಾರಕ್ಕೆ ಅನುದಾನ ನೀಡಿದ್ದು, ಸರ್ಕಾರಿ ಶಾಲಾ ಕಾಲೇಜುಗಳು ಹಾಗೂ ಸರ್ಕಾರಿ ಕಟ್ಟಡಗಳು ಮೇಲ್ಛಾವಣಿಯ ಮೇಲೆ ಸೌರಶಕ್ತಿ ಘಟಕವನ್ನು ಅಳವಡಿಸಲು ಉದ್ದೇಶಿಸಲಾಗಿರುತ್ತದೆ.

			ಖಾಲಿ	ಕಿ.ಮ.ಸ.	1	0	1
			ಖಾಲಿ	ಡ ವರ್ಗ	1	0	1
25	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಕೇಸ್ತಿ	ಡಾ: ಜಯಶ್ರೀ ಬುಮ್ಮಾಯಿ	ವೈದ್ಯಾಧಿಕಾರಿ	1	1	0
			ಖಾಲಿ	ಡ ವರ್ಗ	1	0	1
26	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಶೆಟ್ಟಿಹಳ್ಳಿ	ಡಾ: ವಿಜಯ ತೊಂಟಾಪುರ	ವೈದ್ಯಾಧಿಕಾರಿ	1	1	0
			ಶ್ರೀ ಎಸ್.ಎಸ್. ಮೊಕಾಶಿ	ಡ ವರ್ಗ	1	1	0
	ಚಿಕ್ಕೋಡಿ ತಾಲೂಕ						
27	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಮಜಲಟ್ಟಿ	ಡಾ|| ರೋಹಿಣಿ ಕಿಣಗಿ	ವೈದ್ಯಾಧಿಕಾರಿ	1	1	0
			ಖಾಲಿ	ಔ.ವಿ.	1	0	1
			ಖಾಲಿ	[illegible]	[illegible]	[illegible]	[illegible]

28	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ನನದಿ	ಡಾ: ಎಸ್.ಜಿ. ದಾನೋಳಿ	ವೈದ್ಯಾಧಿಕಾರಿ	1	1	0
			ಶ್ರೀ ಜಿ.ಕೆ. ಪಡತರಿ	ಡ ವರ್ಗ	1	1	0
29	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ನೇಜ	ಡಾ: ರವಿ ಅಥಗಾರ್	ವೈದ್ಯಾಧಿಕಾರಿ	1	1	0
			ಶ್ರೀ ಡಿ.ಟಿ. ಢಾಲೆ	ಡ ವರ್ಗ	1	1	0
30	ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯ	ಚಂದೂರ	ಡಾ: ಗಿರೀಶ ಪಶುಪತಿಮಠ	ವೈದ್ಯಾಧಿಕಾರಿ	1	1	0
			ಶ್ರೀಮತಿ ಮಾಸಾಬಿ ಬಿ. ನದಾಫ	ಡ ವರ್ಗ	1	1	0
	ಅಥಣಿ ತಾಲೂಕ						
31	ಸರ್ಕಾರಿ ಆಯುರ್ವೇದ ಆಸ್ಪತ್ರೆ	ಅಥಣಿ	ಡಾ: ಶ್ರೀಮಂತ ಸಿಂಗೆ	ವೈದ್ಯಾಧಿಕಾರಿ	2	2	0
			ಡಾ: ಜವಾಹರಲಾಲ ರಾಠೋಡ	ವೈದ್ಯಾಧಿಕಾರಿ			
			ಖಾಲಿ	ಔ.ವಿ.	1	0	1
			ಮಹಾಂತೇಶ ಕುಂಬಾರ	ಶುಶ್ರೂಷಕಿ	1	1	0
			ಖಾಲಿ	ಡ ವರ್ಗ	1	0	1
32	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಕೊಟ್ಟಲಗಿ	ಡಾ॥ ಸ್ವಾತಿ ವಿಠ್ಠಲರಾವ್ ಹುಪ್ಪೆ	ವೈದ್ಯಾಧಿಕಾರಿ	1	1	0
			ಖಾಲಿ	ಕಿ.ಮ.ಸ.	1	0	1
			ಖಾಲಿ	ಡ ವರ್ಗ	1	0	1
33	ಸರ್ಕಾರಿ ಯುನಾನಿ ಚಿಕಿತ್ಸಾಲಯ	ಕೋಹಳ್ಳಿ	ಡಾ: ರವೀಂದ್ರ ಮುದಗೌಡರ	ವೈದ್ಯಾಧಿಕಾರಿ	1	1	0
			ಖಾಲಿ	ಡ ವರ್ಗ	1	0	1
	ರಾಯಬಾಗ ತಾಲೂಕ						
34	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಬೆಂಡವಾಡ	ಡಾ॥ ವಿಜಯಲಕ್ಷ್ಮೀ ತಂಗಡಿ	ವೈದ್ಯಾಧಿಕಾರಿ	1	1	0
			ಖಾಲಿ	ಔ.ವಿ	1	0	1
			ಖಾಲಿ	ಕಿ.ಮ.ಸ.	1	0	1
			ಖಾಲಿ	ಡ ವರ್ಗ	1	0	1
35	ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯ	ಯಬರಟ್ಟಿ	ಡಾ॥ ಉಮೇಶ ಹೊನಕಾಂಬಳೆ	ವೈದ್ಯಾಧಿಕಾರಿ	1	0	1
			ಖಾಲಿ	ಕಿ.ಮ.ಸ.	1	0	1
			ಖಾಲಿ	ಡ ವರ್ಗ	1	0	1
	ರಾಮದುರ್ಗ ತಾಲೂಕ						
36	ಸರ್ಕಾರಿ ಆಯುರ್ವೇದ ಆಸ್ಪತ್ರೆ	ರಾಮದುರ್ಗ	ಖಾಲಿ	ವೈದ್ಯಾಧಿಕಾರಿ	1	0	1
			ಶ್ರೀ ವಿರುಪಾಕ್ಷಯ್ಯ ಎಸ್. ಮೇಟಿ	ಔ.ವಿ.	1	1	0
				ಶುಶ್ರೂಷಕಿ	1	0	1
				ಡ ವರ್ಗ	1	0	1
37	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಚಂದರಗಿ	ಡಾ॥ ಸುನೀತಾ ನಡಗಡಲಿ	ವೈದ್ಯಾಧಿಕಾರಿ	1	1	0

38	ಸರ್ಕಾರಿ ಹೋಮಿಯೋಪತಿ ಚಿಕಿತ್ಸಾಲಯ	ಹಳೇತೊರಗಲ್	ಡಾ: ಇಸ್ಮಾಯಿಲ್ ಅಬ್ದುಲ ರಜಾಕ ಸಯ್ಯದ	ವೈದ್ಯಾಧಿಕಾರಿ	1	1	0
			ಖಾಲಿ	ಕಿ.ಮ.ಸ.	1	0	1
			ಖಾಲಿ	ಡ ವರ್ಗ	1	0	1
	ಗೋಕಾಕ ತಾಲೂಕ						
39	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ಮಕ್ಕಳಗೇರಿ	ಡಾ: ಎಸ್.ಡಿ. ಮಾವರಕರ	ವೈದ್ಯಾಧಿಕಾರಿ	1	1	0
			ಖಾಲಿ	ಡ. ವರ್ಗ	1	0	1
40	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ	ನಾಗನೂರ	ಡಾ: ಭೂಷಣ ಉಪಾಧ್ಯ	ವೈದ್ಯಾಧಿಕಾರಿ	1	1	0
			ಖಾಲಿ	ಡ ವರ್ಗ	1	0	1
	ಒಟ್ಟು				**128**	**60**	**68**

ಜಿಲ್ಲಾ ಆಯುಷ್ ಅಧಿಕಾರಿಗಳು
ಬೆಳಗಾವಿ-590001.

(

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	608
ಸದಸ್ಯರ ಹೆಸರು	ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)
ಉತ್ತರಿಸಬೇಕಾದ ದಿನಾಂಕ	22.12.2022
ಉತ್ತರಿಸಬೇಕಾದ ಸಚಿವರು	ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು
ಪ್ರಶ್ನೆ	**ಉತ್ತರ**
ಅ) ಬೆಳಗಾವಿ ನಗರದಲ್ಲಿ ಐಟಿ ಪಾರ್ಕ್ ಸ್ಥಾಪಿಸುವ ಕುರಿತು ಸಲ್ಲಿಕೆಯಾಗಿರುವ ಪ್ರಸ್ತಾವನೆಗಳೆಷ್ಟು; (ವಿವರ ನೀಡುವುದು)	ಬೆಳಗಾವಿ ನಗರದಲ್ಲಿ ಐಟಿ ಪಾರ್ಕ್ ಸ್ಥಾಪಿಸಲು ಶ್ರೀ ಅಭಯ್ ಪಾಟೀಲ್, ಶಾಸಕರು (ಬೆಳಗಾವಿ ದಕ್ಷಿಣ) ಹಾಗೂ ಲೋಕಲ್ ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.
ಆ) ಉದ್ದೇಶಿತ ಯೋಜನೆಯನ್ನು ಎಷ್ಟು ಎಕರೆ ಪ್ರದೇಶದಲ್ಲಿ ಕೈಗೊಳ್ಳಲಾಗುವುದು; ಸದರಿ ಜಾಗವು ಯಾರ ಒಡೆತನದಲ್ಲಿದೆ; ಹಸ್ತಾಂತರಿಸಿಕೊಳ್ಳುವ ವಿವರಗಳನ್ನು ತಿಳಿಸುವುದು; ಇ) ಬೆಳಗಾವಿಯಲ್ಲಿ ಐಟಿ ಪಾರ್ಕ್ ಸ್ಥಾಪನೆಯ ಉದ್ದೇಶವಾದರೂ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ, ಅದನ್ನು ಯಾವಾಗ ಸ್ಥಾಪನೆ ಮಾಡುವುದು; ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು;	ಬೆಳಗಾವಿ ಐಟಿ ಪಾರ್ಕ್ ನಿರ್ಮಾಣದ ಯೋಜನೆಯ ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಸಿದ ನಂತರ ಈ ಯೋಜನೆಗೆ ಅವಶ್ಯವಿರುವ ಪ್ರದೇಶದ ಮಾಹಿತಿ ಲಭ್ಯವಾಗುವುದು. ಮಾನ್ಯ ಶಾಸಕರು ಗುರುತಿಸಿರುವ ಜಮೀನನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಭಾರತೀಯ ಸೇನೆಯ ಉಪಯೋಗಕ್ಕಾಗಿ ನೀಡಲಾಗಿದೆ. ಸದರಿ ಜಮೀನು ಬೆಳಗಾವಿ ಗ್ರಾಮದ ರಿ.ಸ.ನಂ: 1304 ರಿಂದ 1397ರಲ್ಲಿರುವ ಸುಮಾರು 750 ಎಕರೆ ಜಮೀನಾಗಿದ್ದು, ಪ್ರಸ್ತುತ ಕೇಂದ್ರ ರಕ್ಷಣಾ ಮಂತ್ರಾಲಯದ ವಶದಲ್ಲಿರುತ್ತದೆ. ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಭಾರತ ಸರ್ಕಾರದ ಮಾನ್ಯ ರಕ್ಷಣಾ ಸಚಿವರಿಗೆ ದಿನಾಂಕ: 08.01.2021ರಂದು ಪತ್ರವನ್ನು ಬರೆದು ಬೆಳಗಾವಿ ಗ್ರಾಮದ ರಿ.ಸ.ನಂ: 1304 ರಿಂದ 1397ರಲ್ಲಿರುವ ಸುಮಾರು 750 ಎಕರೆ ಜಮೀನು ರಾಷ್ಟ್ರೀಯ ಹೆದ್ದಾರಿ ಸಮೀಪದಲ್ಲಿದ್ದು, ಐಟಿ ಪಾರ್ಕ್ ಸ್ಥಾಪಿಸಲು ಸೂಕ್ತವಾಗಿರುತ್ತದೆ. ಮುಂದುವರೆದು, ಸ್ವಾತಂತ್ರ್ಯ ಪೂರ್ವದಲ್ಲಿ ಭಾರತೀಯ ಸೇನೆಯ ಉಪಯೋಗಕ್ಕೆ ನೀಡಲಾಗಿದ್ದ ಸದರಿ ಜಮೀನನ್ನು ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 54 ಎಲ್‌ಜಿಎಲ್ 2011, ದಿನಾಂಕ:23.11.2012ರನ್ವಯ ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸುವಂತೆ ಆದೇಶಿಸಲಾಗಿರುವುದರಿಂದ, ಸದರಿ ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸುವಂತೆ ಕೋರಿದ್ದಾರೆ. ರಕ್ಷಣಾ ಇಲಾಖೆಯು ಇದುವರೆವಿಗೂ ಸದರಿ ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಲು ಕ್ರಮ ಕೈಗೊಂಡಿಲ್ಲವಾದ್ದರಿಂದ ಕೇಂದ್ರ ಸರ್ಕಾರದ ವಶದಲ್ಲಿರುವ ಜಮೀನು ಇನ್ನೂ ರಾಜ್ಯ ಸರ್ಕಾರಕ್ಕೆ ಹಸ್ತಾಂತರವಾಗದೇ ವಿಳಂಬವಾಗುತ್ತಿರುವುದರಿಂದ ಐಟಿ ಪಾರ್ಕ್ ಸ್ಥಾಪನೆಯ ಕಾರ್ಯವನ್ನು ಪ್ರಾರಂಭಿಸಲಾಗಿರುವುದಿಲ್ಲ.
ಈ) ಐಟಿ ಪಾರ್ಕ್ ಸ್ಥಾಪನೆಗೆ ಪ್ರಾಥಮಿಕ ರೂಪುರೇಷೆಗಳನ್ನು ರೂಪಿಸಲಾಗಿದೆಯೇ; ಇಲ್ಲವಾದಲ್ಲಿ, ಯಾವಾಗ ರೂಪಿಸಲಾಗುವುದು;	ಬೆಳಗಾವಿಯಲ್ಲಿ ಐಟಿ ಪಾರ್ಕ್ ಸ್ಥಾಪನೆಗೆ ಪ್ರಾಥಮಿಕ ರೂಪುರೇಷೆಗಳನ್ನು ರೂಪಿಸಲಾಗಿರುವುದಿಲ್ಲ. ಸೂಕ್ತ ಜಮೀನು ಇಲಾಖೆಗೆ ಹಸ್ತಾಂತರವಾದ ನಂತರ ಐಟಿ ಪಾರ್ಕ್ ಸ್ಥಾಪನೆಗೆ ಪ್ರಾಥಮಿಕ ರೂಪುರೇಷೆಗಳನ್ನು ರೂಪಿಸಲಾಗುವುದು.

(

ಉ) ಈ ಕುರಿತು ಕೈಗೊಂಡಿರುವ ಹಾಗೂ ಕೈಗೊಳ್ಳುವ ಕ್ರಮಗಳ ವಿವರ ನೀಡುವುದು?	ಈ ಕುರಿತಂತೆ ಈಗಾಗಲೇ ದಿನಾಂಕ:13.02.2021ರಂದು ಐಟಿಬಿಟಿ ಸಚಿವರು ಕೇಂದ್ರ ರಕ್ಷಣಾ ಮಂತ್ರಿಯವರೊಂದಿಗೆ ಚರ್ಚಿಸಿ ರಾಜ್ಯ ಸರ್ಕಾರಕ್ಕೆ ಜಮೀನನ್ನು ಹಿಂದಿರುಗಿಸಲು ಕೋರಿರುತ್ತಾರೆ. ರಾಜ್ಯ ಸರ್ಕಾರಕ್ಕೆ ಜಮೀನನ್ನು ಹಿಂದಿರುಗಿಸಲು ರಕ್ಷಣಾ ಇಲಾಖೆಯಿಂದ ಇನ್ನೂ ಸಹ ಕ್ರಮ ಕೈಗೊಂಡಿಲ್ಲವಾದ್ದರಿಂದ ಐಟಿಬಿಟಿ ಸಚಿವರು ದಿನಾಂಕ:09.09.2021ರಂದು ಪುನಃ ಪತ್ರ ಬರೆದಿರುತ್ತಾರೆ. ಈ ವಿಷಯದಲ್ಲಿ ದಿನಾಂಕ:21.09.2021ರಂದು ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ರಕ್ಷಣಾ ಸಚಿವರಿಗೆ ಹಾಗೂ ಇದೇ ದಿನಾಂಕದಂದು ಮುಖ್ಯ ಕಾರ್ಯದರ್ಶಿಯವರು ರಕ್ಷಣಾ ಕಾರ್ಯದರ್ಶಿಯವರಿಗೆ ಪತ್ರ ಬರೆದು ಸದರಿ ಜಮೀನನ್ನು ಕರ್ನಾಟಕ ಸರ್ಕಾರದ ವಶಕ್ಕೆ ನೀಡುವಂತೆ ಕೋರಿರುತ್ತಾರೆ. ಮುಂದುವರೆದು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ದಿನಾಂಕ:20.08.2022ರಂದು ಡೈರೆಕ್ಟರ್ ಜನರಲ್ ಡಿಫೆನ್ಸ್ ಎಸ್ಟೇಟ್ಸ್, ರಕ್ಷಣಾ ಮಂತ್ರಾಲಯರವರಿಗೆ ಪತ್ರ ಬರೆದು ಈ ಕುರಿತಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ. ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಾಲಯದ Dy DGDE (Lands-I), Defence Estates ರವರ ದಿನಾಂಕ:14.09.2022; ಸಂಖ್ಯೆ: 744/1674/L/DE/SC/VIP/2021 ರ ಪತ್ರದಲ್ಲಿ ಬೆಳಗಾವಿಯ ತುರ್ಕಮಟ್ಟಿ ಗ್ರಾಮದಲ್ಲಿನ ಸರ್ವೆ ನಂ.1304 ರಿಂದ 1307, 1324 ರಿಂದ 1350 ಮತ್ತು 1397 ರಲ್ಲಿನ (ಒಟ್ಟು 31 ಸರ್ವೇ ನಂಬರ್‌ಗಳು) 754.82 ಎಕರೆ ರಕ್ಷಣಾ ಇಲಾಖೆಗೆ ಸೇರಿದ ಪ್ರದೇಶದ ಭೂಮಿಯಲ್ಲಿ 1978 ರಲ್ಲಿ ರಾಜ್ಯ ಸರ್ಕಾರದ ಮನವಿಯ ಮೇರೆಗೆ ಸರ್ವೆ ನಂ.1324,1329,1330,1348 ಮತ್ತು 1349 ರಲ್ಲಿನ 13.624 ಎಕರೆ ಜಮೀನನ್ನು ಲೋಕೋಪಯೋಗಿ ಇಲಾಖೆಗೆ ಹಾಗೂ 1984ರಲ್ಲಿ Indian Council of Medical Research (ICMR) ಗೆ 20 ಎಕರೆಯಷ್ಟು ಭೂಮಿಯನ್ನು ನಿಗದಿತ ಶುಲ್ಕದ ಪಾವತಿಯೊಂದಿಗೆ ವರ್ಗಾಯಿಸಿರುವುದಾಗಿ ತಿಳಿಸಿರುತ್ತಾರೆ. ಉಳಿದ 721.195 ಎಕರೆ ಭೂ ಪ್ರದೇಶವು ಪ್ರಸ್ತುತ ಕೇಂದ್ರ ರಕ್ಷಣಾ ಇಲಾಖೆಯ ವಶದಲ್ಲಿರುವುದರಿಂದ, ಸದರಿ ಜಮೀನಿನಲ್ಲಿ ರಾಜ್ಯ ಸರ್ಕಾರವು ಐಟಿ ಪಾರ್ಕ್ ಹಾಗೂ ಇತರೆ ಕೈಗಾರಿಕೆಗಳಂತಹ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಇಚ್ಛಿಸಿದ್ದಲ್ಲಿ, ಕೇಂದ್ರ ರಕ್ಷಣಾ ಮಂತ್ರಾಲಯದ ನೀತಿಗಳನುಸಾರ ವಿಧಿವಿಧಾನಗಳನ್ನನುಸರಿಸಿ, ರಾಜ್ಯ ಸರ್ಕಾರವು ರಕ್ಷಣಾ ಮಂತ್ರಾಲಯವನ್ನು ಸಮಾನ ಮೌಲ್ಯದ ಭೂಮಿ ಅಥವಾ ಸಮಾನ ಮೌಲ್ಯದ ಮೂಲಸೌಕರ್ಯದ ಆಧಾರದ ಮೇಲೆ ಕೋರಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

(ಐಟಿಬಿಟಿ 114 ಎಲ್‌ಸಿಎಂ 2022)

(ಡಾ॥ ಅಶ್ವಥ್ ನಾರಾಯಣ ಸಿ.ಎನ್.)
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 609
2. ಸದಸ್ಯರ ಹೆಸರು : ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)
3. ಉತ್ತರಿಸಬೇಕಾದ ದಿನಾಂಕ : 22.12.2022
4. ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	2022-23 ನೇ ಸಾಲಿನ ಆಯವ್ಯಯದಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆಯನ್ನು ಬೆಳಗಾವಿ ನಗರದ ವಡಗಾವಿ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಸ್ಥಾಪಿಸಲು ಘೋಷಣೆಯಾದಂತೆ ಸೂಕ್ತ ವರದಿಯಿದ್ದಾಗ್ಯೂ ಕೂಡಾ ಬೇರೆ ಕಡೆಗೆ ಸ್ಥಳಾಂತರಿಸುವುದಕ್ಕೆ ಕಾರಣವೇನು;	2022-23ನೇ ಸಾಲಿನ ಆಯವ್ಯಯ ಘೋಷಣೆಯು ಈ ಕೆಳಕಂಡಂತಿದೆ. ''ಕ್ಯಾನ್ಸರ್ ರೋಗಿಗಳಿಗೆ ಸಮೀಪದಲ್ಲಿ ಸಕಾಲಿಕ, ಮಿತವ್ಯಯದಾಯಕ ಚಿಕಿತ್ಸೆಯನ್ನು ಒದಗಿಸಲು ಈಗಾಗಲೇ ಬೆಂಗಳೂರು, ತುಮಕೂರು ಮತ್ತು ಕಲಬುರಗಿಯಲ್ಲಿ ಕಿದ್ವಾಯಿ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಬೆಳಗಾವಿಯಲ್ಲಿ ಕಿದ್ವಾಯಿ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರವನ್ನು 50 ಕೋಟಿ ರೂ.ಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು'' ಆಯವ್ಯಯ ಘೋಷಣೆಯಂತೆ, ದಿನಾಂಕ 19.09.2022ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಕಿದ್ವಾಯಿ ಪ್ರಾದೇಶಿಕ (ಪೆರಿಫೆರಲ್) ಕ್ಯಾನ್ಸರ್ ಕೇಂದ್ರವನ್ನು ರೂ.50.00 ಕೋಟಿಗಳ ವೆಚ್ಚದಲ್ಲಿ ಸ್ಥಾಪಿಸಲು ಸಚಿವ ಸಂಪುಟವು ತೀರ್ಮಾನಿಸಲಾಯಿತು. ಅದರಂತೆ, ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 43 ಕೆಯುಎಂ 2022, ದಿನಾಂಕ:27.09.2022ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿದೆ.
ಆ)	ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಿಗೆ ನಡೆಯುತ್ತಿರುವ ನೇಮಕಾತಿಗಳ ಕುರಿತು ತಕರಾರುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಕ್ರಮ ನೇಮಕಾತಿಯ ತಡೆಗೆ ಸರ್ಕಾರವು ಕೈಗೊಂಡಿರುವ ಮತ್ತು ಕೈಗೊಳ್ಳುತ್ತಿರುವ ಕ್ರಮಗಳೇನು;	ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳುವ ಸಂಬಂಧ, ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಬಿಮ್ಸ್/ಸಿಬ್ಬಂದಿ-1/363/2022-23, ದಿನಾಂಕ:23.07.2022 ಅನ್ನು ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ 102969/2022 ರಲ್ಲಿ ರದ್ದುಪಡಿಸಿದ್ದು, ಸಂಸ್ಥೆಯಲ್ಲಿ ಅರ್ಹರಿರುವ ಬೋಧಕ ಸಿಬ್ಬಂದಿಗಳಿಗೆ ಪದೋನ್ನತಿ ನೀಡಿದ ನಂತರ ನೇರ ನೇಮಕಾತಿಗಾಗಿ ಕ್ರಮಜರುಗಿಸಲು ಆದೇಶಿಸಿರುತ್ತದೆ.

		ಅದರಂತೆ, ಅರ್ಹರಿರುವ ಬೋಧಕ ಸಿಬ್ಬಂದಿಗಳಿಗೆ ಪದೋನ್ನತಿ ನೀಡಿ, ತದನಂತರ ಉಳಿದ ಹುದ್ದೆಗಳಿಗೆ ಮೀಸಲಾತಿ ಪ್ರಕಾರ ನೇರ ನೇಮಕಾತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ.
ಇ)	ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬಂದಿರುವ ವಿವಿಧ ಔಷಧಿಗಳು / ವೈದ್ಯಕೀಯ ಉಪಕರಣಗಳು ಎಷ್ಟು; ತಿಂಗಳವಾರು ಅವುಗಳ ಖರ್ಚು / ವೆಚ್ಚ ಮತ್ತು ಬಳಕೆ ಹಾಗೂ ಬಾಕಿ ಇರುವ ವರದಿಯನ್ನು ನೀಡುವುದು;	ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬಂದಿರುವ ವಿವಿಧ ಔಷಧಿಗಳು/ ವೈದ್ಯಕೀಯ ಉಪಕರಣಗಳು, ಖರ್ಚು/ವೆಚ್ಚ, ಬಳಕೆ ಹಾಗೂ ಬಾಕಿ ಇರುವ ವರದಿಯ ವಿವರವನ್ನು **<u>ಅನುಬಂಧ-1</u>** ರಲ್ಲಿ ಒದಗಿಸಲಾಗಿದೆ.
ಈ)	ಬಿಮ್ಸ್ ಆಸ್ಪತ್ರೆಯಲ್ಲಿರುವ ವಿವಿಧ ಬಗೆಯ ವೈದ್ಯಕೀಯ ಉಪಕರಣಗಳು ಯಾವುವು; ಅವುಗಳ ಉಪಯುಕ್ತತೆ ಹಾಗೂ ಬಳಕೆ ಇರುವ ಸಿಬ್ಬಂದಿಗಳ ಕುರಿತು ಸಂಪೂರ್ಣ ವಿವರ ನೀಡುವುದು;	ಬಿಮ್ಸ್ ಆಸ್ಪತ್ರೆಯಲ್ಲಿರುವ ವಿವಿಧ ಬಗೆಯ ವೈದ್ಯಕೀಯ ಉಪಕರಣಗಳು ಅವುಗಳ ಉಪಯುಕ್ತತೆ ಹಾಗೂ ಬಳಕೆ ಇರುವ ಸಿಬ್ಬಂದಿಗಳ ವಿವರಗಳನ್ನು **<u>ಅನುಬಂಧ-2</u>** ರಲ್ಲಿ ಒದಗಿಸಲಾಗಿದೆ.
ಉ)	ಕೋವಿಡ್ 2019 ರ ಸಂದರ್ಭದಲ್ಲಿ ಬಿಮ್ಸ್ ಆಸ್ಪತ್ರೆಗೆ ಕೇಂದ್ರ / ರಾಜ್ಯ / ಖಾಸಗಿ ಹಾಗೂ ಇತರ ಗಣ್ಯ ವ್ಯಕ್ತಿಗಳು ಒದಗಿಸಿದ ವಿವಿಧ ಬಗೆಯ ಉಪಕರಣಗಳೆಷ್ಟು; ಅವುಗಳನ್ನು ಬಳಸಲಿಕ್ಕೆ ಬೀಮ್ಸ್ ಆಸ್ಪತ್ರೆಯಲ್ಲಿ ನುರಿತ ಸಿಬ್ಬಂದಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಕೋವಿಡ್-2019 ರ ಸಂದರ್ಭದಲ್ಲಿ ಬಿಮ್ಸ್ ಆಸ್ಪತ್ರೆಗೆ ಕೇಂದ್ರ / ರಾಜ್ಯ / ಖಾಸಗಿ ಹಾಗೂ ಇತರ ಗಣ್ಯ ವ್ಯಕ್ತಿಗಳು ಒದಗಿಸಿದ ವಿವಿಧ ಬಗೆಯ ಉಪಕರಣಗಳ ಮಾಹಿತಿಯನ್ನು **<u>ಅನುಬಂಧ-3</u>** ರಲ್ಲಿ ಒದಗಿಸಲಾಗಿದೆ. ಸದರಿ ಉಪಕರಣಗಳನ್ನು ಬಳಸಲು ಬಿಮ್ಸ್ ಆಸ್ಪತ್ರೆಯ ಎಂ.ಇ.ಡಬ್ಲ್ಯೂ ವಿಭಾಗದಲ್ಲಿ ಇಬ್ಬರು ಬಯೋ ಮೆಡಿಕಲ್ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲಾಗಿದೆ.
ಊ)	ಬಂದಿದ್ದಲ್ಲಿ, ಹುದ್ದೆಗಳ ನೇಮಕಾತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ತಿಳಿಸುವುದು?	

ಸಂಖ್ಯೆ: ಎಂಇಡಿ 200 ಕೆಯುಎಂ 2022

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 667

ಮಾನ್ಯ ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ)

ಉತ್ತರಿಸಬೇಕಾದ ದಿನಾಂಕ : 22-12-2022

ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

*****

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕು ತಿರುಮಲಾಪುರ ಎಣ್ಣೆಹೊಳೆ ರಂಗನಾಥಸ್ವಾಮಿ ಬೆಟ್ಟವು ವಿಶೇಷ ಪ್ರವಾಸಿ ಕ್ಷೇತ್ರವಾಗಿದ್ದು, ಸದರಿ ಬೆಟ್ಟಕ್ಕೆ ಪ್ರವಾಸೋದ್ಯಮ ಇಲಾಖೆ ವತಿಯಿಂದ ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ಈಗಾಗಲೇ ಪ್ರವಾಸೋದ್ಯಮ ಇಲಾಖೆಗೆ ರೂ.495.00ಲಕ್ಷಗಳ ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಪ್ರಸ್ತಾವನೆಯ ಅನುಮೋದನೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಬಂದಿದೆ. ಪ್ರವಾಸೋದ್ಯಮ ಇಲಾಖೆಯಲ್ಲಿ ಈಗಾಗಲೇ ಅನುಮೋದನೆಯಾಗಿರುವ ಬಹಳಷ್ಟು ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇವುಗಳನ್ನು ಪೂರ್ಣಗೊಳಿಸಲು ಅನುದಾನದ ಅವಶ್ಯಕತೆ ಇದೆ. ಆದುದರಿಂದ, ಯಾವುದೇ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಇಲಾಖೆಗೆ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಆದ್ಯತೆಯ ಮೇಲೆ ಈಗಾಗಲೇ ಪ್ರಗತಿಯಲ್ಲಿರುವ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದ್ದು, ಅನುದಾನದ ಕೊರತೆಯಿಂದ ಪ್ರಸ್ತಾವಿತ ನೂತನ ಕಾಮಗಾರಿಗಳನ್ನು ಕೈಗೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆ.
ಆ)	ಸದರಿ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ನೀಡುವುದು)	
ಇ)	ಅಗತ್ಯ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ:**TOR 330 TDV 2022**

(ಆನಂದ್ ಸಿಂಗ್)
ಪ್ರವಾಸೋದ್ಯಮ,
ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	668
ಸದಸ್ಯರ ಹೆಸರು	:	ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ)
ಉತ್ತರಿಸಬೇಕಾದ ದಿನಾಂಕ	:	22-12-2022
ಉತ್ತರಿಸುವ ಸಚಿವರು	:	ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

***

	ಪ್ರಶ್ನೆ	ಉತ್ತರ
ಅ)	ಹೊಳೆನರಸೀಪುರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಹಾಸನ, ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವಿಭಾಗಗಳಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿ), ಸಹಾಯಕ ಇಂಜಿನಿಯರ್ (ವಿ), ಕಿರಿಯ ಇಂಜಿನಿಯರ್ (ವಿ), ಮಾಪಕ ಓದುಗರು, ಉಗ್ರಾಣ ಪಾಲಕರು ಹಾಗೂ ಇನ್ನಿತರ ತಾಂತ್ರಿಕ ಹುದ್ದೆಗಳು ಹಲವಾರು ವರ್ಷಗಳಿಂದ ಖಾಲಿ ಇರುವುದರಿಂದ ಗ್ರಾಮೀಣ ಪ್ರದೇಶದಲ್ಲಿನ ಮನೆಗಳಿಗೆ ಹಾಗೂ ರೈತರ ಪಂಪುಸೆಟ್ಟುಗಳಿಗೆ ಮತ್ತು ಕುಡಿಯುವ ನೀರಿನ ಸ್ಥಾವರಗಳಿಗೆ ವಿದ್ಯುತ್ ಅಡಚಣೆಗಾಗಿ ಸಾರ್ವಜನಿಕರಿಗೆ/ರೈತರಿಗೆ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವ್ಯಾಪ್ತಿಯ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಾಸನ, ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣ ವಿಭಾಗಗಳಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳಿಗೆ ಪ್ರಭಾರ ವ್ಯವಸ್ಥೆಯಡಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳಿಗೆ ಸೂಚಿಸಲಾಗಿದ್ದು, ಗ್ರಾಮೀಣ ಪ್ರದೇಶದಲ್ಲಿನ ಮನೆಗಳಿಗೆ, ರೈತರ ಪಂಪ್‌ಸೆಟ್‌ಗಳಿಗೆ, ಸಾರ್ವಜನಿಕರಿಗೆ ಮತ್ತು ಕುಡಿಯುವ ನೀರಿನ ಸ್ಥಾವರಗಳಿಗೆ ವಿದ್ಯುತ್ ಅಡಚಣೆ/ ತೊಂದರೆಯಾಗದಂತೆ ವಿದ್ಯುತ್ ಸರಬರಾಜನ್ನು ಮಾಡಲಾಗುತ್ತಿದೆ. ಪ್ರಸ್ತುತ, ನಗರ/ ಕೈಗಾರಿಕಾ/ ನೀರು ಸರಬರಾಜು ಫೀಡರ್ ಗಳಿಗೆ ದಿನವಹಿ 24 ಗಂಟೆಗಳ ಕಾಲ, ನಿರಂತರ ಜ್ಯೋತಿ ಫೀಡರ್ ಗಳಿಗೆ 22 ರಿಂದ 24 ಗಂಟೆಗಳ ಮತ್ತು ಕೃಷಿ ಫೀಡರ್ ಗಳಿಗೆ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಗ್ರಾಮಂತರ ಫೀಡರ್‌ಗಳಿಗೆ 2 ಪಾಳಿಗಳಲ್ಲಿ ಒಟ್ಟು 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಹಾಗು 9 ಗಂಟೆಗಳ ಕಾಲ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.
ಆ)	ಹೊಳೆನರಸೀಪುರ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವಿಭಾಗದಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳವಾರು ಸಂಪೂರ್ಣ ಮಾಹಿತಿ ನೀಡುವುದು;	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವ್ಯಾಪ್ತಿಯ ಹೊಳನರಸೀಪುರ ವಿಭಾಗ ವ್ಯಾಪ್ತಿಯಲ್ಲಿ ನವೆಂಬರ್ 2022ರ ಅಂತ್ಯಕ್ಕೆ ಇರುವ ಹುದ್ದೆಗಳ ವಿವರಗಳು ಕೆಳಕಂಡಂತಿವೆ:- **ಕ್ರ. ಸಂ** / **ಹುದ್ದೆಗಳು** / **ಒಟ್ಟು ಸಂಖ್ಯೆ** 1 / ಮಂಜೂರಾದ ಹುದ್ದೆಗಳು / 535 2 / ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು / 426 3 / ಖಾಲಿ ಇರುವ ಹುದ್ದೆಗಳು / 109 ಖಾಲಿ ಇರುವ ಹುದ್ದೆಗಳ ವಿವರಗಳನ್ನು **ಅನುಬಂಧ**-1ರಲ್ಲಿ ಒದಗಿಸಲಾಗಿದೆ.

ಇ)	ಪ್ರಸ್ತಾಪಿತ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)	ಕವಿಪ್ರನಿನಿಯ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/86473/2018-19, ದಿನಾಂಕ: 25.02.2019 ರನ್ವಯ 426 ಕಿರಿಯ ಪವರ್ ಮ್ಯಾನ್ ಹುದ್ದೆಗೆ ನೇಮಕಾತಿ ಪ್ರಕ್ರಿಯೆ ಕೈಗೊಂಡಿದ್ದು, ಹೊಳೆನರಸೀಪುರ ವಿಭಾಗ ವ್ಯಾಪ್ತಿಗೆ 35 ಅಭ್ಯರ್ಥಿಗಳಿಗೆ ಹಾಗೂ ಚನ್ನರಾಯಪಟ್ಟಣ ವಿಭಾಗ ವ್ಯಾಪ್ತಿಗೆ 37 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಲಾಗಿರುತ್ತದೆ. ಮುಂದುವರೆದು, ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/21723/2021-22, ದಿನಾಂಕ: 01.02.2022 ರನ್ವಯ ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂ ಪರವಾಗಿ ಖಾಲಿ ಇರುವ 505 ಸಹಾಯಕ ಇಂಜಿನಿಯರ್(ವಿ), 28 ಸಹಾಯಕ ಇಂಜಿನಿಯರ್(ಸಿವಿಲ್), 570 ಕಿರಿಯ ಇಂಜಿನಿಯರ್(ವಿ), 29 ಕಿರಿಯ ಇಂಜಿನಿಯರ್ (ಸಿವಿಲ್), 360 ಕಿರಿಯ ಸಹಾಯಕ ಹುದ್ದೆಗಳನ್ನೊಳಗೊಂಡಂತೆ ಒಟ್ಟು 1492 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯು ಚಾಲನೆಯಲ್ಲಿದ್ದು, ಪ್ರಸ್ತುತ ಸ್ಪರ್ಧಾತ್ಮಕ ಪರೀಕ್ಷೆಯು ಪೂರ್ಣಗೊಂಡಿರುತ್ತದೆ. ಖಾಲಿ ಇರುವ ಹುದ್ದೆಗಳಿಗೆ ಕಾಲ ಕಾಲಕ್ಕೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.
ಈ)	ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಾಸನ, ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವಿಭಾಗಗಳಲ್ಲಿ ವಿದ್ಯುತ್ ಪರಿವರ್ತಕಗಳು, ವಿದ್ಯುತ್ ಕಂಬಗಳು ಹಾಗೂ ಇನ್ನಿತರೆ ವಿದ್ಯುತ್ ಸಾಮಗ್ರಿಗಳ ಕೊರತೆಯಿಂದಾಗಿ ಗ್ರಾಮೀಣ ಪ್ರದೇಶದಲ್ಲಿನ ಮನೆಗಳಿಗೆ ಹಾಗೂ ರೈತರ ಪಂಪುಸೆಟ್ಟುಗಳಿಗೆ ಮತ್ತು ಕುಡಿಯುವ ನೀರಿನ ಸ್ಥಾವರಗಳಿಗೆ ವಿದ್ಯುತ್ ಅಡಚಣೆಯಾಗಿ ಸಾರ್ವಜನಿಕರಿಗೆ/ರೈತರಿಗೆ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ,	ಚಾವಿಸನಿನಿ ವ್ಯಾಪ್ತಿಯಲ್ಲಿ ರೈತರ ಪಂಪ್ ಸೆಟ್ ಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿಗಳು ಮತ್ತು ಕುಡಿಯುವ ನೀರಿನ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಪೂರ್ಣ ಗುತ್ತಿಗೆ ಆಧಾರದ ಮೇಲೆ ಕಾಮಗಾರಿಗಳನ್ನು ಪೂರ್ಣಗೊಳಿಸುತ್ತಿರುವುದರಿಂದ ವಿದ್ಯುತ್ ಸಾಮಾಗ್ರಿಗಳ ಕೊರತೆಯಿರುವುದಿಲ್ಲ. ಕಳೆದ ಮೂರು ವರ್ಷಗಳಲ್ಲಿ ಮನೆ, ರೈತರ ಪಂಪ್ ಸೆಟ್ ಗಳಿಗೆ ಮತ್ತು ಕುಡಿಯುವ ನೀರಿನ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾದ ಸ್ಥಾವರಗಳ ಸಂಖ್ಯೆಯ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.

...3

ಕೂಡಲೇ ಸದರಿ ವಿಭಾಗಗಳಿಗೆ ಅವಶ್ಯಕತೆ ಇರುವ ವಿದ್ಯುತ್ ಸಾಮಗ್ರಿಗಳನ್ನು ಸರಬರಾಜು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವದೇ? (ಸಂಪೂರ್ಣ ಮಾಹಿತಿ ನೀಡುವುದು)	ಸದರಿ ವಿಭಾಗಗಳಲ್ಲಿ ವಿದ್ಯುತ್ ಸಂಪರ್ಕ ಹಾಗೂ ಅಭಿವೃದ್ಧಿ ಕಾಮಗಾರಿಗಳಿಗೆ ಕಳೆದ 3 ವರ್ಷಗಳಲ್ಲಿ ಸರಬರಾಜು ಮಾಡಲಾದ ವಿದ್ಯುತ್ ಪರಿವರ್ತಕಗಳು, ವಿದ್ಯುತ್ ಕಂಬಗಳು ಹಾಗೂ ವಾಹಕಗಳ ವಿವರವನ್ನು **ಅನುಬಂಧ-3**ರಲ್ಲಿ ಒದಗಿಸಲಾಗಿದೆ. ಪ್ರಸ್ತುತ, ಹಾಸನ, ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣ ವಿಭಾಗಗಳಲ್ಲಿ ದಿನಾಂಕ 15-12-2022ರ ಅಂತ್ಯಕ್ಕೆ ದಾಸ್ತಾನಿರುವ ಸಾಮಗ್ರಿಗಳ ವಿವರಗಳನ್ನು **ಅನುಬಂಧ-4** ರಲ್ಲಿ ಒದಗಿಸಲಾಗಿದೆ. ಅವಶ್ಯಕತೆಗನುಗುಣವಾಗಿ ವಿದ್ಯುತ್ ಸಾಮಗ್ರಿಗಳಿಗೆ ನಿಗಮದಲ್ಲಿ ಖರೀದಿ ಆದೇಶ ನೀಡಿದ್ದು, ಅವಶ್ಯಕತೆ ಇರುವ ಸಾಮಗ್ರಿಗಳನ್ನು ಸದರಿ ವಿಭಾಗಗಳಿಗೆ ಪೂರೈಕೆ ಮಾಡಲಾಗುವುದು. ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳ ಮನೆಗಳಿಗೆ, ರೈತರ ಪಂಪ್‌ಸೆಟ್‌ಗಳಿಗೆ ಹಾಗೂ ಕುಡಿಯುವ ನೀರು ಸರಬರಾಜು ಸ್ಥಾವರಗಳಿಗೆ ತೊಂದರೆಯಾಗದ ರೀತಿಯಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಸಂಖ್ಯೆ:ಎನರ್ಜಿ 345 ಪಿಪಿಎಂ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ
ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 668ಕ್ಕೆ ಅನುಬಂಧ-1

ನವೆಂಬರ್ 2022ರ ಅಂತ್ಯಕ್ಕೆ ಹೊಳೆನರಸೀಪುರ ವಿಭಾಗದಲ್ಲಿ ಖಾಲಿ ಇರುವ ಹುದ್ದೆಗಳ ವಿವರಗಳು

ಹುದ್ದೆಯ ಹೆಸರು	ಖಾಲಿ ಇರುವ ಹುದ್ದೆಗಳ ಸಂಖ್ಯೆ
ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)	3
ಸಹಾಯಕ ಲೆಕ್ಕಾಧಿಕಾರಿ	2
ಸಹಾಯಕ ಇಂಜಿನಿಯರ್(ವಿ)	3
ಕಿರಿಯ ಇಂಜಿನಿಯರ್(ವಿ)	2
ಸಹಾಯಕ ಉಗ್ರಾಣ ಪಾಲಕ	1
ಹಿರಿಯ ಸಹಾಯಕ	5
ಸಹಾಯಕ	5
ಕಿರಿಯ ಸಹಾಯಕ	10
ಮಾಪಕ ಓದುಗ/ಮೇಲ್ವಿಚಾರಕ	9
ಚಾಲಕ ದರ್ಜೆ-2	4
ಕಿರಿಯ ಮಾಪಕ ಓದುಗ	6
ಪವರ್‌ಮ್ಯಾನ್	1
ಸಹಾಯಕ ಪವರ್‌ಮ್ಯಾನ್	38
ಕಿರಿಯ ಪವರ್‌ಮ್ಯಾನ್	14
ದಫ್ತರಿ	2
ಮಾಲಿ ದರ್ಜೆ-2	1
ಕ್ಲೀನರ್	1
ಸ್ಟೋರ್ ಹೆಲ್ಪರ್	1
ಯಂತ್ರಕರ್ಮಿ ದರ್ಜೆ-1	1
ಒಟ್ಟು ಸಂಖ್ಯೆ	**109**

ಅನುಬಂಧ-2

ಕಳೆದ ಮೂರು ವರ್ಷಗಳಲ್ಲಿ ಮನೆ, ರೈತರ ಪಂಪ್ ಸೆಟ್ ಗಳಿಗೆ ಮತ್ತು ಕುಡಿಯುವ ನೀರಿನ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾದ ಸ್ಥಾವರಗಳ ಸಂಖ್ಯೆಯ ವಿವರಗಳು ಕೆಳಕಂಡಂತಿವೆ:-

ವಿಭಾಗ	ಕಾಮಗಾರಿವಿವರ	2019-20	2020-21	2021-22	2022-23 (ನವೆಂಬರ್ - 2022ರ ಅಂತ್ಯಕ್ಕೆ)
ಹಾಸನ	ರೈತರ ನೀರಾವರಿ ಪಂಪ್ ಸೆಟ್ ಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು	519	132	1997	418
	ಗಂಗಾ ಕಲ್ಯಾಣ ಯೋಜನೆ	161	79	69	32
	ಕುಡಿಯುವ ನೀರಿನ ಯೋಜನೆ	41	13	6	1
	ಮನೆ	6634	5327	6080	9377
ಚನ್ನರಾಯಪಟ್ಟಣ	ರೈತರ ನೀರಾವರಿ ಪಂಪ್ ಸೆಟ್ ಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು	3160	641	1587	2244
	ಗಂಗಾ ಕಲ್ಯಾಣ ಯೋಜನೆ	119	58	42	119
	ಕುಡಿಯುವ ನೀರಿನ ಯೋಜನೆ	79	72	19	5
	ಮನೆ	2830	2536	3148	4050
ಹೊಳೆನರಸೀಪುರ	ರೈತರ ನೀರಾವರಿ ಪಂಪ್ ಸೆಟ್ ಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು	1971	1269	3579	930
	ಗಂಗಾ ಕಲ್ಯಾಣ ಯೋಜನೆ	126	51	70	25
	ಕುಡಿಯುವ ನೀರಿನ ಯೋಜನೆ	39	22	2	1
	ಮನೆ	4134	1227	7715	2377

ಅನುಬಂಧ-3

ಕಳೆದ 3 ವರ್ಷಗಳಲ್ಲಿ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳಿಗೆ ಸರಬರಾಜು ಮಾಡಲಾದ ಸಾಮಗ್ರಿಗಳ ವಿವರಗಳು ಕೆಳಕಂಡಂತಿವೆ:-

ವರ್ಷ	ವಿಭಾಗ	ಕಂಬ (ಸಂಖ್ಯೆಗಳಲ್ಲಿ)	ವಿದ್ಯುತ್ ವಿತರಣಾ ಪರಿವರ್ತಕ (ಸಂಖ್ಯೆಗಳಲ್ಲಿ)	ವಾಹಕ (ಕಿ.ಮೀಗಳಲ್ಲಿ)
2019-20	ಹಾಸನ	986	119	142.52
2020-21		1273	152	309.233
2021-22		802	252	237.65
2022-23 (ನವೆಂಬರ್ -22ರ ಅಂತ್ಯಕ್ಕೆ)		1100	142	189.78
2019-20	ಹೊಳೆನರಸೀಪುರ	4323	183	148.273
2020-21		5178	138	346.074
2021-22		210	35	96.18
2022-23 (ನವೆಂಬರ್ -22ರ ಅಂತ್ಯಕ್ಕೆ)		1560	40	42
2019-20	ಚನ್ನರಾಯಪಟ್ಟಣ	3035	183	155.977
2020-21		3576	173	423.131
2021-22		2555	53	96.31
2022-23 (ನವೆಂಬರ್ -22ರ ಅಂತ್ಯಕ್ಕೆ)		1994	44	42

ಅನುಬಂಧ-4

ದಿನಾಂಕ 15-12-2022ರ ಅಂತ್ಯಕ್ಕೆ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿಭಾಗಗಳ ಉಗ್ರಾಣದಲ್ಲಿ ದಾಸ್ತಾನಿರುವ ಸಾಮಾಗ್ರಿಗಳ ವಿವರ

ವಿಭಾಗ	ಕಂಬ (ಸಂಖ್ಯೆಗಳಲ್ಲಿ)	ವಿದ್ಯುತ್ ವಿತರಣಾ ಪರಿವರ್ತಕ (ಸಂಖ್ಯೆಗಳಲ್ಲಿ)	ವಾಹಕ (ಕಿ.ಮೀ.ಗಳಲ್ಲಿ)
ಹಾಸನ	764	47	74.64
ಹೊಳೆನರಸೀಪುರ	1005	38	58.16
ಚನ್ನರಾಯಪಟ್ಟಣ	1050	34	58.45

ಖರೀದಿ ಆದೇಶ ನೀಡಿ ಪೂರೈಕೆಯಾಗಬೇಕಾಗಿರುವ ಸಾಮಗ್ರಿಗಳ ವಿವರ

ಸಾಮಗ್ರಿಯ ವಿವರ	ಸಂಖ್ಯೆ
ಕಂಬ	126358
ವಿದ್ಯುತ್ ವಿತರಣಾ ಪರಿವರ್ತಕ	37

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	669
ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)
ಉತ್ತರಿಸುವ ದಿನಾಂಕ	**22-12-2022**
ಉತ್ತರಿಸುವ ಸಚಿವರು	ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಮೌಲ್ಯಮಾಪನಕ್ಕಾಗಿ ನ್ಯಾಕ್ ತಂಡದವರು ಭೇಟಿ ನೀಡುತ್ತಿದ್ದು, ನ್ಯಾಕ್ ತಂಡದವರು ತಮ್ಮ ಭೇಟಿಯ ಸಮಯದಲ್ಲಿ ಕಾಲೇಜುಗಳಲ್ಲಿನ ಕಟ್ಟಡ ಮತ್ತಿತರ ಮೂಲಭೂತ ಸೌಕರ್ಯಗಳನ್ನು ಪರಿಶೀಲನೆ ನೀಡಿ ಎ, ಬಿ, ಸಿ ಎಂದು ಗ್ರೇಡ್ ಗಳನ್ನು ನೀಡುತ್ತಿದ್ದು, ಹೆಚ್ಚಿನ ಗ್ರೇಡ್ ಬರುವ ಕಾಲೇಜುಗಳಿಗೆ ಯು.ಜಿ.ಸಿ. ಮತ್ತು ರೂಸಾದಿಂದ ಕೋಟ್ಯಂತರ ರೂಪಾಯಿಗಳ ಅನುದಾನ ಬಿಡುಗಡೆಯಾಗುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	1. ರಾಜ್ಯದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಮೌಲ್ಯಮಾಪನಕ್ಕಾಗಿ ನ್ಯಾಕ್ ತಂಡದವರು ಭೇಟಿ ನೀಡುತ್ತಿದ್ದು, ನ್ಯಾಕ್ ತಂಡದವರು ತಮ್ಮ ಭೇಟಿಯ ಸಮಯದಲ್ಲಿ ಕಾಲೇಜುಗಳಲ್ಲಿನ ಕಟ್ಟಡ ಮತ್ತಿತರ ಮೂಲಭೂತ ಸೌಕರ್ಯಗಳನ್ನು ಪರಿಶೀಲನೆ ಮಾಡಿ ಎ, ಬಿ, ಸಿ ಎಂದು ಗ್ರೇಡ್‌ಗಳನ್ನು ನೀಡುತ್ತಿದ್ದು, ಹೆಚ್ಚಿನ ಗ್ರೇಡ್ ಬರುವ ಕಾಲೇಜುಗಳಿಗೆ ಯುಜಿಸಿಯಿಂದ ಪ್ರಸ್ತುತ ಯಾವುದೇ ಅನುದಾನವನ್ನು ಬಿಡುಗಡೆ ಮಾಡುತ್ತಿಲ್ಲ. 2. ರೂಸಾ 1.0 ಮತ್ತು 2.0 ಯಡಿ ಅನುದಾನ ಪಡೆಯಲು ನ್ಯಾಕ್ ಮಾನ್ಯತೆಯು ಕಡ್ಡಾಯವಾಗಿತ್ತು. ಹೀಗೆ ಮಾನ್ಯತೆ ಪಡೆದ ಕಾಲೇಜುಗಳ ಅಭಿವೃದ್ಧಿಗಾಗಿ ರೂಸಾ ಅಡಿಯಲ್ಲಿ ಪ್ರಸ್ತಾವನೆ ಸಲ್ಲಿಸಿ ಕೇಂದ್ರ ಯೋಜನಾ ಅನುಮೋದನಾ ಮಂಡಳಿಯಲ್ಲಿ ಅನುಮೋದಿಸಿದ ಕಾಲೇಜು ಮತ್ತು ನಿರ್ದಿಷ್ಟ ಕಾರ್ಯಚಟುವಟಿಕೆಗಳಿಗೆ ಮಾತ್ರ ರೂಸಾ ಅಡಿಯಲ್ಲಿ ನಿಗದಿಪಡಿಸಿದ ಅನುದಾನ ಬಿಡುಗಡೆಯಾಗುತ್ತಿದೆ.
(ಆ)	ಹಾಗಿದ್ದಲ್ಲಿ, ರಾಜ್ಯದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮೌಲ್ಯಮಾಪನಕ್ಕಾಗಿ ನ್ಯಾಕ್ ತಂಡದವರು ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಸದರಿ ಕಾಲೇಜುಗಳಿಗೆ ಅವಶ್ಯಕವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಮೂಲಭೂತ ಸೌಕರ್ಯಗಳಿಗಾಗಿ ಬಿಡುಗಡೆಗೊಳಿಸಲಾಗುವ	1. ನ್ಯಾಕ್ ಪ್ರಕ್ರಿಯೆಗೆ ಒಳಪಟ್ಟ/ ಒಳಪಡಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ನ್ಯಾಕ್ ಶುಲ್ಕದ ಮೊತ್ತದ ಜೊತೆ, ನ್ಯಾಕ್ ಪೀರ್ ಟೀಮ್ ಭೇಟಿಯ ಸಂದರ್ಭದಲ್ಲಿ ಅವಶ್ಯವಿರುವ ಕೆಲವು ಇತರೆ ವೆಚ್ಚಗಳಿಗಾಗಿ ಪ್ರತಿ ಕಾಲೇಜಿಗೆ ರೂ.50,000/- ದಂತೆ ಅನುದಾನ ಬಿಡುಗಡೆ ಮಾಡಲಾಗುತ್ತದೆ. 2. ರಾಜ್ಯದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮೌಲ್ಯಮಾಪನಕ್ಕಾಗಿ ನ್ಯಾಕ್ ತಂಡದವರು ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಐ.ಟಿ. ಮೂಲಭೂತ ಸೌಕರ್ಯಗಳನ್ನು ಒದಗಿಸಲು ಯಾವುದೇ ಅನುದಾನವನ್ನು ಬಿಡುಗಡೆಗೊಳಿಸುತ್ತಿಲ್ಲ. ಕಾಲೇಜುಗಳಿಂದ ಸ್ವೀಕೃತಿಯಾಗುವ ಕೋರಿಕೆಗಳಿಗೆ ಅನುಗುಣವಾಗಿ ಕಂಪ್ಯೂಟರ್, ಪ್ರಿಂಟರ್ ಮತ್ತು ಪ್ರೊಜೆಕ್ಟರ್‌ಗಳನ್ನು ಸರಬರಾಜು ಮಾಡಲಾಗುತ್ತದೆ.

	ಅನುದಾನವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	3. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯಕವಿರುವ ಪಠ್ಯಪುಸ್ತಕ ಮತ್ತು ಪೀಠೋಪಕರಣಗಳನ್ನು ಒದಗಿಸಲು ಅಗತ್ಯತೆ ಮತ್ತು ಲಭ್ಯವಿರುವ ಅನುದಾನವನ್ನು ಆಧರಿಸಿ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.
(ಇ)	ಹೊಳೆನರಸೀಪುರ ಮತಕ್ಷೇತ್ರ ವ್ಯಾಪ್ತಿಯ ಹೊಳೆನರಸೀಪುರ ತಾಲ್ಲೂಕು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಹೋಬಳಿ ಉದಯಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ದಿನಾಂಕ:12.01.2023 ಮತ್ತು ದಿ:13.01.2023ರಂದು ನ್ಯಾಕ್ ತಂಡದವರು ಕಾಲೇಜಿನ ಮೌಲ್ಯಮಾಪನಕ್ಕಾಗಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಸದರಿ ಕಾಲೇಜುಗಳಿಗೆ ಅವಶ್ಯಕವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	i) ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹೊಳೇನರಸೀಪುರ ಈ ಕಾಲೇಜಿಗೆ ದಿನಾಂಕ: 22/3/2022ರಲ್ಲಿ ಒಟ್ಟು ರೂ.3,74,500/- ಗಳನ್ನು ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ, ನ್ಯಾಕ್ ಪೀರ್ ತಂಡ ಭೇಟಿ ಪ್ರಯುಕ್ತ ವಾಹನಬಾಡಿಗೆ, ಶಿಷ್ಟಾಚಾರ ಮತ್ತಿತರೆ ವೆಚ್ಚಗಳಿಗಾಗಿ ರೂ. 50,000/- ಒಳಗೊಂಡಿರುತ್ತದೆ. ಅದೇ ರೀತಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉದಯಪುರ ಈ ಕಾಲೇಜಿಗೆ ದಿನಾಂಕ: 22/3/2022ರಲ್ಲಿ ಒಟ್ಟು ರೂ.3,74,500/- ಗಳನ್ನು ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ, ನ್ಯಾಕ್ ಪೀರ್ ಕಮಿಟಿ ಬೇಟಿ ಪ್ರಯುಕ್ತ ವಾಹನ ಬಾಡಿಗೆ, ಶಿಷ್ಟಾಚಾರ ಮತ್ತಿತರೆ ವೆಚ್ಚಗಳಿಗಾಗಿ ರೂ. 50,000/- ಒಳಗೊಂಡಿರುತ್ತದೆ. ii) ಹೊಳೇನರಸೀಪುರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು ಉದಯಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಈ ಕಾಲೇಜುಗಳಿಗೆ ಲಭ್ಯವಿರುವ ಡೆಸ್ಕ್‌ಟಾಪ್ ಕಂಪ್ಯೂಟರ್, ಐಸಿಟಿ ಕ್ಲಾಸ್ ರೂಂಗಳು ಹಾಗೂ ಪ್ರೊಜೆಕ್ಟರ್‌ಗಳ ಸಂಖ್ಯೆಯ ಮಾಹಿತಿ ಈ ಕೆಳಕಂಡಂತಿವೆ.

ಕ್ರ ಸಂ	ಕಾಲೇಜಿನ ಹೆಸರು	ಪ್ರಸ್ತುತ ಕಾಲೇಜಿನಲ್ಲಿ ಲಭ್ಯವಿರುವ ಕಂಪ್ಯೂಟರ್‌ಗಳ ಸಂಖ್ಯೆ	Cognizant ಸಂಸ್ಥೆಯಿಂದ ಸರಬರಾಜು ಮಾಡಿರುವುದು	ICT Class rooms ಅನುಸ್ಥಾಪನೆ	Projectors
1	ಸ.ಪ್ರ.ದ. ಕಾಲೇಜು, ಉದಯಪುರ	10	10	4	3
2	ಸ.ಮ.ಪ್ರ.ದ. ಕಾಲೇಜು, ಹೊಳೇನರಸೀಪುರ	84	15	12	07

iii) ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹೊಳೇನರಸೀಪುರ ಮತ್ತು ಸರ್ಕಾರಿ ಪ್ರಥಮ ದರ್ಜೆ ಉದಯಪುರ ಈ ಕಾಲೇಜುಗಳಿಗೆ ಕಛೇರಿ ವೆಚ್ಚ, ಪೀಠೋಪಕರಣ, ಪಠ್ಯಪುಸ್ತಕ ಮತ್ತು ಇತರೆ ವೆಚ್ಚಗಳಿಗಾಗಿ

2021-22 ಮತ್ತು 2022-23 ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನದ ವಿವರ ಕೆಳಕಂಡಂತಿದೆ:

ಕ್ರ ಸಂ	ಕಾಲೇಜು	ವರ್ಷ	ಬಿಡುಗಡೆ ಮಾಡಿರುವ ಅನುದಾನ
1	ಸ.ಪ್ರ.ದ.ಮಹಿಳಾ ಕಾಲೇಜು, ಹೊಳೆನರಸೀಪುರ	2021-22	485257/-
		2022-23	52490/-
2	ಸ.ಪ್ರ.ದ.ಕಾಲೇಜು, ಉದಯಪುರ	2021-22	722100/-
		2022-23	29550/-

iv) ಹೊಳೆನರಸೀಪುರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಎ.,ಬಿ.ಕಾಂ., ಬಿ.ಬಿ.ಎ. ಹಾಗೂ ಬಿ.ಎಸ್ಸಿ. ಕೋರ್ಸುಗಳಿದ್ದು, ಒಟ್ಟು ವಿದ್ಯಾರ್ಥಿಗಳ ಸಂಖ್ಯೆ : 732 ಇರುತ್ತದೆ. ಉದಯಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಎ.,ಬಿ.ಕಾಂ., ಬಿ.ಬಿ.ಎ. ಕೋರ್ಸುಗಳಿದ್ದು, ಒಟ್ಟು ವಿದ್ಯಾರ್ಥಿಗಳ ಸಂಖ್ಯೆ: 469 ಇರುತ್ತದೆ. 2021-22 ನೇ ಸಾಲಿನಲ್ಲಿ ಹೊಳೆನರಸೀಪುರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ರೂ.3.00 ಲಕ್ಷ ವಿಜ್ಞಾನ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ/33/ಹೆಚ್‌ಪಿಟಿ/2022, ದಿನಾಂಕ: 14.07.2022 ರಂತೆ, ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಶುಲ್ಕಗಳನ್ನು ಆಯಾ ಕಾಲೇಜುಗಳಲ್ಲಿಯೇ ಉಳಿಸಿಕೊಂಡು ಸಂಸ್ಥೆಗಳ ಅಭಿವೃದ್ಧಿಗಾಗಿ ವೆಚ್ಚಗೊಳಿಸಲು ಆದೇಶಿಸಿರುವ ಹಿನ್ನೆಲೆಯಲ್ಲಿ, ಉದಯಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ, ಕಾಲೇಜಿನಲ್ಲಿ ಲಭ್ಯವಿರುವ ಮೊತ್ತ ರೂ.4,27,090/- ಗಳನ್ನು ಹಾಗೂ ಹೊಳೆನರಸೀಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಲಭ್ಯವಿರುವ ಮೊತ್ತ ರೂ.15,08,495/-ಗಳನ್ನು ಕಾಲೇಜಿನ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ.

v) ರೂಸಾ 2.0 ಯೋಜನೆಯಡಿ ಆಯ್ಕೆಯಾದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹೊಳೇನರಸೀಪುರ ಈ

		ಕಾಲೇಜಿಗೆ ರೂ.200.00 ಲಕ್ಷಗಳ ಅನುದಾನ ಮೀಸಲಿಡಲಾಗಿದ್ದು, ನೂತನ ಕಟ್ಟಡ ಕಾಮಗಾರಿಗಾಗಿ ರೂ.100.00 ಲಕ್ಷಗಳಿಗೆ ಹಾಗೂ ನವೀಕರಣ/ಮೇಲ್ದರ್ಜೆ ಕಾಮಗಾರಿಗಾಗಿ ರೂ.60.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ರೂ.40.00ಲಕ್ಷಗಳ ಮೊತ್ತವನ್ನು ನೂತನ ಉಪಕರಣಗಳ ಖರೀದಿಗೆ ಮೀಸಲಿಡಲಾಗಿದೆ. ನೂತನ ಕಾಮಗಾರಿಯಡಿ ನಿರ್ಮಿಸಿರುವ ಗ್ರಂಥಾಲಯ ಕಟ್ಟಡ ಪೂರ್ಣಗೊಂಡಿರುತ್ತದೆ.

ಕಡತ ಸಂಖ್ಯೆ: ಇಡಿ 256 ಹೆಚ್‌ಪಿಸಿ 2022)

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ
ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು
ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	670
ಮಾನ್ಯ ಸದಸ್ಯರ ಹೆಸರು	:	ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ)
ಉತ್ತರಿಸುವ ದಿನಾಂಕ	:	22.12.2022
ಉತ್ತರಿಸುವ ಸಚಿವರು	:	ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಶಾಂತಿಗ್ರಾಮ ಹೋಬಳಿ, ಮೊಸಳೆಹೊಸಳ್ಳಿ ಗ್ರಾಮದಲ್ಲಿ 2019-20ನೇ ಸಾಲಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ನೂತನವಾಗಿ ಪ್ರಾರಂಭಗೊಂಡಿದ್ದು ಯಶಸ್ವಿಯಾಗಿ 4 ನೇ ವರ್ಷಕ್ಕೆ ಕಾಲಿಡುತ್ತಿದ್ದು ರಾಜ್ಯದಲ್ಲಿರುವ 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪೈಕಿ ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿ 2 ನೇ ಸ್ಥಾನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸದರಿ ಕಾಲೇಜಿಗೆ ಆರಂಭದಿಂದಲೂ ಈವರೆಗೂ ಖಾಯಂ ಪ್ರಾಂಶುಪಾಲರ ಹುದ್ದೆ ಸಹಿತ ಬೋಧಕ/ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡದಿರಲು ಕಾರಣಗಳೇನು: ಯಾವ ಕಾಲಮಿತಿಯಲ್ಲಿ ಖಾಯಂ ಪ್ರಾಂಶುಪಾಲರ ಹುದ್ದೆ ಸಹಿತ ಬೋಧಕ/ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಲಾಗುವುದು. (ಸಂಪೂರ್ಣ ಮಾಹಿತಿ ನೀಡುವುದು)	1. ಸರ್ಕಾರದ ಪತ್ರ ಸಂಖ್ಯೆ: ಇಡಿ 26 ಹೆಚ್‌ಪಿಟಿ 2019(ಭಾ), ದಿನಾಂಕ: 03.11.2020 ರಲ್ಲಿ ಹೊಸ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಹುದ್ದೆಗಳನ್ನು ಸೃಜಿಸುವ ಸಂಬಂಧ AICTE revised norms ರನ್ವಯ ಪರಿಶೀಲಿಸುವಂತೆ ತಿಳಿಸಿದ್ದು, ಈ ಹಿಂದೆ ಜಾರಿಯಲ್ಲಿದ್ದ 1:15 Student Faculty Ratio (SFR) 1:20 ಕ್ಕೆ ಬದಲಾಗಿದ್ದು, ಬದಲಾವಣೆಗೂ ಮುನ್ನ ಇದ್ದ ಸಿಬ್ಬಂದಿ ಮಾದರಿ (Staffing pattern) ಪರಿಷ್ಕರಿಸಬೇಕಿದ್ದು, ಅದರಂತೆ ಗುರುತಿಸಿರುವ ಹೆಚ್ಚುವರಿ ಸಿಬ್ಬಂದಿಯ ಮಾಹಿತಿ ನೀಡುವಂತೆ ಹಾಗೂ Redistribution/ Redeployment ಮಾಡಿದ ನಂತರ ಅವಶ್ಯಕವಿರುವ ಸಿಬ್ಬಂದಿಗೆ ಮಾತ್ರ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿದೆ. 2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ಸಿಟಿಇ 14 ಡಿವಿಪಿ(1) 2021/1 (ಭಾ), ದಿನಾಂಕ 01.07.2021ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಿಸಿದಂತೆ ಎಐಸಿಟಿಇ ಯವರ ಪರಿಷ್ಕೃತ Student Faculty Ratio (SFR) ರಂತೆ ವಿವಿಧ ಕೋರ್ಸ್‌ಗಳಲ್ಲಿ ಹೆಚ್ಚುವರಿಯೆಂದು ಗುರುತಿಸಲಾದ ಒಟ್ಟು 103 ಬೋಧಕ ಹುದ್ದೆಗಳನ್ನು ಅವಶ್ಯವಿರುವ ಇತರೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಮರುಹಂಚಿಕೆ / ಮರುಪದನಾಮೀಕರಣ ಮಾಡಿ ಆದೇಶಿಸಲಾಗಿದೆ. 3. ಸರ್ಕಾರದ ಪತ್ರ ಸಂಖ್ಯೆ: ಇಡಿ 103 ಡಿಟಿಇ 21, ದಿನಾಂಕ 24.09.2021, 13.07.2021ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳನ್ನು

Redistributions/Redeployment ಮಾಡುವುದರಿಂದ ಇಲಾಖೆಯಲ್ಲಿ ಯಾವುದೇ ಹೊಸ ಹುದ್ದೆಗಳನ್ನು ಸೃಜಿಸಲು ಕೋರಬಾರದು ಎಂಬ ಷರತ್ತಿಗೊಳಪಟ್ಟು, ಎಐಸಿಟಿಇ ಪರಿಷ್ಕೃತ ಮಾನದಂಡಗಳನ್ವಯ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹುದ್ದೆಗಳನ್ನು Redistribution/ Redeployment ಮಾಡಿ ಹೆಚ್ಚುವರಿ ಗುರುತಿಸಲಾದ ಹುದ್ದೆಗಳನ್ನು ಹೊಸದಾಗಿ ಪ್ರಾರಂಭಿಸಲಾದ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜಿಗಳಿಗೆ ಅಗತ್ಯತೆಗೆ ಅನುಗುಣವಾಗಿ ಹುದ್ದೆಗಳನ್ನು ಸೃಜಿಸಿ ಮರು ಹಂಚಿಕೆ ಮಾಡಲು ಸರ್ಕಾರವು ಸಹಮತಿ ನೀಡಿರುತ್ತದೆ.

4. ಅದರನ್ವಯ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ಸಿಟಿಇ 14 ಡಿವಿಪಿ (1) 2021 (ಭಾ), ದಿನಾಂಕ: 29.12.2021 ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಪರಿಷ್ಕೃತ ಸಿಬ್ಬಂದಿ ನಮೂನೆಯನ್ನು ಮಂಜೂರು ಮಾಡಿ ಆದೇಶಿಸಲಾಗಿದೆ.

5. ಪರಿಷ್ಕೃತ ಎಐಸಿಟಿಇ ಮಾರ್ಗಸೂಚಿಗಳನ್ವಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹೆಚ್ಚುವರಿಯೆಂದು ಗುರುತಿಸಲಾದ 103 ಬೋಧಕ ಹುದ್ದೆಗಳ ಪೈಕಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಮೊಸಳೆಹೊಸಳ್ಳಿಯಲ್ಲಿ ಬೋಧಿಸಲಾಗುತ್ತಿರುವ 5 ಕೋರ್ಸ್‌ಗಳಿಗೆ ಒಟ್ಟು 34 ಬೋಧಕ ಹುದ್ದೆಗಳನ್ನು ಹಂಚಿಕೆ ಮಾಡಲಾಗಿದೆ. ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಮೊಸಳೆಹೊಸಳ್ಳಿಯಲ್ಲಿನ ಬೋಧಕ ಸಿಬ್ಬಂದಿಗಳ ವಿವರ ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿದೆ.

ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಮೊಸಳೆಹೊಸಳ್ಳಿ ಸಂಸ್ಥೆಗೆ ಈ ಕೆಳಕಂಡಂತೆ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

ಹುದ್ದೆಯ ವಿವರ	ಪ್ರೊಫೆಸರ್	ಅಸೋಸಿಯೇಟ್ ಪ್ರೊಫೆಸರ್	ಸಹಾಯಕ ಪ್ರೊಫೆಸರ್	ಟ್ರೈನಿಂಗ್ & ಪ್ಲೇಸ್‌ಮೆಂಟ್ ಆಫೀಸರ್	ಒಟ್ಟು
ಪ್ರಾಂಶುಪಾಲರು	1	-	-	-	1
ಸಿವಿಲ್	1	3	8	-	12

ಇಂಜಿನಿಯರಿಂಗ್					
ಕಂಪ್ಯೂಟರ್ ಸೈನ್ಸ್ & ಇಂಜಿ.	1	2	0	-	3
ಇ&ಸಿ ಇಂಜಿನಿಯಿರಂಗ್	0	3	3	-	6
ಮೆಕ್ಯಾನಿಕಲ್ ಇಂಜಿನಿಯರಿಂಗ್	1	3	5	-	9
ಎಲೆಕ್ಟ್ರಿಕಲ್& ಎಲೆಕ್ಟ್ರಾನಿಕ್ಸ್ ಇಂಜಿ.	1	0	0	-	1
ಗಣಿತ	-	-	1	-	1
				1	1
ಒಟ್ಟು	**5**	**11**	**17**	**1**	**34**

ಸದರಿ ಕಾಲೇಜಿನಲ್ಲಿ 15 ಪೂರ್ಣಕಾಲಿಕ ಬೋಧಕ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಹೆಚ್ಚುವರಿ ಕಾರ್ಯಭಾರಕ್ಕೆ ಅನುಗುಣವಾಗಿ 32 ಅರೆಕಾಲಿಕ ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಪಡೆದು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಗಳಿಗೆ ಅಡಚಣೆಯಾಗದಂತೆ ತರಗತಿಗಳನ್ನು ನಡೆಸಲಾಗುತ್ತಿದೆ.

ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹೆಚ್ಚುವರಿಯೆಂದು ಗುರುತಿಸಲಾದ ಬೋಧಕ ಹುದ್ದೆಗಳನ್ನು ಮರುಹಂಚಿಕೆ ಮಾಡಿದ ನಂತರದಲ್ಲಿ ಅಗತ್ಯವಿರುವ 39 ಭೋಧಕ ಹುದ್ದೆಗಳನ್ನು ಸೃಜಿಸಲು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರು ಏಕ ಕಡತದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

ಆ) ಸದರಿ ಕಾಲೇಜಿನಲ್ಲಿ ದಕ್ಷಿಣ ಕರ್ನಾಟಕದಲ್ಲಿಯೇ ಪ್ರಥಮವಾಗಿ ವಿದ್ಯುತ್ ಮತ್ತು ವಿದ್ಯುನ್ಮಾನ (E & E) ವಿಭಾಗವಿದ್ದು, ಈ ವಿಭಾಗದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸುಮಾರು 120 ಅಧಿಕ ವಿದ್ಯಾರ್ಥಿಗಳು ಪ್ರವೇಶಾತಿ ಹೊಂದಿ ವ್ಯಾಸಂಗ

ಬಂದಿದೆ.

ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ 221 ಭೋಧಕ ಹುದ್ದೆಗಳು ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ 314 ಭೋಧಕ ಹುದ್ದೆಗಳನ್ನು ಸೃಜಿಸಲು ಆರ್ಥಿಕ ಇಲಾಖೆಯ ಸಹಮತಿ ಕೋರಿ ಕಡತ ಸಲ್ಲಿಸಲಾಗಿದೆ. ಸದರಿ ಪ್ರಸ್ತಾವನೆಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಮೊಸಳೆಹೊಸಳ್ಳಿ ಸಂಸ್ಥೆಗೆ ವಿದ್ಯುತ್ ಮತ್ತು

	ಮಾಡುತ್ತಿದ್ದು, ಕಾಲೇಜು ಆರಂಭಗೊಂಡು ನಾಲ್ಕು ವರ್ಷ ಕಳೆದರು ಸಹ ಈವರೆಗೂ ಸದರಿ ವಿಭಾಗಕ್ಕೆ ಬೋಧಕ/ಬೋಧಕೇತರ ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರಿಂದ, ವಿದ್ಯಾರ್ಥಿಗಳ ತಾಂತ್ರಿಕ ವ್ಯಾಸಂಗಕ್ಕೆ ತೊಂದರೆಯಾಗಿರುತ್ತದೆ, ಅಲ್ಲದೇ ಎಐಸಿಟಿಇ ನಿಯಮಾವಳಿಗಳ ಪ್ರಕಾರ ಕನಿಷ್ಟ ಶೇ. 50 ರಷ್ಟು ಹಾಗೂ ವಿಟಿಯು ಬೆಳಗಾವಿಯವರು ನಡೆಸುವ ಎಲ್ಲಾ ತರಹದ ಪರೀಕ್ಷೆಗಳಿಗೆ ಖಾಯಂ ಉಪನ್ಯಾಸಕರು ಅವಶ್ಯ ಇರಲೇಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ? (ಸಂಪೂರ್ಣ ಮಾಹಿತಿ ನೀಡುವುದು)	ವಿದ್ಯುನ್ಮಾನ (E & E) ವಿಭಾಗದಲ್ಲಿ 08 ಸಹಾಯಕ ಪ್ರಾಧ್ಯಾಪಕರನ್ನು ಹಾಗೂ 03 ಸಹ ಪ್ರಾಧ್ಯಾಪಕರ ಹುದ್ದೆಗಳನ್ನು ಸೃಜಿಸಲು ಕೋರಲಾಗಿದೆ. ಎ.ಐ.ಸಿ.ಟಿ.ಇ ನವದೆಹಲಿಯವರ ಪರಿಷ್ಕೃತ ಮಾರ್ಗಸೂಚಿಗಳಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬೋಧಕರು ಹಾಗೂ ವಿದ್ಯಾರ್ಥಿಗಳ ಅನುಪಾತ 1:20 ರಂತೆ ರೆಗ್ಯುಲರ್ ಬೋಧಕ ಸಿಬ್ಬಂದಿಗಳ ಅವಶ್ಯಕತೆ ಇರಬೇಕೆಂದು ತಿಳಿಸಲಾಗಿದೆ ಹಾಗೂ ವಿ.ಟಿ.ಯು ಬೆಳಗಾವಿಯವರು ಕೂಡ ಎಐಸಿಟಿಇ, ನವದೆಹಲಿಯವರ ನಿಯಮಗಳನ್ನೇ ಪಾಲಿಸುತ್ತಿರುತ್ತಾರೆ.
ಇ)	ಹಾಗಿದ್ದಲ್ಲಿ, ಗ್ರಾಮೀಣ ಪ್ರದೇಶದಿಂದ ಬಂದತಹ ವಿದ್ಯಾರ್ಥಿಗಳ ತಾಂತ್ರಿಕ ವ್ಯಾಸಂಗದ ಹಿತದೃಷ್ಟಿಯಿಂದ ಮೇಲ್ಕಂಡ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಮೊಸಳೆಹೊಸಹಳ್ಳಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿರುವ ವಿದ್ಯುತ್ ಮತ್ತು ವಿದ್ಯುನ್ಮಾನ (E & E) ವಿಭಾಗಕ್ಕೆ ತುರ್ತಾಗಿ ಸದರಿ ಕಾಲೇಜಿನ ಹತ್ತಿರವಿರುವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಿಂದ ನಿಯೋಜನೆ ಮೇರೆಗೆ ಕನಿಷ್ಠ 06 ಜನ ಬೋಧಕರು ಮತ್ತು 04 ಬೋಧಕೇತರ ಹುದ್ದೆಗಳನ್ನು ನಿಯೋಜನೆ ಮೇರೆಗೆ ಭರ್ತಿ ಮಾಡಿ, ತದನಂತರ ಮೊಸಳೆಹೊಸಹಳ್ಳಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಎಲ್ಲಾ ವಿಭಾಗಗಳಲ್ಲಿ ಖಾಲಿ ಇರುವ ಬೋಧಕ/ಬೋಧಕೇತರ ಹುದ್ದೆಗಳನ್ನು ಸೃಜನೆ ಮಾಡಿ, ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 75 ಶಾಸನ 2012 ದಿ:06.02.2013 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ 2012ರ ನಿಯಮ 12ರಲ್ಲಿ ನಿಯೋಜನೆಗೆ ಅವಕಾಶ ಕಲ್ಪಿಸಲಾಗಿತ್ತು. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 50 ಶಾಸನ 2020 ದಿ:28.08.2020ರ ಅಧಿಸೂಚನೆಯಂತೆ ನಿರಶನಗೊಳಿಸಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 137 ಡಿಟಿಇ 2020 ದಿ:29.01.2021 ಮತ್ತು 29.06.2021ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆ ಅಧೀನದ ಸರ್ಕಾರಿ ಇಂಜಿನಿಯರಿಂಗ್, ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಬೋಧಕ ವರ್ಗದವರನ್ನು ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡುವ ಸಂಬಂಧ ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕರ ವರ್ಗಾವಣೆ ನಿಯಂತ್ರಣ ನಿಯಮಗಳು-2021 ಅನ್ನು ಪ್ರತ್ಯೇಕವಾಗಿ ಅಧಿಸೂಚಿಸಲಾಗಿದೆ. ಸದರಿ ವರ್ಗಾವಣೆ ನಿಯಮಗಳಲ್ಲಿ ಬೋಧಕ ಸಿಬ್ಬಂದಿಗಳ ನಿಯೋಜನೆಗೆ ಅವಕಾಶ ಕಲ್ಪಿಸಿರುವುದಿಲ್ಲ.

<table>
<tr><td></td><td></td><td>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮೊಸಳೆಹೊಸಹಳ್ಳಿ ಇಲ್ಲಿನ ಇ&ಇ ವಿಭಾಗಕ್ಕೆ ಯಾವುದೇ ಬೋಧಕ ಸಿಬ್ಬಂದಿಗಳನ್ನು ನಿಯೋಜಿಸಿರುವುದಿಲ್ಲ. ಸದರಿ ಸಂಸ್ಥೆಯ ಶೈಕ್ಷಣಿಕ ಹಿತದೃಷ್ಟಿಯಿಂದ ಇ&ಇ ವಿಭಾಗ ಒಳಗೊಂಡಂತೆ ಒಟ್ಟು 32 ಅರೆಕಾಲಿಕ ಉಪನ್ಯಾಸಕರನ್ನು ನೇಮಕಾತಿ ಮಾಡಲಾಗಿರುತ್ತದೆ. ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ 12 ಹೊರಗುತ್ತಿಗೆ ಆಧಾರದ ಮೇರೆಗೆ ಗ್ರೂಪ್ ಡಿ ಸಿಬ್ಬಂದಿಗಳನ್ನು ನೇಮಿಸಲಾಗಿರುತ್ತದೆ.

ಮುಂದುವರೆದು, ಸದರಿ ಸಂಸ್ಥೆಗೆ ಬೋಧಕೇತರ ಹುದ್ದೆಗಳು ಮಂಜೂರಾಗಿರುವುದಿಲ್ಲ. ಸಂಸ್ಥೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರಸ್ತುತ ಕಛೇರಿ ಅಧೀಕ್ಷಕರ 01 ಮತ್ತು ದ್ವಿತೀಯ ದರ್ಜೆ ಸಹಾಯಕರ 01 ಬೋಧಕೇತರ ಸಿಬ್ಬಂದಿಗಳನ್ನು ನಿಯೋಜಿಸಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಉಳಿದ ಬೋಧಕೇತರ ಸಿಬ್ಬಂದಿಗಳ ನಿಯೋಜನೆ ಪರಿಗಣಿಸುವ ಬಗ್ಗೆ ಕ್ರಮವಹಿಸಲಾಗುವುದು.</td></tr>
<tr><td>ಈ)</td><td>ಸದರಿ ಕಾಲೇಜು ಪ್ರಸ್ತುತ ಹೊಸ ಕಟ್ಟಡದಲ್ಲಿ ಕಾರ್ಯಾರಂಭ ಮಾಡಿರುವುದರಿಂದ, ಕಾಲೇಜಿಗೆ ಅತ್ಯವಶ್ಯಕವಾಗಿರುವ ಸೆಕ್ಯೂರಿಟಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)</td><td>ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಪ್ರಸ್ತುತ ಹೊರಸಂಪನ್ಮೂಲ ಏಜೆನ್ಸಿ ಮುಖಾಂತರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಮೊಸಳೆಹೊಸಹಳ್ಳಿ ಸಂಸ್ಥೆಯಲ್ಲಿ 12 ಜನ ಗ್ರೂಪ್-ಡಿ ವರ್ಗದ ಸಿಬ್ಬಂದಿಗಳ ಸೇವೆಯನ್ನು ಒದಗಿಸಲಾಗಿದ್ದು, ಸದರಿ ಸಿಬ್ಬಂದಿಯವರನ್ನು ತಾತ್ಕಾಲಿಕವಾಗಿ ಹಗಲು/ರಾತ್ರಿ ಪಾಳಿಯಲ್ಲಿ ಭದ್ರತಾ ಕಾರ್ಯನಿರ್ವಹಿಸಲು ಅನುಮತಿ ನೀಡಲಾಗಿರುತ್ತದೆ.</td></tr>
<tr><td>ಉ)</td><td>ಮೊಸಳೆಹೊಸಹಳ್ಳಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಆರಂಭವಾದ ಸಮಯದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಇಡಿ 31 ಹೆಚ್‌ಪಿಟಿ 2018 ಬೆಂಗಳೂರು ದಿನಾಂಕ:23/11/2018 ರ ಪ್ರಕಾರ (1) ಮುಖ್ಯಕಟ್ಟಡಗಳಿಗೆ ರೂ.58 ಕೋಟಿ (2) ಯಂತ್ರೋಪಕರಣಗಳಿಗಾಗಿ ರೂ.05 ಕೋಟಿ (3) ಪೀಠೋಪಕರಣಗಳಿಗಾಗಿ ರೂ.1.5 ಕೋಟಿ ಮತ್ತು (4) ಗ್ರಂಥಾಲಯಕ್ಕೆ ಅಗತ್ಯ ಪುಸ್ತಕಗಳಿಗಾಗಿ ರೂ.25 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. ಮೇಲ್ಕಂಡ ಅನುದಾನದಲ್ಲಿ ಕೇವಲ ರೂ.58 ಕೋಟಿಗಳನ್ನು ಕಟ್ಟಡ ನಿರ್ಮಾಣಕ್ಕೆ ಒದಗಿಸಿದ್ದು, ಉಳಿದ ಯಂತ್ರೋಪಕರಣಗಳಿಗಾಗಿ ರೂ.5 ಕೋಟಿ</td><td>ಮೊಸಳೆಹೊಸಹಳ್ಳಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿಗೆ ಎ.ಐ.ಸಿ.ಟಿ.ಇ ನಿಯಾಮಾವಳಿಗಳ ಪ್ರಕಾರ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಲಭ್ಯವಿರುವ ಅನುದಾನದ ಮಿತಿಯಲ್ಲಿ ಅಗತ್ಯವಿರುವ ಪೀಠೋಪಕರಣಗಳು, ಯಂತ್ರೋಪಕರಣಗಳು ಹಾಗೂ ಗ್ರಂಥಾಲಯಕ್ಕೆ ಅಗತ್ಯ ಪುಸ್ತಕಗಳನ್ನು ಒದಗಿಸುವ ಸಂಬಂಧ ಈ ಕೆಳಗಿನಂತೆ ಅನುದಾನವನ್ನು ಒದಗಿಸಲಾಗಿದೆ.
<table><tr><th>ವರ್ಷ</th><th>ಯಂತ್ರೋಪಕರಣ, ಪೀಠೋಪಕರಣ ಹಾಗೂ ಪುಸ್ತಕಗಳ ಪೂರೈಕೆಗೆ ಒದಗಿಸಲಾದ ಅನುದಾನದ ವಿವರ (ರೂ.ಲಕ್ಷಗಳಲ್ಲಿ)</th></tr><tr><td>2018-19</td><td>ರೂ.48.67 ಲಕ್ಷಗಳು</td></tr><tr><td>2019-20</td><td>ರೂ.78.77 ಲಕ್ಷಗಳು</td></tr><tr><td>2020-21</td><td>ರೂ.03 ಲಕ್ಷಗಳು</td></tr><tr><td>2021-22</td><td>ರೂ.31 ಲಕ್ಷಗಳು</td></tr></table></td></tr>
</table>

	ಪೀಠೋಪಕರಣಗಳಿಗಾಗಿ ರೂ.1.5 ಕೋಟಿ ಮತ್ತು ಗ್ರಂಥಾಲಯಕ್ಕೆ ಅಗತ್ಯ ಪುಸ್ತಕಗಳಿಗಾಗಿ ರೂ.25 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿರುವುದು ನಿಜವೇ:	2021-22 ನೇ ಸಾಲಿನಲ್ಲಿ ಮೆ|| ಇನ್ಫೋಸಿಸ್ ಕಂಪನಿಯವರ ಸಹಯೋಗದೊಂದಿಗೆ ಈ ಸಂಸ್ಥೆಗೆ 273 ಡೆಸ್ಕ್ ಟಾಪ್ ಕಂಪ್ಯೂಟರ್‌ಗಳನ್ನು ಒದಗಿಸಲಾಗಿದ್ದು, ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಲಭ್ಯವಿರುವ ಅನುದಾನದ ಮಿತಿಯಲ್ಲಿ ಪೂರೈಸಲು ಹಂತ ಹಂತವಾಗಿ ಕ್ರಮವಹಿಸಲಾಗುತ್ತಿದೆ.
ಊ)	ಹಾಗಿದ್ದಲ್ಲಿ, ಈವರೆಗೂಬಿಡುಗಡೆ ಗೊಳಿಸದಿರುವುದರಿಂದ ಎ.ಐ.ಸಿ.ಟಿ.ಇ ನಿಯಾಮಾವಳಿಗಳ ಪ್ರಕಾರ ಕಾಲೇಜನ್ನು ನಡೆಸಲು ಹಾಗೂ ವಿದ್ಯಾರ್ಥಿಗಳ ಉತ್ತಮ ತಾಂತ್ರಿಕ ವ್ಯಾಸಂಗಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮೇಲ್ಕಂಡಂತೆ ಉಪಕರಣ/ಪೀಠೋಪಕರಣಗಳನ್ನು ಪೂರೈಸಿರುವುದರಿಂದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಯಾವುದೇ ತೊಂದರೆ ಉಂಟಾಗಿರುವುದಿಲ್ಲ. ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ: ಇಡಿ 33 ಟೆಚ್.ಪಿ.ಟಿ 2022, ದಿನಾಂಕ:14.07.2022ರನ್ವಯ 2022-23ನೇ ಸಾಲಿನಿಂದ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಇತರೆ ಶುಲ್ಕವನ್ನು ಸಂಸ್ಥೆಯಲ್ಲೇ ಉಳಿಸಿಕೊಂಡು ಸಂಸ್ಥೆಯ ಅಭಿವೃದ್ಧಿಗೆ ನಿಯಮಾನುಸಾರ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ.
ಋ)	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ರೂ.6.75 ಕೋಟಿಗಳಅನುದಾನವನ್ನು ಬಿಡುಗಡೆಗೊಳಿಸಲಾಗುವುದು?(ಸಂಪೂರ್ಣ ಮಾಹಿತಿ ನೀಡುವುದು)	

ಇಡಿ 343 ಟಿಇಸಿ 2022

(ಡಾ|| ಅಶ್ವತ್ಥನಾರಾಯಣ್.ಸಿ.ಎನ್)
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಹಾಗೂ ಜೀವನೋಪಾಯ ಇಲಾಖೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 671
ಮಾನ್ಯ ಸದಸ್ಯರ ಹೆಸರು : ಶ್ರೀ ಲಿಂಗೇಶ್ ಕೆ.ಎಸ್. (ಬೇಲೂರು)
ಉತ್ತರಿಸಬೇಕಾದ ದಿನಾಂಕ : 22-12-2022
ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಜೀವಿಶಾಸ್ತ್ರ ಹಾಗೂ ಪರಿಸರ ಸಚಿವರು

*****

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ 2019-20, 2020-21, 2021-22ನೇ ಸಾಲಿನ ಈ ದಿನಾಂಕದವರೆಗೆ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಸರ್ಕಾರ ಕೈಗೊಂಡಿರುವ ಯೋಜನೆಗಳಾವುವು; (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ಪ್ರವಾಸೋದ್ಯಮವನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರಪಡಿಸಿ, ಪ್ರವಾಸಿಗರನ್ನು ಆಕರ್ಷಿಸಲು ದೇಶದ ಪ್ರಮುಖ ನಗರಗಳಲ್ಲಿ ಹಾಗೂ ವಿವಿಧ ದೇಶಗಳಲ್ಲಿ ನಡೆಯುವ ಪ್ರವಾಸಿ ಮೇಳಗಳಲ್ಲಿ ಇಲಾಖೆಯಿಂದ ಮಳಿಗೆ ತೆರೆದು ಪ್ರಚಾರದೊಂದಿಗೆ ಭಾಗವಹಿಸುತ್ತಾ ಬಂದಿರುತ್ತದೆ. ಹಾಗೂ ವಿವಿಧ ಜಿಲ್ಲೆಗಳಲ್ಲಿ ನಡೆಯುವ ಪ್ರಮುಖ ಜಿಲ್ಲಾ ಉತ್ಸವಗಳಿಗೆ ಇಲಾಖಾವತಿಯಿಂದ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಅದಲ್ಲದೇ, ಸ್ಥಳೀಯ ಸಾಹಸ ಸೇರಿದಂತೆ ಸಾಂಸ್ಕೃತಿಕ ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ ಆಯೋಜಿಸಲ್ಪಡುವ ಕಾರ್ಯಕ್ರಮಗಳಿಗೆ ಇಲಾಖಾವತಿಯಿಂದ ಪ್ರಾಯೋಜಕತ್ವ ನೀಡಲಾಗುತ್ತಿದೆ. ಕೋವಿಡ್-19 ನಿಂದಾಗಿ ಸರ್ಕಾರದ ಗೈಡ್‌ಲೈನ್ಸ್ ಆದೇಶದಡಿ 2019-20 ಮತ್ತು 2020-21ರಲ್ಲಿ ಯಾವುದೇ ಕಾರ್ಯಕ್ರಮಗಳನ್ನು ಕೈಗೊಂಡಿರುವುದಿಲ್ಲ. ನಂತರದ ಲಾಕ್‌ಡೌನ್ ತೆರವಿನಿಂದಾಗಿ 2021-22ನೇ ಸಾಲಿನ ಈ ದಿನಾಂಕದವರೆಗೆ ರಾಷ್ಟ್ರೀಯ ಮೇಳಗಳಲ್ಲಿ ಇಲಾಖೆಯು ಭಾಗವಹಿಸಿದ್ದು, ಸದರಿ ಮೇಳಗಳ ಮಾಹಿತಿಯನ್ನು ಹಾಗೂ ವಿವಿಧ ಜಿಲ್ಲೆಗಳಲ್ಲಿ ನಡೆದ ಜಿಲ್ಲಾ ಉತ್ಸವಗಳಿಗೆ ಮತ್ತು ವಿವಿಧ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ ನೀಡಲಾಗಿರುವ ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಿದೆ.
ಆ)	ಪ್ರವಾಸೋದ್ಯಮ ಸ್ಥಳಗಳ ಅಭಿವೃದ್ಧಿಗಾಗಿ ಪ್ರವಾಸೋದ್ಯಮ ಇಲಾಖೆಗೆ 2019-20, 2020-21, 2021-22ನೇ ಸಾಲಿನ ಈ ದಿನಾಂಕದವರೆಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಂದ ನೀಡಲಾಗುತ್ತಿರುವ ಅನುದಾನವೆಷ್ಟು; (ವರ್ಷವಾರು, ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಪ್ರವಾಸೋದ್ಯಮ ಇಲಾಖೆಗೆ ವಿಧಾನಸಭಾ ಕ್ಷೇತ್ರವಾರು ಅನುದಾನ ಬಿಡುಗಡೆ ಮಾಡುವುದಿಲ್ಲ. ಕಳೆದ ಮೂರು ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಬಂದಿರುವುದಿಲ್ಲ. ಕಳೆದ ಮೂರು ವರ್ಷಗಳಿಂದ ಪ್ರವಾಸೋದ್ಯಮ ಇಲಾಖೆಗೆ ಆಯವ್ಯಯದಲ್ಲಿ ಪ್ರವಾಸೋದ್ಯಮ ತಾಣಗಳ ಅಭಿವೃದ್ಧಿಗಾಗಿ ಒದಗಿಸಿರುವ ಅನುದಾನ, ವೆಚ್ಚ ಮಾಡಿರುವ ಅನುದಾನ ಮತ್ತು ಬಾಕಿ ಉಳಿದ ಅನುದಾನ ವಿವರಗಳು ಕೆಳಗಿನಂತಿದೆ.
ಇ)	ಈಗಾಗಲೇ ನೀಡಲಾಗಿರುವ ಅನುದಾನದಲ್ಲಿ ಖರ್ಚಾದ ಅನುದಾನವೆಷ್ಟು; ಅನುದಾನ ಖರ್ಚಾಗದೆ ಬಾಕಿ ಉಳಿಯಲು ಕಾರಣಗಳೇನು;	
ಈ)	ಈ ರೀತಿ ಉಳಿಕೆಯಾಗಿರುವ ಅನುದಾನದಲ್ಲಿ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ? (ವರ್ಷವಾರು ಕಾಮಗಾರಿಗಳವಾರು ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	

(ರೂ. ಕೋಟಿಗಳಲ್ಲಿ)

ಕ್ರ. ಸಂ.	ವರ್ಷ	ಯೋಜನೆ	ಆಯವ್ಯಯದಲ್ಲಿ ಒದಗಿಸಿರುವ ಅನುದಾನ	ವೆಚ್ಚ ಮಾಡಿರುವ ಅನುದಾನ	ಬಾಕಿ ಅನುದಾನ
1.	2019-20	ಬಂಡವಾಳ ವೆಚ್ಚ	224.44	224.26	0.18
		ಕೆಟಿಐಡಿಸಿ	50.00	50.00	0.00
		ನಬಾರ್ಡ್	10.53	6.42	4.11
2.	2020-21	ಬಂಡವಾಳ ವೆಚ್ಚ	35.00	35.00	0.00
		ಕೆಟಿಐಡಿಸಿ	35.00	34.99	0.01
		ನಬಾರ್ಡ್	0.00	0.00	0.00
3.	2021-22	ಬಂಡವಾಳ ವೆಚ್ಚ	71.00	71.00	0.00
		ಕೆಟಿಐಡಿಸಿ	52.00	52.00	0.00
		ನಬಾರ್ಡ್	20.00	0.57	19.43

..2.

		ಮೇಲ್ಕಂಡ ಲೆಕ್ಕಶೀರ್ಷಿಕೆಗಳಡಿಯಲ್ಲಿ ಕ್ರಿಯಾಯೋಜನೆಯಲ್ಲಿ ಅನುಮೋದನೆಗೊಂಡಿರುವ ಮುಂದುವರೆದ ಕಾಮಗಾರಿಗಳ ಸಂಬಂಧ, ನಿಗಧಿತ ಅವಧಿಯಲ್ಲಿ ಹಣಬಳಕೆ ಪ್ರಮಾಣ ಪತ್ರ ಹಾಗೂ ಅಗತ್ಯ ದಾಖಲಾತಿಗಳು ಅನುಷ್ಠಾನ ಸಂಸ್ಥೆಗಳಿಂದ ಇಲಾಖೆಗೆ ಸಲ್ಲಿಸದೇ ಇರುವುದರಿಂದ ಸದರಿ ಅನುದಾನವು ಉಳಿತಾಯವಾಗಿರುತ್ತದೆ. ಪ್ರವಾಸೋದ್ಯಮ ಇಲಾಖೆಗೆ ನಬಾರ್ಡ್ ಲೆಕ್ಕಶೀರ್ಷಿಕೆ: 5452-01-800-0-10-436 ರಡಿ 2021-22ನೇ ಸಾಲಿನಲ್ಲಿ ಒದಗಿಸಿರುವ ರೂ.2000.00 ಲಕ್ಷಗಳಲ್ಲಿ ಮುಂದುವರೆದ ಕಾಮಗಾರಿಗಳಿಗೆ ಕಾಯ್ದಿರಿಸಿರುವ ರೂ.197.97 ಲಕ್ಷಗಳ ಪೈಕಿ ರೂ.57,12,480/- ಗಳನ್ನು ವೆಚ್ಚ ಮಾಡಿದ್ದು, ನೂತನ ಕಾಮಗಾರಿಗಳಿಗೆ ಕಾಯ್ದಿರಿಸಿರುವ ರೂ.1802.03 ಲಕ್ಷಗಳನ್ನು, 2021-22ನೇ ಸಾಲಿನಲ್ಲಿ ನಬಾರ್ಡ್ ಯೋಜನೆಯಡಿ ಯಾವುದೇ ನೂತನ ಕಾಮಗಾರಿಗಳು ಮಂಜೂರಾಗದೇ ಇರುವುದರಿಂದ ಸದರಿ ಅನುದಾನವನ್ನು ಸಹ ವೆಚ್ಚ ಮಾಡಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ರೂ.19,42,87,520/-ಗಳ ಅನುದಾನವನ್ನು ಸಂಬಂಧಿಸಿದ ಆರ್ಥಿಕ ವರ್ಷಗಳಲ್ಲಿಯೇ ಅಭ್ಯರ್ಪಣೆ ಮಾಡಲಾಗಿದೆ.

ಸಂಖ್ಯೆ: **TOR 338 TDV 2022**

(ಆನಂದ್ ಸಿಂಗ್)
ಪ್ರವಾಸೋದ್ಯಮ, ಜೀವಿಶಾಸ್ತ್ರ
ಹಾಗೂ ಪರಿಸರ ಸಚಿವರು

ಅನುಬಂಧ

1. 2019-20 ನೇ ಸಾಲಿನಲ್ಲಿ ಕೈಗೊಂಡ ಪ್ರಚಾರ ಕಾರ್ಯಕ್ರಮಗಳ ವಿವರಗಳು:-

ಅ) ರಾಷ್ಟ್ರೀಯ ಮೇಳಗಳು:-

ಕ್ರ.ಸಂ.	ಪ್ರದರ್ಶನದ ಹೆಸರು	ಸ್ಥಳ	ದಿನಾಂಕ	ಮೊತ್ತ
1	ಜಿಐಟಿಬಿ	ಜೈಪುರ	28-30 ಏಪ್ರಿಲ್ 2019	ಒಟ್ಟಾರೆ ಮೊತ್ತ ರೂ.447.09 ಲಕ್ಷಗಳು
2	ಎಬಿಪಿ ಪ್ರವಾಸಿ ಸ್ಥಳ	ಕೋಲ್ಕತ್ತಾ	28-30 ಜೂನ್ 2019	
3	ಟಿಟಿಎಫ್	ಹೈದ್ರಾಬಾದ್	5-6 ಜುಲೈ 2019	
4	ಟಿಟಿಎಫ್	ಕೋಲ್ಕತ್ತಾ	12-14 ಜುಲೈ 2019	
5	ಐಐಟಿಎಂ	ಬೆಂಗಳೂರು	2-4 ಆಗಸ್ಟ್ 2019	
6	ಐಐಟಿಎಂ	ಚೆನ್ನೈ	9-11 ಆಗಸ್ಟ್ 2019	
7	ಟಿಟಿಎಫ್	ಅಹಮದಾಬಾದ್	30 ಆಗಸ್ಟ್-1 ಸೆಪ್ಟೆಂಬರ್ 2019	
8	ಟಿಟಿಎಫ್	ಸೂರತ್	6-8 ಸೆಪ್ಟೆಂಬರ್ 2019	
9	IATO Annual Convention	ಕೋಲ್ಕತ್ತಾ	12-15 ಸೆಪ್ಟೆಂಬರ್ 2019	
10	ಐಐಟಿಎಂ	ದೆಹಲಿ	20-22 ಸೆಪ್ಟೆಂಬರ್ 2019	
11	ಐಜಿಟಿಎಂ	ದೆಹಲಿ	23-25 ಸೆಪ್ಟೆಂಬರ್ 2019	
12	ಪರ್ಯಟನ್ ಪರ್ವ್	ಹೊಸದೆಹಲಿ	2-6 ಅಕ್ಟೋಬರ್ 2019	
13	ಹಾಲಿಡೇ ಎಕ್ಸ್ಪೋ	ಕೊಯಮತ್ತೂರು	3-5 ಜನವರಿ 2020	
14	ಸಾಟ್ಟೆ	ನವದೆಹಲಿ	8-10 ಜನವರಿ 2020	
15	ಐಐಟಿಎಂ	ಕೊಚ್ಚಿನ್	23-25 ಜನವರಿ 2020	
16	ಭಾರತ್ ಪರ್ವ್	ನವದೆಹಲಿ	26-31 ಜನವರಿ 2020	
17	ಒಟಿಎಮ್	ಮುಂಬೈ	3-5 ಫೆಬ್ರುವರಿ 2020	
18	ಟಿಟಿಎಫ್	ಬೆಂಗಳೂರು	7-9 ಫೆಬ್ರುವರಿ 2020	
19	ಐಟಿಎಮ್	ಗೋವಾ	14-16 ಫೆಬ್ರುವರಿ 2020	

ಆ) ರಾಷ್ಟ್ರೀಯ ರೋಡ್-ಷೋಗಳು:-

ಕ್ರ.ಸಂ	ರೋಡ್‌ಷೋ	ದಿನಾಂಕ	ಮೊತ್ತ
1	ಮುಂಬೈ	19-03-2019	ರೂ.47.20 ಲಕ್ಷಗಳು
2	ಗೋವಾ-ಪಣಜಿ	20-03-2019	
3	ನವದೆಹಲಿ	09-04-2019	
4	ಲಕ್ನೋ	10-04-2019	

ಇ) ಅಂತರಾಷ್ಟ್ರೀಯ ಮೇಳಗಳು:-

ಕ್ರ.ಸಂ	ಮೇಳ	ದಿನಾಂಕ	ಜಾಗ	ಮೊತ್ತ ರೂ.ಲಕ್ಷಗಳಲ್ಲಿ
1	ಎಟಿಎಮ್-ದುಬೈ	28-04-2019 ರಿಂದ 01-05-2019	36 ಚ.ಮೀ	72.06
2	ಐಎಫ್‌ಟಿಎಮ್ ಟಾಪ್ ರೆಸಾ	01-10-2019 ರಿಂದ 04-10-2019	36 ಚ.ಮೀ	50.96
3	ಜಾಟಾ ಟೂರಿಸಮ್ ಎಕ್ಸ್‌ಪೋ	24-10-2019 ರಿಂದ 27-10-2019	36 ಚ.ಮೀ	11.78
4	ವರ್ಲ್ಡ್ ಟ್ರಾವೆಲ್ ಮಾರ್ಕೆಟ್ ಲಂಡನ್	04-11-2019 ರಿಂದ 06-11-2019	60 ಚ.ಮೀ	24.02
5	ದಿ ನ್ಯೂಯಾರ್ಕ್ ಟೈಮ್ಸ್ ಟ್ರಾವೆಲ್ ಶೋ-ನ್ಯೂಯಾರ್ಕ್	24-01-2020 ರಿಂದ 26-01-2020	18 ಚ.ಮೀ	21.13
6	ಫಿತೂರ್-ಮ್ಯಾಡ್ರೀಡ್	22-01-2020 ರಿಂದ 26-01-2020	36 ಚ.ಮೀ	36.77
			ಒಟ್ಟು	216.72

ಈ) ಜಿಲ್ಲಾ ಉತ್ಸವಗಳು ಹಾಗೂ ಪ್ರಚಾರ/ಸಾಂಸ್ಕೃತಿಕ ಕಾರ್ಯಕ್ರಮಗಳು:-

ಕ್ರ.ಸಂ	ವಿವರ	ಮೊತ್ತ (ರೂ.ಲಕ್ಷಗಳಲ್ಲಿ)
1	ಎಮ್.ಜಿ ರಸ್ತೆಯ ಮೆಟ್ರೋದಲ್ಲಿರುವ ಮೈಸೂರು ದಸರಾ ಅಂಬಾರಿ ಹೊತ್ತ ಆನೆಯ ಪ್ರತಿಕೃತಿಯನ್ನು ಸ್ವಚ್ಛಗೊಳಿಸಿದ್ದಕ್ಕೆ	3.59
2	ಮೈಸೂರು ದಸರಾ ಸ್ತಬ್ಧಚಿತ್ರ ಪ್ರದರ್ಶನ ಹಾಗೂ 90 ದಿನಗಳ ಕಾಲ ಮಳಿಗೆ ಸಜ್ಜುಗೊಳಿಸಿದ ವೆಚ್ಚದ ಬಾಬ್ತು	89.99
3	ಯೋಗ ಹಾಗೂ ಹೆರಿಟೇಜ್ ಬೈಸಿಕಲ್ ರೈಡ್ ಕಾರ್ಯಕ್ರಮ	5.00
4	ಮೈಸೂರು ದಸರಾ ವಸ್ತುಪ್ರದರ್ಶನದ ನೆಲಬಾಡಿಗೆ ಮೊತ್ತ	3.17
5	ಮೈಸೂರು ದಸರಾ ಅನುದಾನ - ಜಿಲ್ಲಾಧಿಕಾರಿಗಳು ಮೈಸೂರು	200.00
6	ಶ್ರೀರಂಗಪಟ್ಟಣ ದಸರಾ ಆಚರಿಸಲು ಅನುದಾನ - ಜಿಲ್ಲಾಧಿಕಾರಿಗಳು ಮಂಡ್ಯ	20.00
7	ಗಗನಚುಕ್ಕಿ ಜಲಪಾತೋತ್ಸವ ಅನುದಾನ - ಜಿಲ್ಲಾಧಿಕಾರಿಗಳು ಮಂಡ್ಯ	20.00
8	ಚುಂಚನಕಟ್ಟೆ ಜಲಪಾತೋತ್ಸವ ಅನುದಾನ - ಜಿಲ್ಲಾಧಿಕಾರಿಗಳು ಮೈಸೂರು	50.00
9	ಮೈಸೂರು ದಸರಾ ಸಂದರ್ಭದಲ್ಲಿ ಸ್ಥಳೀಯ ಪ್ರವಾಸೋದ್ಯಮ ಉತ್ತೇಜಿಸಿ ಪ್ರವಾಸಿ ಮಳಿಗೆ ತೆರೆದ ಸಂಬಂಧ - ಜಿಲ್ಲಾಧಿಕಾರಿಗಳು ಮಂಡ್ಯ	13.75
10	ಮೈಸೂರು ದಸರಾ ಸಂದರ್ಭದಲ್ಲಿ ಸ್ಥಳೀಯ ಪ್ರವಾಸೋದ್ಯಮ ಉತ್ತೇಜಿಸಿ ಪ್ರವಾಸಿ ಮಳಿಗೆ ತೆರೆದ ಸಂಬಂಧ - ಜಿಲ್ಲಾಧಿಕಾರಿಗಳು ರಾಮನಗರ	15.00
11	ಮೈಸೂರು ಯೋಗ ದಿನಾಚರಣೆ ಅನುದಾನ - ಜಿಲ್ಲಾಧಿಕಾರಿಗಳು ಮೈಸೂರು	60.00

12	ಕೊಪ್ಪಳ ಉತ್ಸವ	1.50
13	ಮೈಸೂರು ವಿಂಟರ್ ಫೆಸ್ಟಿವಲ್ ಅನುದಾನ- ಜಿಲ್ಲಾಧಿಕಾರಿಗಳು ಮೈಸೂರು	10.00
14	ಕನೆಕ್ಟ್ ಕಾರ್ಯಕ್ರಮ ಆಯೋಜನ ಅನುದಾನ ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲೆ	1.00
15	ಉತ್ತರಕನ್ನಡ ಜಿಲ್ಲೆಯಲ್ಲಿ ಬನವಾಸಿ ಕದಂಬೋತ್ಸವ ಅನುದಾನ ಜಿಲ್ಲಾಧಿಕಾರಿಗಳು ಉತ್ತರಕನ್ನಡ	40.00
16	ಚಿಕ್ಕಮಗಳೂರು ಜಿಲ್ಲಾ ಉತ್ಸವ ಅನುದಾನ -ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು	40.00
17	ವಿಶ್ವ ಪ್ರವಾಸೋದ್ಯಮ ದಿನಾಚರಣೆ ಆಚರಿಸಲು 28 ಜಿಲ್ಲೆಗಳಿಗೆ ಅನುದಾನ (ಬೆಂಗಳೂರು ಗ್ರಾಮಾಂತರ & ಮೈಸೂರು ಜಿಲ್ಲೆಗಳನ್ನು ಹೊರತುಪಡಿಸಿ)	3.40
18	ಸ್ಟೇಟ್ ಸಬ್ ಜೂನಿಯರ್ & ಜೂನಿಯರ್ ಅಕ್ವಾಟಿಕ್ ಚಾಂಪಿಯನ್‌ಶಿಪ್ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ	6.00
19	ಬೆಂಗಾಳಿ ಫಿಲ್ಮ್ ಫೆಸ್ಟಿವಲ್	5.00
20	ಗಾರ್ಡನ್ ಸಿಟಿ 7ನೇ ಅಂತರಾಷ್ಟ್ರೀಯ ಸಮಾವೇಶಕ್ಕೆ ಪ್ರಾಯೋಜಕತ್ವ	0.90
21	FHIV ರಾಯಲ್ ಕ್ಲಾಸಿಕ್ ಕಾರ್ ಟ್ರೈವ್	10.00
22	ಚಿಕ್ಕಮಗಳೂರು ಮಲ್ನಾಡ್ ಅಲ್ಟ್ರಾ ಓಟ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ	5.00
23	ರಂಗಶಂಕರ ಥಿಯೇಟರ್ ಫೆಸ್ಟಿವಲ್ ಪ್ರಾಯೋಜಕತ್ವ	15.00
24	ವಿಶ್ವ ಪ್ರವಾಸೋದ್ಯಮ ದಿನಾಚರಣೆಯನ್ನು ಎಪ್ ಎಸ್ ರಾಮಯ್ಯ ಕಾಲೇಜಿನಲ್ಲಿ ಆಯೋಜಿಸಿದ್ದಕ್ಕೆ	3.00
25	ಬೆಂಗಳೂರಿನಲ್ಲಿನ ಮಯೂರವಂಶಿ ಇವೆಂಟ್ಸ್ ವತಿಯಿಂದ NDA ರಂಗಮಂದಿರದಲ್ಲಿ ಆಯೋಜಿಸಿದ ಸಂಗೀತ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ	2.00
26	ಶ್ರೀ ಕರಿಕಾನ ಪರಮೇಶ್ವರಿ ಉತ್ಸವಕ್ಕೆ ಪ್ರಾಯೋಜಕತ್ವ	1.00
27	ಮಂಗಳೂರಿನಲ್ಲಿ ಕ್ಲಾಸಿಕ್ ಕಾರ್ ಕಾರ್ನಿವಲ್ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ	1.00
28	ಚಿತ್ರಕಲಾ ಪರಿಷತ್ತಿನಲ್ಲಿ ನಡೆದ ಚಿತ್ರಸಂತೆ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ	15.00
29	ಚಿಕ್ಕಮಗಳೂರು ಬ್ಲೂಸಮ್ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ	5.00
30	ಸಪ್ತಸ್ವರ ಸಂಗೀತ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ	1.00
31	ರಂಗ ಸಂಭ್ರಮ:ರಂಗ ಸಂಗಮ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ	2.00
32	107ನೇ ಇಂಡಿಯನ್ ಸೈನ್ಸ್ ಕಾಂಗ್ರೆಸ್ ಸಮಾವೇಶಕ್ಕೆ ಪ್ರಾಯೋಜಕತ್ವ	15.00
	ಒಟ್ಟು	**668.3**

2. <u>2020-21 ನೇ ಸಾಲಿನಲ್ಲಿ ಕೈಗೊಂಡ ಪ್ರಚಾರ ಕಾರ್ಯಕ್ರಮಗಳ ವಿವರಗಳು:-</u>

ಅ) ರಾಷ್ಟ್ರೀಯ ಮೇಳಗಳು:-

ಕ್ರ.ಸಂ	ಮೇಳದ ವಿವರ	ದಿನಾಂಕ	ಜಾಗ	ಮೊತ್ತ
1	ಐಐಟಿಎಮ್-ಬೆಂಗಳೂರು	12-03-2021 - 13-03-2021	150 ಚ.ಮೀ	ರೂ.95.49 ಲಕ್ಷಗಳು
2	ಸಾಟ್ಟೆ- ನವದೆಹಲಿ	24-03-2021 – 26-03-2021	150 ಚ.ಮೀ	
3	ಐಐಟಿಎಮ್-ಚೆನ್ನೈ	31-03-2021 - 01-04-2021	150 ಚ.ಮೀ	

ಆ) ಜಿಲ್ಲಾ ಉತ್ಸವಗಳು ಹಾಗೂ ಪ್ರಚಾರ/ಸಾಂಸ್ಕೃತಿಕ ಕಾರ್ಯಕ್ರಮಗಳು:-

ಕ್ರ.ಸಂ	ವಿವರ	ಮೊತ್ತ (ರೂ.ಲಕ್ಷಗಳಲ್ಲಿ)
1	ಬೆಂಗಳೂರು ರಂಗಶಂಕರ ಥಿಯೇಟರ್ ಫೆಸ್ಟಿವಲ್-2020 - ಪ್ರಾಯೋಜಕತ್ವ	10.00
2	ಚಿಕ್ಕಮಗಳೂರು- The Rally of Chikkamagluru2021 ರ ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ	5.00
3	ಬೆಂಗಳೂರು ವರ್ಚ್ಯುಯಲ್ ಟೆಕ್ ಸಮ್ಮಿಟ್-2021- ಪ್ರಾಯೋಜಕತ್ವ	8.85
4	ವಿಧಾನಸೌಧದಿಂದ ನಂದಿ ಬೆಟ್ಟದವರೆಗೆ ಬೈಕ್ ರಾಲಿ ಆಯೋಜನೆ (ಕೆಎಸ್‌ಟಿಡಿಸಿ)	1.00
5	ವಿಶ್ವ ಪ್ರವಾಸೋದ್ಯಮ ದಿನಾಚರಣೆಯ ಆಚರಣೆ (30 ಜಿಲ್ಲೆಗಳಲ್ಲಿ)	7.50
6	Connect Programme (ಕ್ರೈಟ್ ಪ್ರೊವರ್ ಬಾವಿ ಸಭೆ) ಕೆಟಿಎಸ್	20.00
7	ಐಟಿಎಂಮ್- ಚೆನ್ನೈ ಮೇಳ	23.91
8	ಐಐಟಿಎಮ್ - ಬೆಂಗಳೂರು ಮೇಳ	55.76
9	ಸಾಟ್ಟೆ - ನವದೆಹಲಿ ಮೇಳ	39.72
10	ಉಡುಪಿ ಹಾಗೂ ದಕ್ಷಿಣ ಕನ್ನಡ ಕಂಬಳ ಉತ್ಸವಕ್ಕೆ ತಲಾ ರೂ.50.00 ಲಕ್ಷಗಳಂತೆ	100.00
	ಒಟ್ಟು	**271.74**

3. <u>2021-22 ನೇ ಸಾಲಿನಲ್ಲಿ ಕೈಗೊಂಡ ಪ್ರಚಾರ ಕಾರ್ಯಕ್ರಮಗಳ ವಿವರಗಳು:-</u>

ಅ) ರಾಷ್ಟ್ರೀಯ ಮೇಳಗಳು:-

ಕ್ರ. ಸಂ	ವಿವರ	ಮಳಿಗೆ ಜಾಗ	ದಿನಾಂಕ	ಮೊತ್ತ
1	ಟಿಟಿಎಫ್- ಕೋಲ್ಕತ್ತಾ	100	10-09-2021 ರಿಂದ 12-09-2021	83.69 ಲಕ್ಷ
2	ಟಿಟಿಎಫ್ ಅಹಮದಾಬಾದ್	150	23-09-2021 ರಿಂದ 25-09-2021	
3	ಐಐಟಿಎಮ್ -ಬೆಂಗಳೂರು	150	22-10-2021 ರಿಂದ 24-10-2021	
4	ಐಐಟಿಎಮ್- ಮುಂಬೈ	100	19-11-2021 ರಿಂದ 20-11-2021	73.39 ಲಕ್ಷ
5	ಐಐಟಿಎಮ್- ಪುಣೆ	100	03-12-2021 ರಿಂದ 05-12-2021	

6	ಐಐಟಿಎಮ್-ಹೈದರಾಬಾದ್	100	03-12-2021 ರಿಂದ 05-12-2021	
7	ಟಿಟಿಎಫ್-ಬೆಂಗಳೂರು	150	04-03-2022 ರಿಂದ 06-03-2022	203.24 ಲಕ್ಷ
8	ಐಐಟಿಎಮ್-ಕೋಲ್ಕತ್ತಾ	100	04-03-2022 ರಿಂದ 06-03-2022	
9	ಐಐಟಿಎಮ್-ಅಹಮದಾಬಾದ್	100	10-03-2022 ರಿಂದ 11-03-2022	
10	ಒಟಿಎಮ್-ಮುಂಬೈ	100	14-03-2022 ರಿಂದ 16-03-2022	
11	ಐಐಟಿಎಂ-ದೆಹಲಿ	100	22-03-2022 ರಿಂದ 23-03-2022	
12	ಟಿಟಿಎಫ್-ಚೆನ್ನೈ	100	31-03-2022 ರಿಂದ 02-04-2022	
			ಒಟ್ಟು	**366.82 ಲಕ್ಷ**

ಆ) ಅಂತರಾಷ್ಟ್ರೀಯ ಮೇಳಗಳು:-

ಕ್ರ. ಸಂ	ವಿವರ	ಸ್ಥಳ	ಮಳಿಗೆ ಜಾಗ	ದಿನಾಂಕ	ಮೊತ್ತ (ರೂ.ಲಕ್ಷಗಳಲ್ಲಿ)
1	ವರ್ಲ್ಡ್ ಟ್ರಾವೆಲ್ ಮಾರ್ಟ್ (WTM)	ಲಂಡನ್, ಇಂಗ್ಲೆಂಡ್	60 ಚ.ಮೀ	1-3 ನವೆಂಬರ್ 2021	75.42
2	ಫಿತೂರ್ ಮ್ಯಾಡ್ರಿಡ್	ಮ್ಯಾಡ್ರಿಡ್, ಸ್ಪೇನ್	36 ಚ.ಮೀ	19-23 ಜನವರಿ 2022	34.03
				ಒಟ್ಟು	**109.45**

ಇ) ಅಂತರಾಷ್ಟ್ರೀಯ ರೋಡ್-ಷೋಗಳು:

ಕ್ರ.ಸಂ	ವಿವರ	ದಿನಾಂಕ	ಮೊತ್ತ
1	ಬರ್ಮಿಂಗ್‌ಹ್ಯಾಮ್	04-11-2021	20.57 ಲಕ್ಷ
2	ಮ್ಯಾಂಚೆಸ್ಟರ್	05-11-2021	20.24 ಲಕ್ಷ
ಒಟ್ಟು			**40.81 ಲಕ್ಷ**

ಈ) ಜಿಲ್ಲಾ ಉತ್ಸವಗಳು ಹಾಗೂ ಸಾಂಸ್ಕೃತಿಕ/ಪ್ರಚಾರ ಕಾರ್ಯಕ್ರಮಗಳು: -

ಕ್ರ.ಸಂ	ವಿವರ	ಮೊತ್ತ ರೂ.ಲಕ್ಷಗಳಲ್ಲಿ
	2021-22 ನೇ ಸಾಲಿನಲ್ಲಿ ಕೈಗೊಂಡ ನೂತನ ಪ್ರಚಾರ ಕಾರ್ಯಕ್ರಮಗಳು:	
1	ಕೃಷಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಕೃಷಿ ಪ್ರವಾಸೋದ್ಯಮ ಕುರಿತ ವೀಡಿಯೋ ಫಿಲಂ ಅನ್ನು ತಯಾರಿಸಿ ಇಲಾಖೆಗೆ ಸರಬರಾಜು ಮಾಡಿದ್ದಕ್ಕೆ ತಗುಲಿದ ವೆಚ್ಚ ಪಾವತಿಸುವ ಬಗ್ಗೆ.	1.95
2	ದಿನಾಂಕ:27-09-2021ರಂದು ಆಚರಿಸಲಾದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ವಿವಿಧ ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳಲ್ಲಿ ಪ್ರಚಾರ	13.93
3	WTD-2021 ರೇಡಿಯೋ ಚಾನೆಲ್ಸ್ ಗಳಲ್ಲಿ ಇಲಾಖಾ ಪ್ರಚಾರ ಕೈಗೊಂಡಿದ್ದಕ್ಕೆ ತಗುಲಿದ ವೆಚ್ಚ ಪಾವತಿಸುವ ಬಗ್ಗೆ	4.32
4	WTD-2021 ಅಂಗವಾಗಿ ಕಿರು ಚಿತ್ರ ಸಿದ್ಧಪಡಿಸಿದ್ದಕ್ಕೆ ತಗುಲಿದ ವೆಚ್ಚ ಪಾವತಿಸುವ ಬಗ್ಗೆ.	3.71
5	ನೂತನ ವಿಜಯನಗರ ಜಿಲ್ಲೆಯ ಉದ್ಘಾಟನಾ ಕಾರ್ಯಕ್ರಮ ಸಂಬಂಧ ದಿನಾಂಕ:02-10-2021 ರಿಂದ 03-10-2021 ರವರೆಗೆ ಆಯೋಜಿಸಲಾಗಿರುವ ವಿಜಯನಗರ ಉತ್ಸವದಲ್ಲಿ ಇಲಾಖಾ ವತಿಯಿಂದ ಮಳಿಗೆಯನ್ನು ಸಜ್ಜುಗೊಳಿಸುವುದಕ್ಕೆ ತಗುಲಿದ ವೆಚ್ಚ ಪಾವತಿಸುವ ಬಗ್ಗೆ.	3.05
6	ಸರ್ಕಾರದ ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ ರವರ ಕಛೇರಿಗೆ ಬ್ಯಾಕ್‌ಡ್ರಾಪ್ ಮತ್ತು ಮ್ಯಾಗಜೈನ್ ಸ್ಟ್ಯಾಂಡ್ ಒದಗಿಸಿದ್ದಕ್ಕೆ ತಗುಲಿದ ವೆಚ್ಚ ಪಾವತಿಸುವ ಬಗ್ಗೆ. (4G - M.c&A)	0.77
7	ಮೆ:ಎಮ್.ಸಿ ಅಂಡ್ ಎ ಸಂಸ್ಥೆ ವತಿಯಿಂದ 187 ಸಂಖ್ಯೆಯ ಫೋಟೋ ಫ್ರೇಮ್‌ಗಳನ್ನು ಮುದ್ರಿಸಿ ಸರಬರಾಜು ಮಾಡಿರುವುದಕ್ಕೆ ತಗುಲಿದ ವೆಚ್ಚ ಪಾವತಿಸುವ ಬಗ್ಗೆ.	15.66
8	ವಿಶ್ವ ಪ್ರವಾಸೋದ್ಯಮ ದಿನಾಚರಣೆ ಅಂಗವಾಗಿ ವಿಶೇಷ ಅಂಚೆ ಕವರ್ ಗಳನ್ನು ವಿನ್ಯಾಸಗೊಳಿಸುವ ಬಗ್ಗೆ.	0.60
9	ವಿಶ್ವ ಪ್ರವಾಸೋದ್ಯಮ ದಿನಾಚರಣೆ - ಲಘು ಉಪಹಾರ ವ್ಯವಸ್ಥೆ	0.69
10	ಇಲಾಖೆಯ ಅಧಿಕೃತ ಪ್ರಮೋಷನ್ ಏಜೆನ್ಸಿಯಾದ ಮೆ:ಸ್ಪಾರ್ಕ್ ಸಂಸ್ಥೆಯವರ ಕ್ರಿಯೇಟೀವ್ ಸಿದ್ಧಪಡಿಸಿದ್ದಕ್ಕೆ ಹಾಗೂ ಏಜೆನ್ಸಿ ಫೀ ಬಿಲ್ಲು.	10.65
11	ದಕ್ಷಿಣ ರಾಜ್ಯಗಳ ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಸಚಿವರುಗಳ ಸಮಾವೇಶದಲ್ಲಿ ಭಾಗವಹಿಸುವ ಗಣ್ಯರಿಗೆ ನೆನಪಿನ ಕಾಣಿಕೆ ಖರೀದಿಸಿದ್ದಕ್ಕೆ ತಗುಲಿದ ವೆಚ್ಚ	25.92
12	ದಕ್ಷಿಣ ರಾಜ್ಯಗಳ ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಸಚಿವರುಗಳ ಸಮಾವೇಶದಲ್ಲಿ ವಾಸ್ತವ್ಯ ವ್ಯವಸ್ಥೆ ಒದಗಿಸಿದ್ದಕ್ಕೆ ತಗುಲಿದ ವೆಚ್ಚ	11.85
13	ದಕ್ಷಿಣ ರಾಜ್ಯಗಳ ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಸಚಿವರುಗಳ ಸಮಾವೇಶದಲ್ಲಿ ವಾಸ್ತವ್ಯ ವ್ಯವಸ್ಥೆ ಒದಗಿಸಿದ್ದಕ್ಕೆ ತಗುಲಿದ ವೆಚ್ಚ	4.17
14	ದಕ್ಷಿಣ ರಾಜ್ಯಗಳ ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಸಚಿವರ ಸಮ್ಮೇಳನದಲ್ಲಿ ಭಾಗವಹಿಸಿದ ಸಚಿವರು ಮತ್ತು ಗಣ್ಯರಿಗೆ ಸಾರಿಗೆ ವ್ಯವಸ್ಥೆ ಹಾಗೂ ಫ್ಯಾಮ್ ಟೂರ್ ಆಯೋಜನೆ ಮಾಡಿದ್ದಕ್ಕೆ ತಗುಲಿದ ವೆಚ್ಚ	7.90
15	ದಕ್ಷಿಣ ರಾಜ್ಯಗಳ ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಸಚಿವರ ಸಮ್ಮೇಳನದಲ್ಲಿ ಕೊಳಲು ಕಾರ್ಯಕ್ರಮ ಪ್ರಸ್ತುತ ಪಡಿಸಿದ್ದಕ್ಕೆ	0.25
16	ರಾಜ್ಯ ಪ್ರವಾಸೋದ್ಯಮವನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರಪಡಿಸುವ ದೃಷ್ಟಿಯಿಂದ 06 ನಗರಗಳ ಪ್ರಮುಖ 432 ರೈಲ್ವೆ ನಿಲ್ದಾಣಗಳಲ್ಲಿನ ಡಿಜಿಟಲ್ ಡಿಸ್‌ಪ್ಲೇಗಳಲ್ಲಿ ಇಲಾಖಾ ಪ್ರಚಾರ ಕೈಗೊಳ್ಳುವ ಬಗ್ಗೆ.	217.48

17	ಕಾರ್ಯಾದೇಶದಲ್ಲಿ ನೀಡಲಾಗಿರುವ 60 ದಿನಗಳ ಪೈಕಿ ದಿನಾಂಕ:01-12-2021ರಿಂದ 30-12-2021 ರವರೆಗೆ ಒಟ್ಟು 30 ದಿನಗಳಲ್ಲಿ ಇಲಾಖಾ ಪ್ರಚಾರ ಕೈಗೊಂಡಿದ್ದಕ್ಕೆ ತಗುಲಿದ ವೆಚ್ಚ	217.49
18	ಪ್ರಮುಖ 09 ರಾಜ್ಯಗಳ 17 ರೈಲ್ವೇ ನಿಲ್ದಾಣಗಳಲ್ಲಿನ ಪ್ಯಾಸೆಂಜರ್ಸ್ ಅಲರ್ಟ್ ಸ್ಪೀಕರ್ಸ್‌ಗಳಲ್ಲಿ ಇಲಾಖಾ ಜಾಹೀರಾತು ನೀಡುವ ಬಗ್ಗೆ.	204.88
19	ದಿನಾಂಕ:01-02-2022 ರಿಂದ 31-03-2022 ರವರೆಗೆ ನವದೆಹಲಿಯ ರೈಲ್ವೇ ನಿಲ್ದಾಣಗಳಲ್ಲಿನ ಒಟ್ಟು 98 ಡಿಜಿಟಲ್ ಸ್ಕ್ರೀನ್‌ಗಳಲ್ಲಿ ಇಲಾಖಾ ಪ್ರಚಾರ ಕೈಗೊಳ್ಳಲು ತಗುಲಿದ ವೆಚ್ಚ	206.71
20	ದಿನಾಂಕ:01-02-2022 ರಿಂದ 31-03-2022 ರವರೆಗೆ ಬೆಂಗಳೂರು ರೈಲ್ವೇ ನಿಲ್ದಾಣದಲ್ಲಿನ 262 ಡಿಜಿಟಲ್ ಸ್ಕ್ರೀನ್‌ಗಳಲ್ಲಿ ಇಲಾಖಾ ಪ್ರಚಾರ ಕೈಗೊಂಡಿದ್ದಕ್ಕೆ ತಗುಲಿದ ವೆಚ್ಚ	226.98
21	ವಿವಿಧ 6 ರೈಲುಗಳ 127 ಕೋಚ್‌ಗಳಲ್ಲಿ ದಿನಾಂಕ.10-01-2022 ರಿಂದ 10-04-2022 ರವರೆಗೆ ವ್ರಾಪಿಂಗ್ ಮಾಡಲು ತಗುಲಿದ ವೆಚ್ಚ	187.70
22	ನವದೆಹಲಿಯಲ್ಲಿ 50 ಡಿಜಿಟಲ್ ಸ್ಕ್ರೀನ್‌ಗಳಲ್ಲಿ ಹಾಗೂ ಮುಂಬೈನಲ್ಲಿ ತಲಾ 10 ಡಬಲ್ ಡೆಕ್ಕರ್ & ಸಿಂಗಲ್ ಡೆಕ್ಕರ್ ಬಸ್‌ಗಳ ವ್ರಾಪಿಂಗ್ ಮಾಡುವ ಮೂಲಕ ಮತ್ತು ಬೆಂಗಳೂರಿನ 33 ಬಸ್ ಶೆಲ್ಟರ್‌ಗಳಲ್ಲಿ ದಿ:05-01-2022 ರಿಂದ 05-03-2022 ರವರೆಗೆ ಅನ್ವಯವಾಗುವಂತೆ ಒಟ್ಟು 2 ಇಲಾಖಾ ಪ್ರಚಾರ ಕಾರ್ಯ ಕೈಗೊಂಡಿದ್ದಕ್ಕೆ ತಗುಲಿದ ವೆಚ್ಚ	137.30
23	ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿನ 1 ಬಿಲ್‌ಬೋರ್ಡ್ ನಲ್ಲಿ ದಿ:05-01-2022 ರಿಂದ 05-03-2022 ರವರೆಗೆ ಎರಡು ತಿಂಗಳುಗಳ ಅವಧಿಯಲ್ಲಿ ಇಲಾಖಾ ಪ್ರಚಾರ ಕಾರ್ಯ ಕೈಗೊಂಡಿದ್ದಕ್ಕೆ ತಗುಲಿದ ವೆಚ್ಚ	21.24
24	ದೆಹಲಿಯ ಮೆಟ್ರೋ ನಿಲ್ದಾಣಗಳಲ್ಲಿನ ಬ್ಯಾಕ್‌ಲಿಟ್‌ಗಳಲ್ಲಿ ದಿ:05-01-2022 ರಿಂದ 05-03-2022 ರವರೆಗೆ ಎರಡು (2) ತಿಂಗಳುಗಳ ಅವಧಿಯಲ್ಲಿ ಇಲಾಖಾ ಪ್ರಚಾರ ಕಾರ್ಯ ಕೈಗೊಂಡಿದ್ದಕ್ಕೆ ತಗುಲಿದ ವೆಚ್ಚ	29.54
25	ದೆಹಲಿ ವಿಮಾನ ನಿಲ್ದಾಣದಲ್ಲಿನ 63 ಡಿಜಿಟಲ್ ಸ್ಕ್ರೀನ್‌ಗಳಲ್ಲಿ ದಿ:05-01-2022 ರಿಂದ 05-03-2022 ರವರೆಗೆ ಎರಡು (2) ತಿಂಗಳುಗಳ ಅವಧಿಯಲ್ಲಿ ಇಲಾಖಾ ಪ್ರಚಾರ ಕಾರ್ಯ ಕೈಗೊಂಡಿದ್ದಕ್ಕೆ ತಗುಲಿದ ವೆಚ್ಚ	63.33
26	ಮುಂಬೈ ವಿಮಾನ ನಿಲ್ದಾಣದಲ್ಲಿನ 58 ಡಿಜಿಟಲ್ ಸ್ಕ್ರೀನ್‌ಗಳಲ್ಲಿ ಹಾಗೂ ಮುಂಬೈನ 12 ಮೆಟ್ರೋ ಸ್ಟೇಶನ್‌ಗಳಲ್ಲಿನ 48 ಬ್ಯಾಕ್‌ಲಿಟ್ ಬಾಕ್ಸ್‌ಗಳಲ್ಲಿ ಮತ್ತು ಬೆಂಗಳೂರಿನ 17 ಬಸ್ ಶೆಲ್ಟರ್‌ಗಳಲ್ಲಿ ದಿ:05-01-2022 ರಿಂದ 05-03-2022 ರವರೆಗೆ ಎರಡು (2) ತಿಂಗಳುಗಳ ಅವಧಿಯಲ್ಲಿ ಇಲಾಖಾ ಪ್ರಚಾರ ಕಾರ್ಯ ಕೈಗೊಂಡಿದ್ದಕ್ಕೆ ತಗುಲಿದ ವೆಚ್ಚ	136.04
27	ಮಾನ್ಯ ಸಚಿವರ ವಿಸಿಟಿಂಗ್ ಕಾರ್ಡ್ ಮತ್ತು ಲೆಟರ್ ಹೆಡ್‌ಗಳನ್ನು ಮುದ್ರಿಸಲು ತಗುಲಿದ ವೆಚ್ಚ	1.86
28	ಯು.ಕೆ ದೇಶದ ಲಂಡನ್‌ನಲ್ಲಿ ನಡೆದ WTM-2021 ಅಂತರಾಷ್ಟ್ರೀಯ ಮೇಳದಲ್ಲಿ ಭಾಗವಹಿಸಿದ ಅಧಿಕಾರಿಗಳಿಗೆ ವಿಮಾನಯಾನ ವೆಚ್ಚ, ವೀಸಾ, ವಿಮೆ, ಹೋಟೆಲ್ ವೆಚ್ಚ, ಸ್ಥಳೀಯ ಸಾರಿಗೆ ವೆಚ್ಚ, ದಿನ ಭತ್ಯೆ ಮತ್ತು ಇತರೆ ವೆಚ್ಚಗಳ ಮೊತ್ತವನ್ನು ಮರುಪಾವತಿಸುವ ಕುರಿತು.	21.08
29	"World Travel Market (WTM)-2021" ರ ಅಂತರಾಷ್ಟ್ರೀಯ ಮೇಳದಲ್ಲಿ ಪಿಆರ್ ಚಟುವಟಿಕೆ ನಡೆಸಲು ತೆರಳಿದ್ದಕ್ಕೆ ತಗುಲಿದ ವೆಚ್ಚ	2.25
30	ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರ ಉದ್ದೇಶಿತ ಜಾಲತಾಣ cmkarntaka.gov.in ಅನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಅಭಿವೃದ್ಧಿಪಡಿಸಲು ತಗಲುವ ವೆಚ್ಚವನ್ನು ಭರಿಸುವ ಬಗ್ಗೆ.	24.55
31	ನೂತನ ವಿಜಯನಗರ ಜಿಲ್ಲೆಯಾಗಿ ದಿ.02-10-2021ರಂದು ಉದ್ಘಾಟನೆಯಾಗುವ ಬಗ್ಗೆ ರಾಜ್ಯ ಹೆಸರಾಂತ ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳಲ್ಲಿ ಹಾಗೂ ಸ್ಥಳೀಯ ಪ್ರಾದೇಶಿಕ ಹಾಗೂ ಜಿಲ್ಲಾ ಮಟ್ಟದ ದಿಪತ್ರಿಕೆಗಳಲ್ಲಿ ಅರ್ಧ ಪುಟದಲ್ಲಿ ಇಲಾಖಾ ಜಾಹೀರಾತು ಪ್ರಕಟಿಸಿದ್ದಕ್ಕೆ ತಗುಲಿದ ವೆಚ್ಚ ಪಾವತಿಸುವ ಬಗ್ಗೆ	42.28
32	ನೂತನ ವರ್ಷ 2022ರ ಟೇಬಲ್ & ವಾಲ್ ಕ್ಯಾಲೆಂಡರ್ ಮುದ್ರಿಸಿದ್ದಕ್ಕೆ ತಗುಲಿದ ವೆಚ್ಚ- ಮೆ:ಎಮ್.ಸಿ&ಎ	15.63
33	ಇಲಾಖೆಯ ಅಧಿಕೃತ ಏಜೆನ್ಸಿಯಾದ ಮೆ:ಸ್ಪಾರ್ಕ್ ಸಂಸ್ಥೆಯವರ ಕ್ರಿಯೇಟೀವ್ ಸಿದ್ಧಪಡಿಸಿದ್ದಕ್ಕೆ ಹಾಗೂ ಏಜೆನ್ಸಿ ಫೀ ಶುಲ್ಕ	20.74
34	2021-22ನೇ ಸಾಲಿನಲ್ಲಿ ವಿವಿಧ ಪ್ರಚಾರ ಮತ್ತು ಉತ್ತೇಜನ ಕಾರ್ಯಗಳನ್ನು ಕೈಗೊಳ್ಳಲು ಕೆಎಸ್‌ಟಿಡಿಸಿ ಗೆ ಅನುದಾನ ಬಿಡುಗಡೆ.	250.00
35	ದುಬೈನಲ್ಲಿ ನಡೆದ "Dubai World Expo-2020"ರ ಅಂತರಾಷ್ಟ್ರೀಯ ಮೇಳದಲ್ಲಿ ಭಾಗವಹಿಸಿದ ಅಧಿಕಾರಿಯವರ TA/DA ವೆಚ್ಚ	4.13
36	ಮಹಿಳಾ ದಿನಾಚರಣೆ ಸಂಬಂಧ ಹೊರತರುತ್ತಿರುವ ಮಹಿಳಾ ಜಾಗೃತಿ ವಿಶೇಷ ಸಂಚಿಕೆಯಲ್ಲಿ ಇಲಾಖಾ ಜಾಹೀರಾತು ನೀಡುವ ಬಗ್ಗೆ.	0.25
37	ಸ್ಪೇನ್ ದೇಶದ ಮ್ಯಾಡ್ರೀಡ್ ನಗರದಲ್ಲಿ ನಡೆದ "FITUR-Madrid" ಅಂತರಾಷ್ಟ್ರೀಯ ಮೇಳದಲ್ಲಿ ಭಾಗವಹಿಸಿದ ಅಧಿಕಾರಿಗಳ TA/DA ಮೊತ್ತವನ್ನು ಮರುಪಾವತಿಸುವ ಕುರಿತು.	8.79
38	ಕಾರ್ಕಳ ಉತ್ಸವ ಲೀಫ್ಲೇಟ್ಸ್ ಸಿದ್ಧಪಡಿಸಿದ್ದಕ್ಕೆ ತಗುಲಿದ ವೆಚ್ಚ	0.82
39	ಕಾರ್ಕಳ ಉತ್ಸವದಲ್ಲಿ 30 X 10 ಅಳತೆಯ ಪ್ರವಾಸೋದ್ಯಮ ಇಲಾಖೆ, ಕೆಎಸ್‌ಟಿಡಿಸಿ ಹಾಗೂ ಜೆಎಲ್‌ಆರ್ ಸಂಸ್ಥೆಯ ಮೂರು ಮಳಿಗೆಗಳನ್ನು ಸಜ್ಜುಗೊಳಿಸಲು	6.93
40	"ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ" ಶೀರ್ಷಿಕೆಯಡಿ ದಿನಾಂಕ:25.01.2022ರಂದು ಆಚರಿಸಲಾದ "ರಾಷ್ಟ್ರೀಯ ಪ್ರವಾಸೋದ್ಯಮ ದಿನಾಚರಣೆ" ಕುರಿತು ರಾಜ್ಯ ಮಟ್ಟದ 09 ಕನ್ನಡ ಮತ್ತು 04 ಆಂಗ್ಲ ದಿನಪತ್ರಿಕೆಗಳಲ್ಲಿ ಅರ್ಧ ಪುಟದಲ್ಲಿ ಇಲಾಖಾ ಜಾಹೀರಾತು ಪ್ರಕಟಿಸಿದ್ದಕ್ಕೆ ತಗುಲಿದ ವೆಚ್ಚ ಪಾವತಿಸುವ ಬಗ್ಗೆ	29.76
41	**ಪ್ರಾಯೋಜಕತ್ವ / ಸಹಯೋಗ (Associate Sponsored programmes) & ಉತ್ಸವ**	
42	ದಾದಾಸಾಹೇಬ್ ಫಾಲ್ಕೆ ಇಂಟರ್‌ನ್ಯಾಷನಲ್ ಫಿಲ್ಮ್ ಅವಾರ್ಡ್ಸ್ - 2022 ಪ್ರಾಯೋಜಕತ್ವ	17.70
43	ದಿನಾಂಕ:02-10-2021 ಮತ್ತು 03-10-2021 ರಂದು ನಡೆಯುವ ವಿಜಯನಗರ ಉತ್ಸವಕ್ಕೆ ಇಲಾಖೆಯು ಪ್ರಾಯೋಜಕತ್ವ ನೀಡುವ ಬಗ್ಗೆ.ವೇದಿಕೆ, ಸಿವಿಲ್ ಕಾಮಗಾರಿಗಳು, ವಿದ್ಯುತ್ತೀಕರಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು	400.00

